
ಬಿಸಿಲ

ಏಪ್ರಿಲ್ 2000 ರೂ. 10



ಬಾಂಡ್ ಬದಲಾಗಬೇಕೆ?



ಪ್ರೊ. ನಂಜುಂಡಸ್ವಾಮಿ ಸಂದರ್ಶನ


ಪೋಲಿಯೊ ಡ್ರಾಪ್ಸ್‌ನಲ್ಲಿ ಏನಿದೆ ?

ಉದಯ ಟಿವಿಯ

ಆದರ್ಶ ದಂಪತಿ



ಕ್ರಿಕೆಟ್ ಕಲಿಗಳ ಅಂಧಶ್ರದ್ಧೆ



- ಆಧುನಿಕ ಭಗೀರಥ ಅಣ್ಣಾ ಹಜಾರೆ
- ಜ್ಯೋತಿಷ್ಯಕ್ಕೆ ಜೋತುಬಿದ್ದವರು
- ಷರೀಫ್ : ಶರಣಾದ ಶಕುನಿ !
- ಪುಸ್ತಕಗಳ ಪುನರ್ಜನ್ಮ

ಬದುಕು

ಏಪ್ರಿಲ್ 2000   ಸಂಪುಟ 3   ಸಂಚಿಕೆ 10

ಸಂಪಾದಕ : ಚಂದ್ರಕಾಂತ ವಡ್ಡು

● ಹೊಸ ವಿಳಾಸ ●

'ದಾರಿ' ವಾರಪತ್ರಿಕೆ, 'ಬದುಕು' ಮಾಸಪತ್ರಿಕೆ
ಹಾಗೂ 'ಅಂಕುರ ಪ್ರಕಾಶನ'ದ ಕಛೇರಿ ಸ್ಥಳಾಂತರಗೊಂಡಿದೆ.
ಹೊಸ ಕಛೇರಿ ವಿಳಾಸ : 552, 15ನೇ ಮೇನ್, 3ನೇ ಸ್ಟೇಜ್,
4ನೇ ಬ್ಲಾಕ್, ವಾಟರ್ ಟ್ಯಾಂಕ್ ರೋಡ್, ಬಸವೇಶ್ವರ ನಗರ,
ಬೆಂಗಳೂರು - 560079 ✆ : 3227810
ಮೊಬೈಲ್ : 98440 87433

'ಆದರ್ಶ ದಂಪತಿ' ಚಿತ್ರಗಳು : ಗೋಪಾಲ, ಸಾಗರ.

■ ಅಧಿಕಾರ ಮನುಷ್ಯನ ಪಾಲಿಗೆ ಎಲ್ಲಕ್ಕಿಂತ ಮಿಗಿಲಾದ ಉತ್ತೇಜಕ.

-ಹೆನ್ರಿ ಕಿಸಿಂಜರ್

■ ಅಧಿಕಾರದ ಬಹುದೊಡ್ಡ ಸಮಸ್ಯೆ ಎಂದರೆ, ಅಧಿಕಾರದಲ್ಲಿ ಇರುವವರನ್ನು ಜವಾಬ್ದಾರಿಯುತವಾಗಿ, ಸಾರ್ವಜನಿಕರಿಗೆ ಉಪಯುಕ್ತ ಆಗುವ ರೀತಿ ಬಳಸುವಂತೆ ಮಾಡುವುದು.

-ರಾಬರ್ಟ್ ಕೆನಡಿ.

■ ಕ್ರೀಡಾ ಮನೋಭಾವ ಏನೆಂದು ಬೋಧಿಸುವ ನೂರು ಜನರಿಗಿಂತ ಅದನ್ನು ಅನುಷ್ಠಾನಕ್ಕೆ ತರುವ ಒಬ್ಬನೇ ಒಬ್ಬ ವ್ಯಕ್ತಿ ಸಾವಿರ ಪಾಲು ಮೇಲು.

-ನ್ಯೂಟ್ ರಾಕ್ನೆ, ಅಮೇರಿಕಾದ ಸಾಕರ್ ಆಟಗಾರ.

■ ಕ್ರೀಡೆಗಳು ವ್ಯಕ್ತಿತ್ವ ಬೆಳೆಸುವುದಿಲ್ಲ. ಕ್ರೀಡಾಪಟುಗಳ ವ್ಯಕ್ತಿತ್ವ ಏನೆಂದು ಬಯಲಾಗಿಸುತ್ತದೆ ಅಷ್ಟೇ.

-ಜಾನ್ ವುಡೆನ್, ಬ್ಯಾಸ್ಕೆಟ್ ಬಾಲ್ ಕೋಚ್

■ ಪ್ರಾರ್ಥನೆ ಎಂಬುದು ದೇವರಿಗೆ ಬರೆಯುವ ಪತ್ರದಂತೆ. ಈ ಪತ್ರ ಬರೆಯಲು ಮಸಿ ಬೇಕಿಲ್ಲ. ಲೇಖನಿ ಬೇಕಿಲ್ಲ. ಅಷ್ಟೇಕೆ ಪದಗಳು ಬೇಕಾಗುವುದಿಲ್ಲ.

-ಮಹಾತ್ಮಾಗಾಂಧಿ.

■ ಅವಸರವಿಲ್ಲದೇ ಸಾವಧಾನದಿಂದ ನಮ್ಮ ಕೆಲಸಗಳನ್ನು ನಾವು ಮಾಡಲು ಸಾಧ್ಯವಾಗುವುದೇ ಒಂದು ಪ್ರಕೃತಿಯ ಕೊಡುಗೆ. ಅಂಥದೊಂದು ಮನಃಸ್ಥಿತಿ ನೂರೆಂಟು ಇತರ ಸಂಪತ್ತಿಗಿಂತ ಮಿಗಿಲಾದದ್ದು.

-ಬಾನ್ನೀ ಫ್ರೀಡ್‌ಮನ್.

Printed, Published and Owned by Chandrakanta Vaddu, 552 15th Main, 3rd Stage, 4th Block, Water Tank Road, Basaveshwaranagar, Bangalore-560 079. Tel : 080 3227810 Email :Ankura@rediffmail.com Mobile:98440 87433 Editor : Chandrakanta Vaddu

ಅಂದವಾಗಿ ಕಾಣಿರಿ

ಮನೆ ಬಿಡುವ ಮುನ್ನ ಕನ್ನಡಿಯಲ್ಲಿ ನೋಡಿಕೊಳ್ಳಿ, ನೀವು ಹೊರಗಿನ ಜಗತ್ತಿಗೆ presentable ಆಗಿ ಇರಬೇಕು. ತಲೆ ಕೆದರಿಕೊಂಡು, ಎರಡು ದಿನ ಗಡ್ಡ ಇಟ್ಟುಕೊಂಡು, ಅಸಹ್ಯವಾಗಿ ಕಾಣುತ್ತಾ ಇರುವುದಕ್ಕಿಂತ, ನೀಟಾಗಿ ಬಾಚಿದ ತಲೆ, ಹೊಳೆಯುವ ಮುಖ ಒಳ್ಳೆಯದಲ್ಲವೇ! ಅಂಥ ಸೊಗಸು, ಇನ್ನೊಬ್ಬರಿಗೆ ಪ್ರಿಯ ಆಗಬಹುದಾದ ರೀತಿಯಲ್ಲಿ ನೀವು ಇದ್ದೀರ ಎಂದು ಖಚಿತಪಡಿಸಿಕೊಳ್ಳಲೆಂದೇ ಕನ್ನಡಿಯಲ್ಲಿ ಮುಖ ನೋಡಿಕೊಳ್ಳಿ ಎಂದೆ.

ನಾನ್ಯಾಕೆ ಇನ್ನೊಬ್ಬರಿಗೆ ಚೆನ್ನಾಗಿ ಕಾಣಬೇಕು? ಎನ್ನುತೀರ. ನಿಜ. ನೀವು ಚೆನ್ನಾಗಿ ಕಾಣಿಸಬೇಕೆಂದು ಹೇಳಿದ್ದು, ಇನ್ನೊಬ್ಬರಿಗಾಗಿ ಅಲ್ಲ. ಕನ್ನಡಿಯಲ್ಲಿ ನೋಡಿಕೊಂಡಾಗ 'ನಾನು ಸರಿಯಾಗಿ ಇದ್ದೇನೆ' ಅಂತ ನಿಮಗೇ ಅನ್ನಿಸಬೇಕು. ತಲೆಗೂದಲು ದಿಕ್ಕೆಟ್ಟು ಹಾರಾಡುತ್ತಿಲ್ಲ. ಮುಖದ ಮೇಲೆ ಎರಡು ದಿನದ ಕೊಳೆ ಇಲ್ಲ. ಅಂಗಿ ಶುಭ್ರವಾಗಿದೆ. ಅದರ ಗುಂಡಿಗಳನ್ನು ಹಾಕಿಕೊಂಡಿದ್ದೇವೆ. ಇಜಾರ ಅದಕ್ಕೆ ಒಪ್ಪುತ್ತದೆ. ಕಾಲಿನಜೋಡು ಅಥವಾ ಬೂಟು ಲಕಲಕಿಸುತ್ತಿದೆ ಅಂತ ಒಂದೊಂದಾಗಿ ನಿಮ್ಮ ಮನಸ್ಸು ಪಟ್ಟಿ ಮಾಡುತ್ತಾ ಹೋದರೆ, ನಿಮಗೇ ಒಂದು ರೀತಿಯ ಆತ್ಮವಿಶ್ವಾಸ ಉಂಟಾಗುತ್ತದೆ. ಹೊರಗಿನ ಜಗತ್ತಿನ ಜೊತೆ ವಿಶ್ವಾಸದಿಂದ, ದೃಢತೆಯಿಂದ ನಡೆದುಕೊಳ್ಳಬಲ್ಲಿರಿ. ಇದು ತೀರಾ ಮುಖ್ಯ.

ಇಂಥ ಆತ್ಮ ವಿಶ್ವಾಸ ನಿಮಗಾಗಲಿ, ನಿಮ್ಮ ಜೊತೆ ಇರುವವರಿಗಾಗಲಿ ಮೊದಲು ಗುರುತಾಗುವುದು ನಿಮ್ಮ ಬಹಿರಂಗದ ಸ್ವರೂಪದಿಂದ. ನಾನು ಸನ್ಯಾಸಿ. ನನಗೇಕೆ ಇಂಥ ಬಹಿರಂಗದ ಗೊಡವೆ ಎಂದೂ ನಿಮಗೆ ಅನ್ನಿಸಬಹುದು. ಮೊದಲು ಯಾವುದು ನಮ್ಮ ಎಟುಕಿಗೆ ಸಿಗುತ್ತದೆಯೋ ಅಲ್ಲಿಂದ ಆರಂಭಿಸಬೇಕು. ನೀವು ಯುವಕರು. ನಾನು ಆತ್ಮ, ಪರಮಾತ್ಮನ ಬಗ್ಗೆ ಹೇಳುತ್ತಾ ಹೋದರೆ ಅದು ಯಾವುದೋ ಗೀರ್ವಾಣ ಭಾಷೆಯ ವಿಚಾರ ಅನ್ನಿಸುತ್ತದೆ. ನಿಮಗೆ ದೇವರು ಸುಂದರವಾದ ಅಂಗಾಂಗ, ಮುಖ ಎಲ್ಲ ಕೊಟ್ಟಿದ್ದಾನೆ. ಅದನ್ನು ಅಷ್ಟೇ ಸಹಜ, ಸುಂದರ ಸ್ಥಿತಿಯಲ್ಲಿ ಇರಿಸಿಕೊಳ್ಳಬೇಕಲ್ಲವೇ?

ನೀವು ಚೆನ್ನಾಗಿ ಇದ್ದರೆ ನಿಮಗೂ ಆತ್ಮ ವಿಶ್ವಾಸ. ನೋಡಿದವರಿಗೂ ಕೂಡ ಮನಸ್ಸಿಗೆ ಆನಂದ. ಇಂಥ ಅಂತರಂಗದ ಆನಂದಕ್ಕೆ, ಬಹಿರಂಗದ ನೀವು ಕಾರಣ ಆಗಬಹುದಾದರೆ ಯಾಕಾಗಬಾರದು. ಹಾಗಾಗಿಯೇ ನಾನು ಹೇಳಿದ್ದು, ಮನೆ ಬಿಡುವ ಮುನ್ನ ಒಂದು ಸಲ ಕನ್ನಡಿಯಲ್ಲಿ ನೋಡಿಕೊಳ್ಳಿ,

■ ಸ್ವಾಮಿ ರಂಗನಾಥಾನಂದಜೀ
ಕಾಲೇಜು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾಡಿದ ಭಾಷಣದಿಂದ

ಹೊಸ ವರ್ಷದ ಅಡುಗೆ

ಹನ್ನೆರಡು ಪೂರ್ಣ ತಿಂಗಳು ಆರಿಸಿಕೊಳ್ಳಿ, ಅವುಗಳಲ್ಲಿನ ಕಹಿ, ದ್ವೇಷ, ಅಸೂಯೆ ಎಲ್ಲ ತೆಗೆಯಿರಿ. ಪ್ರತಿ ತಿಂಗಳನ್ನೂ 29,30 ಇಲ್ಲವೇ 31 ತುಂಡುಗಳಾಗಿ ಕತ್ತರಿಸಿ. ಎಲ್ಲವನ್ನೂ ಒಟ್ಟಿಗೆ ಅಡುಗೆಗೆ ಹಾಕಬೇಡಿ. ಪ್ರತಿ ತುಂಡೂ ಒಂದೊಂದು ದಿನಕ್ಕೆ.

ಅಡುಗೆಗೆ ಬೆರೆಸಿ ಚಿಟಿಕೆ ನಂಬಿಕೆ, ವಿಶ್ವಾಸ, ತಾಳ್ಮೆ, ಧೈರ್ಯ ಹಾಗೂ ಕೆಲಸ. ಪ್ರತಿ ತುಂಡಿಗೂ ಬೆರೆಸಿ ಒಂದಿಷ್ಟು ಭರವಸೆ, ಸಹೃದಯತೆ, ಇದನ್ನೆಲ್ಲ ಒಂದಿಷ್ಟು ಪ್ರಾರ್ಥನೆಯೊಡನೆ ಬೆರೆಸಿ. ಧ್ಯಾನವೂ ಜೊತೆಗಿರಲಿ, ಸಹೃದಯತೆಯ ಒಗ್ಗರಣೆ ಇರಲಿ. ಮಾಡಿದ ಅಡುಗೆ ಪ್ರೀತಿಯ ಪಾತ್ರೆಯಲ್ಲಿ ತುಂಬಿ ಉಲ್ಲಾಸದ ಬೆಂಕಿಯಲ್ಲಿ ಪಕ್ವವಾಗಲಿ. ಬಡಿಸುವಾಗ ಮುಗುಳ್ನಗೆಯನ್ನು ಧಾರಾಳವಾಗಿ ಜೊತೆಗೆ ನೀಡಿ. ಧಾರಾಳವಾಗಿ ಬಡಿಸಿ.

■ ಇಡೇಡ್, ಲಿಸ್ಬನ್.



ಟಪಾಲು

ಹೃದಯಸ್ಪರ್ಶಿ

ಮಾರ್ಚ್ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ 'ಸ್ತನ ಕ್ಯಾನ್ಸರ್' ಎಂಬ ಮುಖಪುಟ ಲೇಖನ ಸಂಗ್ರಹ ಯೋಗ್ಯ. ಸ್ಥಿರ ಶೀರ್ಷಿಕೆಗಳಾದ ವಿಚಿತ್ರ ಜಗತ್ತು, ಹೀಗೇ ಈ ಬದುಕು, ಹೊಸ ಪುಸ್ತಕ ಅಂಕಣಗಳು ತುಂಬಾ ಚೆನ್ನಾಗಿ ಮೂಡಿ ಬಂದಿವೆ. 'ಹೆಸರಿಲ್ಲದ ಕತೆ' (ಚನ್ನಮ್ಮ ಸರಗಣಾಚಾರಿ) ಯಲ್ಲಿ ಸತ್ಯವ್ವನ ಪಾತ್ರ ನೈಜತೆಯಿಂದ ಕೂಡಿದ್ದು ಹೃದಯಸ್ಪರ್ಶಿಯಾಗಿದೆ.

-ಹನುಮಂತರಾವ್ ಭಜಂತ್ರಿ, ತುಳಸಿಗಿರಿ

ಮಾರ್ಚ್ ತಿಂಗಳ 'ಬಿಸಿಲ ಬದುಕು' ಸಂಚಿಕೆಯಲ್ಲಿ 'ಗಂಗೆಗೆ ಬಿದ್ದ ಬೆಂಕಿ' ವಾಟರ್ ಚಿತ್ರದ ಹಗರಣ ಕುರಿತ ಲೇಖನ ಜಾತ್ಯಾತೀತ, ಧರ್ಮಾತೀತ, ವೈಚಾರಿಕ, ವೈಜ್ಞಾನಿಕ, ತತ್ವಗಳನ್ನು ನೆಚ್ಚಿಕೊಂಡವರ ಎದೆ ತಲ್ಲಣಿಸುವಂತೆ ಮಾಡಿತು. ಕಣ್ಮುಚ್ಚಿ ಧರ್ಮವನ್ನು ನಂಬುವ ಧರ್ಮಾಂಧರ ಕಣ್ಣಿಗೆ ಬೀಳುವವರು ಗ್ರಾಹಾಂ ಸ್ಟೇನ್ಸ್‌ರಂತಹವರು. ಅದು ಹಿಂದೂ ಧರ್ಮದ ದುರಂತ ಕೂಡ. ಕೇಂದ್ರದಲ್ಲಿ ಕೇಸರಿ ಪಡೆ ಅಧಿಕಾರಕ್ಕೆ ಬಂದ ನಂತರ ಹೆಚ್ಚುತ್ತಿರುವ ಈ ಸ್ವಯಂ ಘೋಷಿತ ಧರ್ಮರಕ್ಷಕರ ಉಪಟಳವನ್ನು ಗಮನಿಸಿದರೆ ಭಾರತ ಮತ್ತೆ 6ನೇ ಶತಮಾನದತ್ತ ಹಿನ್ನಡೆಯುತ್ತಿದೆಯೇನೋ ಎಂಬ ಆತಂಕ ಮೂಡುತ್ತಿದೆ.

-ಮಂಜುನಾಥ್ ಗೀತಾ, ತಗಡೂರು.

ವಿನ್ಯಾಸ ಹೀಗಿರಲಿ

■ ಪತ್ರಿಕೆಯ ಒಳನೋಟಗಳನ್ನು ಒಂದು ಪುಟದಲ್ಲಿ ಎರಡು ಭಾಗ ಮಾಡದೇ ಮೂರು ಭಾಗ ಮಾಡಿ.

■ ಪತ್ರಿಕೆಯ ಪ್ರತಿ ಪುಟದ ಮೇಲೆ ಹಾಗೂ ಕೆಳಗೆ ಬಾರ್ಡರ್ ಇರಲಿ (ಈಗ ಕೆಳಗೆ ಮಾತ್ರ ಇದೆ)

■ ಸಾಧ್ಯವಿದ್ದಷ್ಟು ಚಿತ್ರ ಲೇಖನಗಳನ್ನು ವಿವಿಧ ಬಣ್ಣಗಳಲ್ಲಿ ಪ್ರಕಟಿಸಿ.

■ ಪತ್ರಿಕೆಯ ಮುದ್ರಣ ಕಾಗದ ಇನ್ನೂ ಬಿಳುಪಾಗಿದ್ದರೆ ಅಕ್ಷರಗಳು ಇನ್ನು ಗೆಟಪ್ ಆಗುತ್ತವೆ.

■ ಕಥೆಗಳಿಗಾಗಿ ಬಳಸುವ ಚಿತ್ರಗಳು ಇನ್ನಷ್ಟು ಸ್ಪಷ್ಟವಾಗಿ ಅಂದವಾಗಿರಲಿ. (ಈಗಿನ ಚಿತ್ರಗಳು ಸಣ್ಣ ಹುಡುಗರು ಬಿಡಿಸಿದ ಹಾಗಿರುತ್ತವೆ)

ಮುಂಬರುವ ಸಂಚಿಕೆಗಳಲ್ಲಿ ಈ ನಿಯಮಗಳನ್ನು ಅನುಸರಿಸುತ್ತೀರೆಂದು ಭಾವಿಸಿದ್ದೇನೆ.

-ಪಾಂಡುರಂಗ ಜಿ. ಬಾಳಕ್ಕನವರ, ಬೆನಕಟ್ಟಿ.

ಕಾಂಗ್ರೆಸ್ಸಿನ ಒಳಜಗಳ

ಮಾರ್ಚ್ ತಿಂಗಳ ಸಂಚಿಕೆಯಲ್ಲಿ 'ಕಾಂಗ್ರೆಸ್ಸಿನ ಒಳಜಗಳ' ಲೇಖನ ಮನೋಜ್ಞವಾಗಿತ್ತು. ಇಂದು ಚುನಾವಣೆಗಳು ನಡೆಯಲು ಕಾರಣವಾದ ಕಾಂಗ್ರೆಸ್ ಪಕ್ಷದಲ್ಲಿ ಒಳಜಗಳ ಇರುವುದು ಹೊಸದೇನಲ್ಲ. ಧರ್ಮಸಿಂಗ್ ಅವರು ಮುಖ್ಯಮಂತ್ರಿ ಆಗುವ ಕನಸನ್ನು ನನಸಾಗಿಸದ ಕೃಷ್ಣ ಅವರೊಡನೆ ಕಾಳಗ ನಡೆಸಿರುವುದು ಸುಸ್ಪಷ್ಟ. ಆದರೆ ಇವರಿಬ್ಬರ ಹೊಡೆದಾಟದಲ್ಲಿ ಕನ್ನಡಮಾತೆ ಬಲಿಯಾಗದಿರಲಿ ಎಂದು ನನ್ನ ಆಶಯ.

-ಶ್ರೀಶೈಲ ಮಲ್ಲಪ್ಪ, ಮುದ್ದೇಬಿಹಾಳ.

ಮಿಲೇನಿಯಂ ಪತ್ರಿಕೆ

ಬದುಕು ಪತ್ರಿಕೆಯನ್ನು ನೋಡದ, ಹೆಸರನ್ನೂ ಕೇಳದ ನನಗೆ ಪರಿಚಯವಾದದ್ದು ಈ ಮಿಲೇನಿಯಂನಲ್ಲಿ. ನಿಜವಾಗಿಯೂ ಈ ಬದುಕು ಪತ್ರಿಕೆಯು ಜನತೆಯು ಸರಿಯಾದ ಮಾರ್ಗದಲ್ಲಿ ನಡೆಯಲು ದಾರಿ ದೀಪದಂತಿದೆ. ಪ್ರತಿಯೊಂದು ಲೇಖನದಲ್ಲಿ ಉಪಯುಕ್ತವಾದ ವಿಷಯ ವಿರುತ್ತದೆ. 'ಬದುಕು' ಬದುಕಿನ ನಿರಂತರ ಚೈತನ್ಯದ ಚಿಲುಮೆಯಾಗಿರಲಿ ಎಂದು ಹಾರೈಸುವೆ.

-ಮಂಗಳ, ಶಿವಮೊಗ್ಗ

ಬದುಕಿಗೆ ಭವಿಷ್ಯವಿದೆ

ಮಾರ್ಚ್-2000ರ ಸಂಚಿಕೆಯಲ್ಲಿ ಪ್ರಕಟವಾದ ವೈದ್ಯಕೀಯ ಲೇಖನ 'ಸ್ತನ ಕ್ಯಾನ್ಸರ್' ಬಹಳ ಉಪಯುಕ್ತ ಮಾಹಿತಿಯೊಂದಿಗೆ, ಸೂಕ್ತ ಸಲಹೆ ಸೂಚನೆಯೊಂದಿಗೆ ಸಚಿತ್ರವಾಗಿ ಮೂಡಿ ಬಂದಿದೆ. ಇದರಿಂದ 'ಬದುಕು' ತನ್ನ ಘನತೆಯನ್ನು ಹೆಚ್ಚಿಸಿಕೊಂಡಿದೆ. ವಿಚಿತ್ರ ಜಗತ್ತು ಅಂಕಣದಲ್ಲಿ ಪ್ರಕಟವಾದ ವಿಚಿತ್ರ ಮಾಹಿತಿಗಳು ಸಂಗ್ರಹಯೋಗ್ಯವಾಗಿವೆ. ಬದುಕಿಗೆ ಉತ್ತಮ ಭವಿಷ್ಯವಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ.

-ಬಸವರಾಜ ಚ. ಕರಕರಡ್ಡಿ, ಧಾರವಾಡ.

ಕಂಪು ಸೂಸುತ್ತದೆ

ಉತ್ತಮ ಬರವಣಿಗೆ ಉತ್ತಮ ಆದರ್ಶಗಳನ್ನು ಓದುಗರ ಮುಂದೆ ಇಡುತ್ತಿರುವ ನಿಮ್ಮ ಪ್ರಯತ್ನ ಪ್ರಶಂಸನಾರ್ಹ. ಬದುಕು ಈಗ ಪರಿಪೂರ್ಣವಾದ ಕಂಪನ್ನು ಸೂಸುತ್ತಿದೆ. ಇತ್ತೀಚಿನ ಸಂಚಿಕೆಗಳು ತುಂಬಾ ವೈವಿಧ್ಯತೆಯಿಂದ ಮೈವೆತ್ತಿ ಬರುತ್ತಿವೆ. 'ಬದುಕಿ'ನಲ್ಲಿ ಇನ್ನೂ ಹೆಚ್ಚಿನ ವೈಚಾರಿಕ, ವೈಜ್ಞಾನಿಕ ಅಂಕಣಗಳು ಬರಲಿ. ಹನಿಗವನಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಿ.

-ಎಚ್.ಎಂ. ಭಜಂತ್ರಿ, ಮಟ್ಟೂರು.

ತಿದ್ದುಪಡಿ


ಪಂಜಾಬ್ ಭಾರತದಲ್ಲಿದೆಯೇ ಅಥವಾ ಪಾಕಿಸ್ತಾನದಲ್ಲೋ? ಈ ಸಂದೇಹ ನಿಮಗೆ ಏಕೆ ಬಂತು ಎನ್ನುವಿರಾ? 'ಬಿಸಿಲ ಬದುಕು' ಮಾರ್ಚ್ 2000 ಸಂಚಿಕೆಯ ಪುಟ 65 (ಒಂಟಿ ಹೆಜ್ಜೆಯ ಪಯಣ) ಗಮನಿಸಿ. 5ನೇ ಸಾಲಿನಲ್ಲಿ 'ಪಾಕೀಸ್ತಾನದ ಪಂಜಾಬ್‌ನಲ್ಲಿ ಹುಟ್ಟಿದ....' ಎಂದು ಪ್ರಕಟವಾಗಿದೆ. ಒಳನೋಟದಲ್ಲಿ 'ನಾನೂ ಬರಹಗಾರನಾದೆ' ಎಂಬ ಲೇಖನ ಪುಟ 36ರಲ್ಲಿ ಎಂದಿದೆ. ಆದರೆ ಅದು ಪುಟ 26 ಎಂದಿರಬೇಕಾಗಿತ್ತು. ಪುಟ 41 (ಗಂಗೆಗೆ ಬಿದ್ದ ಬೆಂಕಿ) ಎರಡನೇ ಕಾಲಂ, ಮೊದಲ ಪ್ಯಾರಾದಲ್ಲಿ ಹಳೆಯದಾದ (ಬೆನಾರಸ್ ಹಿಂದೂ ಯೂನಿವರ್ಸಿಟಿ ಬಗ್ಗೆ) ಎನ್ನುವ ಬದಲು ಹಳೆಯವಾದ ಎಂದು ತಪ್ಪಾಗಿ ಮುದ್ರಿತವಾಗಿದೆ.

-ಹ.ಮುರಳೀಧರ ರಾವ್, ಬೆಂಗಳೂರು.

ಪಾಕೀಸ್ತಾನ ಅಖಂಡ ಭಾರತದ ಭಾಗವಾಗಿತ್ತು. ದೇಶ ವಿಭಜನೆ ಕಾಲಕ್ಕೆ ಪಂಜಾಬ್ ಪ್ರಾಂತ್ಯವೂ ಎರಡು ಭಾಗವಾಯಿತು. ನಮ್ಮಲ್ಲಿ ಇರುವುದು ಪೂರ್ವ ಪಂಜಾಬ್. 1947ರ ವಿಭಜನೆಯ ಕಾಲಕ್ಕೆ ಬಹಳಷ್ಟು ಜನ ಪಾಕಿಸ್ತಾನಕ್ಕೆ ಸೇರಿ ಹೋದ ಪಂಜಾಬ್‌ನಿಂದ ವಲಸೆ ಬಂದರು. ಈಗಲೂ ಪಶ್ಚಿಮ ಪಂಜಾಬ್ ಪ್ರಾಂತ್ಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಹಿಂದೂಗಳು ಇದ್ದಾರೆ.

-ಸಂಪಾದಕ.

ಪರಿವಿಡಿ



ರಾಜಕೀಯ



ಪ್ರಚಲಿತ



ವಿಜ್ಞಾನ-ಆರೋಗ್ಯ

ಲೇಖನಗಳು

ಹಾಸ್ಯ / ಪ್ರಬಂಧ



ಕಥೆ



ಕ್ರೀಡೆ



ಸ್ಥಿರ ಶೀರ್ಷಿಕೆಗಳು

ಜೊತೆಗೆ

ಮುಂದಿನ ಸಂಚಿಕೆಯಲ್ಲಿ

ಸಾಹಿತ್ಯ ಸಮ್ಮೇಳನ - ಒಂದು ಚರ್ಚೆ

ಬರಗೂರು ರಾಮಚಂದ್ರಪ್ಪ
ಕೆ. ರಾಮದಾಸ್
ಶೂದ್ರ ಶ್ರೀನಿವಾಸ್ ಮತ್ತಿತರರು.

ಏಜೆಂಟರು ಬೇಕಾಗಿದ್ದಾರೆ

'ಬದುಕು' ಮಾಸ ಪತ್ರಿಕೆ ಹಾಗೂ 'ದಾರಿ' ವಾರಪತ್ರಿಕೆ ಮಾರಾಟ ಮಾಡಲು ಕರ್ನಾಟಕದ ಎಲ್ಲಾ ಊರುಗಳಿಂದ ಏಜೆಂಟರು ಬೇಕಾಗಿದ್ದಾರೆ. ಈಗ ಏಜೆಂಟರು ಇಲ್ಲದ ಊರುಗಳಿಗೆ ಹಾಗೂ ಬಾಕಿ ಉಳಿಸಿಕೊಂಡಿರುವ ಹಾಲಿ ಏಜೆಂಟರ ಜಾಗೆಗೆ ಕೂಡಲೇ ಏಜೆಂಟರನ್ನು ನೇಮಕ ಮಾಡುತ್ತಿದ್ದೇವೆ. ಸೂಕ್ತ ಠೇವಣಿ ಇಟ್ಟು ಪ್ರಾಮಾಣಿಕವಾಗಿ ಏಜೆನ್ಸಿ ನಿರ್ವಹಿಸುವವರು ಕೂಡಲೇ ಅರ್ಜಿ ನಮೂನೆಗಾಗಿ ರೂ.3 ಸ್ಟಾಂಪ್ ಹಚ್ಚಿದ ಲಕೋಟೆ ಕಳಿಸಿರಿ.

ಪ್ರಸಾರಣಾಧಿಕಾರಿ, ಅಂಕುರ ಪ್ರಕಾಶನ,
ಅಂಚೆ ಪೆಟ್ಟಿಗೆ 7951, ಬಸವೇಶ್ವರ ನಗರ, ಬೆಂಗಳೂರು - 560 079.
ದೂರವಾಣಿ : 3227810 ಮೊಬೈಲ್ : 9844087433



50%
ರಿಯಾಯಿತಿ


ಟಿ.ವಿ. ವೆಂಕಟರಮಣಯ್ಯನವರು ಬರೆದ ಜೋಕು ಪುಸ್ತಕಗಳು

- ಗೆಳೆಯ ಗೆಳತಿಯರಲ್ಲಿ ಜೋಕುಗಳು — ರೂ.20
- ಶಾಲಾ ಕಾಲೇಜುಗಳಲ್ಲಿ ಜೋಕುಗಳು — ರೂ.20
- ದಾಂಪತ್ಯದಲ್ಲಿ ಜೋಕುಗಳು — ರೂ.20
- ಆಸ್ಪತ್ರೆಗಳಲ್ಲಿ ಜೋಕುಗಳು — ರೂ.20
- ಕಛೇರಿಗಳಲ್ಲಿ ಜೋಕುಗಳು — ರೂ.20
- ನ್ಯಾಯಾಲಯಗಳಲ್ಲಿ ಜೋಕುಗಳು — ರೂ.20
- ಹೋಟೆಲುಗಳಲ್ಲಿ ಜೋಕುಗಳು — ರೂ.20
- ಬಸ್ಸು, ರೈಲು, ವಿಮಾನಗಳಲ್ಲಿ ಜೋಕುಗಳು — ರೂ.20
- ಅಂಗಡಿಗಳಲ್ಲಿ ಜೋಕುಗಳು — ರೂ.20
- ಪ್ರೇಮಿಗಳ ಜೋಕುಗಳು — ರೂ.20

ಎಂ.ಓ. ಕಳಿಸಿ. ಅಂಚೆ ಉಚಿತ
ಅಂಕುರ ಪ್ರಕಾಶನ, 552, 15ನೇ ಮುಖ್ಯರಸ್ತೆ,
3ನೇ ಸ್ಟೇಜ್, 4ನೇ ಬ್ಲಾಕ್, ವಾಟರ್ ಟ್ಯಾಂಕ್ ರೋಡ್,
ಬಸವೇಶ್ವರನಗರ, ಬೆಂಗಳೂರು - 560 079.
ಫೋನ್ : 3227810 ಮೊಬೈಲ್ : 98440 87433

ತಲಾ 20 ರೂ. ಬೆಲೆಯ ಈ ಜೋಕು ಪುಸ್ತಕಗಳು ನಿಮಗೆ ಕೇವಲ 10 ರೂ.ಗೆ ಒಂದರಂತೆ ದೊರೆಯುತ್ತವೆ.

ಇಕ್ಕಟ್ಟಿನಲ್ಲಿ ಷರೀಫ್



ಜಾಫರ್ ಶರೀಫರದು ಸರಳ ಜೀವನ. ಅತ್ಯಂತ ಜಟಿಲ ಕಾರ್ಯ ನಿರ್ವಹಣೆ. ಅವರನ್ನು ಅರ್ಥ ಮಾಡಿಕೊಂಡವರು, ತೀರಾ ಆಪ್ತರೆನಿಸಿಕೊಂಡವರು ಕಡಿಮೆ. ಅವರನ್ನು ಅವಕಾಶ ಸಿಕ್ಕಾಗೆಲ್ಲ ಟೀಕಿಸುವ, ಸಾಧ್ಯ ಆದರೆ ತುಳಿಯಲು ಯತ್ನಿಸುವವರ ಸಂಖ್ಯೆ ಸಾಕಷ್ಟು. ಅಂಥ ಶರೀಫರೀಗ ರಾಜಕೀಯ ವಿವಾದ ಒಂದನ್ನು ತಾವಾಗಿಯೇ ಎಳೆದು ಮೈಮೇಲೆ ಕೊಡವಿಕೊಂಡಿದ್ದಾರೆ.

ರಾಜ್ಯ ರಾಜಕಾರಣದಲ್ಲಿ ಜಾಫರ್ ಶರೀಫರದು ದೊಡ್ಡ ಹೆಸರು. ಹೆಚ್ಚು ಕಲಿಯದ, ಬಡತನದ ಬದುಕಿಂದ ಬಂದ ಒಬ್ಬ ಏರಬಹುದಾದ ಎತ್ತರಕ್ಕೆ ನಿದರ್ಶನ.

ಸರಳ ವೇಷ, ಸ್ವಲ್ಪ ಕುಳ್ಳ ಎನ್ನಬಹುದಾದ ಆಕೃತಿ. ಸದಾ ಕುರುಚಲು ಗಡ್ಡ. ಒಂದು ಕಾಲಕ್ಕೆ ತಾರುಣ್ಯದ ಕಸುವು. ಅದು ಕರಗಿ ಈಗ ಬಿಳಿಯಾಗಿದೆ. ಕಳೆದ ವರ್ಷ ಸಾವಿಗೀಡಾದ ಮಗ. ತೀವ್ರ ಅನಾರೋಗ್ಯದಿಂದ ಆಸ್ಪತ್ರೆ ಸೇರಿರುವ ಹೆಂಡತಿ. ಅದಕ್ಕಿಂತ ಹೆಚ್ಚಾಗಿ ತಲೆಯ ಮೇಲೆ ತೂಗುತ್ತಿರುವ ಸಿಬಿಐ ವಿಚಾರಣೆಯ ಕತ್ತಿ. ಇವೆಲ್ಲವುಗಳಿಂದ ಜರ್ಝರಿತರಾಗಿದ್ದರೂ, ರಾಜಕೀಯದ ಚದುರಂಗದಾಟದ ಖದರು ಮಾತ್ರ ಅವರಲ್ಲಿ ಇನ್ನೂ ಮಾಸಿಲ್ಲ.

ರಾಜ್ಯದಲ್ಲಿ ಶರೀಫರ ಹೆಸರು ಪ್ರಸ್ತಾಪ ಆದಾಗೆಲ್ಲ 'ಕುತಂತ್ರಿ' ಎಂದೇ ಅವರ ರಾಜಕೀಯ ಸಹೋದ್ಯೋಗಿಗಳ ವ್ಯಾಖ್ಯಾನ, ಗೇಲಿ. ಆದರೆ ಇದೆಲ್ಲ ಶರೀಫರ ಬೆನ್ನ ಹಿಂದೆ ಆಡುವ ಮಾತು. ಶರೀಫರ ಆಪ್ತರನ್ನು ಕೇಳಿದರೆ 'ರಾಜಕೀಯದಲ್ಲಿ ತಂತ್ರ ಇಲ್ಲದೇ ಹೇಗಾಗುತ್ತದೆ ಸ್ವಾಮಿ? ಬೇರೆಯವರು ಸೋತಲ್ಲಿ, ಶರೀಫ್ ಸಾಹೇಬರು ಗೆಲ್ಲುತ್ತಾರೆ. ಹೊಟ್ಟೆಕಿಚ್ಚಿನ ಜನ, ತಾವು ಮಾಡುವುದು ತಂತ್ರ. ಶರೀಫರು ಮಾಡುವುದು ಕುತಂತ್ರ ಎಂದು ಹೇಳುವುದು ಸಹಜ ಬಿಡಿ' ಎನ್ನುತ್ತಾರೆ.


ಬೆಂಗಳೂರಿನ ಹೇನ್ಸ್ ರಸ್ತೆಯ ಮನೆಯಲ್ಲಿರಲಿ, ಹೊರವಲಯದ ತೋಟದ ಮನೆಯಲ್ಲಿರಲಿ, ಊರು ಚಳ್ಳಕೆರೆಯಲ್ಲಿ ಇರಲಿ, ಅವರ ಸುತ್ತ ಸದಾ ಸಾಮಾನ್ಯ ಜನ ಇರುತ್ತಾರೆ. ಬೆಳಿಗ್ಗೆ ಎದ್ದು ಚಹಾ ಕುಡಿದು ಇಂಥ ಜನರ ಅಹವಾಲು ಕೇಳಲು ಕುಳಿತರೆ ಸುಲಭದಲ್ಲಿ ಮುಗಿಯುವುದಲ್ಲ. ಅದಕ್ಕೆ ಅವರು ಚಹಾದ ಜೊತೆಗೇ ಎರಡು ಬ್ರಿಟಾನಿಯಾ ಮಾರೀ ಬಿಸ್ಕತ್ತು ಹೊಟ್ಟೆಗೆ ಹಾಕಿಕೊಳ್ಳುತ್ತಾರೆ.

ಜನಕ್ಕೆ ನಾನಾ ರೀತಿಯ ಕಷ್ಟ. ಅವರು ಪ್ರತಿನಿಧಿಸುವ ಕ್ಷೇತ್ರದ ವ್ಯಾಪ್ತಿಯೂ ದೊಡ್ಡದು. ಇತ್ತ ನೆಲಮಂಗಲದ ಅಂಚಿಂದ ಹಿಡಿದು, ಅತ್ತ ಯಲಹಂಕ, ದೇವನಹಳ್ಳಿ, ಹೊಸಕೋಟೆಯಾಚೆಯಿಂದಲೂ ಜನ ಶರೀಫರನ್ನು ಕಾಣಲು ಬರುತ್ತಾರೆ. ಅನಾರೋಗ್ಯ, ಆಸ್ಪತ್ರೆಗೆ ತೋರಿಸಲು ದುಡ್ಡಿಲ್ಲ, ಮಗನ ಓದಿಗೆ, ಪುಸ್ತಕ ಖರೀದಿಗೆ ಅಡಚಣೆ. ಇಂಥ ಅಹವಾಲುಗಳಿಗೆ ಸೂಕ್ಷ್ಮವಾಗಿ ಕಿವಿಗೊಡುತ್ತಲೇ, ಅವಕ್ಕೊಂದು ಪರಿಹಾರ ನೀಡುವ ಕಾಯಕ. ಮುಂಜಾನೆಯ ಹಾಗೆ ಸಂಜೆಯೂ ಇಂಥ ಜನರ ಜಾತ್ರೆ.

ಸ್ನಾನ ಮುಗಿಸಿ ತಮ್ಮನ್ನು ಕಾಣಲು ಬರುವ ರಾಜಕೀಯ ವ್ಯಕ್ತಿಗಳು, ಮತ್ತಿತರರ ಜೊತೆ ಮಾತು ಮುಗಿಸಿ ಏಳುವಾಗ ಮಧ್ಯಾಹ್ನದ ಎರಡು ಗಂಟೆ ದಾಟಿರುತ್ತದೆ. ರಾಗಿ ಮುದ್ದೆ, ಸಾರು ತಿಂದು ಒಂದು ತಾಸು ನಿದ್ದೆ.

ನಾಲ್ಕು ಗಂಟೆಯ ವೇಳೆಗೊಂದು ವಾಕಿಂಗ್. ಭರಪೂರ ಒಂದು ತಾಸು ಸುತ್ತಾಡಿ, ಮೈ ಮನಸ್ಸು ಹಗುರ ಮಾಡಿಕೊಂಡರೆ ಮತ್ತೆ ಜನರ ಅಹವಾಲುಗಳಿಗೆ ಕಿವಿಗೊಡುವ ಕಾಯಕ. ಇದೆಲ್ಲ ಮುಗಿಯಲು ರಾತ್ರಿ ಹನ್ನೊಂದಾದರೂ ಆಯಿತು. ಹನ್ನೆರಡಾದರೂ ಆಯಿತು. ಬೆಳಿಗ್ಗೆ ಕಣ್ಣಾಡಿಸಿದ್ದ ಪತ್ರಿಕೆಗಳನ್ನು ವಿವರವಾಗಿ ಓದಿಯೇ ಮಲಗುವ ಅಭ್ಯಾಸ.

ಹೀಗೆ ಒಂದು ದಿನ ಕಳೆದು ಮತ್ತೊಂದು ಮೂಡುವಾಗ ಶರೀಫ್ ಹೊಸ ಲವಲವಿಕೆಯಿಂದ ಎದ್ದು ಕೂರುತ್ತಾರೆ. ಅಂಥವರು ಈ ಬಾರಿಯ ಬಜೆಟ್ ಅಧಿವೇಶನದ ಆರಂಭಕ್ಕೆ ದೆಹಲಿಗೆ ಹೋಗಲಿಲ್ಲ. ಅಲ್ಲಿಂದಲೇ ಗುಸುಗುಸು



ಆರಂಭ. ಒಂದೆರಡು ದಿನ ಕಳೆಯುತ್ತಾ ಇದ್ದ ಹಾಗೇ ಕಾಂಗ್ರೆಸ್ ಅಧ್ಯಕ್ಷರ ಕಾರ್ಯ ವೈಖರಿ ಟೀಕಿಸಿದ ಅವರ ಹೇಳಿಕೆ ಬಂದಾಗ, ಸಣ್ಣದೊಂದು ಬಾಂಬ್ ಸಿಡಿದಂತೆ. ಕಾಂಗ್ರೆಸ್ ಪಕ್ಷದಲ್ಲಿಯೇ ಒಂದು ಸಣ್ಣ ಅಲ್ಲೋಲಕಲ್ಲೋಲ. ಪಕ್ಷದ ಬಗ್ಗೆ ಟೀಕಿಸುವವರು ಬೇಕಾದರೆ ಪಕ್ಷ ಬಿಟ್ಟು ಹೋಗಲಿ ಎಂದು ಕೃಷ್ಣ ಹೇಳಿದರು. ಅವರನ್ನು ಹೊರಹಾಕಿ ಎಂದು ಕೆಲವರು ಸಿಬಿಐ ವಿಚಾರಣೆ ತಪ್ಪಿಸಿಕೊಳ್ಳಲು ಅವರೀಗ ಬಿಜೆಪಿ ಸೇರಲಿದ್ದಾರೆ ಎಂಬ ವದಂತಿ. ಇದೆಲ್ಲದರ ನಡುವೆ ಅವರು ದೆಹಲಿಗೆ ಹೋಗಿ, ಸೋನಿಯಾಗಾಂಧಿ ಅವರೊಡನೆ ಮಾತಾಡಿದ ಮೇಲೆ ಸ್ವಲ್ಪ ತಿಳಿಯಾಗಿದೆ. ಆದರೆ, ಇದು ಶಾಶ್ವತ ಕದನ ವಿರಾಮ ಎನ್ನುವಂತಿಲ್ಲ.

ಚಳ್ಳಕೆರೆಯ ಸೇವಾದಳ ಕಾರ್ಯಕರ್ತರಾಗಿ ಬಂದು ಚಿತ್ರದುರ್ಗ ಸೇರಿದ ಶರೀಫರಿಗೆ ಕಾಂಗ್ರೆಸ್ ಆಫೀಸೇ ಮನೆ. ಅವರನ್ನು ಗುರುತಿಸಿ ಎತ್ತಿ ಹಿಡಿದ ಎಸ್. ನಿಜಲಿಂಗಪ್ಪ ಅವರ ಗುರು. ಅಂಥವರನ್ನೇ 1969ರಲ್ಲಿ ಅವರು ತೊರೆದು ಇಂದಿರಾಗಾಂಧಿ ಜೊತೆ ಸೇರಿದರು. ಮುಂದೆ ಕೇಂದ್ರ ಸಚಿವರೂ ಆದರು. ಆಮೇಲೆ ರಾಜ್ಯಕ್ಕೆ ಮೊದಲ ಭೇಟಿ ನೀಡಿದಾಗ ಅವರು ತಾವಾಗಿಯೇ ಹೋಗಿ ಮೊದಲು ಕಂಡಿದ್ದು ನಿಜಲಿಂಗಪ್ಪನವರನ್ನು. ದೂರವಿದ್ದರೂ ನಂಟು ಕಡಿದುಕೊಳ್ಳುವ ಜಾಯಮಾನ ಅವರದಲ್ಲ. ಹಾಗಂತ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳುವವರೂ ಅಲ್ಲ. ಆದ್ದರಿಂದಲೇ ಅವರು ರಾಷ್ಟ್ರ ರಾಜಕಾರಣದಲ್ಲಿ ಉಳಿದುಕೊಂಡು ಬಂದಿದ್ದಾರೆ. ಅಂಥವರು ಏಕಾಏಕಿ ಸೋನಿಯಾಗಾಂಧಿ ಕಾರ್ಯ ವೈಖರಿ ಬಗ್ಗೆ ರಾಜ್ಯದ ಮುಖ್ಯಮಂತ್ರಿ ಹಾಗೂ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕೃಷ್ಣರ ಬಗ್ಗೆ ಮಾಡಿದ ಟೀಕೆ ಹಲವರ ತಲೆ ಬಿಸಿಗೆ ಕಾರಣ. ಬದಲಾಗುತ್ತಿರುವ ರಾಜಕೀಯ ವಾತಾವರಣದಲ್ಲಿ ಜನರೊಡನೆ ಪಕ್ಷ ಸ್ಪಂದಿಸುತ್ತಿಲ್ಲ ಎಂಬುದೇ ಅವರ ಅಳಲು. 1991ರಲ್ಲಿ ಪಿ.ವಿ. ನರಸಿಂಹರಾವ್ ಸಂಪುಟದಲ್ಲಿ ಕೇಂದ್ರ ರೈಲ್ವೆ ಸಚಿವರಾದರು. ದೇಶ ನೆನಪಿಟ್ಟುಕೊಳ್ಳುವಂಥ ಗೇಜ್ ಪರಿವರ್ತನೆಗೆ ಕಾರಣರಾದರು. ಆದರೆ ಅಯೋಧ್ಯೆ ಕುರಿತಂತೆ ರಾಯರು ತಳೆದ ನಿಲುವು ಖಂಡಿತವಾದಿಯಾಗಿ ವಿರೋಧಿಸಿದರು. ಅದಕ್ಕಾಗಿ ಮುಂದೊಂದು ದಿನ ಅವರು ಖಾತೆ ಕಳೆದುಕೊಂಡು ಖಾತೆ ರಹಿತ ಸಚಿವರಾದರು. ಅದೂ ಇಂಥದೊಂದು ಕ್ರಮ ಶರೀಫರು ಅಮೇರಿಕಾಕ್ಕೆ ಬೈಪಾಸ್ ಸರ್ಜರಿಗೆ ಹೋಗಿದ್ದಾಗ ನಡೆಯಿತು. ಆಗಲೂ ಅವರು ನೋವು ನುಂಗಿಕೊಂಡರು. ಆಪ್ತರಲ್ಲಿ ಗೊಣಗಿದರು. ಆದರೆ ಬಂಡೆದ್ದು ಹೊರಬೀಳಲಿಲ್ಲ.

ಪಕ್ಷ ಈಗ ಪರ್ವಕಾಲದಲ್ಲಿದೆ. ಜನರಿಂದ ದೂರ ದೂರ ಸರಿಯುತ್ತಿದೆ. ಇದಾಗಬಾರದೆಂಬುದೇ ಅವರ ಕಳಕಳಿ. ಅಂಥ ಮಾತು ಕಹಿ ಔಷಧಿಯಾಗಿ ಬೇರೆಯವರಿಗೆ ತೋರುತ್ತದೆ. ಹೊಗಳುಭಟ್ಟರ ಸಂತೆಯಾದ ಕಾಂಗ್ರೆಸ್ಸಿನಲ್ಲಿ ಶರೀಫರದು ಅಪಸ್ವರವಾಗಿ ಕಾಣುತ್ತದೆ. ಆ ಕಾರಣಕ್ಕೆ ಅವರು ಈಗ ಇಕ್ಕಟ್ಟಿಗೆ ಸಿಲುಕಿದ್ದಾರೆ. ಆದರೆ ಇಂಥ ಇಕ್ಕಟ್ಟುಗಳಿಂದಲೂ ಯಶಸ್ವಿಯಾಗಿ ಪಾರಾಗಿ, ತಮ್ಮ ಉದ್ದೇಶ ಸಾಧಿಸಿಕೊಳ್ಳುವ ಕಲೆ ಶರೀಫರಿಗೆ ಗೊತ್ತಿದೆ.

ಕೊನೆ ಮಾತು :

ಇಂದಿರಾ ನಗರದ ಭಾರೀ ಬೆಲೆಯ ಜಮೀನು. ಈಗ ಶರೀಫರ ಹೆಂಡತಿ ಹೆಸರಲ್ಲಿದೆ. ಅದು ಖರೀದಿಸಲು ದುಡ್ಡು ಎಲ್ಲಿಂದ ಬಂತು ಎಂದು ಹಲವರು ನ್ಯಾಯಾಲಯದಲ್ಲಿ ಪ್ರಶ್ನಿಸಿದರು. ನ್ಯಾಯಾಲಯ ಸಿಬಿಐ ತನಿಖೆಗೆ ಆದೇಶಿಸಿತು.

ಒಂದು ಕಾಲಕ್ಕೆ ರಿಕ್ಷಾ ಓಡಿಸುತ್ತಾ, ಬಸ್ ಏಜೆಂಟ್ ಆಗಿ ಜೀವನ ನಿರ್ವಹಿಸುತ್ತಿದ್ದ ಅವರು ಇಂದು ಶ್ರೀಮಂತರಾಗಿದ್ದಾರೆ. ಸಾಕಷ್ಟು ಬೇನಾಮಿ ಆಸ್ತಿಗಳಿವೆ. ಅದರ ತನಿಖೆ ಆಗಬೇಕು ಎಂದು ಕೆಲವರ ವಾದ. ಅವರ ಮಾತಿಗೀಗ ಬೆಲೆ ಬಂದಿದೆ.

ಸಿಬಿಐ ತನಿಖೆ ಒಂದೆಡೆ ರಾಜಕೀಯದ ಬಿಕ್ಕಟ್ಟು ಇನ್ನೊಂದೆಡೆ. ಇವೆರಡರಲ್ಲಿ ಸಿಕ್ಕಿಯೂ ನಜ್ಜುಗುಜ್ಜಾಗದೇ ಶರೀಫ್ ಹೇಗೆ ಎದ್ದು ಬರುತ್ತಾರೆ! ಎಂಬುದೇ ಕುತೂಹಲದಿಂದ ನೋಡಬೇಕಾದ ಸಂಗತಿ.

ಮೊನ್ನೆ ಷರೀಫರು ತಾವೇ ಖುದ್ದು ನಿಂತು ರಾಜ್ಯ ಸಭೆಗೆ ಬಂಡಾಯ ಅಭ್ಯರ್ಥಿ ಒಬ್ಬರನ್ನು ನಿಲ್ಲಿಸಿದರು. ಅವರ ಹೆಸರು ವೆಂಕಟೇಶ್ವರ. ಇವರು ಒತ್ತಾಯಿಸಿದರೂ ರೆಹಮಾನ್ ಖಾನ್‌ಗೆ ಟಿಕೆಟ್ ನಿರಾಕರಿಸದೇ ಇದ್ದುದು, ತಮ್ಮನ್ನು ಒಂದು ಮಾತೂ ಕೇಳದೇ ರಾಜ್ಯ ಸಭೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದು ಅವರ ಸಿಟ್ಟಿಗೆ ಕಾರಣ. ಕೃಷ್ಣ ಅವರಿಗಿಂತ ತಾವು ಬಲಶಾಲಿ ಎಂದು ತೋರಿಸಬೇಕಿತ್ತು. ಅದಕ್ಕೆ ಸರಿಯಾಗಿ ವೆಂಕಟೇಶ್ವರ ಸಿಕ್ಕಿದರು. ತಾವು ಗೆಲ್ಲುವುದು, ಸೋಲುವುದು ಮುಖ್ಯವಲ್ಲ. ಕಾನೂನು ತೊಡಕು ಸೃಷ್ಟಿಸಿ ಚುನಾವಣೆ ಮುಂದೆ ಹಾಕಿಸೋಣ ಎಂದು ಇಬ್ಬರೂ ವಿಟ್ರಿಯಾ ಹೋಟಲಲ್ಲಿ ಕುಳಿತು ನಿರ್ಧರಿಸಿದರು. ಹಾಗೆ ವೆಂಕಟೇಶ್ವರ ನಾಮಪತ್ರ ಸಲ್ಲಿಸಲು ಬಂದಾಗ ಹಾದಿರಂಪ, ಬೀದಿರಂಪ ನಡೆಯಿತು. ಕಾಂಗ್ರೆಸ್ ಸಂಸ್ಕೃತಿಗೆ ಅನುಗುಣವಾಗಿ ವೆಂಕಟೇಶ್ವರ ಅವರನ್ನು ಸಚಿವ ಡಿ.ಕೆ. ಶಿವಕುಮಾರ್ ಗದರಿಸಿದರು. ಹೆಚ್ಚೂ ಕಡಿಮೆ ಏಟು ಬೀಳಲಿದ್ದುದು, ಹೇಗೋ ತಪ್ಪಿತು. ಇದೆಲ್ಲಕ್ಕಿಂತ ಹೆಚ್ಚಾಗಿ ಷರೀಫರನ್ನು ಜನರೆಲ್ಲರ ಎದುರೇ ಶಿವಕುಮಾರ್ ಗದರಿಸಿದರು. ಅದೂ ಏಕವಚನದ ಧಾಟಿಯಲ್ಲಿ.

ಇಷ್ಟೆಲ್ಲ ಗದ್ದಲ ಆದ ಮೇಲೆ ವೆಂಕಟೇಶ್ವರ ಬಲವಂತದಿಂದಲೇ ಕಣದಿಂದ ನಿವೃತ್ತರಾದರು. ರೆಹಮಾನ್ ಖಾನ್‌ಗೆ ಈಗ ಆತಂಕ. ಷರೀಫ್ ಸುಮ್ಮನೆ ಕೂರುವ ಜಾಯಮಾನದವರಲ್ಲ. ಏನಾದರೂ ಮಾಡಿ ತಿರುಗೇಟು ನೀಡುತ್ತಾರೆ ಎಂಬ ಸಂಶಯ. ಅದನ್ನು ಅವರು ಮುಖ್ಯಮಂತ್ರಿ ಕೃಷ್ಣ ಅವರಲ್ಲೂ ತೋಡಿಕೊಂಡಿದ್ದಾರೆ. ಈಗ ಷರೀಫ್ ಬೆಂಬಲಿಸಬಹುದಾದ ಇನ್ನೊಬ್ಬ ಸೂಕ್ತ ಅಭ್ಯರ್ಥಿ ಇಲ್ಲ. ಪಕ್ಷೇತರರಾಗಿ ನಿಂತಿರುವ ವಿಜಯ ಮಲ್ಯ ಕೃಷ್ಣಾಗೆ ಆಪ್ತರು. ಸಮೀಪ ಸಂಬಂಧಿ. ಬಿಜೆಪಿಯ ರಾಜಶೇಖರ ಮೂರ್ತಿ ಅವರನ್ನು ಕಂಡರೇ ಆಗದು. ಮೂರ್ತಿ ಕಂದಾಯ ಸಚಿವರಾಗಿದ್ದಾಗಲೇ ಜಮೀನು ಅವ್ಯವಹಾರದ ಕೇಸು ಆರಂಭಗೊಂಡಿದ್ದು. ಒಂದೆಡೆ ಷರೀಫರು ಈಗ ರೆಹಮಾನ್ ಖಾನ್‌ರನ್ನು ಸೋಲಿಸಬೇಕು. ಇನ್ನೊಂದೆಡೆ ತಮ್ಮವರೇ ಅಭ್ಯರ್ಥಿಯೊಬ್ಬರು ಗೆಲ್ಲುವಂತೆ ನೋಡಿಕೊಳ್ಳಬೇಕು. ಎರಡೂ ಕಷ್ಟ.

ಇಂಥ ಬಿಕ್ಕಟ್ಟನ್ನು ಇವರೀಗ ಏಕೆ ಮೈಮೇಲೆ ಎಳೆದುಕೊಂಡಿದ್ದಾರೋ ! ಎಂಬುದೇ ನಿಗೂಢ.

■ ಸುಹಾಸ

ಅದೇನೋ ಸರಿ !

ಗೃಹಿಣಿ : ನಿನಗಿಂತ ಹಸು ವಾಸಿ. ಅದು ಒಳ್ಳೇ ಹಾಲುಕೊಡುತ್ತೆ. ನೀರುಗೀರು ಬೆರೆಸೋ ಪ್ರಶ್ನೇನೇ ಇಲ್ಲ.
ಹಾಲಿನವಳು : ಅದೇನೋ ಸರಿಕಣ್ರವ್ವ, ಆದರೆ ನನ್ನ ಹಂಗೆ ಅದು ಕೇಳಿಕೇಳಿದಾಗೆಲ್ಲ, ಕೇಳಿದಷ್ಟು ಹಾಲು ಕೊಡುತ್ತಾ?

ಹಾಗೇ ಅಂದುಕೊಂಡಿದ್ದೆ

ರಾಜ : ಬಾಡಿಗೆ ಕೇಳಿ ಕೇಳಿ ಬೇಸತ್ತ ಮಾಲೀಕ ಮನೇನೇ ನಮ್ಮ ಹೆಸರಿಗೆ ಬರೆದು ಕೊಟ್ಟುಬಿಟ್ಟ.
ರಾಮು : ಹೌದೇ! ತುಂಬಾ ಅದೃಷ್ಟವಂತ ನೀನು.
ರಾಜು : ಮನೆ ಕಂದಾಯ, ನೀರಿನ ಕಂದಾಯ, ತೆರಿಗೆ ನೋಟೀಸು ಬರೋವರೆಗೂ ನಾನು ಹಾಗೇ ಅಂದುಕೊಂಡಿದ್ದೆ.

■

ಜ್ಯೋತಿಷ್ಯಕ್ಕೆ ಜೋತು ಬೀಳುವ ರಾಜಕಾರಣಿಗಳು

ವಿಧಾನಸೌಧದ ಮೂರು ಮಹಡಿಗಳಲ್ಲೂ ಜ್ಯೋತಿಷ್ಯ, ಹಸ್ತ ಸಾಮುದ್ರಿಕ, ನಾಡಿ, ಮುಖ ನೋಡಿ ಭವಿಷ್ಯ ಹೇಳುವವರ ಬಳಿ ಕರೆದೊಯ್ದು ತಮ್ಮ ಕೆಲಸ ಮಾಡಿಸಿಕೊಳ್ಳುವವರ ಹಿಂಡೇ ಇದೆ. ಇವರಲ್ಲಿ ಅಪಾರ ಹಣ ಮಾಡಿದವರು ಇದ್ದಾರೆ. ಹೆಣ್ಣು, ಗಂಡು, ಹಣದ ಆಮಿಷ ಮೀರಿದ ಒಂದು ರೀತಿಯ ತಲೆ ಹಿಡುಕುತನ ಈ ಜ್ಯೋತಿಷ್ಯದ ಹಿಂಡಿನದು.


ನಾಡಿ ಜ್ಯೋತಿಷ್ಯ ಹೇಳುವವನ ವಿರುದ್ಧ ಈಚೆಗೆ ಒಂದು ಪ್ರತಿಭಟನೆ ನಡೆದಿದ್ದು, ಇದೊಂದು ಅಪರೂಪದ ಘಟನೆ ಎಂದೆನಿಸಿಕೊಂಡಿದೆ. ಏಕೆಂದರೆ ಒಂದು ವ್ಯಕ್ತಿಯ ವಿರುದ್ಧ ಸಾಮೂಹಿಕವಾಗಿ ಮೆರವಣಿಗೆ, ಘೋಷಣೆ, ಧರಣಿ ನಡೆಯುವುದು ಅಪರೂಪ.

ವಿಧಿಯ ಎದುರು ತೀರ ಅಸಹಾಯಕರಾಗಿರುವ ಪರಿಸ್ಥಿತಿಯಲ್ಲಿ ಪ್ರಾರ್ಥನೆ ಮೂಲಕವೂ ಯಾವ ಶುಭಸೂಚನೆ ಕಾಣದಾಗ, ಕುತೂಹಲಕ್ಕೋ, ಸಾಂತ್ವನಕ್ಕೋ ಈ ರೀತಿ ಜ್ಯೋತಿಷಿಗಳ ಮೊರೆ ಹೋಗುವುದು ಉಂಟು. ಪ್ರತಿಭಟನೆಗೆ ಈಡಾದ ಈ ಜ್ಯೋತಿಷಿ ಇನ್ನೂ ಯುವಕ, ಈಗ ತಲೆಮರೆಸಿಕೊಂಡು ವಕೀಲರ ಮೂಲಕ ಬೆಂಗಳೂರಿನ ಪೊಲೀಸರಿಗೆ ಉತ್ತರ ನೀಡುತ್ತ ಕಾಲಕಳೆಯುತ್ತಿದ್ದಾನೆ.

ಈತನದು ಅಗಸ್ತ್ಯ ಮುನಿಯ ನಾಡಿ ಗ್ರಂಥ. ಕೆಲವರದು ಶುಕನಾಡಿ. ಅದೇಕೋ ಸಪ್ತರ್ಷಿಗಳ ಎಲ್ಲರ ಹೆಸರಿನಲ್ಲಿ ನಾಡಿಗಳಿಲ್ಲ. ನಿಮ್ಮ ಹೆಸರು, ತಂದೆ ತಾಯಿಯರ ಹೆಸರು, ಅಕ್ಕ, ತಂಗಿ, ಅಣ್ಣ, ತಮ್ಮ ಎಷ್ಟು ಮಂದಿ ಎಂದು ಮೊದಲೇ ಲೆಕ್ಕ ಹಾಕಿಕೊಂಡು, ನಂತರ ಸಂಬಂಧಪಟ್ಟ ತಾಳೆಗರಿ ತಂದು ಓದಿ, ಅದು ಬಂದ ಗಿರಾಕಿಗಳ ಜೀವನಕ್ಕೆ ತಾಳೆ ಆದಲ್ಲಿ ಎಲ್ಲವೂ ಸುಖಾಂತವಾಗಬಹುದು. ಸಂಬಂಧಗಳ ಹೆಸರು, ಘಟನೆ ಸರಿ ಹೋದಲ್ಲಿ ಮಣ ಮಣ ಎಂದು ಉರು ಹಚ್ಚಿದ ಪಾಟ ಒಪ್ಪಿಸುವಂತೆ ಆರಂಭಿಸುತ್ತಾರೆ. ಮಧ್ಯೆ ಮಧ್ಯೆ 'ಏನು ಏನು' ಎನ್ನುತ್ತಾರೆ. ಈ ಏನು ಎಂಬುದಕ್ಕೂ ಕೊಶ್ಚನ್ ಮಾರ್ಕ್ ಇಲ್ಲ. ಫುಲ್‌ಸ್ಟಾಪೇ. ನಮ್ಮ ಶಂಕರಬಿದ್ರಿ ಸದಾ ಹೇಳುವಂತೆ, ಅಥವಾ ಅನಂತಮೂರ್ತಿಯವರ ಸಂಸ್ಕಾರ ಕಾದಂಬರಿಯ ಪಾತ್ರವೊಂದರಂತೆ ಏನು ಎಂಬುದು ಪ್ರಶ್ನೆ ಅಲ್ಲ ಎರಡು ವಾಕ್ಯಗಳ, ಎರಡು ಆಲೋಚನೆಗಳ ಮಧ್ಯೆ ಬರುವ ವಿರಾಮ. ಮುಂದಿನ ಪದ ಹುಡುಕಲು ಬೇಕಾದ ವಿರಾಮ. ಈ ಜ್ಯೋತಿಷಿ ತನ್ನ ಮಾತನ್ನು ಕ್ಯಾಸೆಟ್ ಮಾಡಿಕೊಡುತ್ತಾರೆ. ಇವನಷ್ಟು ಆರ್ಗನೈಸ್ಡ್ ಆಗದವರು 32 ಪುಟಗಳ ನೋಟು ಬುಕ್‌ವೊಂದರಲ್ಲಿ ಬರೆದುಕೊಳ್ಳುವಂತೆ



ಇಂದಿರಾಗಾಂಧಿ



ಆರ್. ಗುಂಡೂರಾವ್



ದೇವರಾಜ್ ಅರಸ್

ಕಾರ್ಯದರ್ಶಿಯ ವ್ಯವಸ್ಥೆ ಮಾಡಿರುತ್ತಾರೆ. ಆದರೆ ಈತ ಅತಿ ದುರಾಸೆ ಮನುಷ್ಯ. ಹೊರ ಕೋಣೆಯಲ್ಲಿ ರಿಸಪ್ಷನಿಸ್ಟ್, ಅಪಾಯಿಂಟ್ ಮೂಲಕ ಭೇಟಿ, ಮೊದಲೇ ಒಂದು ಸಾವಿರ ರೂ ಫೀಸು, ನಂತರ 'ನೀಚಶಕ್ತಿ' ಗಳ ಪರಿಹಾರಕ್ಕೆ ಎಂದು ದೂರದ, ಈಗ ತಲೆ ಮರೆಸಿಕೊಂಡಿರುವ ವೈಧೀಶ್ವರ ದೇವಾಲಯದಲ್ಲಿ ಮಾಡಲೇಬೇಕಾದ ವಿಶೇಷ ಪೂಜೆಗೆಂದು ಇನ್ನು ಕೆಲವು ಸಾವಿರ, ಶ್ರೀಮಂತ ಗಿರಾಕಿಗಳ ಆತಂಕದ ಮೀಟರ್ ಏರುತ್ತಿದ್ದಂತೆ ಇನ್ನೂ ಕೆಲವು ಸಾವಿರ ಕೀಳುವುದು ಇವನ ವಾಡಿಕೆ. ಉದಾಸೀನ ಆಶ್ವಾಸನೆಕೊಟ್ಟು, ಅದಕ್ಕೆ ಹಣವೂ ಕಿತ್ತು, ಅದು ನಿಜವಾಗದೆ, ಹೋದಾಗ ರೋಸಿ ಹೋದ ಗಿರಾಕಿಯೊಬ್ಬ ಹಣ ವಾಪಸು ಕೇಳಿದಾಗ ಆ ಜ್ಯೋತಿಷಿ ರೋಫು ಹಾಕಿ ಕಳಿಸಿಬಿಟ್ಟನಂತೆ.

ಆದರೆ ಈ ಗಿರಾಕಿ ನಿಜವಾಗಲೂ ಗಟ್ಟಿ ಮನುಷ್ಯ. ತನ್ನಂತೆ ಇತರರೂ ಮೋಸ ಹೋಗದಿರಲಿ ಎಂದು ಈ ಜ್ಯೋತಿಷಿಯ ಮನೆ ಮುಂದೆ ಧರಣಿ ಹೂಡಿ ಮಿಕ್ಕ ಗಿರಾಕಿಗಳನ್ನು ತಪ್ಪಿಸಲು ಪ್ರಯತ್ನ ಪಟ್ಟ. ಜ್ಯೋತಿಷಿಗೆ ಗೂಂಡಾ ರಾಜಕಾರಣಿಗಳ ಪರಿಚಯವಿದ್ದೇ ಇರುತ್ತೆ. ಇವರಿಗೆ ಸ್ವಲ್ಪ ಪ್ರಚಾರ ಪಡೆಯಲು ಸಹಾಯ ಮಾಡಿದವರೇ ಮಾಜಿ ಸಚಿವ ಎಸ್. ರಮೇಶ್. ಇವರ ಹಿಂಬಾಲಕರು ಈ ಗಿರಾಕಿಗೆ ಹೊಡೆದಿದ್ದಾರೆ. ಛಲ ಬಿಡದ ತ್ರಿವಿಕ್ರಮನಂತೆ ಈ ಗಿರಾಕಿ ಮಲ್ಲೇಶ್ವರದ ಪೊಲೀಸಿಗೆ ದೂರಿತ್ತಿದ್ದಾನೆ. ಇಂತವರೊಬ್ಬರಿಗೆ ಕಾಯುತ್ತಿದ್ದ ಮಿಕ್ಕ ಸಂಸಾರಿಗಳೂ ಇವರ ಬಳಿ ಜ್ಯೋತಿಷಿಯಿಂದ ತಮಗಾದ ನಿರಾಸೆ, ಮೋಸವನ್ನು ಹೇಳಿಕೊಂಡಿದ್ದಾರೆ. ಇವರ ಪ್ರತಿಭಟನೆ, ಮೆರವಣಿಗೆಯ ಗಂಭೀರತೆಯ ಹಿಂದಿರುವ ನೋವನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಿ, ಈ ಜ್ಯೋತಿಷಿಯ ಮನೆಗೆ ಧಾವಿಸಿ, ಪ್ರತಿಯೊಂದನ್ನು ಪ್ರಶ್ನಿಸಿದ್ದಾರೆ. ಇನ್ನೂರೈವತ್ತು ತೆತ್ತರೆ ಬೇಕಾದ ಅಂತರಾಷ್ಟ್ರೀಯ ಪದವಿ, ಗೌರವ, ಸರ್ಟಿಫಿಕೇಟ್ ಕೊಡುವ ವಿದೇಶದ ಬೋಗಸ್ ಕಂಪನಿಗಳಿಂದ ಕೊಂಡ

ಡಾಕ್ಟರೇಟ್ ಪದವಿ, ಪ್ರಶಸ್ತಿಗಳು ಅದನ್ನಿವರು ಸ್ವೀಕರಿಸುವ ಫೋಟೋಗಳನ್ನು ದೇವರ ಫೋಟೋಗಳಂತೆ ನೇತು ಹಾಕಿದ್ದನ್ನು ಪ್ರಶ್ನಿಸಿದ್ದಾರೆ. ಅದರ ಮೂಲ ಪ್ರತಿ ಎಲ್ಲಿ ಎಂದು ತಗಾದೆ ಎತ್ತಿದಾಗ, ನಾಳೆ ತೋರಿಸುತ್ತೇನೆ ಎಂದು ಹೇಳಿದವನು ಅಂದು ರಾತ್ರಿಯೇ ಮನೆ ಖಾಲಿ ಮಾಡಿದ್ದಾನೆ.

ಈ ಅಗಸ್ತ್ಯ ಜ್ಯೋತಿಷಿಯ ಒಂದು ವಿಶೇಷವೆಂದರೆ ಹೆಚ್ಚು ಕಡಿಮೆ. ಮಧ್ಯಮ ವರ್ಗದವರಿಗೆ ಅವರು ಹೋದ ಜನ್ಮದಲ್ಲಿ ಒಂದು ಪ್ರಾಂತ್ಯದ ರಾಜನಾಗಿದ್ದನೆಂದೂ, ಅವರ ಪತ್ನಿ ರಾಣಿಯಾಗಿದ್ದಾರೆಂದೂ ಈತ ತಮಿಳುನಾಡಿನವನಾದರಿಂದ ಅದು ಯಾವಾಗಲೂ ತಮಿಳುನಾಡಿನ ಮದುರೈ ಕಡೆಯ ಪ್ರಾಂತ್ಯವೆಂದು ಉಬ್ಬಿಸುವುದು ವಾಡಿಕೆ. ಯಾರಿಗೆ ಆಗಲೀ ಒಂದು ಕ್ಷಣ ಎದೆಯುಬ್ಬಿ, ತಲೆತುಂಬಿ ಬಂದಂತಾಗಿ, ನಾನೇನು ಜುಜುಬಿ ಮನುಷ್ಯನಲ್ಲ ಎಂಬ ಭಾವನೆ ಬಂದರೆ ಆಶ್ಚರ್ಯವಿಲ್ಲ. ಆದರೆ ಈಗಿರುವ ನೀಚ ಜನ್ಮಕ್ಕೆ ಕಾರಣವೇನು ಎಂದರೆ ಅಗಸ್ತ್ಯರ ಬಳಿ ಉತ್ತರವೂ ಇದೆ. ನಾನೇ ಒಮ್ಮೆ ತಮಿಳುನಾಡು ಕಡೆ ಹಸು ಕರು ಇಟ್ಟುಕೊಂಡ ಸಾಹುಕಾರನಾಗಿದ್ದು ಕರು ತಾಯಿಯ ಕೆಚ್ಚಲನಿಂದ ಹಾಲು ಕುಡಿದು ತನಗೆ ವ್ಯಾಪಾರದಲ್ಲಿ ಬರಬೇಕಾದ ಲಾಭ ಬರದೆ, ಕರುವನ್ನೂ ಅದರ ತಾಯಿಯನ್ನು ಕೋಪದಲ್ಲಿ ಬೇರ್ಪಡಿಸಿದನೆಂದೂ, ಅದಕ್ಕಾಗಿ ಈ ಜನ್ಮದಲ್ಲಿ ಈ ರೂಪದಲ್ಲಿದ್ದೇನೆಂದೂ ಹೇಳಲ್ಪಟ್ಟಿತು.


ಪಿ.ವಿ. ನರಸಿಂಹರಾವ್

ಇದಕ್ಕೆ ಪರಿಹಾರವಿದೆಯೇ? ಹಸು - ಕರು ಬೇರ್ಪಡಿಸಿದ್ದದ್ದು ವಿಮೋಚನೆಯೇ ಅಥವಾ ಇಲ್ಲದ ಶಾಪವೇ? ಪರಿಹಾರ ಇದೆ. ತಂಜಾವೂರಿನ ಬಳಿಯ ತಿರುನಲ್ಲಾರ್ ಗ್ರಾಮದ ಶನಿ, ನವಗ್ರಹ, ವೈದೀಶ್ವರನ್ ದೇವಸ್ಥಾನಗಳ ದರ್ಶನ, ವಿಶೇಷ ಪೂಜೆ. ಪ್ರತಿಯೊಬ್ಬರಿಗೂ ಹೆಚ್ಚೂ ಕಡಿಮೆ ಹೀಗೆ ಪರಿಹಾರ ಸೂಚಿಸಿರುವುದನ್ನು ನೋಡಿದರೆ ಇವನು ಈ ದೇವಸ್ಥಾನದ, ಅದರ ಸುತ್ತಮುತ್ತ ಎದ್ದಿರುವ ಹೋಟೆಲುಗಳ ಏಜೆಂಟಿರಬಹುದೆನಿಸುತ್ತದೆ.

ಚಾಮರಾಜಪೇಟೆಯಲ್ಲಿದ್ದ ಗುಂಜೂರು ನಾರಾಯಣಶಾಸ್ತ್ರಿ ಅವರದ್ದು ಆಕರ್ಷಕ ವ್ಯಕ್ತಿತ್ವ. ಪ್ರಜಾವಾಣಿಯಲ್ಲಿ ಸುದ್ದಿ ಸಂಪಾದಕರಾಗಿ ನಿವೃತ್ತರಾದ ಆರ್. ರಾಮಣ್ಣ ಇವರ ತಮ್ಮ. ಇವರಿಗಿಂತಲೂ, ವರ್ಣಮಯ ವ್ಯಕ್ತಿತ್ವ ಆದರೆ ನಾರಾಯಣಶಾಸ್ತ್ರಿಗಳದ್ದು ಚಾರ್ಮಿಂಗ್ ವ್ಯಕ್ತಿತ್ವ, ಇವರದ್ದು ಶುಕನಾಡಿ ಜ್ಯೋತಿಷ್ಯ. ಮೂರು ನಾಲ್ಕು ದಶಕದಿಂದ ಬಾಯಿ ಮಾತಿನಿಂದ ಆದ ಪ್ರಚಾರದಿಂದಲೇ ತಮ್ಮ ಮನೆಯ ಮುಂದಿರುವ ಸ್ಥಳದಲ್ಲೇ ವಟಾರವಾಗುವಷ್ಟು ಮನೆಗಳನ್ನು ಬಾಡಿಗೆ ಕೊಟ್ಟು, ಮುಂದೆ ಎರಡು ಮೂರು ಅಂಗಡಿಗಳ ಬಾಡಿಗೆ ಬರುವಂತೆ ಮಾಡಿಕೊಂಡಿದ್ದರು. ಹಲವಾರು ಬಾರಿ ಇವರ ಜ್ಯೋತಿಷ್ಯ ಸುಳ್ಳಾದರೂ ಯಾರೂ ಪ್ರತಿಭಟಿಸಿಲ್ಲ. ಪೊಲೀಸರು ಮನೆ ಬಾಗಿಲು ತಟ್ಟಿಲ್ಲ. ಇನ್ನೂ ಪೊಲೀಸರು ತಾವು ಪತ್ತೆ ಹಚ್ಚಲಾಗದ ಕೇಸುಗಳನ್ನು ಇವರ ಬಳಿಯೇ ತಂದು ನಾಡಿ ಜ್ಯೋತಿಷ್ಯದ ಮೂಲಕ ಪರಿಹಾರ, ಯಶಸ್ಸನ್ನೂ ಪಡೆದಿದ್ದಾರೆ.

ಗುಂಜೂರರದ್ದು ಹಣ ಇಷ್ಟು ಕೊಡಬೇಕು ಎಂದು ಇರಾದೆ ಇಲ್ಲ. ಹೇಳುವುದೆಲ್ಲ ಹೇಳಿ ಮುಗಿದ ಮೇಲೆ, ಬಂದವರು ವಿಷಯ ತಿಳಿದದ್ದೂ, ಎಷ್ಟು ಎಂದು ಸಣ್ಣ ಧ್ವನಿಯಲ್ಲಿ, ಚಡಪಡಿಕೆಯಲ್ಲೇ, ಸಂಕೋಚದಲ್ಲೇ ಕೇಳುತ್ತಾರೆ. ಗುಂಜೂರರು ಮೂಲೆಯಲ್ಲಿದ್ದ ಗೋಲಕ ತೋರಿ ಶುಕ ಮಹರ್ಷಿಗೆ ಸೇರಿದ್ದು ಅದು, ಅಲ್ಲಿ ನಿಮ್ಮಿಚ್ಚೆಯಷ್ಟು ಎಂದೂ, ಕೆಲವು ಬಾರಿ ಶ್ರೀಮಂತರಿಗೆ ನಿಮ್ಮ ಶಕ್ತ್ಯಾನುಸಾರ ಎಂದೂ ಸೂಕ್ಷ್ಮವಾಗಿ ತಿಳಿಸಿ ಸಂಪಾದಿಸುತ್ತಾರೆ. ನಾನೆಷ್ಟೋ ಸಲ 5- 10 ರೂ ಈ ಗೋಲಕಕ್ಕೆ ಹಾಕಿದ್ದೇನೆ, ಕೆಲವರು 250- 500 ರೂ. ಹಾಕಿದ್ದನ್ನು ನೋಡಿದ್ದೇನೆ.

ನಾರಾಯಣ ಶಾಸ್ತ್ರಿ ವಾಸ್ತವವಾದಿ. ಅದೃಷ್ಟವಶಾತ್, ತನ್ನ ಕೈಗೆ ಶುಕನಾಡಿ ಗ್ರಂಥ ಬಂದಿದೆ, ಅದೃಷ್ಟವೂ ಚೆನ್ನಾಗಿದ್ದು ಮನೆಮಟ ಗಳಿಸಿದ್ದಾಗಿದೆ. ಯಾವಾಗ ಚಟ್ಟೆಂದು ದೃಷ್ಟಿ ಬಿಟ್ಟು ಹೋಗುತ್ತೋ ಗೊತ್ತಿಲ್ಲ ಎಂಬ ಚಡಪಡಿಕೆ ಅವರ ಎಂಬತ್ತರ ವಯಸ್ಸಿನಲ್ಲೂ ತೋಡಿಕೊಂಡಿದ್ದರು. ಏಕೆಂದರೆ ಇವರಿಗೆ ಗ್ರಂಥಕ್ಕಿಂತಲೂ ಇವರ ಸ್ವಂತ ಅದೃಷ್ಟದ ಬಗ್ಗೆ ಹೆಚ್ಚು ನಂಬಿಕೆಯಿತ್ತು. ಆ ಅದೃಷ್ಟದಿಂದಲೇ ನಾಡಿ ಗ್ರಂಥಗಳಲ್ಲಿ ಸಂದರ್ಭಕ್ಕೆ ಸರಿಯಾದ ತಾಳೆಗರಿಯೇ ಬಂದು ಯಶಸ್ಸು, ಹಣ ಗಳಿಸಿದ್ದು ಈ ಬೆದರಿಕೆ ಕಲಾವಿದರಿಗೂ, ರೈತರಿಗೂ ಇರುವ ಆತಂಕ. ಒಂದೇ ಒಂದು ದಿನ ವಿಧಾನಸಭೆಗೆ ಬಂದು ಕಲಾಪ, ಶಾಸಕರ ಆಟಾಟೋಪ ನೋಡಿ, ಒಂದು ಅದ್ಭುತ ಲೇಖನ ಬರೆದು, ಪ್ರೊ. ಲಕ್ಷ್ಮೀಸಾಗರರನ್ನು, 'ಇವರು ಬ್ರಿಟಿಷರು ಬಿಟ್ಟು ಹೋದ ಕಪ್ಪು ಕಾಣಿಕೆ' ಎಂದು ಲಂಕೇಶರು ಬರೆದಿದ್ದರು. ಇದನ್ನು ಆಸ್ವಾದಿಸಿ ಒಬ್ಬರು ಬರಹಗಾರರು ಪ್ರಶಂಸಿಸಿದಾಗ, ಲಂಕೇಶರು ದೀರ್ಘವಾಗಿ ಮುಷ್ಠಿಯಲ್ಲಿ ಹಿಡಿದ ಸಿಗರೇಟನ್ನು ಎಳೆದು, ಜಿರಿಕೆ ಹೊಡೆದು ತಮ್ಮ ನೆರಳನ್ನೇ ನೋಡುತ್ತ ನಿಂತು, 'ಎಷ್ಟು ದಿವಸ ಈ ರೀತಿ ಪದಗಳು, ಪನ್‌ಗಳು, ಈಡಿಯಂ, ಸಂದರ್ಭಕ್ಕೆ ತಕ್ಕ ಪದ ಹೊಳೆಯುತ್ತೋ ನೋಡಬೇಕು' ಎಂದು ಗಾಢವಾಗಿ ಕಣ್ಣರಳಿಸುತ್ತಾ ನಂತರ ಕಿಸಿದು ನೋಡುತ್ತಾ ನಿಂತಿದ್ದರು. ಉತ್ತರ ಸಿಗದೆ, 'ಹೊಳೆದಷ್ಟು ದಿನ ಬರೆದುಬಿಡುವುದು, ಹೊಳೆಯುವುದು ನಿಂತು ಹೋದ ಮೇಲೆ ಬರವಣಿಗೆ ಬಿಟ್ಟು ಪುಟ್ಟಪರ್ತಿಗೆ ಸೇರಿ ಭಜನೆ ಮಾಡುವುದು' ಎಂದು ಜೋಕು ಮಾಡಿದರೂ ಆತಂಕವಿದ್ದೇ ಇತ್ತು.

ಇಳುವರಿ ಕಡಿಮೆ ಆದಾಗ, ಬ್ಯಾಂಕಿನ ಸಾಲದ ಬಡ್ಡಿ ಮಾತ್ರ ಏರಿದ್ದನ್ನು ಕಂಡು ರೋಸಿ ಹೋದ ಪೂರ್ಣಚಂದ್ರ ತೇಜಸ್ವಿ ಅವರು, 'ಭೂಮಿಯನ್ನು ನಂಬುವುದೂ ಒಂದೇ, ಸೂಳೆಯನ್ನು ನಂಬುವುದು ಒಂದೇ ಎಂದು ಆತ್ಮೀಯರಲ್ಲಿ ಗೋಳಿಟ್ಟಾಗ, ಅವರು ಇಂತಹ ಮಾತನ್ನು ಬಹಿರಂಗವಾಗಿ ಹೇಳ ಕೂಡದೆಂದು ತಾಕೀತು ಹಾಕಿದ್ದರು. ಪ್ರತಿಯೊಬ್ಬರಿಗೂ ಸರಾಗವಾಗಿ ನಡೆಯುತ್ತಿದ್ದಾಗ ಎಷ್ಟು ಸರಾಗವೆಂದರೆ ಎಲ್ಲಿ ಈ ರಿಥಮ್ ಬ್ರೇಕಾಗಿ ಬಿಡಬಹುದೋ ಎಂಬ ಆತಂಕ.


ಗುಂಜೂರ್ ನಾರಾಯಣ ಶಾಸ್ತ್ರಿ ಅವರದ್ದು ಮತ್ತೊಂದು ಭೀತಿ. ಶುಕನಾಡಿ ಗ್ರಂಥ ತನ್ನ ಅವಧಿಗೆ ಮೀರಿ ತಮ್ಮ ಬಳಿ ಶಕ್ತಿ ಇರುವಂತೆ ತಾವು ಬಲಾತ್ಕಾರ ಮಾಡಿದ್ದರಿಂದ ಅದರ ಸತ್ವ ಉಳಿದಿಲ್ಲ ಎಂಬ ಭೀತಿ. ಹೋದ ಜನ್ಮದಲ್ಲಿ ನೀನು ರಾಜನಾಗಿದ್ದೆ ಎಂದು ಪ್ರಥಮವಾಗಿ ನನಗೆ ಹೇಳಿದ್ದು ಇವರೇ. ಹಲವಾರು, ವಿದೇಶಿಯರನ್ನೂ ಸೇರಿ, ಮಂದಿಯನ್ನು ಇವರ ಬಳಿ ಕಳಿಸಿದೆ. ವಿದೇಶಿಯರಂತೂ ದಂಗು ಬಡಿದು ಹೋಗಿದ್ದರು. ಅವರ ಅತ್ಯಂತ ಗುಪ್ತವಿಚಾರಗಳನ್ನೂ ಹೇಳಿ, ಅವರ ಧ್ಯಾನದ ಮಂತ್ರವನ್ನೂ ಹೇಳಿ ದಂಗು ಬಡಿಸಿದ್ದರು. ನಾನು ಹೋದ ಜನ್ಮದಲ್ಲಿ ರಾಜನಾಗಿದ್ದು, ಉಂಗುರ ಕಳೆದು ಹೋದಾಗ ಒಬ್ಬ ಬ್ರಾಹ್ಮಣನನ್ನು ಶಂಕಿಸಿ, ಬಹಿರಂಗವಾಗಿ ವಿಚಾರಿಸಿದಾಗ ಅನುಮಾನವನ್ನು ಸಹಿಸದ ಆ ಬ್ರಾಹ್ಮಣ ಆತ್ಮಹತ್ಯೆಯ ಫಲವಾಗಿ ನನಗೆ ಈ ಜನ್ಮ. ಯಾವ ಪಾಪವನ್ನು ಮಾಡದ ಆ ರಾಣಿ ಈಗ ನನ್ನ ಪತ್ನಿ ಎಂದಿದ್ದರು. ನಾನು ಇವರ ಬಳಿ ಕರೆದುಕೊಂಡು ಹೋಗಿದ್ದ ಉದ್ಯಮಮಿತ್ರನಿಗೂ ಹೀಗೆ ಹೇಳಿದಾಗ ನನಗೆ ಇವರ ಬಗ್ಗೆ, ಈ ಜ್ಯೋತಿಷ್ಯದ ಬಗ್ಗೆ ಮೋಹ ದೂರವಾದರೂ, ಮನಸ್ಸಿನಲ್ಲೇ ಇವರು ಹೇಳಿದ ಕೆಲವು ವಿಷಯಗಳು ನಿಜವಾಗಲಿ ಎಂಬ ಆಸೆ ಇದ್ದರಿಂದ ಆಗಾಗ್ಗೆ ಭೇಟಿ ಮಾಡುತ್ತಿದ್ದೆ.

ನಾರಾಯಣಶಾಸ್ತ್ರಿ ನನ್ನ ಬಗ್ಗೆ ಮುಲಾಜಿಗೆ ಸಿಕ್ಕಿಕೊಂಡವರಂತೆ ವರ್ತಿಸುತ್ತಿದ್ದರು. ಅದಕ್ಕೆ ಕಾರಣ ತಿಳಿಯಲು ಸಮಯ ಬೇಕಾಯಿತು. ಒಮ್ಮೆ ನನಗೆ ಸಂಬಂಧಪಟ್ಟ ತಾಳೆಗರಿ ಓದುತ್ತಿದ್ದವರು, ಚಕ್ಕನೆ ಓದಬಾರದನ್ನು ಓದಿದವರಂತೆ ಬೆಚ್ಚಿ ನಿಲ್ಲಿಸಿ, ನನ್ನ ಹೆಸರು, ಯಾರು, ಏನು ಎಲ್ಲ ವಿಚಾರಿಸಿದರು. ಇಂತಿತಹವರು ನಿಮ್ಮ ಸಂಬಂಧಿಗಳೇ ಎಂದೆಲ್ಲ ವಿಚಾರಿಸಿದರು. ಎಲ್ಲವನ್ನೂ ತಿಳಿಸಿದೆ. ನನ್ನನ್ನೇ ದುರುಗುಟ್ಟಿ ನೋಡುತ್ತ, 'ಈ ಗ್ರಂಥವನ್ನು ನಿನಗೆ ಒಪ್ಪಿಸು ಎಂದು ಶುಕ ಮಹರ್ಷಿ ನುಡಿಯುತ್ತಾರಲ್ಲಪ್ಪಾ, ನಿನ್ನ ಭಾಗ್ಯವೇ ಭಾಗ್ಯ' ಎಂದರು.

ನನ್ನ ಪ್ರಜ್ಞೆ ಮೀರಿದ ಶಕ್ತಿಯ ಘಟನೆಗಳು ನನ್ನ ಮುಂದೇ ಆಗಿಬಿಡಬಹುದೆಂದು ಆಸೆ ಪಟ್ಟೆ. ಒಂದೇ ಕ್ಷಣ ಗುಂಜೂರು ನಾರಾಯಣಶಾಸ್ತ್ರಿ ಅವರು ಒಳಗಿನ ಕೋಣೆಯ ಆರು ಆಲ್ಮೇರಾದಿಂದ ಯಾವುದೋ ಸಂವತ್ಸರದ ಒಡೆದು ಹೋಗಬಹುದು ಎನ್ನುವಷ್ಟರ ಮಟ್ಟಿಗೆ ಹಳೆಯದಾದ ಗ್ರಂಥಗಳನ್ನು ನನಗೆ ಸಮರ್ಪಿಸಿ ವಿನೀತರಾಗಿಬಿಡುತ್ತಾರೆ ಎಂದೂ, ಶುಕಮುನಿಗೆ ತನ್ನ ಬಗ್ಗೆ ತಿಳಿದಿರುವುದರಿಂದ ಯಾವುದೋ ಕಾಲದಲ್ಲಿ ನಾನೂ ಸಪ್ತರ್ಷಿಗಳ ವಾರಿಗೆಯವನು ಎಂದೆಲ್ಲ ಉಬ್ಬಿ ಹೋಗಿದ್ದೆ. ಆದರೆ ಸಪ್ತರ್ಷಿ ಇರಲಿ, ಕೈ ಚೆನ್ನಾಗಿ ನಡೆಯುತ್ತಿದ್ದರಿಂದ ದೇವರನ್ನೂ ಉದಾಸೀನವಾಗಿ ನೋಡಬಹುದಾದ ಆತ್ಮವಿಶ್ವಾಸ ಶಾಸ್ತ್ರಿಗಳಲ್ಲಿ. ಅವರ ತುಂಟನಗೆಯಿಂದಲೇ ನನಗೆ ತಿಳಿಯಿತು. ಶಾಸ್ತ್ರಿಗಳು ಶುಕಮಹರ್ಷಿಯ ಮಾತನ್ನು ಪರಿಪಾಲಿಸುವುದಿಲ್ಲ ಎಂದು. ನಗುತ್ತಲೇ ಶಾಸ್ತ್ರಿಗಳು, 'ನಾಡಿ ಗ್ರಂಥ ಕೊಟ್ಟರೆ ಏನಯ್ಯಾ ಮಾಡುತ್ತೀಯ' ಎಂದು ವಿಚಾರಿಸಿದರು. ನಾನು ಮೇಲುಕೋಟೆಯ ಸಂಸ್ಕೃತ ಅಕಾಡೆಮಿಗೆ ಕೊಟ್ಟು ಬಿಡುತ್ತೇನೆ ಎಂದೆ. ಶಾಸ್ತ್ರಿಗಳಿಗೆ ಜಿಗುಪ್ಸೆ ಆಗುವಷ್ಟು ಬೇಸರವಾಯಿತು. 'ಲಕ್ಷ, ಲಕ್ಷ ದುಡೀಬಹುದಯ್ಯಾ ಇದರಿಂದ' ಎಂದು ಒಮ್ಮೆ ಕೈಲಿದ್ದ ಗ್ರಂಥದ ಕಡೆ, ಒಮ್ಮೆ ಅವರು ನಿರ್ಮಿಸಿದ್ದ ಕಾಂಕ್ರೀಟ್ ವಟಾರದ ಬಗ್ಗೆ ಮುಖ, ಕಣ್ಣು ಆಡಿಸಿದರು. ನಾನು ಇಷ್ಟು ಪವಿತ್ರವಾದ ಪುಸ್ತಕದಿಂದ ಹಣ ಮಾಡುವ ಉದ್ದೇಶವಿಲ್ಲ ಎಂದೆ. ಶಾಸ್ತ್ರಿಗಳು, ನಾಡಿ ಮತ್ತೊಮ್ಮೆ ಓದಿ, ಮುಂದೆ ಪಕ್ಷ ಕಳೆದ ಮೇಲೆ ದಂಪತಿ ಸಮೇತ ಬರುವಂತೆ ಮಹರ್ಷಿಗಳು ಇಚ್ಛೆ ವ್ಯಕ್ತ ಪಡಿಸಿದ್ದಾರೆ ಎಂದು ನನ್ನನ್ನು ಸಾಗ ಹಾಕಿದರು.

ಈ ಮೊದಲು ನನ್ನನ್ನು ಒಮ್ಮೆ, 'ತುಂಬ ಜಲದೋಷ (ನೆಗಡಿ) ಕಣಯ್ಯ? ಮುಂದಿನ ವಾರ ಬಾ' ಎಂದೂ, ತಮ್ಮ ಮನೆಮೇಲೆ ಇಂದಿರಾಗಾಂಧಿ ಪ್ರಯಾಣ ಸುತ್ತಿದ್ದ ವಿಮಾನ ಹಾರಿದಾಗ, 'ಹೋಗ್ತಾ ಇದ್ದಾಳಲ್ಲಯ್ಯಾ' ಎಂದು ಗ್ರಂಥ ಓದುವುದನ್ನು ನಿಲ್ಲಿಸಿ, ಸೂರಿನ ಕಡೆ ನೋಡುತ್ತ, ಇಂದಿರಾಗಾಂಧಿ ಅವರ ಪುಣ್ಯಕ್ಕೆ ಮರುಗುತ್ತ, ಅವರ ಜಾತಕ ಹೇಗಿರಬಹುದೋ, ಯಾವ ಮನೆಯಲ್ಲಿ ಯಾವ ಗ್ರಹವೋ ಎಂದು ಲೊಚಗುಟ್ಟಿ, ಮತ್ತೊಮ್ಮೆ ಬರಲು ಗೋಗರೆದಿದ್ದರು.

ದಂಪತಿ ಸಮೇತ ಹೋಗಿ ಆಯಿತು. ಗ್ರಂಥ ಬರಲಿಲ್ಲ. ಆಗ ನನ್ನ ಪತ್ನಿ ಬಾಯಿಬಿಟ್ಟಳು. ಇದೇ ಶಾಸ್ತ್ರಿಗಳು ಅವಳ ತಂದೆಯ ನಾಡಿ ಗ್ರಂಥ ಓದಿದಾಗಲೂ ಹೀಗೆಯೇ ಗ್ರಂಥ ಹಸ್ತಾಂತರದ ಬಗ್ಗೆ ಬಂದಿತೆಂದೂ, ಇದನ್ನು ಗಂಭೀರವಾಗಿ ಪರಿಗಣಿಸಿ ಅವರು ಹಲವಾರು ಬಾರಿ ಪ್ರಯತ್ನಿಸಿ ಸುಸ್ತಾದರೆಂದೂ, ಈಗ ಬಾ, ಆಗ ಬಾ, ಪಕ್ಷ ಕಳೆದು ಬಾ, ಉತ್ತರಾಯಣ ಪುಣ್ಯ ಕಾಲ ಬರಲಿ ಎಂದೋ, ದೀಪಾವಳಿ ಕಳೀಲಿ ಎಂದೋ, ನಂತರ ಸಂಕ್ರಾಂತಿ, ಉಗಾದಿ ಹೀಗೆ ಸತಾಯಿಸಿ ತಪ್ಪಿಸಿಕೊಂಡರಂತೆ. ನಂತರ ಈ ರೀತಿ ಮೋಸ ಹೋಗಿದ್ದು ಇವರ ಅಣ್ಣನ ಸರದಿ. ಈಗ ಎರಡು ದಿನ ನನ್ನ


ಎಚ್.ಡಿ. ದೇವೇಗೌಡ

ಸರದಿಯಾಗಿತ್ತು. ನಾರಾಯಣ ಶಾಸ್ತ್ರಿಗಳು ತೀರಿಕೊಂಡ ನಂತರ ಇವರ ಹಿರೀ ಮಗನ ಪಾಲಾಯಿತು ಗ್ರಂಥಗಳು. ಕಚ್ಚೆ ಜುಟ್ಟು ಇದ್ದರೂ ಅದರ ಮಹಿಮೆ ತಿಳಿದವನು. ಮಹಾ ಚುರುಕು ಕಚ್ಚೆ ಜುಟ್ಟಿನ ಮಾರ್ಕೆಟ್ ವ್ಯಾಲ್ಯೂ ವಿದೇಶದಲ್ಲಿ ಹೆಚ್ಚೆಂದು ಅರ್ಥಮಾಡಿಕೊಂಡಿದ್ದ. ಅಪ್ಪನಂತೆ ಬಂದಷ್ಟೂ ಬರಲಿ, ದೇವರು ಕೊಡುವಷ್ಟು ದಿನ ಕೊಡ್ತಾನೆ ಎಂಬ ನಂಬಿಕೆಗೆ ಸಿಕ್ಕಿ ಕೊಳ್ಳುವನಲ್ಲ. ಅಪ್ಪನ ಕಾಲದಲ್ಲಿ ಜೊಲ್ಲು ಸುರಿಸುತ್ತ ಬರುವ ವಿದೇಶಿ ಗಿರಾಕಿಗಳನ್ನು ನೋಡಿದ್ದ. ಅಪ್ಪ ತೀರಿದ ಕೂಡಲೇ ಇಡೀ ಆರು ಆಲ್ಮೇರಾದಲ್ಲಿ ಜೋಡಿಸಿದ್ದ ಗ್ರಂಥಗಳ ಸಮೇತ ವಿದೇಶಕ್ಕೆ ಹಾರಿದ. ಎಷ್ಟು ದುಡಿದನೋ ತಿಳಿಯದು, ಬೇಗ ಎಂದರೆ ತನ್ನ ಮುವತ್ತೆರಡನೆ ವಯಸ್ಸಿನಲ್ಲೇ ತೀರಿಕೊಂಡ. ಈಗ ಈ ಗ್ರಂಥ ಯಾರ ಬಳಿ ಇದೆಯೋ ತಿಳಿಯದು.

ನಾಡಿ ಗ್ರಂಥದಲ್ಲಿ ದೇಶದ ಮಟ್ಟದಲ್ಲಿ ಪ್ರಚಾರ ಸಿಕ್ಕಿದ್ದು ಹಾಸನ ಜಿಲ್ಲೆಯ ಕೋಡಿ ಮಠದ ನಾಡಿ ಗ್ರಂಥಕ್ಕೆ. ರಾಜಕಾರಣಿಗಳ ಕಣ್ಣು ಬೀಳುವುದಕ್ಕೆ ಮುನ್ನ ಈ ಗ್ರಂಥದ ಉಪಯೋಗವನ್ನು ಸುತ್ತಮುತ್ತಿನ ಹಳ್ಳಿಯ ಜನರೆಲ್ಲರೂ ಪಡೆದಿದ್ದರೂ, ಗ್ರಂಥ ಮಠದ್ದಾದ್ದರಿಂದ, ಅದಕ್ಕೆ ಸಲ್ಲುವ ಕಾಣಿಕೆಯೂ 5, 10 ರೂ ಗಳಾದ್ದರಿಂದ ಯಾರೂ ದೂರಿದ್ದನ್ನು ಕೇಳಿಲ್ಲ.

ನನ್ನ ಭವಿಷ್ಯ ಅಷ್ಟೇನೂ ಆಕರ್ಷಕವಾಗಿಲ್ಲದ್ದರಿಂದ, ನನ್ನ ತಮ್ಮನ ಭವಿಷ್ಯ ತಿಳಿಯಲು ಕೋಡಿಮಠಕ್ಕೆ ಹೋಗಿದ್ದೆ, ಸುಮಾರು 18 ವರ್ಷಗಳ ಹಿಂದೆ ಮಠದ ಸ್ವಾಮಿಗಳು ಆತ್ಮೀಯತೆಯಿಂದಲೇ ಬರಮಾಡಿಕೊಂಡು, ನೀವು ಬಂದಿರೋದು ನನ್ನನ್ನು ಕಾಣಲಲ್ಲ, ಗ್ರಂಥ ನೋಡಲು. ಆದ್ದರಿಂದ ಸಮಯ ಹಾಳು ಮಾಡದೆ, ಮೊದಲು ಭೋಜನ ಮುಗಿಸಿ ನಂತರ ಗ್ರಂಥದ ಭವಿಷ್ಯ ತಿಳಿಯಬಹುದೆಂದರು.

ದೊಡ್ಡ ರಾಜಕಾರಣಿಗಳು, ಶ್ರೀಮಂತರು ಬಂದಾಗ ಸ್ವಾಮಿಗಳೇ ನಾಡಿ ಗ್ರಂಥದಿಂದ ಓದಿ ಹೇಳುತ್ತಾರೆಂದೂ, ನನ್ನಂತವರು ಬಂದಾಗ ಸಾಮಾನ್ಯನಂತೆ ಕಾಣುವ, ಓದಲು ಬರುತ್ತೋ ಇಲ್ಲವೋ ಎನ್ನುವಷ್ಟರ ಮಟ್ಟಿಗೆ ಸಂಭಾವಿತನಾದವನೊಬ್ಬ ನನಗೆ ಗ್ರಂಥ ಓದಿದ್ದು.

ಈತ ಆರಿಸಿಕೊಂಡಿದ್ದು ಒಂದೆರಡು ಪಾಲಿಥೀನ್ ಷೀಟಿನಲ್ಲಿ ಭದ್ರಮಾಡಿದ್ದ ಪುರಾತನ ಕಾಲದ ಓಲೆಗರಿ. ಎಲ್ಲರ ಭವಿಷ್ಯ ಇದರಲ್ಲಿಯೇ ಅಡಗಿರುತ್ತೆಯೇ ಅಥವಾ ದೊಡ್ಡ ದೊಡ್ಡ ಅಲ್ಮೇರಾದಲ್ಲಿ ಮಿಕ್ಕ ಪುಸ್ತಕಗಳಿವೆಯೇ ಎಂದು ಕೇಳಿದೆ. 'ಹಂಗಿಲ್ರೀ ಇಂದು ಯಾರು ಯಾರು ಭವಿಷ್ಯ ಕೇಳಲು ಬರುತ್ತಾರೆಂಬುದು ಋಷಿಗಳಿಗೆ ತಿಳಿದಿರುತ್ತೆ. ಅವರಿಗೆ ಸಂಬಂಧಪಟ್ಟ ತಾಳೆಗರಿ ನಮ್ಮ ಕೈಗೆ ಬರುತ್ತೆ' ಎಂದ. ಕೆಲವು ಬಾರಿ ಇರುವ ಎರಡು, ಮೂರು ಹಾಳೆಗಳಲ್ಲಿಯೇ ಎಲ್ಲರ ಭವಿಷ್ಯ ಅಡಗಿದ್ದು, ಎದುರಿಗೆ ಕುಳಿತವರ ಭವಿಷ್ಯ ಮಾತ್ರ ನಿಚ್ಚಳವಾಗಿ ಕಂಡು; ಎದುರಿಗಿಲ್ಲದವರ ವಿಚಾರ ಮಸುಕಾಗಿ ಮರೆಯಾಗುವುದೂ ಉಂಟು ಎಂದ. ನನ್ನ ಬಗ್ಗೆ ಪ್ರಶ್ನೆ ಕೇಳದಿದ್ದರೂ ಅವನು ಓದುವಾಗ ನಿಮಗೆ ಸಂಬಂಧಪಟ್ಟ ವಿಷಯಗಳೂ ಇಲ್ಲಿ ಬಂದಿವೆ ಎಂದು ಎರಡು ಮೂರು ವಿಷಯ ಹೇಳಿದ, ಅಷ್ಟೂ ದಂಗು ಬಡಿದು ಹೋಗುವಷ್ಟರ ಮಟ್ಟಿಗೆ ನಿಜವಾಗಿತ್ತು. ನಿಮ್ಮ ತಮ್ಮ 'A' ಇಂದ ಆರಂಭವಾಗುವ ದೇಶಕ್ಕೆ ಪ್ರಯಾಣಿಸುತ್ತಾರೆ ಎಂದು ನಾನು ಬೆಂಗಳೂರಿಗೆ ಬಂದು ತಮ್ಮನಿಗೆ ತಿಳಿಸಿದೆ. ತುಂಬ ಖುಷಿಪಟ್ಟು ಅಮೆರಿಕ ಇಲ್ಲದಿದ್ದರೂ, ಆಸ್ಟ್ರೇಲಿಯಾ ಆದರೂ ಸಾಕು ಎಂದಿದ್ದ. ಕಡೆಗೆ ಹೋದದ್ದು ಅಲ್ಜೀರಿಯಾ ಎಂಬ ಹೋಗಬಾರದ ದೇಶ; ಯಾವ ದೇಶಕ್ಕೆ ಹೋದರೆ, 'ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂದು

ಹೇಳಿಕೊಳ್ಳುವಂತಾಗುತ್ತೋ ಅಂತಹ ದರಿದ್ರದೇಶ. ಆದರೆ ಈಗ ಆತ ಇರುವುದು ಅಮೆರಿಕದಲ್ಲಿಯೇ.

ಗ್ರಂಥ ಓದಿದ ಹಲವಾರು ಗಂಟೆಗಳ ನಂತರ ಬಸ್ ಸ್ಟಾಂಡಿನಲ್ಲಿ ಬೆಂಕಿ ಪಟ್ಟಣ ಹುಡುಕುತ್ತಿದ್ದಾಗ ಬೀಡಿ ಸೇದುತ್ತ ಕೂತಿದ್ದವನೊಬ್ಬ ಕಂಡ. ಅವನ ಬಳಿ ಹೋದಾಗ ಅವನು ಕೆಲ ಸಮಯದ ಹಿಂದೆ ನನ್ನ ತಮ್ಮನ ಭವಿಷ್ಯ ಓದಿದವನು ಆತನೇ. 'ಹೌದ್ರಿ, ನಾನೇ' ಎಂದು ಯಾವ ಎಗ್ಗಿಲ್ಲದೆ ಬೆಂಕಿ ಪೊಟ್ಟಣ ನೀಡಿ, ಆತ್ಮ ವಿಶ್ವಾಸದಿಂದಲೇ ಹೇಳಿದ. ಮಡಿವಂತಿಕೆ ಇಲ್ಲದ ಮಠದ ಬಗ್ಗೆ, ಓದಿ ಹೇಳುವವನ ಮುಗ್ಧತೆ ಬಗ್ಗೆ ಗೌರವ ಹೆಚ್ಚಿತ್ತು.

ಮುಂದೆ ರಾಜಕಾರಣಿಗಳ ಕಣ್ಣು ಈ ಗ್ರಂಥದ ಮೇಲೆ ಬಿದ್ದಂತೆ ಈ ಮಠದ ನಿಗೂಢತೆ ಮಾಯವಾಯಿತು. ಅದೇನೋ ಇಲ್ಲೂ ಕೂಡ ಭೂಟಾಸಿಂಗ್, ಪಿವಿ ನರಸಿಂಹರಾಯರನ್ನು, ಮುಲಾಜಿಗೆ ಸಿಕ್ಕಿಸಲು ಈ ಗ್ರಂಥ, ಸ್ವಾಮಿ ಎರಡನ್ನು ದೆಹಲಿಗೆ ರವಾನಿಸಿದ ಕೀರ್ತಿ ಮತ್ತೆ ಆ ಮಾಜಿ ಸಚಿವ ಎಸ್. ರಮೇಶರಿಗೆ ಸಲ್ಲುತ್ತೆ.

ಆಶ್ಚರ್ಯದ ವಿಷಯವೆಂದರೆ ವಿಧಾನಸೌಧದ ಮೂರು ಮಹಡಿಗಳಲ್ಲೂ ಜ್ಯೋತಿಷ್ಯ, ಹಸ್ತ ಸಾಮುದ್ರಿಕ, ನಾಡಿ, ಮುಖ ನೋಡಿ ಭವಿಷ್ಯ ಹೇಳುವವರ ಬಳಿ ಕರೆದೊಯ್ದು ತಮ್ಮ ಕೆಲಸ ಮಾಡಿಸಿಕೊಳ್ಳುವವರ ಹಿಂಡೇ ಇದೆ. ಇವರಲ್ಲಿ ಅಪಾರ ಹಣ ಮಾಡಿದವರನ್ನೂ ನೋಡಿದ್ದೇನೆ. ಹೆಣ್ಣು, ಗಂಡು, ಹಣದ ಆಮಿಷ ಮೀರಿದ ಒಂದು ರೀತಿಯ ತಲೆ ಹಿಡುಕುತನ ಈ ಜ್ಯೋತಿಷ್ಯದ ಹಿಂದಿನದು.

ಬೂಟಾಸಿಂಗ್ ಮೊದಲು ಈ ಗ್ರಂಥದ ದಾಸಾನುದಾಸನಾಗಿ, ನಂತರ ನರಸಿಂಹರಾಯರ ಪರವಾಗಿ ಬಂದು ಪ್ರಶ್ನೆ ಮಾಡುವ ರಗಳೆ ಸಹಿಸದ ರಮೇಶರು ಸ್ವಾಮಿ ಅವರನ್ನು ಎಲ್ಲ ಗ್ರಂಥಗಳ ಸಮೇತ ದೆಹಲಿಗೇ ರವಾನಿಸಿದರು. ದೇಶದ ದೊಡ್ಡ ವ್ಯಕ್ತಿಯೊಬ್ಬರ ಸಾವಾದ ಮೇಲೆ ಪರಿಸ್ಥಿತಿ ನಿಮ್ಮ ಭಾಗ್ಯದ ಬಾಗಿಲನ್ನೇ ತೆರೆಯುತ್ತೆ ಎಂದು ನರಸಿಂಹರಾಯರಿಗೆ ಹೇಳಿದಾಗ, ಅವರ ಶತ್ರುವೂ ಅದನ್ನು ನಂಬಿರಲಿಲ್ಲ. ರಾಜೀವಗಾಂಧಿ ಹತ್ಯೆಯಾದ ಕೋಡಿ ಮಠದ ಗ್ರಂಥ ಮಠಕ್ಕಿಂತ ದೆಹಲಿಯಲ್ಲೇ ಹೆಚ್ಚಿತ್ತು. ಈ ವಿಷಯದಲ್ಲಿ ಕೆಚ್ಚಲನ್ನೇ, ಕುಯ್ಯುವ ಕೆಲಸ ನಡೆದು, ಇದರ ನಕಲು ಮಾಡಿದ ಸ್ವಾಮಿಗಳೊಬ್ಬರು, ಅಸಲಿ ಹಿಡಿದ ಮತ್ತೊಬ್ಬ ಸ್ವಾಮಿಗಳು, ಇಬ್ಬರೂ ತಮ್ಮ ಬಳಿ ಇರುವ ಗ್ರಂಥವೇ ಒರಿಜಿನಲ್ ಎಂದು ಹೇಳಿಕೊಂಡು ದೇಶ, ವಿದೇಶದಲ್ಲಿ ಓಡಾಡಿದ್ದೂ ಉಂಟು.

ಕ್ರಮೇಣ ಈ ಗ್ರಂಥದ ಶಕ್ತಿಯೂ ಕುಂದತೊಡಗಿತು. ಆಂಧ್ರದ ಚಂದ್ರಬಾಬು ನಾಯ್ಡು ಎಣ್ಣೆ ಬತ್ತಿಯ ದೀಪದಂತೆ ಆರುವಾಗ ಜೋರಾಗಿ ಉರಿದು ಪ್ರಜ್ವಲಿಸಿ ಆರಿ ಹೋಗುವಂತೆ ಕಾಣೆಯಾಗುತ್ತಾನೆ ಎಂದಿತ್ತು ಕೋಡಿಮಠ. ಕರ್ನಾಟಕ - ಆಂಧ್ರದಲ್ಲಿ ಎರಡೂ ಕಡೆ ರಾಜಕೀಯ ಬದಲಾವಣೆ ಒಟ್ಟೊಟ್ಟಾಗಿಯೇ ಆಗುವುದರಿಂದ ಚಂದ್ರಬಾಬು ಕಾಲ ಆಗಿಯೇ ಹೋಯಿತೆಂದು ಕೋಡಿಮಠದ ಗ್ರಂಥದ ನುಡಿಯನ್ನು ಚುನಾವಣಾ ಪ್ರಚಾರಕ್ಕೂ ಬಳಸಿದ್ದರು ವಿರೋಧಪಕ್ಷದವರು. ಬಾಬು ಅವರು ಇನ್ನೂ ಪ್ರಜ್ವಲಿಸುತ್ತಲೇ ಇದ್ದಾರೆ. ಕೋಡಿಮಠದ ಗ್ರಂಥ ಅದನ್ನ ಓದುವವನೂ ಸೇರಿ, ನಮ್ಮ ಮನೆಯಲ್ಲಿ ಮೂರು ತಿಂಗಳಿತ್ತು. ನಮ್ಮ ಮನೆಯಲ್ಲಿ ಆರು ತಿಂಗಳು ಇತ್ತು ಎಂದು ಕೊಚ್ಚಿಕೊಳ್ಳುವ ಶಾಸಕರು ಹಲವರಿದ್ದಾರೆ.

ಕೋಡಿಯ ಕಾಲ ಮುಗಿದಿದ್ದು ಇನ್ನೇನಿದ್ದರು ತಮಿಳುನಾಡಿನ ನಾಡಿ ಗ್ರಂಥಕ್ಕೆ ಒಂದು ಸ್ಥಾನಮಾನವಿತ್ತು. ಈ ಅಗಸ್ತ್ಯ ಮುನಿ ಗಲಾಟೆಯಲ್ಲಿ ಅದರ ಮಾರುಕಟ್ಟೆಯೂ ಮುಕ್ಕಾಗಿದೆ. ನೋಡಬೇಕು, ಮುಂದೆ ಯಾವ ಮುನಿಯ ನಾಡಿ ಗ್ರಂಥಕ್ಕೆ ಒಳ್ಳೇ ಕಾಲ ಬರುತ್ತೋ?

■ ರಾಜು

ಅರ್ಥ - ಅಪಾರ್ಥ

30.3.2000 ದಿನಾಂಕದ 'ಸುಧಾ' ವಾರಪತ್ರಿಕೆಯ ಪುಟ 16ರಲ್ಲಿ ಪ್ರಕಟವಾದ ಚಿತ್ರಗಳಿವು. ಚಿತ್ರಗಳ ಅದಲು ಬದಲಾದ ಅಡಿ ಟಿಪ್ಪಣಿಗಳು ಹೊಮ್ಮಿಸುವ ಅಪಾರ್ಥ ಗಮನಿಸಿ.



ಇಂಥ ಭೀಭತ್ಸ ದೃಶ್ಯಗಳು ಮಂಗಳೂರಿನಲ್ಲಿ ಸಾಮಾನ್ಯ



ನಯನ ಮನೋಹರ ಕಡಲತೀರ ಪಾತಕಿಗಳ ಆಗರ?

ಮಗುವು ಮುಕ್ಕಗ್ಗ ಕಾಣುವಂತೆ ಮಕ್ಕಳ ಪತ್ರಿಕೆಗಳು ಬರಬೇಕು: ಪ್ರೊ. ಬಸೂ

ಸಂಜೆವಾಣಿ ಪತ್ರಿಕೆ, 16.3.2000

ಮಾಹಿತಿ : ಶ್ರೀಕಾಂತ ಎನ್. ಪೂಜಾರ

ಮಾಡಲಗೇರಿ.



ಉದಯ ಟಿವಿಯ 'ಆದರ್ಶ ದಂಪತಿ'

ಇಲ್ಲಿ ಬರೀ ಮಾತು, ಮಾತು, ಮಾತು. ಕನ್ನಡದ ಸೀಮಿತ ವ್ಯಾಪ್ತಿ, ಹಾಡು, ಕುಣಿತ, ಸಿನಿಮಾ ಯಾವುದೂ ಇಲ್ಲಿಲ್ಲ. ಹಾಗಿದ್ದೂ ಇದೇಕೆ ದಿನದಿಂದ ದಿನಕ್ಕೆ ಜನಪ್ರಿಯತೆಯನ್ನು ಹೆಚ್ಚಿಸಿಕೊಳ್ಳುತ್ತಾ ಸಾಗಿದೆ?

ಉದಯ ಟಿವಿ ನಡೆಸುವ 'ಆದರ್ಶ ದಂಪತಿ' ಕಾರ್ಯಕ್ರಮಕ್ಕೀಗ ಆರು ವರ್ಷ. 275 ಎಪಿಸೋಡುಗಳ ಸುದೀರ್ಘ ಉತ್ಸಾಹಮಯ ಪಯಣ. ಆರು ವರ್ಷದ ಹಿಂದೆ ಸ್ಟುಡಿಯೋದ ನಾಲ್ಕು ಗೋಡೆಗಳ ನಡುವೆ, ಕರೆಸಿದ ಜೋಡಿಗಳ ಜೊತೆ ಮಾತುಕತೆಗೆ ಶುರುವಿಟ್ಟುಕೊಂಡಿದ್ದು ಆರಂಭಕ್ಕೆ ನಾಂದಿ. ನಿಧಾನವಾಗಿ ಜನಪ್ರಿಯ. ನಂತರ ಸ್ಟುಡಿಯೋದ ನಾಲ್ಕು ಗೋಡೆ ದಾಟಿ, ಜನರ ನಡುವಿಂದಲೇ 'ಆದರ್ಶ ದಂಪತಿ' ಹುಡುಕುವ ಯತ್ನ. ಬೆಂಗಳೂರು ಗಡಿದಾಟಿ ಜಿಲ್ಲಾ ಕೇಂದ್ರಗಳಿಗೂ ಪಯಣ. ಅಲ್ಲೆಲ್ಲ ಉತ್ಸಾಹದ ಮಹಾಪೂರದ ಪ್ರತಿಕ್ರಿಯೆ. ಇಡೀ ರಾಜ್ಯ ಸುತ್ತಿ, ಆದರ್ಶ ದಂಪತಿಗಳನ್ನು ಹೆಕ್ಕಿದ ಕಾರ್ಯಕ್ರಮಕ್ಕೆ ಈಗ ಸೀಮೋಲ್ಲಂಘನ. ಬರುವ ತಿಂಗಳಲ್ಲಿ ಲಂಡನ್‌ನಲ್ಲಿಯೆ ಕಾರ್ಯಕ್ರಮ. ಮುಂದೆ ಅಮೇರಿಕಾದ ನಗರಕ್ಕೂ ಹೋಗುವ ಯೋಚನೆ. ಇವೆಲ್ಲ ಕಾರ್ಯಕ್ರಮದ ಜನಪ್ರಿಯತೆಯ ಮಜಲುಗಳು.




ಇಂಡಿಯಾದ ಟಿವಿ ಚಾನೆಲ್‌ಗಳಲ್ಲಿ ಹಲವು ಕಾರ್ಯಕ್ರಮ ವರ್ಷಾನುಗಟ್ಟಲೆ ನಡೆದುಕೊಂಡು ಬಂದಿವೆ. 'ಟಿವಿಎಸ್ ಸರಿಗಮ' ಹಾಗೂ 'ಝೀ ಅಂತ್ಯಾಕ್ಷರಿ' ವರ್ಷಗಳು ಕಳೆದರೂ ಇನ್ನೂ ಜನಪ್ರಿಯ. ಅವೆಲ್ಲ ಚಲನಚಿತ್ರ, ಗೀತೆ ಆಧರಿಸಿದ ಕಾರ್ಯಕ್ರಮಗಳು. ಎಲ್ಲ ವಯಸ್ಸು, ವರ್ಗದ ಜನ ಸುಲಭವಾಗಿ ಪಾಲ್ಗೊಂಡು, ಎಂಜಾಯ್ ಮಾಡಬಹುದಾದ ಕಾರ್ಯಕ್ರಮಗಳು. ಆದರೆ 'ಆದರ್ಶ ದಂಪತಿ' ಹಾಗಲ್ಲ. ಇಲ್ಲಿ ಬರೀ ಮಾತು, ಮಾತು, ಮಾತು. ಕನ್ನಡದ ಸೀಮಿತ ವ್ಯಾಪ್ತಿ, ಹಾಡು, ಕುಣಿತ, ಸಿನಿಮಾ ಯಾವುದೂ ಇಲ್ಲಿಲ್ಲ. ಹಾಗಿದ್ದೂ ಇದೇಕೆ ದಿನದಿಂದ ದಿನಕ್ಕೆ ಜನಪ್ರಿಯತೆಯನ್ನು ಹೆಚ್ಚಿಸಿಕೊಳ್ಳುತ್ತಾ ಸಾಗಿದೆ?

ಹಾಗೇ ನೋಡಿದರೆ 'ಆದರ್ಶ ದಂಪತಿ' ಒರಿಜಿನಲ್ ಕಾರ್ಯಕ್ರಮ ಅಲ್ಲವೇ ಅಲ್ಲ. ಇಲ್ಲಿಯೇ ರೂಪಗೊಂಡು, ಆಕೃತಿ ಪಡೆದದ್ದೂ ಅಲ್ಲ. ಆರೇಳು ವರ್ಷಗಳ ಹಿಂದೆ ಸನ್ ಟಿವಿಯಲ್ಲಿ 'ಜೋಡಿ ಪುರುತ್ತಂ' ಎಂಬ ಕಾರ್ಯಕ್ರಮ ಬಿತ್ತರಗೊಳ್ಳುತ್ತಿತ್ತು. ರೇಗೋ ಎಂಬಾತ ಅದರ ನಿರ್ವಹಣೆ ಮಾಡುತ್ತಿದ್ದ. ತಮಿಳಲ್ಲಿ ಅದೊಂದು ಅತ್ಯಂತ ಜನಪ್ರಿಯ ಕಾರ್ಯಕ್ರಮ.

ದಂಪತಿಗಳ ಸಮೂಹದಲ್ಲಿ ಅತ್ಯುತ್ತಮ ಜೋಡಿಯೊಂದನ್ನು ಆರಿಸಿ ಸನ್ಮಾನಿಸುವುದೇ ಅದರ ಉದ್ದೇಶ. ಆ ಕಾರ್ಯಕ್ರಮದ ಮಾದರಿಯಲ್ಲೇ ಕನ್ನಡದಲ್ಲೂ ಅಂಥದ್ದೊಂದು ಕಾರ್ಯಕ್ರಮ ರೂಪಿಸುವ ಕೆಲಸಕ್ಕೆ ಸನ್ ಟಿವಿಯ ಸೋದರ ಸಂಸ್ಥೆ ಉದಯ ಟಿವಿ ಮುಂದಾಯಿತು. ಮುಂದೆ ಕೆಲವೇ ದಿನಗಳಲ್ಲಿ ತಮಿಳಿನ 'ಜೋಡಿ ಪುರುತ್ತಂ' ನಿಂತೇ ಹೋಯಿತು. ಕನ್ನಡದ 'ಆದರ್ಶ ದಂಪತಿ' ಮುಂದುವರಿಯಿತು.

ವಿಚಿತ್ರ ಎನಿಸಬಹುದು. ತಮಿಳಿನ ಕಾರ್ಯಕ್ರಮಕ್ಕೆ ಸ್ಫೂರ್ತಿ ನೀಡಿದ್ದು ಝೀ ಟಿವಿಯವರು ನಡೆಸುತ್ತಿದ್ದ 'ಏಕ್ ದೂಜೆ ಕೆ ಲಿಯೇ'. ಅವರಿಗೆ ಸ್ಫೂರ್ತಿಯಾದದ್ದು ಇಂಗ್ಲಿಷ್ ಚಾನೆಲ್ ಒಂದರ ಕಾರ್ಯಕ್ರಮ 'ಮೇಡ್ ಫಾರ್ ಈಚ್ ಅದರ್'. ಇಂಗ್ಲಿಷ್ ಕಾರ್ಯಕ್ರಮ ಭಾರತದಲ್ಲಿ ಬಿತ್ತರಗೊಳ್ಳುವುದಿಲ್ಲ. ಅದರ ಸ್ಥಿತಿ ಈಗ ಹೇಗಿದೆಯೋ ತಿಳಿಯದು. ಹಿಂದಿಯ 'ಏಕ್ ದೂಜೆ ಕೆ ಲಿಯೆ' ಕೆಲವೇ ದಿನಗಳಲ್ಲಿ ಮುದುಡಿಕೊಂಡಿತು. ತಮಿಳಿನ 'ಜೋಡಿ ಪುರುತ್ತಂ' ಕಥೆಯೂ ಅದೇ ಆಯಿತು. ರೇಗೋ ಈ ಕಾರ್ಯಕ್ರಮ ನಡೆಸಿಕೊಡುತ್ತಿದ್ದ. ಜನಪ್ರಿಯತೆಯಿಂದ ಜಂಭ ತಲೆಗೇರಿತು. ಡಿಮ್ಯಾಂಡುಗಳನ್ನು ಇಡಲಾರಂಭಿಸಿದ. ಅದಕ್ಕೆ ಮನ್ನಣೆ ದೊರೆಯಲಿಲ್ಲ. ಚಾನೆಲ್ ಬಿಟ್ಟು ಬೇರೆ ಚಾನೆಲ್‌ನಲ್ಲಿ ಅದೇ ಕಾರ್ಯಕ್ರಮ ಮಾಡಿದರೂ ಸನ್ ಟಿವಿಯ ಜನಪ್ರಿಯತೆ ಮತ್ತೆ ಬರಲಿಲ್ಲ. ಅಲ್ಲಿಗೆ ಅದು ಕೊನೆಯೂ ಆಯಿತು.

ಶ್ರೀನಾಥ್ ಪುನರ್ಜನ್ಮ



ಒಂದು ಕಾಲಕ್ಕೆ 'ಪ್ರಣಯರಾಜ' ಎಂದೇ ಹೆಸರಾಗಿದ್ದ ನಟ ಶ್ರೀನಾಥ್ ಇದ್ದಕ್ಕಿದ್ದ ಹಾಗೆ ಬೇಡಿಕೆ ಕಳೆದುಕೊಂಡರು. ಅವರ ಜೋಡಿಯಾಗಿ ಅತ್ಯಂತ ಜನಪ್ರಿಯವಾಗಿದ್ದ ಮಂಜುಳಾ ,ಕಣ್ಮರೆಯ ನಂತರ ಅವರು ಸಾಕಷ್ಟು ವಿಶ್ರಾಂತಿಯ ಜೀವನ ನಡೆಸುತ್ತಾ ಇದ್ದರು. ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ಮಾನಸ ಸರೋವರ' ಅವರಿಗೊಂದು ಹೊಸ ಇಮೇಜ್ ತಂದು ಕೊಟ್ಟಿತಾದರೂ, 'ಶುಭ ಮಂಗಳ'ದ ಹಾಗೆ ಅವರಿಗೆ ಗಟ್ಟಿ ನೆಲೆ ಒದಗಿಸಲಿಲ್ಲ. ಆನಂತರ ಶ್ರೀನಾಥ್ ಉದಯ ಟಿವಿ ಸಂಸ್ಥೆಯ ಉಪಾಧ್ಯಕ್ಷರಾದರು. ಆಗಲೂ ಅವರ ಚಟುವಟಿಕೆ ಕೇವಲ ಕಾರ್ಯಕ್ರಮಗಳ ಯೋಜನೆಗೆ ಸೀಮಿತವಾಗಿತ್ತು. ಆದರ್ಶ ದಂಪತಿ ಕಾರ್ಯಕ್ರಮ ಯಶಸ್ವಿಯಾಗುತ್ತಾ ಹೋದಂತೆ, ಸಿನಿಮಾದವರು ಕೂಡ ಅವರನ್ನು ಮತ್ತೆ ದೊಡ್ಡ ತೆರೆಗೆ ತರಲು ಯತ್ನಿಸತೊಡಗಿದ್ದಾರೆ. ಈಗ ಸಾಕಷ್ಟು ಆಫರ್‌ಗಳು ಅವರಿಗೆ ಬರುತ್ತಿವೆ. ಅದೃಷ್ಟದಿಂದ ಶ್ರೀನಾಥ್‌ಗೆ ಉದಯ ಟಿವಿಯಿಂದ ಎಲ್ಲ ರೀತಿಯಿಂದಲೂ ಪುನರ್ಜನ್ಮ ದೊರೆತಂತಾಗಿದೆ.

ಆರು ವರ್ಷದ ಹಿಂದೆ ಉದಯ ಟಿವಿ ಈ ಕಾರ್ಯಕ್ರಮ ಕನ್ನಡದಲ್ಲಿ ರೂಪಿಸಲು ತೊಡಗಿದಾಗ, ಅವರ ಕಣ್ಣ ಮುಂದೆ ಇದ್ದುದು ರೇಗೋ. ಆತ ಪ್ರಶ್ನೆ ಕೇಳುತ್ತಿದ್ದ ರೀತಿ, ಲವಲವಿಕೆ ಚಿಮ್ಮುವಂತೆ ಆಡುತ್ತಿದ್ದ ಮಾತು ಎಲ್ಲ ಕಣ್ಣೆದುರು ಇರಿಸಿಕೊಂಡೇ, ಒಂದೊಂದೇ ಹೆಜ್ಜೆ ಇಡಲು ಆರಂಭ. ಕಾರ್ಯಕ್ರಮದ ರೂವಾರಿ ಶ್ರೀನಾಥ್. ಒಂದು ಕಾಲದ ನಾಯಕ ನಟ. ಉದಯ ಟಿವಿ ಸಂಸ್ಥೆಯ ಉಪಾಧ್ಯಕ್ಷ. ಆಗ ತಾನೇ ಕನ್ನಡದ ಚಾನೆಲೊಂದು ಇಲ್ಲಿ ಕಣ್ಣು ತೆರೆಯುತ್ತಿತ್ತು. ಅದಕ್ಕೆ ಭದ್ರ ಬೇರುಗಳನ್ನು ಕಟ್ಟಿಸುವ ಜವಾಬ್ದಾರಿ ಅವರ ಮೇಲಿತ್ತು. ಕಾರ್ಯಕ್ರಮಗಳು ಜನಪ್ರಿಯವಾದರೆ ಚಾನೆಲ್ ತನ್ನಿಂದ ತಾನೇ ಜನರಿಗೆ ಬೇಕಾಗುತ್ತದೆ. ಅದು ಬೇಸರ ಮೂಡಿಸಿದರೆ ಜನ ಬೇರೆ ಚಾನೆಲ್‌ಗಳೆಡೆ ಹೊರಳುತ್ತಾರೆ. ಇಲ್ಲವೇ ಟಿವಿ ಬಂದ್ ಮಾಡಿ ಕುಳಿತುಕೊಳ್ಳುತ್ತಾರೆ. ಅಂಥ ಸ್ಥಿತಿಯಲ್ಲಿ ಕಾರ್ಯಕ್ರಮದ ನಿರ್ವಹಣೆ ಸವಾಲಾಗಿ ತೆಗೆದುಕೊಂಡು ನಡೆಸಲು ಮುಂದಾದವರು ಶ್ರೀನಾಥ್. ಅವರ ಜೊತೆಯಾಗಿ ನಿಂತವರು ಶೈಲಜಾ. ಈಗ ಇಬ್ಬರೂ ಕರ್ನಾಟಕದ ಪ್ರತಿ ಜನಕ್ಕೂ ಪರಿಚಿತ. ತೀರಾ ಜನಪ್ರಿಯ.



ಸಾಗರದ ಕಾರ್ಯಕ್ರಮದಲ್ಲಿ ಪಾಲ್ಗೊಂಡ ದಂಪತಿಗಳು

ಸ್ಟುಡಿಯೋದ ನಾಲ್ಕು ಗೋಡೆಗಳ ನಡುವೆ ತಣ್ಣಗೆ ಆರಂಭವಾದ ಕಾರ್ಯಕ್ರಮಕ್ಕೆ ಜನ ಉತ್ಸಾಹ ಪ್ರತಿಕ್ರಿಯೆ ತೋರಿದರು. ಅಲ್ಲಿಂದಾಚೆ ಬೆಂಗಳೂರಿನಲ್ಲಿ ಸ್ಟುಡಿಯೋದ ಹೊರಗೆ ಕಾಲಿಟ್ಟಿತು ಕಾರ್ಯಕ್ರಮ. ಮುಂದೆ ಜಿಲ್ಲಾ ಕೇಂದ್ರಗಳಿಗೆ ದೊಡ್ಡ ಪಟ್ಟಣಗಳಿಗೂ ಹೋಗಿ, ಕಾರ್ಯಕ್ರಮ ಚಿತ್ರೀಕರಿಸಿ ತಂದು ಬಿತ್ತರಿಸುವ ಕೆಲಸ ನಡೆಯಿತು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮೊನ್ನೆ ಫೆಬ್ರವರಿ 14ರಂದು ವ್ಯಾಲೆಂಟೀನ್ಸ್ ದಿನದಂದು ದಾವಣಗೆರೆಯಲ್ಲಿ ನಡೆದ ಕಾರ್ಯಕ್ರಮ ನೇರವಾಗಿಯೇ ಬಿತ್ತರಗೊಂಡಿತು.

ಕೇಬಲ್ ಜಾಲ

ಕೇಬಲ್ ಮೂಲಕ ಮನೆ ಮನೆಗೆ ಟಿವಿ ಕಾರ್ಯಕ್ರಮ ಕೊಂಡೊಯ್ಯುವ ಕೆಲಸ ಕಳೆದ ದಶಕದಲ್ಲಿ ಕ್ರಾಂತಿಕಾರಕವಾಗಿ ಆಗಿದೆ. ಹಳ್ಳಿ ಹಳ್ಳಿಯಲ್ಲೂ ಇವತ್ತು ಡಿಶ್ ಆಂಟೆನಾಗಳಿವೆ. ಅಲ್ಲಿಂದ ಕೇಬಲ್ ಜಾಲ ಹುಟ್ಟಿಕೊಳ್ಳುತ್ತದೆ. ಒಂದು ಕಾಲಕ್ಕೆ ಊರ ಶ್ರೀಮಂತರ ಮನೆಯ ಸ್ವತ್ತು ಮಾತ್ರ ಆಗಿದ್ದ ಟಿವಿ. ಇಂದು ಮಧ್ಯಮವರ್ಗದ ಎಲ್ಲ ಮನೆಗಳಲ್ಲೂ ಬಂದು ಕುಳಿತುಬಿಟ್ಟಿದೆ. ಒಂದು ಕಾಲಕ್ಕೆ ದೂರದರ್ಶನದ ರಾಮಾಯಣ, ಮಹಾಭಾರತ ಹುಟ್ಟಿಸಿದ ಕ್ರೇಜಿನಿಂದಾಗಿ ಟಿವಿಗೆ ಅಂಟಿಕೊಂಡ ಜನ, ಇವತ್ತು ಚಾನೆಲ್‌ಗಳ ಸರ್ಫಿಂಗ್ ನಡೆಸುತ್ತಾರೆ. ತಮಗೆ ಇಂಥದ್ದೇ ಚಾನೆಲು ಬೇಕೆಂದು ಕೇಬಲ್ ನೆಟ್‌ವರ್ಕ್‌ನವರಿಂದ ಪಡೆಯುತ್ತಾರೆ. ಇದರ ಲಾಭ ದಕ್ಕಿದ್ದು ಉದಯ ಟಿವಿಗೆ. ಕನ್ನಡ ದೂರದರ್ಶನದ ಬೋರ್ ಹೊಡೆಸುವ ಕಾರ್ಯಕ್ರಮ ಅವರಿಗೆ ಬೇಡ. ಆಗ ಅವರು ತಿರುಗುವುದು ಉದಯ ಟಿವಿ ಕಡೆಗೆ. ಮೊದಲು ಮೊದಲು ಸಿನಿಮಾ ಹಾಗೂ ಸಿನಿಮಾ ಆಧಾರಿತ ಕಾರ್ಯಕ್ರಮಗಳೇ ಮುಖ್ಯ ಆಗಿದ್ದ ಉದಯಟಿವಿ, ನಿಧಾನಕ್ಕೆ ತನ್ನ ಕಾರ್ಯಕ್ರಮಗಳ ವೈವಿಧ್ಯತೆಯನ್ನು ಹಿಗ್ಗಿಸಿತು. ದಿನಕ್ಕೊಮ್ಮೆ ಸುದ್ದಿ ಬಿತ್ತರಿಸುತ್ತಿದ್ದ ಅದು ಈಗ ದಿನಕ್ಕೆ ನಾಲ್ಕು ಬಾರಿ ಸುದ್ದಿ ಬಿತ್ತರಿಸುತ್ತಿದೆ. ಹಲವು ಕಥಾ ಸರಣಿಗಳು, ಜನ ಪಾಲ್ಗೊಳ್ಳುವ ನಾನಾ ಕಾರ್ಯಕ್ರಮಗಳು.

ನಗರವಾಸಿ ಶ್ರೀಮಂತರು, ಮೇಲ್ಮಧ್ಯಮ ವರ್ಗದವರ ಪಾಡು ಬೇರೆ. ಅವರಿಗೆ ಇಂಗ್ಲೀಷು, ಹಿಂದಿ ಕಾರ್ಯಕ್ರಮಗಳೇ ಬೇಕು. ಮಧ್ಯಮ ಹಾಗೂ ಕೆಳ ಮಧ್ಯಮ ವರ್ಗದವರಿಗೆ ಇನ್ನೂ ಕನ್ನಡದ ಮೇಲೆಯೇ ಪ್ರೀತಿ. ಇದನ್ನು ಉದಯ ಟಿವಿ ಚೆನ್ನಾಗಿ ಅರಿತುಕೊಂಡಿದೆ.

ನೋಡುವುದು ಒಂದೇ ಅಲ್ಲ

ಬರೀ ಟಿವಿ ನೋಡಿದರೆ ಸಾಲದು. ತಾವೂ ಅಲ್ಲಿ

ಕಾಣಿಸಿಕೊಳ್ಳಬೇಕು. ಇದು ಬಹು ಪಾಲು ಮಧ್ಯಮ ವರ್ಗದವರ ತುಡಿತ. ಅದಕ್ಕೆ ಪೂರಕವಾಗಿದೆ 'ಆದರ್ಶ ದಂಪತಿ'. ನೂರು ರೂಪಾಯಿ ತೆತ್ತು ಟಿಕೆಟ್ ಪಡೆದು, ಸಭಾಂಗಣದಲ್ಲಿ ಜಾಗ ಪಡೆದರೆ ಆಯಿತು. ಟಿವಿಯಲ್ಲಿ ಕಾಣಿಸಿಕೊಳ್ಳುವುದು ಖಾತರಿ. ಜಿಲ್ಲಾ ಕೇಂದ್ರಗಳಲ್ಲಿ 'ದಂಪತಿ' ಕಾರ್ಯಕ್ರಮ ನಡೆದರೆ ಇಂಥ ದಂಪತಿಗಳ ಉತ್ಸಾಹ ಮೇರೆ ಮೀರುತ್ತದೆ. ಸೀಮಿತ ಪ್ರವೇಶ ಅವಕಾಶದ ಕಾರ್ಯಕ್ರಮಕ್ಕೆ ಟಿಕೆಟ್‌ಗಳು ಕಾಳ ಸಂತೆಯಲ್ಲಿ ಮಾರಾಟವಾಗುತ್ತವೆ. ನೂರರ ಟಿಕೆಟ್ ಹಲವು ಪಟ್ಟು ಏರಿಕೆ ಕಾಣುತ್ತದೆ.



ಸಾಗರದ ಆದರ್ಶ ದಂಪತಿ ಕಾರ್ಯಕ್ರಮದಲ್ಲಿ ಒಂದು ಜೋಡಿ

ಮುಖ ತೋರಿಸುವುದರ ಜೊತೆಗೇ, ಅದೃಷ್ಟ ಕೂಡಿ ಬಂದರೆ ಸಾವಿರಾರು ರೂಪಾಯಿಗಳ ಬಹುಮಾನ ಹೊತ್ತು ಮನೆಗೆ ಹಿಂದಿರುಗಬಹುದು. ಒಂದು ಕಾಲಕ್ಕೆ ಸೀರೆ, ಸೂಟ್ ಬಟ್ಟೆ, ಸಣ್ಣ ಪುಟ್ಟ ಉಡುಗೊರೆಗೇ ಸೀಮಿತವಾಗಿದ್ದ ಬಹುಮಾನದ ವ್ಯಾಪ್ತಿ ಈಗ ಹಿಗ್ಗಿದೆ. ರೆಫ್ರಿಜಿರೇಟರು, ವಾಷಿಂಗ್ ಮೆಷೀನು ಎಂದೆಲ್ಲ ಬಹುಮಾನ. ಗೆದ್ದ ಜೋಡಿಗೆ ಐವತ್ತು ಸಾವಿರ ರೂಪಾಯಿವರೆಗೆ ಉಡುಗೊರೆ ಬಂದರೂ ಆಶ್ಚರ್ಯವಿಲ್ಲ. ಹಾಗೇ ಪ್ರೇಕ್ಷಕರಲ್ಲಿ ಕೆಲವರು ಲಕ್ಕಿ ಆಗುವುದುಂಟು. ಅಂಥವರಿಗೂ ಸಾವಿರಾರು ರೂ. ಮೊತ್ತದ ಬಹುಮಾನದ ಭಾಗ್ಯ. ಇದೂ ಒಂದು ಕಾರಣ 'ದಂಪತಿ'ಯ ದರ ಏರಲು.

ಸಣ್ಣ ಎಕನಾಮಿಕ್ಸ್

ಟಿವಿ ಕಾರ್ಯಕ್ರಮಕ್ಕೆ ಪ್ರಾಯೋಜಕರೇ ದಾತರು. ಅವರಿಲ್ಲದೇ ಯಾವುದೇ ಕಾರ್ಯಕ್ರಮ ಬಿತ್ತರಗೊಳ್ಳುವುದು ಅಸಾಧ್ಯ. ಅರ್ಧ ಗಂಟೆಯ ಕಾರ್ಯಕ್ರಮ ಬಿತ್ತರಿಸಲು ಕನಿಷ್ಠ ಐವತ್ತು ಸಾವಿರ ತೆರಬೇಕು. ಇನ್ನು ನಿರ್ಮಾಣದ ವೆಚ್ಚ! ಹೀಗಾಗಿ ಪ್ರತಿ ಕಾರ್ಯಕ್ರಮಕ್ಕೂ ಲಕ್ಷಾಂತರ ವೆಚ್ಚ. ಕಾರ್ಯಕ್ರಮ ಜನಪ್ರಿಯ ಆದಲ್ಲಿ ಪ್ರಾಯೋಜಕರೂ ಇರುತ್ತಾರೆ. ಆದರೆ ಕಾರ್ಯಕ್ರಮವನ್ನು ಪ್ರತಿ ಸಲವೂ ಜನ ಮೆಚ್ಚುವಂತೆ ಮಾಡಿಕೊಂಡೇ ಹೋಗುವುದು ಕಷ್ಟ.

'ಆದರ್ಶ ದಂಪತಿ' ಕಾರ್ಯಕ್ರಮಕ್ಕೆ ಇನ್ನೂ ಆ ಕಷ್ಟ ಕಾಣಿಸಿಕೊಂಡಿಲ್ಲ. ಮುಖ್ಯವಾಗಿ ಅವರು ಕಾರ್ಪೋರೇಟ್ ಪ್ರಾಯೋಜಕರ ಮರ್ಜಿಗೆ ಬೀಳದೆ, ಹೊಸ ಹೊಸ ಪ್ರಾಯೋಜಕರನ್ನು ಹುಡುಕಿಕೊಂಡಿದ್ದಾರೆ. ಸೀರೆ ವರ್ತಕರು, ಆಭರಣ ತಯಾರಕರು ಇವರ ಬಹು ಮುಖ್ಯ ಪ್ರಾಯೋಜಕರು. ಬೆಂಗಳೂರಿಂದ ಕಾರ್ಯಕ್ರಮ ಆದಾಗ ಸ್ಥಳೀಯರು ಅವಕಾಶ ಬಳಸಿಕೊಳ್ಳಲು ಮೇಲು ಬಿದ್ದು ಬರುತ್ತಾರೆ. ಅವರು ಬಹುಮಾನದ ಜೊತೆಗೇ ಕಾರ್ಯಕ್ರಮದ ವೆಚ್ಚ ಭರಿಸುತ್ತಾರೆ.

ಸೀರೆಗಳ ಸರದಾರಿಣಿ



'ಆದರ್ಶ ದಂಪತಿ' ಕಾರ್ಯಕ್ರಮ ನಡೆಸಿ ಕೊಡುವ ಶೈಲಜಾ ಅವರನ್ನು ಸೀರೆಗಳ ಸರದಾರಿಣಿ ಎನ್ನಲಡ್ಡಿ ಇಲ್ಲ. ಕಾರ್ಯಕ್ರಮ ಪ್ರಾಯೋಜಿಸುವ ಪ್ರತಿ ಸಂಸ್ಥೆಯೂ, ತಮ್ಮಲ್ಲಿಗೆ ಬರುವ ಅತ್ಯುತ್ತಮ ಮಾದರಿಯ ಮೊದಲ ಸೀರೆಗಳನ್ನು ಅವರಿಗೆ ರವಾನಿಸುತ್ತವೆ. ಅದೆಲ್ಲವನ್ನೂ ಅವರು ಕಾರ್ಯಕ್ರಮಗಳಿಗೆ ಬಳಸುತ್ತಾರೆ.

ಒಂದು ದಿನಕ್ಕೆ ನಾಲ್ಕು ಎಪಿಸೋಡ್‌ಗಳ ಚಿತ್ರೀಕರಣ ನಡೆಯುತ್ತದೆ. ಪ್ರತಿ ಎಪಿಸೋಡ್‌ಗೆ ಒಂದರಂತೆ ಅವರು ಸೀರೆ ಬದಲಿಸುತ್ತಾರೆ. ಈಗ ಅವರ ಬಳಿ ಸಾವಿರಾರು ಸೀರೆಗಳ ಸಂಗ್ರಹವೇ ಇದೆ.

ಹೊರ ಊರುಗಳಿಗೆ ಹೋದಾಗ, ಈ ಸೀರೆಯ ವಿಷಯದಿಂದಲೇ ಹೆಂಗಸರು ಇವರೊಡನೆ ಮಾತಿಗಿಳಿಯುತ್ತಾರೆ. ಇಂಥ ಎಪಿಸೋಡ್‌ನಲ್ಲಿ ಬಳಸಿದ ಸೀರೆ ಎಲ್ಲಿ ದೊರೆಯುತ್ತದೆ ಎಂಬಂಥ ಪ್ರಶ್ನೆಗಳೇ ಬಹಳ.

ಅವರು ಒಂದರ್ಥದಲ್ಲಿ ಸೀರೆ ಜಾಹೀರಾತಿನ ಮೂವಿಂಗ್ ಮಾಡೆಲ್. ಸೀರೆಗಳ ಸರದಾರಿಣಿ. ಆದರೆ ನಿತ್ಯ ಅವರು ಬಳಸುವುದು ಚೂಡಿದಾರ್‌ಗಳನ್ನೇ.

ಸ್ಥಳೀಯ ಸಂಸ್ಥೆಯೊಂದು ಕಾರ್ಯಕ್ರಮ ಯೋಜಿಸುತ್ತದೆ. ಟಿಕೆಟ್ ಮಾರಿ ದಂಪತಿಗಳನ್ನು ಸಭಾಂಗಣಕ್ಕೆ ಕರೆದು ತರುತ್ತದೆ. ಆ ಮಟ್ಟಿಗೆ ಟಿವಿ ಚಾನೆಲ್‌ನವರಿಗೆ ಕೆಲಸ, ಹಣದ ಹೊರೆ ಕಡಿಮೆ. ಒಂದೆಡೆ ಒಂದು ದಿನ ಕಾರ್ಯಕ್ರಮ ನಡೆದರೆ ನಾಲ್ಕು ಎಪಿಸೋಡ್‌ಗಳು ಚಿತ್ರಿತವಾಗುತ್ತವೆ. ಒಂದು ತಿಂಗಳ ಕತೆ ಬಗೆಹರಿಯುತ್ತದೆ. ದುಡ್ಡಿಗೆ ದುಡ್ಡು, ಜನಪ್ರಿಯತೆಗೆ ಜನಪ್ರಿಯತೆ.

ಇಂಥದೊಂದು ಸಣ್ಣ ಎಕನಾಮಿಕ್ಸ್ ಇದರ ಹಿಂದೆ ಇಲ್ಲದೇ ಇರುತ್ತಿದ್ದರೆ 'ದಂಪತಿ' ಹಳೆಯ ಮಾತಾಗುತ್ತಿತ್ತು. ಈಗ ಒಂದು ಸುತ್ತು ಮುಗಿಸಿರುವ ಇವರಿಗೆ, ಮತ್ತೊಮ್ಮೆ ಬರಬೇಕೆಂಬ ಆಹ್ವಾನವಿದೆ. ಒತ್ತಾಯವೂ ಇದೆ. ಹೀಗಾಗಿಯೇ ಇದೂ ಇನ್ನೂ ಬೇಡಿಕೆಯಲ್ಲಿ ಇರುವ ಕಾರ್ಯಕ್ರಮ.

ದುಡಿತದ ಹಿನ್ನೆಲೆ

ಅರ್ಧಗಂಟೆಯ ಒಂದು ಕಾರ್ಯಕ್ರಮ ಸಿದ್ಧಪಡಿಸುವುದು ಸುಲಭವಲ್ಲ. ಅದರಲ್ಲಿ ಹಲವರ ಪಾತ್ರ ಇದೆ. ಸೆಟ್ ನಿರ್ಮಾಣದಿಂದ ಹಿಡಿದು ಲೈಟಿಂಗ್‌ವರೆಗೆ, ನಾವು ನೇರವಾಗಿ ಗುರುತಿಸದಂತಹ ಸಂಗತಿಗಳು ಇರುತ್ತವೆ. ಹೊರ ಊರುಗಳಲ್ಲಿ ಚಿತ್ರೀಕರಣ ಆಗಬೇಕಾಗದರೆ, ಮೊದಲು ಸೆಟ್ ಹಾಕುವವರು ಹೋಗುತ್ತಾರೆ. ಆನಂತರ ಕ್ಯಾಮರಾ, ಲೈಟಿಂಗ್‌ನವರು ಕನಿಷ್ಠ ಇಪ್ಪತ್ತು ಜನರ ತಂಡ ತೆರೆಯ ಹಿಂದೆ ಕಾರ್ಯ ನಿರ್ವಹಿಸಿದ ಮೇಲೇ ಚಿತ್ರೀಕರಣ ಆರಂಭ.

ಕ್ವೆಶ್ಚನ್ ಬ್ಯಾಂಕ್

'ಆದರ್ಶ ದಂಪತಿ'ಗಳು ಕಾರ್ಯಕ್ರಮದಲ್ಲಿ ಕೇಳಲಾಗುವ ಪ್ರಶ್ನೆಗಳ ದೊಡ್ಡ ಪಟ್ಟಿಯೇ ತಯಾರಾಗಿ ಇರುತ್ತದೆ. ಅಂಥ ಪ್ರಶ್ನೆಗಳನ್ನು ನಿತ್ಯವೂ ತಂಡದವರು ಕ್ರೋಢೀಕರಿಸುತ್ತಾ ಹೋಗುತ್ತಾರೆ. ಆದರೆ, ಕಾರ್ಯಕ್ರಮದ ವೇಳೆ ಅವನ್ನೇ ಕೇಳಬೇಕೆಂಬ ನಿಯಮವೇನಿಲ್ಲ. ಆಯಾ ಸಮಯ, ಪರಿಸ್ಥಿತಿಯ ಮೇಲೆ ಸ್ಥಳದಲ್ಲೇ ಹಲವಾರು ಪ್ರಶ್ನೆಗಳು ಮೂಡುತ್ತವೆ. ಕಾರ್ಯಕ್ರಮ ನಿರ್ವಹಿಸುವ ವ್ಯಕ್ತಿ ಇಲ್ಲಿ ಬಹಳ ಎಚ್ಚರದಿಂದ, ಅಷ್ಟೇ ವಿವೇಚನಾಪೂರ್ವಕವಾಗಿ ಲಭ್ಯವಿರುವ ಸಲಕರಣೆಗಳನ್ನು ಬಳಸಬೇಕಾಗುತ್ತದೆ. ಅದನ್ನು ಶ್ರೀನಾಥ್ ಚೆನ್ನಾಗಿಯೇ ನಿರ್ವಹಿಸುತ್ತಾ ಬಂದಿದ್ದಾರೆ.

ಎದುರಾಗುವ ಸವಾಲುಗಳು :

ಟಿವಿಯ ಮುಂದೆ ಕುಳಿತು ಕಾರ್ಯಕ್ರಮ ವೀಕ್ಷಿಸುವುದು ಬೇರೆ. ನಾವೇ ಅಂಥದೊಂದು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದೇ ಬೇರೆ.

ಜನ ಒಪ್ಪಿದ್ದಾರೆ : ಶೈಲಜಾ

ಉದಯ ಟಿವಿ ಪ್ರೇಕ್ಷಕರಿಗೆ ಶೈಲಜಾ ಸುಪರಿಚಿತ. ಸಿನಿಮಾ ಹಾಡಿಂದ ಹಿಡಿದು ಸಾಂಸ್ಕೃತಿಕ ಕಾರ್ಯಕ್ರಮಗಳವರೆಗೆ ಉದಯ ಟಿವಿಯ ಎಲ್ಲ ಬಗೆಯ ಕಾರ್ಯಕ್ರಮಗಳನ್ನು ತಯಾರಿಸಿ, ನಿರೂಪಿಸುತ್ತಾ ಬಂದಿದ್ದಾರೆ. ಅವರಿಗೆ ಹೆಚ್ಚಿನ ಜನಪ್ರಿಯತೆ ತಂದುಕೊಟ್ಟಿರುವುದು 'ಆದರ್ಶ ದಂಪತಿ' ಕಾರ್ಯಕ್ರಮ. ಈ ಹಿನ್ನೆಲೆಯಲ್ಲಿ ಅವರೊಡನೆ ಮಾತಾಡಿದಾಗ.



ಮೊದಲು ತುಂಬಾ ಛಾಲೆಂಜಿಂಗ್ ಅನ್ನಿಸುತ್ತ ಪ್ರತಿ ಕ್ಷಣ, ಪ್ರತಿ ಗಳಿಗೆ ಅದೇ ಯೋಚನೆ. ಏನು ಪ್ರಶ್ನೆ ಕೇಳಬೇಕು? ಹ್ಯಾಗೆ ಸನ್ನಿವೇಶಗಳನ್ನು ಎದುರಿಸಬೇಕು ಅನ್ನೋ ಚಿಂತೆ. ಮೊದಲು ಸ್ಟುಡಿಯೊಗೇ ಕೆಲವರನ್ನ ಕರೆಸಿ ಕಾರ್ಯಕ್ರಮ ಮಾಡ್ತಾ ಇದ್ದೆವು. ಆಗ ಪ್ರೇಕ್ಷಕರಿಗೆ ಅವಕಾಶ ಇರಲಿಲ್ಲ. ಆಮೇಲೆ ಸಾರ್ವಜನಿಕ ಕಾರ್ಯಕ್ರಮಗಳನ್ನು ಆರಂಭಿಸಿದ್ದು.

ಕಾರ್ಯಕ್ರಮ ಯಶಸ್ಸಿಗೆ ಕಾರಣ ಏನು?

ಜನ ನೇರವಾಗಿ ಇಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಿದೆ. ಕರ್ನಾಟಕದ ಸಣ್ಣ, ದೊಡ್ಡ ಊರುಗಳಲ್ಲೆಲ್ಲ ಕಾರ್ಯಕ್ರಮ ನಡೆಸಿದ್ದೇವೆ. ದೆಹಲಿಯಲ್ಲಿ ಆಗಿದೆ. ಮುಂದೆ ಲಂಡನ್‌ನಲ್ಲಿ ಕಾರ್ಯಕ್ರಮ ಇದೆ. ಆನಂತರ ಅಮೇರಿಕಾಕ್ಕೂ ಹೋಗುವ ವಿಚಾರ ಇದೆ. ಹೀಗೆ ಎಲ್ಲ ಕಡೆಗಳ ಜನ, ಎಲ್ಲ ವರ್ಗದ, ಜಾತಿ ಮತ ಬೇಧವಿಲ್ಲದೇ ಪಾಲ್ಗೊಳ್ಳಬಹುದಾದ ಕಾರ್ಯಕ್ರಮ ಇದು. ಹಾಗಾಗಿಯೇ ಇದು ಯಶಸ್ವಿ ಆಗುತ್ತಿದೆ.

ನೀವು ಗಮನಿಸುವ ಮುಖ್ಯ ಸಂಗತಿಗಳೇನು?

ಇಲ್ಲಿ ನಾನಾ ರೀತಿಯ ಜನರನ್ನು ಕಾಣಲು ಸಾಧ್ಯ. ಅದು ಒಂದು ರೀತಿಯ Social gathering ಇದ್ದ ಹಾಗೆ. ಅದನ್ನ ಆ ಸ್ವರೂಪದಲ್ಲಿಯೇ ನಡೆಸಿಕೊಂಡು ಹೋಗಬೇಕು ಎನ್ನುವ ಕಾಳಜಿ ಇದೆ.

ನಿಮ್ಮನ್ನು ಜನ ಒಪ್ಪಿಕೊಳ್ಳಲು ಕಾರಣ?

ನಾನೂ ಅವರ ನಡುವಿನ ಒಬ್ಬ ವ್ಯಕ್ತಿ ಎಂಬ ಭಾವನೆ. ಅವರಿಗಿಂತ ಭಿನ್ನವಾಗಿ ಇರೋದಿಲ್ಲ. ಕಾರ್ಯಕ್ರಮಕ್ಕೆ ಸದಾ ನಾನು ಉಡೋದು ಸೀರೆ. ಪ್ರಾಯೋಜಕರು ಧಾರಾಳವಾಗಿ ಸೀರೆಗಳನ್ನು ಒದಗಿಸ್ತಾ ಬಂದಿದ್ದಾರೆ. ಅವರ ಅಂಗಡಿಗೆ ಬರೋ ಹೊಸ ಡಿಸೈನಿನ ಮೊದಲ ಸೀರೆ ನನಗೆ ಕಳಿಸ್ತಾರೆ. ಹೀಗಾಗಿ ಸಾಕಷ್ಟು ವೈವಿಧ್ಯಮಯ ಸೀರೆಗಳು ನನ್ನ ಸಂಗ್ರಹದಲ್ಲಿ ಇವೆ. ಅದು ಬಹಳ ಬೇಗ ಹೆಣ್ಣು ಮಕ್ಕಳ ಗಮನ ಸೆಳೆಯುತ್ತೆ.

ಈ ಕಾರ್ಯಕ್ರಮದ ಆರಂಭ ಹ್ಯಾಗಾಯಿತು?

ತಮಿಳಿನಲ್ಲಿ ಸನ್ ಟಿವಿಯವರ 'ಜೋಡಿ ಪುರುತ್ತನ್' ಜನಪ್ರಿಯವಾಗಿತ್ತು. ಅದೇ ಮಾದರಿಯಲ್ಲಿ ಕನ್ನಡದಲ್ಲಿ ಕಾರ್ಯಕ್ರಮ ಮಾಡಬೇಕು ಅಂತ ಹೊರಟಿದ್ದು. ಮೊದಲು ತುಂಬಾ ಛಾಲೆಂಜಿಂಗ್ ಅನ್ನಿಸುತ್ತ ಪ್ರತಿಕ್ಷಣ, ಪ್ರತಿಗಳಿಗೆ ಅದೇ ಯೋಚನೆ. ಏನು ಪ್ರಶ್ನೆ ಕೇಳಬೇಕು? ಹ್ಯಾಗೆ ಸನ್ನಿವೇಶಗಳನ್ನು ಎದುರಿಸಬೇಕು ಅನ್ನೋ ಚಿಂತೆ. ಮೊದಲು ಸ್ಟುಡಿಯೊಗೇ ಕೆಲವರನ್ನ ಕರೆಸಿ ಕಾರ್ಯಕ್ರಮ ಮಾಡ್ತಾ ಇದ್ದೆವು. ಆಗ ಪ್ರೇಕ್ಷಕರಿಗೆ ಅವಕಾಶ ಇರಲಿಲ್ಲ. ಆಮೇಲೆ ಸಾರ್ವಜನಿಕ ಕಾರ್ಯಕ್ರಮಗಳನ್ನು ಆರಂಭಿಸಿದ್ದು.

ನೀವು ಎದುರಿಸುವ ಸವಾಲುಗಳು ಎಂಥವು?

ಒಂದೊಂದು ಸಂದರ್ಭದಲ್ಲಿ ಒಂದೊಂದು ರೀತಿ. ಎಷ್ಟೋ ಸಮಯ ಅಲ್ಲಿ ಪಾಲ್ಗೊಳ್ಳೋದಕ್ಕೆ ಬಂದವರು ತೀರಾ ನಾಚಿಕೆ ಸ್ವಭಾವದವರು ಇರಬಹುದು. ನಾಕಾರು ಜನ ಸೇರಿದ ಕಡೆ ಎಲ್ಲರೆದುರು ನಿಂತು ಮಾತಾಡೋಕೆ ಆಗದೇ ಇರುವವರು ಇರಬಹುದು. ಅಂಥವರನ್ನೂ ಮನಒಲಿಸಿಕೊಂಡು, ಸಹಜವಾಗುವ ಹಾಗೆ ಮಾಡಿ ಕಾರ್ಯಕ್ರಮ ನಡೆಸೋದು ದೊಡ್ಡ ಸವಾಲು. ಮೊದಲ ಕಾರ್ಯಕ್ರಮದಿಂದ ಇವತ್ತಿನವರೆಗೆ ಒಂದೇ ಒಂದು ತೊಂದರೇನೂ ಬಂದಿಲ್ಲ. ಅದೇ ಅದೃಷ್ಟ.

ಜನ ಹ್ಯಾಗೆ ಪ್ರತಿಕ್ರಿಯಿಸ್ತಾರೆ?

ಪ್ರತಿಕ್ರಿಯೆ ತುಂಬಾ ಚೆನ್ನಾಗಿದೆ. ಯಾವ ಊರಲ್ಲಿ ಜನ ಕಡಿಮೆ ಆದರು ಇಲ್ಲವೇ ಇಲ್ಲ. ಕೆಪ್ಯಾಸಿಟಿ ಮೀರಿ ಜನ ಬರ್ತಾರೆ. ಎಷ್ಟೋ ಜನಕ್ಕೆ ಟಿಕೆಟ್ ಸಿಗೋದೇ ಇಲ್ಲ. ಕೆಲವರು ಬ್ಲಾಕ್‌ನಲ್ಲಿ ಟಿಕೆಟ್ ತಗೊಂಡು ಬಂದಿರ್ತಾರೆ. ಬೆಳಿಗ್ಗೆಯಿಂದ ಸಂಜೆವರೆಗೆ ಮಧ್ಯದ ವಿರಾಮ ಕೂಡ ಬೇಡ ಅಂತ ಅವರೇ ಒತ್ತಾಯಿಸಿ ಕೊನೆವರೆಗೂ ಇರ್ತಾರೆ.

ನಿಮ್ಮ ಹಿನ್ನೆಲೆ?

ನನ್ನದು **ಮೂಲತಃ** ಮಂಗಳೂರು. ಮದುವೆ ಆದ ಮೇಲೆ ಬೆಂಗಳೂರಿಗೆ ಬಂದಿದ್ದು. ಉದಯ ಟಿವಿಯ ಸರಿ ಸುಮಾರು ಎಲ್ಲ ಕಾರ್ಯಕ್ರಮಗಳನ್ನ ನಡೆಸಿದ್ದು ಇದೆ. ಆದರೆ ಹೆಚ್ಚು ಜನಪ್ರಿಯತೆ ತಂದುಕೊಟ್ಟಿದ್ದು 'ಆದರ್ಶ ದಂಪತಿ' ಕಾರ್ಯಕ್ರಮ.

ನನ್ನ ತಾಯಿ ದೊಡ್ಡ ಸಂಗೀತ ವಿದ್ವಾಂಸರು. ಸಾಹಿತ್ಯ ಹೆಚ್ಚು ಓದಿದವರು. ಆ ಹಿನ್ನೆಲೆಯಿಂದಾಗಿ ಇಲ್ಲಿ ಕೆಲಸ ಮಾಡುವುದು ಸುಲಭವಾಗಿದೆ. ಪತಿ ಸತೀಶ್ ಎಲ್ಲ ಸಹಕಾರ ಕೊಡ್ತಾರೆ. ಹತ್ತು ವರ್ಷದ ಮಗಳಿದಾಳೆ. ಅವಳಿಗೂ ಅಷ್ಟೆ, ಕಾರ್ಯಕ್ರಮ ಇದ್ದಾಗ ಸ್ವಲ್ಪವೂ ಹಠ ಹಿಡಿಯದೇ ಸಹಕರಿಸಿ ಕಳಿಸಿಕೊಡ್ತಾಳೆ. ಇಂಥ ಸಹಕಾರ ಇಲ್ಲದೇ ಇದ್ದಿದ್ದರೆ ನನಗೆ ಇದೆಲ್ಲ ಮಾಡೋದು ಆಗ್ತಾ ಇರಲಿಲ್ಲ.

ಈ ಕಾರ್ಯಕ್ರಮ ಕೇವಲ ಮಧ್ಯಮ ವರ್ಗದವರಿಗೆ ಅನ್ನುವ ಅಭಿಪ್ರಾಯ ಇದೆ.

ಅದು ಸುಳ್ಳು, ಸಮಾಜದ ಎಲ್ಲ ಪ್ರಕಾರದ ಜನ ಇಲ್ಲಿ ಪಾಲ್ಗೊಳ್ತಾ ಬಂದಿದಾರೆ.

ಅಭಿರುಚಿ ಇನ್ನು ಸ್ವಲ್ಪ ಉತ್ತಮವಾಗಬೇಕು ಎನ್ನುವ ಭಾವನೆ ಇದೆ.

ನನಗೆ ಹಾಗನ್ನಿಸೋದಿಲ್ಲ. ತೀರಾ ಇಂಟಲೆಕ್ಚುಯಲ್ ಆದರೂ ಅದು ಜನರಿಗೆ ತಲುಪೋದಿಲ್ಲ. ಈಗ ಜನ ಪ್ರತಿಕ್ರಿಯಿಸ್ತಾ ಇರೋದು ನೋಡಿದರೆ, ನಾವು ಹೋಗ್ತಾ ಇರೋ ಮಾರ್ಗ ಸರಿಯಾಗೇ ಇದೆ ಅನ್ನಿಸುತ್ತೆ. ನಮ್ಮ ಅಭಿರುಚಿ ಸುಧಾರಣೆ ಆಗಬೇಕು ಅನ್ನೋದಾಗಿದ್ದರೆ ಜನ ಇಷ್ಟೊಂದು ವ್ಯಾಪಕವಾಗಿ ಪ್ರೋತ್ಸಾಹ ಕೊಡ್ತಾ ಇರಲಿಲ್ಲ. ■

ಅದರಲ್ಲೂ ರಾಜಧಾನಿಯಿಂದಾಚೆ, ದೂರ ಇರುವ ಪಟ್ಟಣಗಳಲ್ಲಿನ ಜನರ ವರ್ತನೆ, ಮನಸ್ಥಿತಿಗಳು ಬೇರೆಯೇ. ಎಷ್ಟೋ ಜನಕ್ಕೆ ಸಭಾ ಕಂಪನ. ತಾವು ನಿತ್ಯ ನೋಡುವ ನೆರಹೊರೆಯವರು, ನಂಟರು ಇಷ್ಟರು ಹೇಗೆಲ್ಲ ನಾಳೆ ಪ್ರತಿಕ್ರಿಯಿಸಬಹುದು ಎಂಬ ಆತಂಕ. ಇಂಥದ್ದನ್ನೆಲ್ಲ ನಿವಾರಿಸಿ ಆ ಜನರನ್ನು ಒಂದು ಸ್ಥಿತಿಗೆ ತಂದು ಕಾರ್ಯಕ್ರಮ ರೂಪಿಸುವುದು ಸಾಕಷ್ಟು ತಾಳ್ಮೆಯನ್ನು ಬೇಡುತ್ತದೆ. ಇದು ಕೇವಲ ಒಂದು ಎಪಿಸೋಡ್‌ನ ಪ್ರಶ್ನೆಯಲ್ಲ. ವಾರವಾರವೂ ಸಿದ್ಧವಾಗಿ ಬರಬೇಕಾದ ಕಾರ್ಯಕ್ರಮ, ಪ್ರತಿ ಹಂತದಲ್ಲೂ ತನ್ನದೇ ರೀತಿಯಲ್ಲಿ ಸಂಬಂಧಿಸಿದವರ ತಾಳ್ಮೆ, ಜಾಣ್ಮೆಯನ್ನು ಪರೀಕ್ಷಿಸುತ್ತದೆ.

ಇಷ್ಟೇಕೆ ಮೋಹ

ಜನರನ್ನು ಕೇಳಿದರೆ ನಾನಾ ರೀತಿಯ ಉತ್ತರ ಬರುತ್ತವೆ. ನೂರು ರುಪಾಯಿ ತೆತ್ತು ಮುಖ ತೋರಿಸಬಹುದಾದ ಅವಕಾಶ ಎಂದೇ ಬಹಳಷ್ಟು ಜನರ ಭಾವನೆ. ಜೊತೆಗೆ ಹಲವಾರು ರೀತಿಯ ಬಹುಮಾನಗಳೂ ಇರುತ್ತವಲ್ಲ. ಅದಕ್ಕಾಗಿ ಪಾಲ್ಗೊಳ್ಳುವುದು ಎಂದು ಕೆಲವರು. ಇನ್ನು ಕೆಲವರು ಬೇರೆಯವರು ಹೇಗೆಲ್ಲ ವರ್ತಿಸುತ್ತಾರೆ? ಎಂದು ನೋಡಲೆಂದೇ ಕುತೂಹಲ ತಾಳಿ ಬಂದಿರುತ್ತಾರೆ.

ಸಣ್ಣ ಊರುಗಳ ಜನಕ್ಕೆ ಇಂಥ ಅವಕಾಶಗಳು ಕಡಿಮೆ. ಇಲ್ಲ ಎಂದರೂ ಆದೀತು. ಅಂಥದರಲ್ಲಿ ಟಿವಿ ಸಂಸ್ಥೆಯೊಂದು ಊರಿಗೇ ಬಂದು ಇಂಥದೊಂದು ಕಾರ್ಯಕ್ರಮ ನಡೆಸುವಾಗ ಅದನ್ನು ಬಳಸಿಕೊಳ್ಳುವುದು ಸಹಜ ಎಂದೇ ಬಹುಪಾಲು ಜನರ ಅಭಿಪ್ರಾಯ.

ಬಹುಮುಖ್ಯ ಸಂಗತಿ ಎಂದರೆ ಎಲ್ಲ ಮಧ್ಯಮ ವರ್ಗದ ದಂಪತಿಗಳೂ ತಾವೇ ಆದರ್ಶ ದಂಪತಿಗಳು ಎಂದೇ ತಿಳಿದಿರುತ್ತಾರೆ. ಕಾರ್ಯಕ್ರಮದಲ್ಲಿ ಅದನ್ನು ಸಾಬೀತು ಮಾಡಿ ತೋರಿಸುವ ವಿಶ್ವಾಸವೂ ಅವರಿಗೆ ಇರುತ್ತದೆ. ತಮ್ಮನ್ನು ಬಿಟ್ಟರೆ ಇನ್ಯಾರಿಗೆ ಬಹುಮಾನ! ಎಂದು ಯೋಚಿಸುವ ಜನರೇ ಹೆಚ್ಚು.

ಟೀಕೆಗಳು

ಉದಯ ಟಿವಿಯ 'ಆದರ್ಶ ದಂಪತಿ' ಕಾರ್ಯಕ್ರಮದ ಬಗ್ಗೆ ವ್ಯಾಪಕವಾದ ಟೀಕೆಗಳೂ ಇವೆ. ಇದೊಂದು ಕಾಸು ಮಾಡುವ ಉಪಾಯ. ಜನ ಇಷ್ಟಪಡುತ್ತಾರೆ ಎಂಬ ಕಾರಣಕ್ಕೆ, ಸಂಘಟಕರು ತಮ್ಮೂರುಗಳಲ್ಲಿ ಕಾರ್ಯಕ್ರಮ ಏರ್ಪಡಿಸಿ ಸಾಕಷ್ಟು ಹಣ ಗಳಿಸುತ್ತಾರೆ ಎಂಬ ಆರೋಪವೂ ದಟ್ಟವಾಗಿದೆ. ಕೆಲವು ಸಂದರ್ಭಗಳಲ್ಲಿ ಟಿಕೆಟ್ ಮುಗಿದಿದೆ ಎಂಬ ಭಾವನೆ ಹುಟ್ಟಿಸಿ ಯದ್ವಾತದ್ವ ರೇಟ್ ಏರಿಸಿ ಟಿಕೆಟ್ ಮಾರುವವರೂ ಉಂಟು. ಇದರಲ್ಲಿ ಸಂಸ್ಥೆಯವರೂ ಶಾಮೀಲಾಗಿದ್ದಾರೆ ಎಂಬ ಆರೋಪವೂ ಇದೆ.

ಬಹುಮುಖ್ಯವಾದ ಟೀಕೆ ಇಡೀ ಕಾರ್ಯಕ್ರಮದ ಅಭಿರುಚಿಯನ್ನು ಕುರಿತದ್ದು. ಅಗ್ಗದ ಜನಪ್ರಿಯತೆಂದು ದೃಷ್ಟಿಯಿಂದಲೇ ಇದೆಲ್ಲ ನಡೆಯುತ್ತಾ ಬಂದಿದ್ದು, ಜನರ ಅಭಿರುಚಿಯನ್ನು ಕೆಡಿಸುವಲ್ಲಿ ಇದೂ ಪಾತ್ರ ವಹಿಸುತ್ತಿದೆ ಎಂಬ ಮಾತೂ ಅಲ್ಲಲ್ಲಿ ಕೇಳಿಬರುತ್ತದೆ. ಇದನ್ನು ಆಡುವವರು ಕೇವಲ ಬುದ್ಧಿಜೀವಿಗಳು. ಯಾವುದೋ ಜನಪ್ರಿಯ ಸಂಗತಿಯ ಬಗ್ಗೆಯೂ ಇವರು ಇಂಥದ್ದೇ ಮಾತಾಡುತ್ತಾರೆ ಎಂದು ಟಿವಿ ಸಂಸ್ಥೆಯ ಅಭಿಪ್ರಾಯ.

ಹಾಗಾದರೆ ಮೇಲ್ಮಟ್ಟದ ಅಭಿರುಚಿ ಎಂದರೆ ಯಾವುದು? ಎಂಬ ಪ್ರಶ್ನೆಯನ್ನೂ ಅವರು ಮುಂದಿಡುತ್ತಾರೆ. ತಮ್ಮದು ಕೀಳು ಅಭಿರುಚಿಯ ಕಾರ್ಯಕ್ರಮ ಆಗದಿದ್ದರೆ ಇಷ್ಟೊಂದು ಜನಪ್ರಿಯತೆ ಪಡೆಯುವುದು ಸಾಧ್ಯ ಇತ್ತೆ? ಎಂಬುದೂ ಅವರ ಪ್ರಶ್ನೆ.

ಆದರ್ಶ ದಾಂಪತ್ಯ ಎಂಬುದು ಬಹಿರಂಗ ಹೇಳಿಕೆ, ಕೇಳಿಕೆಗಳಿಂದ ನಿರ್ಧರಿಸುವಂಥದ್ದಲ್ಲ. ಹೀಗಿರುವಾಗ ಒಂದು ಕಾರ್ಯಕ್ರಮ ಯೋಜಿಸಿ, ಗಂಡ-ಹೆಂಡತಿಯರನ್ನು ನಾನಾ ರೀತಿಯ ಪೇಚಿಗೀಡು ಮಾಡುವ ಪ್ರಶ್ನೆ ಕೇಳಿ ಖುಷಿಪಡಲಾಗುತ್ತಿದೆ ಎಂಬ ಆರೋಪವೂ ಇದೆ. ನಿಜವಾದ ಕಾಳಜಿಯಿಂದ ಆದರ್ಶ ದಾಂಪತ್ಯ ಗುರುತಿಸುವುದಾದರೆ, ಅದಕ್ಕಾಗಿ ತಾಳ್ಮೆಯಿಂದ ಹುಡುಕಬೇಕು. ಈ ದೇಶದ ಮೂಲೆ ಮೂಲೆಯಲ್ಲೂ ತಮ್ಮ ಸೀಮಿತ ಬದುಕಿನ ಚೌಕಟ್ಟಿನಲ್ಲೇ ಅತ್ಯಂತ ಸಂತಸದ ಸಮಗ್ರ ಜೀವನ ನಡೆಸುವಂಥ ದಂಪತಿಗಳಿದ್ದಾರೆ. ಹಾಗೆ ಮಾಡಿದರೆ ನಿಜಕ್ಕೂ ಸಾರ್ಥಕ ಕೆಲಸ ಮಾಡಿದಂತಾಗುತ್ತದೆ ಎಂದು ಇನ್ನೂ ಕೆಲವರ ಅಭಿಪ್ರಾಯ.

ಹಾಗೆ ಮಾಡಬಹುದು. ಆದರೆ ಅದೊಂದು ಖರ್ಚಿನ ಕಾರ್ಯಕ್ರಮ ಆದೀತೇ ಹೊರತು ಆದಾಯ ಬರುವ ಮಾರ್ಗ ಆಗುವುದಿಲ್ಲ. ಆ ಕಾರಣಕ್ಕೇ ಹೆಚ್ಚು ವಾಸ್ತವವಾದಿ, ಲಾಭದಾಯಕ ಮಾರ್ಗವನ್ನು ಉದಯ ಟಿವಿ ಹುಡುಕಿಕೊಂಡಿದೆ ಎನ್ನುತ್ತಾರೆ ಇನ್ನು ಕೆಲವರು.

ಯಾರು ಏನೇ ಅನ್ನಲಿ. ಕನ್ನಡದ ಖಾಸಗಿ ಚಾನೆಲ್ ಒಂದರ ಕಾರ್ಯಕ್ರಮ ಒಂದು ಕಳೆದ ಆರು ವರ್ಷಗಳಿಂದ ನಡೆದುಕೊಂಡು ಬಂದಿರುವುದು, ಈಗ ಲಂಡನ್, ಅಮೇರಿಕಾಗಳತ್ತ ಕಣ್ಣಿಟ್ಟಿರುವುದು ದೊಡ್ಡ ಸಾಧನೆ. ಅದನ್ನು ಮೆಚ್ಚಲೇಬೇಕು. ■

ದೇಶಪ್ರೇಮ

ಆಹಾರ ಪದಾರ್ಥ ಎದುರಿದ್ದರೆ ಮಕ್ಕಳು ಖಂಡಿತ ಬಿಡಲಾರರೆಂದು ಹೆಚ್ಚಿನ ಜನರ ಭಾವನೆ. ಆದರೆ ನಿಜಸ್ಥಿತಿ ಹಾಗಿಲ್ಲ.

ಎರಡನೇ ವಿಶ್ವಯುದ್ಧದ ವೇಳೆ ಸ್ಪೇನಿನಲ್ಲಿ ಮಹಾಯುದ್ಧ ನಡೆಯುತ್ತಿತ್ತು. ಫಾಸಿಸ್ಟ್ ಧುರೀಣರು ರಾಜಧಾನಿ ಮೆಡ್ರಿಡ್‌ನ್ನು ಮುತ್ತಿದ್ದರು. ಮುತ್ತಿಗೆ ಬಹುದಿನಗಳವರೆಗೆ ಮುಂದುವರಿಯಿತು. ಜನ ನಗರದಿಂದ ಹೊರ ಹೋಗುವಂತಿರಲಿಲ್ಲ. ಅವರ ಬದುಕು ಅಸ್ತವ್ಯಸ್ತ ವಾಯಿತು.

ಹಸಿವಿನಿಂದ ಎಲ್ಲರೂ ಚಡಪಡಿಸುತ್ತಿದ್ದರು. ಹಿರಿಯರೇನೋ ಸಂಯಮದಿಂದ ವರ್ತಿಸಿದರೂ ಪುಟ್ಟ ಪುಟ್ಟ ಮಕ್ಕಳ ಒದ್ದಾಟ ಕಂಡು ಕಣ್ಣೀರಿಡುತ್ತಿದ್ದರು. ಫಾಸಿಸ್ಟ್ ಸೇನೆಯ ಸೇನಾಪತಿಗೆ ಈ ಸಂಗತಿ ತಿಳಿಯಿತು. ಆತ ತನ್ನ ಸಹಾಯಕನನ್ನು ಕರೆದು 'ಬೇಗನೆ ಪಟ್ಟಣದೊಳಗೆ ಬ್ರೆಡ್‌ಗಳನ್ನು ತಲುಪಿಸುವ ಏರ್ಪಾಡು ಮಾಡು' ಎಂದು ಆಜ್ಞಾಪಿಸಿದ.

'ಆದರೆ ಇದೆಂತು ಸಾಧ್ಯ? ಪಟ್ಟಣದ ಹೆಬ್ಬಾಗಿಲು ಮುಚ್ಚಿದೆಯಲ್ಲ!' ಕೇಳಿದ ಸಹಾಯಕ.

ಸೇನಾಪತಿ ತುಸು ಯೋಚಿಸಿ ಹೀಗೆಂದ : 'ಬಾಗಿಲು ಮುಚ್ಚಿದ್ದರೇನಾಯಿತು? ವಿಮಾನದಿಂದ ಕೆಳ ಹಾಕು'.

ಸೇನಾಪತಿಯ ಅಪ್ಪಣೆಯಂತೆ ವಿಮಾನದ ಮೂಲಕ ನಗರದೊಳಗೆ ಬ್ರೆಡ್‌ಗಳನ್ನು ಬೀಳಿಸಲಾಯಿತು. ಆಹಾರದ ತುಣುಕಿಗಾಗಿ ಜಗಳಾಡುತ್ತಿದ್ದ ಜನ ಬ್ರೆಡ್‌ಗಳ ಈ ಮಳೆ ಕಂಡು ಕುಣಿದಾಡಿದರು. ಆದರೆ ಮಕ್ಕಳು ಎಲ್ಲ ಬ್ರೆಡ್‌ಗಳನ್ನು ಸಂಗ್ರಹಿಸಿ ಪೊಲೀಸ್ ಠಾಣೆಗೆ ಒಪ್ಪಿಸಿದರು. ಹಸಿವಿನಿಂದ ಒದ್ದಾಡುತ್ತಿದ್ದರೂ ಆ ಮಕ್ಕಳು ಶತ್ರುಗಳು ಕಳುಹಿಸಿದ ಆಹಾರವನ್ನು ತಿನ್ನಲೊಪ್ಪಲಿಲ್ಲ. ಮರುದಿನ ಎಲ್ಲ ಬ್ರೆಡ್‌ಗಳನ್ನು ಕಾಗದದಲ್ಲಿ ಸುತ್ತಿ ಫಾಸಿಸ್ಟ್‌ರ ಕಂದಕಗಳಿಗೆ ಎಸೆಯಲಾಯಿತು.

'ಮೆಡ್ರಿಡ್‌ನ್ನು ಫಾಸಿಸ್ಟ್ ಬ್ರೆಡ್‌ಗಳಿಂದ ಗೆಲ್ಲಲು ಸಾಧ್ಯವಿಲ್ಲ. ಹಸಿವು ನಮ್ಮ ದೇಶಪ್ರೇಮ ಹಾಗೂ ಆತ್ಮಸಮ್ಮಾನವನ್ನು ಮೆಟ್ಟಿ ನಿಲ್ಲಲಾರದು!' ಎಂದು ಕಾಗದದ ಮೇಲೆ ಬರೆಯಲಾಗಿತ್ತು. ಫಾಸಿಸ್ಟ್ ಸೇನಾಪತಿ ನಿಬ್ಬೆರಗಾದ. 'ಇವರು ಹಸಿದಿದ್ದೂ ಹೋರಾಟ ಮುಂದುವರಿಸುವರು. ಇನ್ನೇನು ಮಾಡಬೇಕು?' ಎಂದ ಅವನ ಸಹಾಯಕ.

■ 'ಅಡಿಗ'



ಶ್ರೀನಿವಾಸ ಉಡುಪ ನಮ್ಮಲ್ಲಿ ಪ್ರಕಟಣೆಗೆಂದು ಕಥೆಯೊಂದನ್ನು ಕೊಟ್ಟಿದ್ದರು. ಅದು ಈ ಸಂಚಿಕೆಯಲ್ಲಿ ಪ್ರಕಟವಾಗಲು ಸಜ್ಜಾಗುತ್ತಿದ್ದ ವೇಳೆಗೇ, ಅವರು ದೂರವಾಗಿದ್ದಾರೆ. ಅರವತ್ತಾರು, ಜೀವನದಿಂದ ನಿರ್ಗಮಿಸುವ ವಯಸ್ಸೇನಲ್ಲ. ಆದರೆ ಅನಾರೋಗ್ಯ ಅವರನ್ನು ಸೆಳೆದೊಯ್ದಿದೆ. ಮಲೆನಾಡಿನ ಜೀವನದ ಸೂಕ್ಷ್ಮ ತಂತುಗಳನ್ನು ಸರಳವಾಗಿ ಬಿಡಿಸಿ ಇಡುತ್ತಿದ್ದ ಅವರ ಕುಸುರಿ ಕಲೆ ಎಲ್ಲ ಬರಹಗಳಲ್ಲಿಯೂ ಕಾಣುತ್ತದೆ. ಅಂಥದೊಂದು ಕಥೆ ಈಗ ನಿಮ್ಮ ಮುಂದಿದೆ.

ಬೇಸಿಗೆ ರಜೆ ಪ್ರಾರಂಭವಾದ ದಿನಗಳು. ರೋಹಿಣಿ ಸಪ್ಪೆ ಮುಖ ಹೊತ್ತು ಹಾಲ್‌ನಲ್ಲಿ ಕುಳಿತಿದ್ದಳು. ಯಾರು ಮಾತನಾಡಿಸಿದರೂ ಮಾತನಾಡುತ್ತಿರಲಿಲ್ಲ. ಬೆಳಿಗ್ಗೆ ಅವಳ ಮಲತಾಯಿ ದ್ರೌಪದಿ ಕೊಟ್ಟ ಹಾಲು ಕುಡಿದಿರಲಿಲ್ಲ. ಅದು ಹಾಗೆ ಬಿಸಿ ಇಂದ ತಣ್ಣನೆಡೆಗೆ ವಾಲಿತ್ತು. ರೋಹಿಣಿ ಮನಸ್ಸು ಬಿಸಿ ಹೆಚ್ಚಿಸಿತ್ತು. ಆರು ವರ್ಷದ ಅವಳು ತುಂಬಾ ಬುದ್ಧಿವಂತೆ ಹುಡುಗಿ. ಅಡಿಗೆ ಮನೆಯಿಂದ ಬಂದ ಅವಳ ಮಲತಾಯಿ ದ್ರೌಪತಿ ರೋಹಿಣಿಯನ್ನು ನೋಡಿ ವ್ಯಥೆ ಪಟ್ಟುಕೊಂಡಳು. ಪ್ರತಿದಿನ ತಾನು ಈ ಮನೆಗೆ ಧರ್ಮರಾಯನ ಎರಡನೇ ಹೆಂಡತಿಯಾಗಿ ಬಂದಲಾಗಾಯ್ತು. ಅಂಟಿ ಅಂಟಿ ಎಂದು ನನ್ನ ಬೆನ್ನ ಹಿಂದೆ ತಿರುಗಿ ನನ್ನ ಮನಸ್ಸನ್ನು ಅರಳಿಸುತ್ತಿದ್ದ ರೋಹಿಣಿ ಇಂದೇಕೋ ಹೀಗೆ ಕುಳಿತಿದ್ದಾಳೆ. ಗಂಡ ಧರ್ಮರಾಯ ಬಚ್ಚಲಲ್ಲಿ ಸ್ನಾನ ಮಾಡುತ್ತಿದ್ದ. ಅವರು

ಬಂದರೆ ರೋಹಿಣಿಗೆ ಹೆದರಿಸುತ್ತಾರೆ. 'ರೋಹಿಣಿ, ರೋಹಿಣಿ' ದ್ರೌಪದಿ ಅವಳ ಪಕ್ಕದಲ್ಲಿ ಕುಳಿತು ಕರೆದಳು. ಆದರೆ ಮುದುಡಿದ ಆ ರೋಹಿಣಿ ಅವಳೆಡೆಗೆ ತಿರುಗಲಿಲ್ಲ. ''ಬೇಗ ಹಾಲು ಕುಡಿಯಮ್ಮ, ನಿಮ್ಮ ಪಪ್ಪ ಬಂದರೆ ಹೆದರಿಸುತ್ತಾರೆ'' ಸ್ವಲ್ಪ ಭೀತಿಯಿಂದಲೇ ಬಚ್ಚಲ ಮನೆ ಕಡೆ ನೋಡುತ್ತಾ ದ್ರೌಪದಿ ಹೇಳಿದಳು. ಆದರೆ ಸಿಟ್ಟಿನ ರೋಹಿಣಿ ಕಣ್ಣುಗಳಲ್ಲಿ ಹನಿ ಹರಿಯಲು ಪ್ರಾರಂಭಿಸಿತು. ದ್ರೌಪದಿ ಅವಳನ್ನು ಎತ್ತಿ ತನ್ನ ತೊಡೆಯ ಮೇಲೆ ಕೂರಿಸಿಕೊಂಡಳು. ಹಾಲಿನ ಲೋಟ ಅವಳ ಬಾಯಿಗಿಟ್ಟು ಮುದ್ದಿನಿಂದ ಹಾಲು ಕುಡಿಸಿದಳು.

ರೋಹಿಣಿ, ತಾನು ಮದುವೆಯಾಗಿ ಬಂದಲಾಗಾಯ್ತು ಈ ರೀತಿ ಸಿಟ್ಟು ಆಗಾಗ್ಗೆ ಮಾಡುತ್ತಾಳೆ. ಆದರೆ ಕಾರಣ ತನ್ನ ಪತಿ. ಅವಳ ಅಜ್ಜ-ಅಜ್ಜಿ ಅವರಿವರಿಂದ ಫೋನ್ ಮಾಡಿದರೆ, ರೋಹಿಣಿ ಮಲಗಿದ್ದಾಳೆ, ಹೊರಗೆ ಹೋಗಿದ್ದಾಳೆ ಎಂದು ಫೋನ್ ಮಾಡುವ ಅವಳ ಎದುರು ಕುಕ್ಕುವುದು ಕಂಡಾಗ 'ನಿಮಗೇನ್ರಿ ಈ ಬುದ್ಧಿ?' ರೋಹಿಣಿ ತಾಯಿಯ ಅಜ್ಜ ಅಜ್ಜಿ ನಿಮಗೆ ಏನು ಮಾಡಿದ್ದಾರೆ ಹೇಳಿ, ಅಂದಾಗ ಧರ್ಮರಾಯ ಕಣ್ಣು ಕೆಂಗರಿಸಿ 'ನಿನ್ನ ಕೆಲಸ ನೀನು ನೋಡು' ಅನ್ನುತ್ತಾನೆ.

ರೋಹಿಣಿ ತಾಯಿ ಕೀರ್ತಿ ಗಂಡನನ್ನು ಹೇಗೆ ನೋಡಿಕೊಂಡಿದ್ದಳು ಅವರ ಬಗ್ಗೆ ಇವರು ಎಷ್ಟು ತಾತ್ಸಾರ ಮಾಡಿದ್ದರು, ಪಕ್ಕದ ಮನೆ ಜಯ ಹೇಳುತ್ತಾಳೆ. ಕೀರ್ತಿ ತುಂಬಾ ಮುದ್ದಿನಿಂದ ಬೆಳೆದ ಸರಳ ಹುಡುಗಿ. ತುಂಬಾ ಸ್ವತಂತ್ರದಿಂದ ಓಡಾಡಿಕೊಂಡಿದ್ದವಳು. ಅವರ ತಂದೆ, ತಾಯಿಗಳು ಅವಳನ್ನು ಸುಖವಾಗಿ ಬೆಳೆಸಿದ್ದರು. ಧರ್ಮರಾಯ ಸೈಕಲ್ ಶಾಪ್ ಇಟ್ಟುಕೊಂಡಿದ್ದ. ಋಣಾನುಬಂಧ ಕೂಡಿತು. ಕೀರ್ತಿಯನ್ನು ಧರ್ಮರಾಯನಿಗೆ ಕೊಟ್ಟು ಮದುವೆ ಮಾಡಿದ್ದರು ಅವರ ತಂದೆ ತಾಯಿಗಳು. ಕೀರ್ತಿ ಧರ್ಮರಾಯನ ಕೈ ಹಿಡಿದು ಬಂದ ಮೇಲೆ ಕೊರಗಲಾರಂಭಿಸಿದಳು. ಅವಳು ಮನೆಬಿಟ್ಟು ಎಲ್ಲಿಗೂ ಹೋಗುವ ಹಾಗಿಲ್ಲ. ನೆರೆಹೊರೆಯವರ ಹತ್ತಿರ ಸ್ನೇಹ ಮಾಡುವ ಹಾಗಿಲ್ಲ. ಒಂದು ರೀತಿ ಮನೋರೋಗಿ ಆಗಿ ಧರ್ಮರಾಯನಿಗೆ ಹೊಂದಿಕೊಳ್ಳಲಾರಂಭಿಸಿದಳು ಹಾಗೂ ಸ್ವಾಭಿಮಾನಿ ಇನ್ನೊಬ್ಬರ ಹಂಗು ಮಾತು ಕೇಳಲಾರದೆ ಕೀರ್ತಿ ಗಂಡನಿಗೆ ಸದಾ ಎಚ್ಚರಿಸುತ್ತಿದ್ದಳು. ಒಂದೆರಡು ವರ್ಷಗಳಲ್ಲಿ ಕೀರ್ತಿಗೆ ರೋಹಿಣಿ ಹುಟ್ಟಿದಳು. ಕೀರ್ತಿ ತಂದೆ ತಾಯಿಗಳು ಸದಾ ಅವಳ ಮನೆಗೆ ಬರುವುದು, ಉಳಿಯುವುದು, ಸಂಸಾರಕ್ಕೆ ಬೇಕಾದ ಒಂದೊಂದೆ ಸಾಮಾನನ್ನು ತಂದು ಆ ಮನೆ ತುಂಬಿದ್ದರೂ, ಕೀರ್ತಿ ಇರುವಾಗ ಧರ್ಮರಾಯ ಅತ್ತೆ ಮಾವನವರಿಗೆ ಮೆಚ್ಚುಗೆ ಅಳಿಯನಾಗಿದ್ದ. ಮಗಳು ಕೀರ್ತಿಗಿಂತ ಅಳಿಯ ಧರ್ಮರಾಯನನ್ನು ಅವರು ಹೊಗಳುತ್ತಿದ್ದರು, ಮೆಚ್ಚಿಕೊಂಡಿದ್ದರು. ಮೊಮ್ಮಗಳು ರೋಹಿಣಿ ಬಗ್ಗೆ ಅಜ್ಜ ಅಜ್ಜಿಯವರ ಪ್ರೀತಿ ತುಂಬಾ. ಸೈಕಲ್ ಶಾಪ್‌ನಿಂದ ಧರ್ಮರಾಯ ಸಂಸಾರ ನಿರ್ವಹಣೆ ಮಾಡುತ್ತಿದ್ದ, ಉಳಿಸಲಾಗುತ್ತಿರಲಿಲ್ಲ. ಇದರಿಂದ ಕೆಲವು ಅನಿವಾರ್ಯ ಖರ್ಚಿಗೆ ಕೀರ್ತಿಯ ಸಾಕು ಚಿಗಪ್ಪನ ಹತ್ತಿರ ಸಾಲ ಮಾಡಿದ. 'ಈ ಬಗ್ಗೆ ಕೀರ್ತಿಗೆ ಹೇಳಬೇಡಿ, ಆದಷ್ಟು ಬೇಗ ಹಣ ಹಿಂದಿರುಗಿಸುತ್ತೇನೆ' ಅಂದಿದ್ದ. ಆಮೇಲೆ ಚಿಗಪ್ಪ ಧರ್ಮರಾಯನ ಮೇಲೆ ಸವಾರಿ ಮಾಡತೊಡಗಿದ. ಗದರಿಸಿ ತನ್ನ ಕೆಲಸ ಮಾಡಿಕೊಳ್ಳುತ್ತಿದ್ದ. ಕೀರ್ತಿಗೆ ಇದು ಸಹಿಸಲಾಗಲಿಲ್ಲ. ಚಿಗಪ್ಪನಿಗೆ ಯಾಕೆ ಹೆದರುತ್ತೀರಿ? ಅಂದಾಗ 'ನಿಮ್ಮ ತಂದೆ ತಪ್ಪು ತಿಳಿಬಾರದು ನೋಡು' ಎಂದು ಕೀರ್ತಿಯನ್ನು ಸುಮ್ಮನಾಗಿಸುತ್ತಿದ್ದ. ರೋಹಿಣಿ ಆರು ವರ್ಷವಾದರೂ ಧರ್ಮರಾಯನಿಗೆ ಕೀರ್ತಿ ಚಿಗಪ್ಪ ರಾವಣನ ಸಾಲ ತೀರಿಸಲಾಗಲಿಲ್ಲ. ಸಾಲದ್ದಕ್ಕೆ ರಾವಣ ತನ್ನ ಮಗ ಇಂದ್ರಜಿತುವನ್ನು ಅವರ ಮನೆಗೆ ಓದಲು ಬಿಟ್ಟ. ಈಗ ಕೀರ್ತಿಗೆ ತುಂಬಾ ಕೋಪ ಬಂತು. ಈ ಬಗ್ಗೆ ಗಂಡನಿಗೆ ಹೇಳಿದಾಗಲೆಲ್ಲ ಧರ್ಮರಾಯ ಸುಮ್ಮನಿರುತ್ತಿದ್ದ. ಕೀರ್ತಿ ತಂದೆ ತಾಯಿಯವರಿಗೆ ರಾವಣ ಇಂದ್ರಜಿತು ಬಗ್ಗೆ ಹೇಳಿದಾಗಲೆಲ್ಲ ಅವನ ಸ್ವಭಾವವೇ ಅದು, ನೀನು ಸುಮ್ಮನಿರು ಎಂದು ಕೀರ್ತಿಗೆ ಬುದ್ಧಿ ಹೇಳುತ್ತಿದ್ದರು. ಈ ನಿರ್ಬಲತೆ ಕಂಡ ರಾವಣ ಸಾಧ್ಯವಾದಾಗಲೆಲ್ಲ ಕೀರ್ತಿ ಮನೆಗೆ ಹೋಗಿ ಅವಳನ್ನು ಬೈಯುತ್ತಿದ್ದ. ಧರ್ಮರಾಯನ ಎದುರು ಬೈಯುತ್ತಿದ್ದ. ಅವರಿಂದಲೂ ಬೈಯಿಸುತ್ತಿದ್ದ. ಆಗೆಲ್ಲಾ ಕೀರ್ತಿ ತುಂಬಾ ಪೆಚ್ಚಾಗಿರುತ್ತಿದ್ದಳು. ಒಂದೆರಡು ವರ್ಷದ ಮೇಲೆ ಇಂದ್ರಜಿತು ಮನೆಯಲ್ಲಿ ಧರ್ಮರಾಯನ ಹಣ ಕದ್ದ. ಶಾಲೆಗೆ ಹೋಗದೇ ಕಳ್ಳು ಬಿದ್ದ. ಪರೀಕ್ಷೆಯಲ್ಲಿ ಫೇಲಾದ. ಕೀರ್ತಿ ರಾವಣ ಬಂದಾಗ ಇದನ್ನೆಲ್ಲಾ ಹೇಳಿದ್ದಳು. ರಾವಣ ಕೆಂಡವಾದ. ಆಗಲೂ ಧರ್ಮರಾಯ ರಾವಣನಿಗೆ ಏನೂ ಹೇಳದೆ ಇದ್ದುದ ಕಂಡು ಕೀರ್ತಿ ಪೆಚ್ಚಾದಳು. ಮತ್ತೊಂದು ತಿಂಗಳಲ್ಲಿ ರಾವಣ ಕೀರ್ತಿ ಮನೆಗೆ ಬಂದ. ಧರ್ಮರಾಯ ಸೈಕಲ್ ಶಾಪಿಗೆ ಹೋಗಿದ್ದ. ರೋಹಿಣಿ ಎಲ್.ಕೆ.ಜಿಗೆ ಹೋಗಲು ಸಿದ್ಧಳಾಗಿದ್ದಳು. ಕೀರ್ತಿ ಅವಳಿಗೂ ಇಂದ್ರಜಿತಗೂ ಊಟ ಕಟ್ಟುತ್ತಿದ್ದಳು. ರಾವಣ ಕೀರ್ತಿಗೆ ಸಿಕ್ಕಾಪಟ್ಟೆ ಬೈದ. 'ನಿನ್ನ ಗಂಡ ನನ್ನ ಹತ್ತಿರ ಇಷ್ಟು ಸಾಲ ಮಾಡಿದ್ದಾನೆ. ನೀವಿಬ್ಬರೂ ಸಾಯುವ ತನಕ ನನ್ನ ಹಂಗಲ್ಲಿ ಬಿದ್ದಿದ್ದೀರ' ಎಂದ. ಆ ಮಾತು ಕೇಳಿದಾಗ ಕೀರ್ತಿ ಮಂಕಾದಳು. ರಾವಣ ಹೋದ ಮೇಲೆ ರೋಹಿಣಿಯನ್ನು ಶಾಲೆಗೆ ಕಳಿಸಿ ಬಂದಳು. ಗಂಡನಿಗೆ ತನ್ನ ತಂದೆ ಮನೆಯಲ್ಲಿ ಕೊಟ್ಟ ಒಡವೆಯನ್ನು ಮಾರಿ ರಾವಣನ ಸಾಲ ತೀರಿಸಿ ಎಂದು ಕಾಗದ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಳು. ಆಗ ಧರ್ಮರಾಯನನ್ನು ಕಾಪಾಡಿದ್ದು ಕೀರ್ತಿ ತಂದೆ ತಾಯಿಗಳು. ಆನಂತರ ಅವರು ರೋಹಿಣಿಯನ್ನು ತಾವಿಟ್ಟುಕೊಳ್ಳಲು ಧರ್ಮರಾಯನನ್ನು ಪರಿಪರಿ ಬೇಡಿದರು. ಅವನು ಒಪ್ಪಲಿಲ್ಲ. ಅವರೋ ಇದ್ದ ದುಃಖದಿಂದ ಒಂದೆರಡು ತಿಂಗಳು ದಬ್ಬಿದರು. ಆಮೇಲೆ ದ್ರೌಪದಿಯ ಸಂಬಂಧ ಧರ್ಮರಾಯನಿಗೆ ಮಾಡಿಸಿದರು.

ಇದ್ದಾದ ಮೇಲೆ ಧರ್ಮರಾಯ ತಿರುಗಿ ಬಿದ್ದ. ರೋಹಿಣಿಯನ್ನು ಅವಳ ಅಜ್ಜ-ಅಜ್ಜಿ ಮನೆಗೆ ಕಳಿಸಿದಾಗ, ಕಾಗದ ಪತ್ರಗಳನ್ನು ಬರೆಯದಾದ. ಕೀರ್ತಿ ತಂದೆ ತಾಯಿಗಳಿಗೆ ಧರ್ಮರಾಯನ ಸ್ವಭಾವ ಈಗ ಅರ್ಥವಾಯಿತು. ಮಗಳಾದ ಕೀರ್ತಿಯನ್ನು ಕಳೆದುಕೊಂಡಿದ್ದರ ಜೊತೆಗೆ ಕರುಳಿನ ಕುಡಿ ರೋಹಿಣಿಯನ್ನು ರಜದಲ್ಲಿ ನಾಲ್ಕು ದಿನ ಕಳಿಸದಿದ್ದುದು ಕೊರಗಾಯಿತು.

ಸಣ್ಣ ಮಗುವಾಗಿದ್ದಾಗಿಂದಲೂ ತಾಯಿಗಿಂತ ತನ್ನನ್ನು ಹಚ್ಚಿಕೊಂಡಿದ್ದ ರೋಹಿಣಿ ಇದ್ದಕ್ಕಿದ್ದ ಹಾಗೆ ದ್ವೇಷಿಸಲು ಕಾರಣವೇನು?

ದ್ರೌಪದಿ ಈ ವಿಚಾರ ಮರುಕಳಿಸಿ 'ಇವರೇಕೆ ಹೀಗೆ ಮಾಡುತ್ತಾರೆ?' ಎನ್ನುವುದು ಅರ್ಥವಾಗದಾಯಿತು.

ಆ ಸಾರಿ ರಜ ಬಂದಾಗ ರೋಹಿಣಿ ಅಜ್ಜ ದೂರವಾಣಿ ಮೂಲಕ, ಕಾಗದ ಬರೆದು 4 ದಿನದ ಮಟ್ಟಿಗೆ ಮೊಮ್ಮಗಳನ್ನು ಕಳಿಸಲು ಕೇಳಿದ್ದರು. ರೋಹಿಣಿ ಅಜ್ಜನ ಮನೆಗೆ ಹೋಗುತ್ತೇನೆಂದು ಹೇಳಿದಾಗ ಧರ್ಮರಾಯ ಬೇಡವೆಂದು ಗದರಿಸಿದ. ಅದಕ್ಕಾಗಿ ರೋಹಿಣಿ ಮುನಿಸಿಕೊಂಡಿದ್ದಳು. ಅವರಿದ್ದ ಅಕ್ಕಪಕ್ಕದ ಮನೆಯವರ ಮಕ್ಕಳೆಲ್ಲ ಅವರ ಅಜ್ಜ ಅಜ್ಜಿ ಊರಿಗೆ ಹೋಗಿದ್ದರು. ತನಗೆ ಈ ಅವಕಾಶವಿಲ್ಲವೆಂಬ ವ್ಯಥೆ ಅವಳ ಕೊರಗಾಯಿತು.

ದ್ರೌಪದಿಗೆ ಆಶ್ಚರ್ಯ. ಇವರೇಕೆ ರೋಹಿಣಿ ಅಜ್ಜ ಅಜ್ಜಿಯರನ್ನು ದ್ವೇಷಿಸುತ್ತಾರೆ? ಧರ್ಮರಾಯನು ಸ್ನಾನ ಮಾಡಿ ಬಂದಾಗ ಅವಳು ಹೇಳಿದಳು. 'ರೋಹಿಣಿ ಅಜ್ಜನ ಮನೆಗೆ ಹೋಗಲಿ.'

'ನನಗೇಕೆ ಈ ಉಸಾಬರಿ'

'ಅವಳ ಅಜ್ಜ-ಅಜ್ಜಿ ನಿಮಗೆ ಮಾಡಿದ್ದಾದರೂ ಏನು....?

'ಅವಳು ಅಲ್ಲಿಗೆ ಹೋದರೆ ನಿನ್ನ ಬಗ್ಗೆ ಹಚ್ಚಿಕೊಡುತ್ತಾರೆ. ರೋಹಿಣಿ ಆಗ ನಿನ್ನ ಪ್ರೀತಿಸುವುದಿಲ್ಲ' ಆ ಮಾತು ಕೇಳಿದಾಗ ಅವಳು ಸುಮ್ಮನಾದಳು.

ಅಷ್ಟರಲ್ಲಿ ಫೋನ್ ರಿಂಗ್ ಆಯಿತು. ಮುದುಡಿ ಮನಸ್ಸನ್ನು ಕೆಡಿಸಿಕೊಂಡ ರೋಹಿಣಿ ಫೋನ್ ಹತ್ತಿರ ಓಡಿದಳು. ಧರ್ಮರಾಯ ಅವಳಿಗೆ ಹೆದರಿಸಿ ಫೋನ್ ಎತ್ತಿಕೊಂಡ.

'ರೋಹಿಣಿ ಇದ್ದಾಳಾ'

'ಅವಳು ಹೊರಗೆ ಹೋಗಿದ್ದಾಳೆ'

'ರಜ ಪ್ರಾರಂಭವಾಗಿದೆ, ಅವಳನ್ನು ಕಳಿಸಿಕೊಡಿ'

'ಆಗೋಲ್ಲ'

'ಯಾಕೋ'

'ನಾನು ಅವಳನ್ನು ಮಂಗಳೂರಿಗೆ ಕರೆದುಕೊಂಡು ಹೋಗುತ್ತೇನೆ'

'ನೀವು ಹೋಗುವ ದಿನ ತಂದುಬಿಡುತ್ತೇನೆ'

'ಆಗೋಲ್ಲ'

'ನಿಮ್ಮಿಷ್ಟ'

ದ್ರೌಪದಿ ಕೇಳಿದಳು, 'ರೋಹಿಣಿ ಅಜ್ಜನಿಂದಾ'

'ಹುಂ'

ರೋಹಿಣಿ ಮಾತನಾಡಲಿಲ್ಲ. ರೂಂಗೆ ಹೋಗಿ ಮಲಗಿದಳು.

ಧರ್ಮರಾಯ ಸೈಕಲ್ ಏರಿ ಸೈಕಲ್ ಶಾಪ್‌ಗೆ ಹೋದ.

ದ್ರೌಪದಿ ಮಾತ್ರ ಮಲಗಿದ ರೋಹಿಣಿಯನ್ನು ಎತ್ತಿಕೊಂಡಳು. 'ರೋಹಿಣಿ ಬರುವ ರಜಕ್ಕೆ ಹೋಗಬಹುದು'

'ಆಗಲೂ ಅಪ್ಪ ಕಳಿಸೊಲ್ಲ'

'ನಿನಗೆ ಅಜ್ಜ ಅಜ್ಜಿ ಅಂದರೆ ಅಷ್ಟು ಆಸೇನೆ?'

'ಅಮ್ಮನೂ ಇಲ್ಲ, ಮೊದಲಿಂದಲು ಅಜ್ಜ, ಅಜ್ಜಿ ನನ್ನ ಹಚ್ಚಿಕೊಂಡಿದ್ದಾರೆ. ಅಮ್ಮ ಇರುವಾಗ ಅಪ್ಪ ಹೀಗೆ ಮಾಡುತ್ತಿರಲಿಲ್ಲ'

'ಅವರಿಗೆ ಭಯ'

'ಯಾಕೆ?'

'ನಿಮ್ಮ ಅಜ್ಜನ ಮನೆಗೆ ಹೋದರೆ ಅಲ್ಲಿ ನನ್ನ ಬಗ್ಗೆ ನಿನಗೆ ಕೆಟ್ಟದ್ದಾಗಿ ಹೇಳಿಕೊಡುತ್ತಾರಂತೆ.'

'ಆಂಟಿ' ರೋಹಿಣಿ ಕಣ್ಣಾಗೆಲ್ಲ ನೀರು ಹನಿಯಿತು.

'ಏನಮ್ಮಾ'

'ಅಜ್ಜ ಅಜ್ಜಿ ಸೇರಿ, ನಿನ್ನಂತ ಒಳ್ಳೆ ಆಂಟಿ ತಂದುಕೊಟ್ಟಿದ್ದಾರೆ. ಹೋದಾಗಲೆಲ್ಲ ಆಂಟಿನೂ ನಿನ್ನ ಅಮ್ಮ, ರೋಹಿಣಿ, ಅವಳು ನನ್ನ ಮಗಳ ಸಮಾನ' ಅನ್ನುತ್ತಾರೆ.

'ಹೌದಮ್ಮ ಇವರೇಕೆ ಹೀಗೆ ಆದರೋ?'

'ಅಮ್ಮ ತೀರಿದಾಗ ಅಜ್ಜ ಅಜ್ಜಿ ಮಾಡಿದ್ದು ಪಕ್ಕದ ಮನೆ ಅಜ್ಜಿ ಹೇಳುತ್ತಾಳೆ.'

'ಹೌದಮ್ಮ'

ದ್ರೌಪದಿ ಅಡಿಗೆ ಕೆಲಸಕ್ಕೆ ಹೋದಳು. ರೋಹಿಣಿ ಕೋಣೆಯಲ್ಲಿ ಪೆಚ್ಚಾಗಿ ಮಲಗಿದ್ದಳು.

ಅವಳು ಮದುವೆಯಾಗಿ ಮನೆಗೆ ಬಂದ ಹೊಸದರಲ್ಲಿ ರೋಹಿಣಿ ಅಜ್ಜ ಬಂದಿದ್ದರೂ ಆಗ ಇವರು ಅವರೊಡನೆ ಮಾತಾಡಲಿಲ್ಲ. ಅವರು ಕೇಳಿದ್ದಕ್ಕೆ ಒರಟಾಗಿ ಉತ್ತರಿಸಿದ್ದರು. ಆನಂತರ ಅನೇಕ ಸಾರಿ ಅವರು ಬಂದಾಗ ಇದೇ ಗತಿ. ಒಮ್ಮೆ ಅವರು ಬಂದಾಗ ಸಂಜೆ ಆಗಿತ್ತು. ಇವರು ಸೈಕಲ್‌ಶಾಪಿಗೆ ಹೋಗಿದ್ದರು. ರೋಹಿಣಿ ಒಡನೆ ಒಂದಿಷ್ಟು ಆಡಿ ಅವಳಿಗೆ ಆಟದ ಸಾಮಾನು ಕೊಟ್ಟು ಅವಳಜ್ಜ ಹೊರಟು ನಿಂತರು.

'ಅಜ್ಜ ಇವತ್ತು ಇರು'

'ಬೇಡಮ್ಮ'

'ನನಗೆ ಬೇಜಾರಾಗುತ್ತೆ'

'ಅರ್ಜೆಂಟಾಗಿ ಮನೆಗೆ ಹೋಗಬೇಕು ರೋಹಿಣಿ'

'ಮೊದಲೆಲ್ಲ ಎರಡು ದಿನ ಇರುತ್ತಿದ್ದೆ'

'ಆಗ ನೀವಿಬ್ಬರೂ ಇದ್ದೀರಿ'

'ಅಮ್ಮ ಇದ್ದಾಗ ಉಳಿಯುತ್ತಿದ್ದೀರಿ'

ರೋಹಿಣಿ ಅಜ್ಜ ಮಾತಾಡಲಿಲ್ಲ.

'ಯಾಕೆ ಅಜ್ಜ ನಿನಗೆ ನಾನು ಬೇಡವಾದನೆ?'

'ಹಾಗಲ್ಲಮ್ಮ, ಈಗ ದ್ರೌಪದಿ ಆಂಟಿ ಇದ್ದಾರೆ, ನಿನಗೆ ಬೇಸರವಾಗೊಲ್ಲ'

'ಹುಂ'

ಅವರು ಹೊರಟಾಗ ರೋಹಿಣಿ ಗಳ ಗಳ ಅತ್ತಳು

ಸಾರಿಗೆ ಒಗ್ಗರಣೆ ಹಾಕುತ್ತಿದ್ದ ದ್ರೌಪದಿ ಇದನ್ನು ನೆನಸಿಕೊಂಡಳು.

ರೋಹಿಣಿಗೆ ಊಟ ಮಾಡಿಸಲೆಂದು ಕೋಣೆಗೆ ಹೋದಳು. ರೋಹಿಣಿ ನಡುಗುತ್ತಿದ್ದಳು. 'ಏನಾಯ್ತು ರೋಹಿಣಿ 'ಗಾಬರಿಯಲ್ಲಿ ದ್ರೌಪದಿ ಅವಳ ಹಣೆ, ಎದೆ ಮುಟ್ಟಿ ನೋಡಿದಳು. ಸುಡುತ್ತಿತ್ತು. ಅಸಾಧ್ಯ ಜ್ವರ ಅವಳಿಗೆ ಬಂದಿತ್ತು.

ಗಾಬರಿಯಲ್ಲಿ ಗಂಡನಿಗೆ ಫೋನ್ ಮಾಡಿದಳು. 'ರೋಹಿಣಿಗೆ ತುಂಬಾ ಜ್ವರ ಕಣ್ರಿ, ನಡುಗುತ್ತಿದ್ದಾಳೆ, ಅಜ್ಜ, ಅಜ್ಜಿ ಎಂದು ನರಳುತ್ತಿದ್ದಾಳೆ. ನನಗೆ ಗಾಬರಿ ಕಣ್ರಿ'

'ಅವಳಿಗೆ ಅಜ್ಜ, ಅಜ್ಜಿ ಪಿತ್ತ ಹಿಡಿದಿದೆ, ನಾನು ನೀನು ಕಸಕ್ಕಿಂತ ಕಡಿಮೆ'.

'ಹಾಗೇಕೆ ಹೇಳ್ತೀರಿ, ಅದು ಮಗು ಕಣ್ರಿ'

'ಬಂದೆ'

ನಂತರ ಧರ್ಮರಾಯ ಉಸುರುಕಟ್ಟಿ ಬಂದನು. ರೋಹಿಣಿಯನ್ನು ಎತ್ತಿಕೊಂಡಾಗ ಅವನು ಗಾಬರಿಯಾದ. ತಕ್ಷಣ ಅವಳನ್ನೆತ್ತಿ ಹೆಂಡತಿಯೊಡನೆ ಡಾ.ಸುಬ್ರಹ್ಮಣ್ಯರ ಹತ್ತಿರ ಹೋದ. ತನ್ನ ಸರದಿ ಕಾದ ನಂತರ ಡಾಕ್ಟರ್ ರೋಹಿಣಿಯನ್ನು ಪರೀಕ್ಷಿಸಿ ಹೇಳಿದರು.

'ಇವಳಿಗೆ ಯಾವಾಗಲಿಂದ ಜ್ವರ?'

'ಇವತ್ತಿನಿಂದ'

'ಜ್ವರ ಬಂದಾಗಲೆಲ್ಲ ಹೀಗೆ ನಡುಗುತ್ತಾಳೆಯೇ? ಹಲಬುತ್ತಾಳೆಯೇ?'

'ಇಲ್ಲ'

ಸರಿ, ಅವರು ಮಾತ್ರೆಗಳನ್ನು, ಸಿರಪನ್ನು ಕೊಟ್ಟು 'ಮೂರು ದಿನದ ಮೇಲೆ ಬನ್ನಿ' ಎಂದರು.

'ಹುಂ'

ರೋಹಿಣಿ ತಂದೆ ಮಾತನಾಡಿಸಿದರೆ ಮಾತನಾಡುತ್ತಿರಲಿಲ್ಲ. ಅವನ ಜೊತೆಗೆ ಸದಾ ಹಚ್ಚಿಕೊಂಡಿದ್ದ ಅವಳು ಅವನನ್ನು ಕಂಡರೆ ಹತ್ತಿರ ಬಂದರೆ ಹೆದರುತ್ತಿದ್ದಳು. ದ್ರೌಪದಿ ಮುದ್ದಿನಿಂದ ಉಪಚರಿಸಿ, ಔಷಧಿ ಕುಡಿಸುತ್ತಿದ್ದಳು, ಆಹಾರ ಪಾನೀಯಗಳನ್ನು ಕೊಡುತ್ತಿದ್ದಳು. ಕೆಲಸದ ಮಧ್ಯೆ ಅವಳ ಹತ್ತಿರ ಕಳೆಯುತ್ತಿದ್ದಳು.

'ಆಂಟಿ'

'ರೋಹಿಣಿ, ಏನಮ್ಮಾ?'

'ನನಗೆ ತಮ್ಮ ಬರುವುದು ಯಾವಾಗ?'

'ಇನ್ನೂ ಆರು ತಿಂಗಳ ಮೇಲೆ'

'ಆಮೇಲೆ ಅಪ್ಪನ ಹಾಗೆ ನನಗೆ ಗದರಿಸುತ್ತೀಯಾ?'

'ಇಲ್ಲಮ್ಮ'

'ಹೀಗೆ ಆಗಲೂ ಮುದ್ದು ಮಾಡುತ್ತೀಯಾ?'

'ಹುಂ'

'ನಾನು ಅವನೊಡನೆ ಸದಾ ಆಡುತ್ತೇನೆ'

'ಆಗಲಿ'

'ನನ್ನ ಚಿಕ್ಕದಾದ ಬಟ್ಟೆಗಳನ್ನು ಅವನಿಗೆ ಹಾಕಬೇಕಮ್ಮ'

'ಹುಂ'

ದ್ರೌಪದಿಗೆ ರೋಹಿಣಿ ಬಗ್ಗೆ ಮೆಚ್ಚುಗೆ ಆಯಿತು. ಈ ಆರು ವರ್ಷದ ಮಗು ಎಷ್ಟು ತಿಳಿವಳಿಕೆ ಉಳ್ಳದ್ದು. ಎಲ್ಲಾವನ್ನು ಅರ್ಥ ಮಾಡಿಕೊಳ್ಳುತ್ತಲ್ಲ. ದೊಡ್ಡವರ ಬುದ್ಧಿ. ಇದಕ್ಕೆ ಆಟ ಪಾಠ ಎಲ್ಲದರಲ್ಲೂ ಚುರುಕು. ಓದುವುದರಲ್ಲಿ ಮೊದಲನೇ ಅವಳು. ನಾಟಕ, ಹಾಡು, ನೃತ್ಯದಲ್ಲಿ ಎಷ್ಟೊಂದು ಪ್ರತಿಭೆ ಇವಳದ್ದು. ಇಂತಹ ಮಗಳನ್ನು ಬಿಟ್ಟು



ಮಂತ್ರಿಗಳ ಜೊತೆ ಓಡಾಡೋನು ಅಂದಿದ್ದು ಕೇಳಿ
ನಾನೆಲ್ಲೋ ಮಂತ್ರಿ ಆಗ್ಬಹುದು ಅಂದ್ಕೊಂಡ್ರೆ... ಕಾರಿನ ಡ್ರೈವರ್!

ಆ ತಾಯಿ ಹೇಗೆ ಆತ್ಮಹತ್ಯೆ ಮಾಡಿಕೊಂಡಳು? ತನಗಂತು ಇವಳು ಮಲಮಗಳು ಅನ್ನಿಸಲಿಲ್ಲ. ಒಮ್ಮೆಯೂ ನನ್ನ ಹತ್ತಿರ ಹಠ ಮಾಡುವುದಿಲ್ಲ. ದ್ರೌಪದಿ ಹಾಗೆಂದುಕೊಂಡ ಮೇಲೆ ರೋಹಿಣಿಯನ್ನು ಕೇಳಿದಳು.

'ಮೊದಲು ನನ್ನ ಎಲ್ಲಾ ಕೆಲಸಗಳನ್ನು ನಿನ್ನಪ್ಪ ಅಜ್ಜ ಅಜ್ಜಿ ಮಾಡುತ್ತಿದ್ದರು. ಈಗ ನೀನೇ ಮಾಡಿಕೊಳ್ಳುತ್ತೀಯಲ್ಲ ಯಾಕೆ?'

'ಆಗ ಚಿಕ್ಕವಳಾಗಿದ್ದೆ, ಕೇಳುವವರಿದ್ದರು, ಈಗ ಹಾಗಿಲ್ಲ ನೋಡಿ'

'ಎಷ್ಟೊಂದು ಬುದ್ಧಿ ನಿನಗೆ' ದ್ರೌಪದಿ ಅವಳನ್ನು ಎತ್ತಿ ಮುತ್ತು ಕೊಟ್ಟಳು.

ಅದಾಗಿ ಎಂಟು ದಿನಗಳ ಮೇಲೆ ರೋಹಿಣಿ ಅಜ್ಜನಿಂದ ಕಾಗದ ಬಂತು. ಅದನ್ನು ನೋಡಿದ ಧರ್ಮರಾಯ ಬದಿಗೆ ಹಾಕಿದ. ದೂರದಲ್ಲಿ ಕುಳಿತ ರೋಹಿಣಿ ಅದನ್ನು ಗಮನಿಸಿದಳು.

ಕೈಲಾಗದವನು...!



ವೀರಪ್ಪನ್
ಹಿಡಿಯಲಾಗದ
'ಶೂರಪ್ಪನ್' ಗಳು
ಕಾಡಿನ ಮಕ್ಕಳನು
ಕಾಡುತಿಹರು!?

■ ಕ.ಬ.ವೀರಣ್ಣ ಕಣ್ಣಾಗಾಲ

'ಯಾರದೀ ಕಾಗದ?'

'ಮತ್ಯಾರದ್ದು, ರೋಹಿಣಿ ಅಜ್ಜನದು'

'ಏನು ಬರೆದಿದ್ದಾರೆ?'

'ರೋಹಿಣಿಯನ್ನು ಕರೆದುಕೊಂಡು ಒಂದು ದಿನದ ಮಾತಿಗಾದರೂ ನಾವಿಬ್ಬರು ಬರಬೇಕಂತೆ'

'ಹೋಗಿ ಬರೋಣಾರಿ'

'ನನಗೆ ಅಸಾಧ್ಯವಾದ ಕೆಲಸ, ಸುಮ್ಮನಿರು'

ಅದೇ ದಿನ ಮತ್ತೆ ರೋಹಿಣಿಗೆ ವಿಪರೀತ ಜ್ವರ ಬಂತು. ಮೈನಡುಕ ಹೆಚ್ಚಿತು. ಮೈ ಕುದಿಯುತ್ತಿತ್ತು. ತುಂಬಾ ಬಳಲಿದಳು. ದ್ರೌಪದಿ ಅವಳನ್ನು ಎತ್ತಿಕೊಂಡೇ ಗಂಡನಿಗೆ ದೂರವಾಣಿ ಮಾಡಿದಳು. ಧರ್ಮರಾಯ ಈ ಸಾರಿ ಗಾಬರಿಯಲ್ಲಿ ಬಂದ. ರೋಹಿಣಿಯನ್ನು ನೋಡಿದಾಗ ಹೆದರಿದ. ತಕ್ಷಣ ಡಾ. ಸುಬ್ರಹ್ಮಣ್ಯನಲ್ಲಿ ಕರೆದುಕೊಂಡು ಹೋದ. ಸರದಿ ಕಾಯುವಾಗ ಅವನ ಎದೆ ಹೊಡೆದುಕೊಳ್ಳುತ್ತಿತ್ತು. ಡಾ.ಸುಬ್ರಹ್ಮಣ್ಯ ರೋಹಿಣಿಯನ್ನು ಪರೀಕ್ಷೆ ಮಾಡಿ, ನರ್ಸಿಂಗ್ ಹೋಂನಲ್ಲಿ ಅವಳನ್ನು ಅಡ್ಮಿಟ್ ಮಾಡಿದರು.

ರೋಹಿಣಿ ರಕ್ತ ಪರೀಕ್ಷೆಯಾಯಿತು. ಇ.ಸಿ.ಜಿ ಆಯಿತು. ಎಲ್ಲವೂ ನಾರ್ಮಲ್ ಇದೆ. ಒಂದು ವಾರ ಚಿಕಿತ್ಸೆಯಾಯಿತು. ಆದರೂ ಜ್ವರ ನಿಲ್ಲಲಿಲ್ಲ. ರೋಹಿಣಿ ಈಗ ತುಂಬಾ ಬಳಲಿದ್ದಳು.

'ರೀ....'

'ಏನು ದ್ರೌಪದಿ'

'ನನಗೆ ಭಯ ಆಗುತ್ತೇರಿ'

'ನನಗೂ ಅಷ್ಟೆ'

'ನಾವು ರೋಹಿಣಿಯನ್ನು ಕಳೆದುಕೊಳ್ಳುತ್ತೇವೆ'

'ಆ ಮಾತು ಹೇಳಬೇಡ, ಅವಳ ಮೇಲೆ ಜೀವ ಇಟ್ಟಿದ್ದೀನಿ. ಅವಳ ತಾಯಿ ವಾತ್ಸಲ್ಯ ಅವಳಲ್ಲಿ ಕಂಡು ನಾನು ಬದುಕಿದ್ದೇನೆ.'

'ಒಂದು ಮಾತು ಹೇಳಲಾ'

'ಹೇಳು'

'ರೋಹಿಣಿ ಅಜ್ಜನಿಗೆ ಫೋನ್ ಮಾಡಿರಿ'

'ಹುಂ' ಧರ್ಮರಾಯ ಮೆತ್ತಗಾಗಿದ್ದ.

ಅವನು ಟೆಲಿಫೋನ್ ಬೂತಿಗೆ ಹೋಗಿ ರೋಹಿಣಿ ಅಜ್ಜನ ಮನೆಗೆ ಫೋನ್ ಮಾಡಿದ.

'ಯಾರು?'

'ಧರ್ಮರಾಯ'

'ಚೆನ್ನಾಗಿದ್ದೀಯಾ?'

'ಹುಂ'

'ಮತ್ತೇನು'

'ರೋಹಿಣಿಗೆ ತುಂಬಾ ಸೀರಿಯಸ್. ಡಾ.ಸುಬ್ರಹ್ಮಣ್ಯ ನರ್ಸಿಂಗ್ ಹೋಂಗೆ ಅಡ್ಮಿಟ್ ಮಾಡಿದ್ದೇವೆ'.

'ಎಷ್ಟು ದಿನ ಆಯಿತು?'

'ಒಂದು ವಾರ'

'ಹುಂ ಬರುತ್ತೇವೆ'

ದೂರವಾಣಿ ಕಟ್ ಆಯಿತು. ಧರ್ಮರಾಯ ಈ ಸುದ್ದಿ ಹೆಂಡತಿಗೆ ಹೇಳಿದಾಗ ಪೆಚ್ಚಾಗಿದ್ದ. ಅಪರಾಧಿ ಭಾವನೆ ಅವನ ಮೈತುಂಬ ಹುರಿ ಬೀಳುತ್ತಿತ್ತು.

'ಕರುಳು ಸಂಬಂಧ ಹೀಗೇರಿ.'

'ಅಂ'

'ರೋಹಿಣಿಗೆ ಅವಳಜ್ಜ ಅಂದರೆ ಪ್ರಾಣ. ಅವಳ ಅಜ್ಜ ಅಜ್ಜಿಗೆ ತಮ್ಮ ಮಗಳನ್ನು ಕಳೆದುಕೊಂಡಾಗ ಹೇಗೆ ಆಗಿರಬೇಕ್ರಿ?'

'ಹೌದು ಕಣೆ' ಧರ್ಮರಾಯನ ಕಣ್ಣಲ್ಲಿ ನೀರು ಬಂತು.

'ಅದನ್ನು ಮರೆಯಲು ರೋಹಿಣಿಯಲ್ಲಿ ಅವರು ಸತ್ತ ಮಗಳನ್ನು ಕಾಣುತ್ತಿದ್ದಾರೆ'

'ಹುಂ ಕಣೇ'

'ಆದರೆ ನೀವು ಯಾಕಾಗಿ ಸಿಟ್ಟಾದಿರಿ'

'ರೋಹಿಣಿ ನನ್ನ, ನಿನ್ನ......'

'ತೊರೆಯುತ್ತಾಳೆಂದೋ'

'ಹುಂ'

'ಅಲ್ರಿ, ಅವರು ನಿಮಗೆ ನನ್ನ ಮದುವೆ ಮಾಡಿಸಿದ್ದು, ನಿಮಗೂ, ರೋಹಿಣಿಗೂ ಆಶ್ರಯ ಆಗಲೆಂದು'

'ಹೌದು ಹೌದು'

'ನಾನು ರೋಹಿಣಿಗೆ ಕಷ್ಟ ಕೊಡಬೇಕಿತ್ತು'

'ಹುಂ'

'ಆದರೆ ನೀವೆ ಅವಳ ಈ ಸ್ಥಿತಿಗೆ ಕಾರಣರಾದಿರಲ್ರಿ'

'ಛೇ.....' ಧರ್ಮರಾಯ ನಡಗತೊಡಗಿದ. ರೋಹಿಣಿ ಬೆಡ್‌ನ ಮೇಲೆ ಗತಪ್ರಾಣ ಉಳಿಸಿ ನರಳುತ್ತಿದ್ದಳು.

'ರೋಹಿಣಿ' ಹತ್ತು ಬಾರಿ ಧರ್ಮರಾಯ ಕರೆದಾಗ ಅವಳು ಕಣ್ಣು ಬಿಟ್ಟಳು. ಅಪ್ಪನನ್ನು ಕಂಡಾಗ ಪಕ್ಕನೆ ಕಣ್ಣು ಮುಚ್ಚಿದಳು. ಅವಳ ಮೈ ಕುದಿಯಲಾರಂಭಿಸಿತ್ತು.

ರೋಹಿಣಿ ಅಜ್ಜ, ಅಜ್ಜಿ ಅಲ್ಲಿಗೆ ಪೆಚ್ಚಾಗಿ ಹೆದರಿಕೊಂಡು ಬಂದರು. ರೋಹಿಣಿ ಅಜ್ಜ ಅವಳನ್ನು ಸವರುತ್ತಾ 'ರೋಹಿಣಿ' ಅಂದರು.

ರೋಹಿಣಿ ಕಣ್ಣು ತೆರೆದಳು. ಅಜ್ಜ ಅಜ್ಜಿಯನ್ನು ನೋಡಿದಳು.

'ಬಂದ್ಯಾ ಅಜ್ಜ' ಅಂದಾಗ ದ್ರೌಪದಿ, ಧರ್ಮರಾಯ ಬೆರಗಾದರು. ಒಂದು ವಾರದಿಂದ ಅವಳು ಮಾತಾಡಿರಲಿಲ್ಲ. ಅವಳ ಅಜ್ಜ ತಲೆ ಸವರಿದಾಗ ರೋಹಿಣಿ ಮುಖದಲ್ಲಿ ಮಂದಹಾಸದ ಬೆಳಕು ಮೂಡಿತು.

ರೋಹಿಣಿ ಅಜ್ಜ ಡಾ.ಸುಬ್ರಹ್ಮಣ್ಯನ್ನ ಸಂಧಿಸಿದರು.

'ಬನ್ನಿ ಬನ್ನಿ'

'ಹುಂ'

'ನಿಮಗೆ ರಾಷ್ಟ್ರಪ್ರಶಸ್ತಿ ಬಂದದ್ದು ಪತ್ರಿಕೆಯಲ್ಲಿ ಓದಿದೆ, ಅಭಿನಂದನೆಗಳು'

'ಆಗಲಿ ಸಾರ್, ರೋಹಿಣಿ ಸ್ಥಿತಿ ಹೇಗಿದೆ?'

'ಅವಳು ನಿಮಗೇನು ಆಗಬೇಕು?'

'ಮೊಮ್ಮಗಳು'

'ನನಗೆ ಗೊತ್ತೇ ಇರಲಿಲ್ಲ'

'ಹೌದು ಸಾರ್, ಅವಳಿಗೇನಾಗಿದೆ?'

'ಅವಳು ಚೆನ್ನಾಗಿದ್ದಾಳೆ. ರಕ್ತ, ಎದೆಬಡಿತ, ಉಸಿರು, ಕಫ ಎಲ್ಲಾ

ನಾರ್ಮಲ್ ಏನು ಚಿಕಿತ್ಸೆ ಮಾಡಿದರು ಅವಳು ಚೇತರಿಸುತ್ತಿಲ್ಲ'

'ಜೀವಕ್ಕೆ ಅಪಾಯವಿಲ್ಲವಲ್ಲ'

'ಹೇಳಲು ಸಾಧ್ಯವಿಲ್ಲ'

'ಅಯ್ಯೋ, ಅಯ್ಯೋ'

'ಗಾಬರಿಯಾಗಬೇಡಿ, ಅವಳನ್ನು ಡಿಸ್‌ಚಾರ್ಜ್ ಮಾಡಿಸುತ್ತೇನೆ. ಮನೋವೈದ್ಯರಲ್ಲಿಗೆ ಕರೆದುಕೊಂಡು ತೋರಿಸಿರಿ.

'ಆಗಲಿ ಸಾರ್'

ರೋಹಿಣಿಯನ್ನು ಡಾ.ಸುಬ್ರಹ್ಮಣ್ಯ ನೋಡಿದವರು ಆಶ್ಚರ್ಯಗೊಂಡರು. ಮೈ ಬಿಸಿ ಜ್ವರದ ಕಾವು ನಿಂತಿತ್ತು. ನಡುಕ ಇರಲಿಲ್ಲ. ಮುಗುಳು ನಗುತ್ತಿದ್ದಳು.

'ಈಗ ಹೇಗಿದೀಯ ರೋಹಿಣಿ'

'ನಾನೀಗ ವಾಸಿ'

'ಹೇಗೆ'

'ಅಜ್ಜ ಅಜ್ಜಿ ಬಂದರಲ್ಲಾ'

ಡಾ.ಸುಬ್ರಹ್ಮಣ್ಯರಿಗೆ ತಿಳಿಯಿತು ರೋಹಿಣಿ ರೋಗ.

'ನಾನು ರೋಹಿಣಿಯನ್ನು ಊರಿಗೆ ಕರೆದೊಯ್ಯಲೇ ಡಾಕ್ಟರ್'

'ಅಗತ್ಯವಾಗಿ'

ಧರ್ಮರಾಯ ದ್ರೌಪದಿ ಏನೂ ಮಾತಾಡಲಿಲ್ಲ.

'ಅಳಿಯಂದಿರೆ ನಿಮ್ಮ ಒಪ್ಪಿಗೆ ಇದೆಯಾ?'

'ಹುಂ'

'ರೋಹಿಣಿ ಬರತ್ತೀಯಾ?'

'ಹುಂ'

'ನಿಮ್ಮ ಅಂಟಿ-ಅಪ್ಪರಿಗೆ ಬೇಸರವಾಗುತ್ತಲ್ಲ'

'ಆಗೋಲ್ಲ'

'ಹೇಗೆ'

'ಅಪ್ಪನಿಗೆ ನಾನು ಹೋದರೆ ಸಾಕು ಅನ್ನಿಸಿದೆ. ಅಂಟಿಗೆ ಈಗ ಬೇಸರ, ಇನ್ನು ಆರು ತಿಂಗಳ ಮೇಲೆ ತಮ್ಮ ಬರುತ್ತಾನೆ. ಆಗ ಬೇಸರ ಮರೆಯುತ್ತಾರೆ'

'ಒಳ್ಳೆ ಸುದ್ದಿ' ಅವಳ ಅಜ್ಜ ಅಜ್ಜಿ ಸಂತೋಷದಿಂದ ದ್ರೌಪದಿಯ ಕಡೆ ನೋಡಿದರು. ಅವಳು ನಾಚಿಕೆಯಿಂದ ಮುಖ ತಗ್ಗಿಸಿದಳು.

ಅಂದೇ ರೋಹಿಣಿಯನ್ನು ಅವಳ ಅಜ್ಜ ಅಜ್ಜಿ ಅವರ ಊರಿಗೆ ಕರೆದೊಯ್ದರು. ರೋಹಿಣಿ ಉಲ್ಲಾಸದಿಂದ ಮೊದಲಿನಂತಾದಳು.

ಒಂದು ದಿನ ಧರ್ಮರಾಯ ಅವಳಿಗೆ ಫೋನ್ ಮಾಡಿದ.

'ಹೇಗಿದ್ದೀಯ ರೋಹಿಣಿ?'

'ಓ.ಕೆ.'

'ಇಲ್ಲಿಗೆ ಯಾವಾಗ ಬರುತ್ತೀಯ?'

'ಅಲ್ಲಿಗೆ ಬರುವ ಪ್ರಶ್ನೆ ಇಲ್ಲ'

ಧರ್ಮರಾಯ ಆತಂಕದಿಂದ ಪೆಚ್ಚಾದ.

'ರೋಹಿಣಿ'

'ಆರೋಗ್ಯಾನಾ ಅಂಟಿ'

'ನಮ್ಮಲ್ಲಿಗೆ ನೀನು ಬರುವುದಿಲ್ಲವೆ?'

'ಬರದೇ ಇರೊಕ್ಕೆ ಆಗುತ್ತಾ ಅಂಟಿ'

'ಸದ್ಯ ಧೈರ್ಯ ಬಂತು'

'ರಜಾದಲ್ಲಿ ತಪ್ಪದೇ ಬರುತ್ತೇನೆ'

'ಅಲ್ಲೇ ಇರುತ್ತೀಯಾ?'

'ಹುಂ'

ಅಂದಿನಿಂದ ಧರ್ಮರಾಯ ಕೊರಗತೊಡಗಿದ. ಕೆಲಸದಲ್ಲಿ ಆಸಕ್ತಿ ಕಮ್ಮಿಯಾಯಿತು.

'ಏನ್ರಿ ಹೀಗೇಕೆ ಆದ್ರಿ?'

'ರೋಹಿಣಿ ನನ್ನ ಕೈ ತಪ್ಪಿದ ಹಾಗೆ?'

'ನೀವೇ ಮಾಡಿಕೊಂಡಿದ್ದು'

'ಹೌದು ಕಣೆ'

ಧರ್ಮರಾಯ ಈಗ ಆತಂಕದಿಂದ ಬೆಂದು ಹೋದ. ಸಣ್ಣ ಮಗುವಾಗಿಲಿಂದ ತಾಯಿಗಿಂತ ತನ್ನ ಹಚ್ಚಿಕೊಂಡಿದ್ದ ರೋಹಿಣಿ ಇದ್ದಕ್ಕಿದ್ದ ಹಾಗೆ ನನ್ನ ದ್ವೇಷಿಸಲು ಕಾರಣ ನನ್ನದೇ ಅಪರಾಧ. ಹೀಗೆ ಅವನು ನೀರಸದಿಂದ ದಿನದೂಡುತ್ತಿದ್ದ. ದ್ರೌಪದಿ ಅವನನ್ನು ಆದಷ್ಟು ಉಲ್ಲಾಸನನ್ನಾಗಿ ಮಾಡುತ್ತಿದ್ದಳು.

ಬೇಸಿಗೆ ರಜ ಕಳೆಯಿತು. ಶಾಲೆ ಪ್ರಾರಂಭ. ಧರ್ಮರಾಯ ತುಂಬಾ ಬಳಲಿದ. ಪ್ರತಿ ವರ್ಷ ರೋಹಿಣಿಯನ್ನು ಶಾಲೆಗೆ ಸೇರಿಸುವುದು, ಪುಸ್ತಕಗಳನ್ನು, ಚೀಲ ರಬ್ಬರ್, ಪೆನ್ಸಿಲ್, ಯೂನಿಫಾರಂ, ಬೂಟ್ಸ್, ತಂದು ಅವಳೊಡನೆ ಕಳೆಯುವುದು ನೆನಪಾಗಿ ಕಣ್ಣೀರು ಸುರಿಸಿದ. ಗೇಟಿನ ಶಬ್ದವಾಯಿತು. 'ಯಾರ್‍ರಿ' ದ್ರೌಪದಿ ಒಳಗಿನಿಂದ ಕೇಳಿದಳು. ಧರ್ಮರಾಯ ಬಾಗಿಲಿಗೆ ಬಂದು ನೋಡಿದಾಗ ಆಶ್ಚರ್ಯಗೊಂಡ. ರೋಹಿಣಿ, ಅವಳ ಅಜ್ಜ ಅಜ್ಜಿ ಬಂದರು.

'ಅಪ್ಪ ಶಾಲೆಗೆ ಅಡ್ಮಿಷನ್ ಮಾಡಿ ಆಯಿತಾ'

'ಮಾಡೋಣ'

ಧರ್ಮರಾಯನ ಆತಂಕ ಕಳೆದು ಆಗ ಆನಂದ ತುಂಬಿತ್ತು.

'ಅಳಿಯಂದಿರೆ, ಪ್ರತಿ ರಜಕ್ಕೆ ರೋಹಿಣಿಯನ್ನು ಕಳಿಸಿರಿ'

'ಆಗಲಿ ಮಾವ'

ದ್ರೌಪದಿ ಈ ದೃಶ್ಯ ಕಂಡು ಆನಂದಿತಳಾದಳು.

■ ಶ್ರೀನಿವಾಸ ಉಡುಪ

ಸಫಲತೆಯ ಮೂಲಮಂತ್ರ

ನೇಬುನಾಗಾ ಜಪಾನಿನ ಪ್ರಸಿದ್ಧ ಸೇನಾಪತಿಯಾಗಿದ್ದ. ಶತ್ರುದೇಶದ ಸೇನೆಗಿಂತ ಅವನ ಸೇನೆ ತುಂಬಾ ಸಣ್ಣದಿತ್ತು. ಆದರೆ ತಾನೇ ಗೆಲ್ಲುವೆನೆಂಬ ಪೂರ್ತಿ ಆತ್ಮವಿಶ್ವಾಸ ಅವನಿಗಿತ್ತು. ಹೀಗಾಗಿ ಶತ್ರು ದೇಶದ ಮೇಲೆ ದಾಳಿಯಿಡಲು ನಿಶ್ಚಯಿಸಿದ.

ಸೇನಾಪತಿ ನೇಬುನಾಗಾನ ಸೈನಿಕರ ಮೋರೆಗಳು ಕಳೆಗುಂದಿದ್ದವು. ಏಕೆಂದರೆ ಶತ್ರು ಸೈನಿಕರ ಸಂಖ್ಯೆ ಹಾಗೂ ಶಕ್ತಿ ಅವರಿಗೆ ಚೆನ್ನಾಗಿ ತಿಳಿದಿತ್ತು. ಆದರೆ ಸೇನಾಪತಿಯ ಆಜ್ಞೆಗೆ ಅವರು ತಲೆಬಾಗಲೇಬೇಕಷ್ಟೆ!

ತನ್ನ ಸೈನಿಕರ ಕಳವಳವನ್ನು ಗಮನಿಸಿ ನೇಬುನಾಗಾ ದಾರಿಯಲ್ಲಿರುವ ಒಂದು ದೇವಾಲಯದೆದುರು ನಿಂತು ಸೈನಿಕರಿಗೆ ಇಂತೆಂದ : ನಾನು ವಿಜಯಕ್ಕಾಗಿ ದೇವರನ್ನು ಪ್ರಾರ್ಥಿಸಲು ಹೋಗುತ್ತಿದ್ದೇನೆ. ದೇವರು ನನ್ನ ಪ್ರಾರ್ಥನೆಯನ್ನು ಸ್ವೀಕರಿಸಿದನೆ? ಇಲ್ಲವೇ! ಎಂಬುದನ್ನು ಹೊರಬಂದು ನಾಣ್ಯ ಚಿಮ್ಮಿ ನಿರ್ಧರಿಸುವೆ.

ನೇಬುನಾಗಾ ತುಸು ಹೊತ್ತಿನಲ್ಲೇ ಹೊರ ಬಂದ. ಆ ಬಳಿಕ ಸೈನಿಕರೊಡನೆ ನಾಣ್ಯ ಅಂಗಾತನೆ ಬಿದ್ದರೆ ನಮಗೆ ಜಯ ಖಂಡಿತ. ಬೋರಲಾಗಿ ಬಿದ್ದರೆ ನಾವು ಸೋಲುವ ಬದಲು ವಾಪಾಸು ಹೋಗೋಣ' ಎಂದ. ಸೈನಿಕರ ಮೋರೆಗಳು ಆನಂದದಿಂದ ಅರಳಿದವು.


ಸೇನಾಪತಿ ನಾಣ್ಯವನ್ನು ಮೇಲಕ್ಕೆಸೆದ. ರಾಜನ ಮುಖ ಮೇಲಾಗಿ ಬಿತ್ತು. ಎಲ್ಲ ಸೈನಿಕರೂ ಉತ್ಸಾಹದಿಂದ ಕುಣಿದಾಡಿದರು. ಅವರ ಆತ್ಮವಿಶ್ವಾಸ ಮರಳಿದುದನ್ನು ಕಂಡು ಸೇನಾಪತಿ ನೇಬುನಾಗಾ ಶತ್ರುಸೇನೆಯ ಮೇಲೆ ದಾಳಿಯಿಟ್ಟ. ಅನಿರೀಕ್ಷಿತ ಆಕ್ರಮಣದಿಂದ ಶತ್ರುಸೇನೆ ಗಾಬರಿಯಾಯಿತು. ಅವರು ರಣರಂಗದಿಂದ ಓಟಕಿತ್ತರು.

ವಿಜಯೋನ್ಮಾದದಿಂದ ಬೀಗುತ್ತ ತಮ್ಮ ಸ್ಥಾನಕ್ಕೆ ಮರುಳುತ್ತಿರುವ ಸೈನಿಕರು ಉತ್ಸಾಹದಿಂದ 'ಸೇನಾಪತಿಗಳೇ... ಇದೆಲ್ಲ ನಾಣ್ಯದ ಚಮತ್ಕಾರ. ಅಂಗಾತನೆ ಬಿದ್ದು ನಮ್ಮ ವಿಜಯಮಾರ್ಗವನ್ನು ಪ್ರಶಸ್ತಗೊಳಿಸಿತು' ಎಂದರು. ಸೈನಿಕರ ಮಾತು ಕೇಳಿ ಮುಗುಳ್ನಗುತ್ತಾ ನೇಬುನಾಗಾ ಇಂತೆಂದ: ಇದೆಲ್ಲವೂ ವೀರ ಸೈನಿಕರಾದ ನಿಮ್ಮೆಲ್ಲರ ಆತ್ಮವಿಶ್ವಾಸದ ಚಮತ್ಕಾರ. ಏಕೆಂದರೆ ಈ ವಿಶಿಷ್ಟ ನಾಣ್ಯದ ಎರಡೂ ಬದಿಗಳಲ್ಲಿ ರಾಜನ ಮುಖವಿದೆ!'

■ 'ಅಡಿಗ'

ಪತ್ರ ಪುರಾಣ

ಹೆಸರಿನ ಸಾಮ್ಯದಿಂದಾಗಿಯೇ ನನ್ನನ್ನು ಚಿತ್ರನಟನೆಂದು ಭಾವಿಸಿ ಫೋಟೋ ಕಳುಹಿಸಲು ಕೋರಿದವರುಂಟು. ಕಥೆಗೆ ಬಹುಮಾನ ಬಂದಾಗ, ಹೆಂಡತಿಯ ಕಾಯಿಲೆ ವಾಸಿಮಾಡಲು ಬಂದ ಹಣದಲ್ಲಿ ಅರ್ಧ ಕಳುಹಿಸುವಂತೆ ಕೋರಿದ ಪತ್ರ ಬಂದಿದ್ದೂ ಇದೆ.



ದೀಪಾವಳಿ ಸ್ಪರ್ಧೆಯಲ್ಲಿ ಮೆಚ್ಚುಗೆ ಪಡೆದ ಪ್ರಬಂಧ

ವಿಷ್ಣುಪುರಾಣ ದಶಾವತಾರಕ್ಕೇ ಸೀಮಿತದ್ದು. ಆದರೆ ಈ ಪತ್ರಪುರಾಣ ಸಹಸ್ರಾವತಾರಕ್ಕೂ ಮಿಗುವ ವಿರಾಟ್‌ಸ್ವರೂಪದ್ದು. ನಮ್ಮ ಕೈ ಸೇರುವ ಒಂದೊಂದು ಪತ್ರವೂ ಒಂದೊಂದು ಆಯಾಮದ ದರ್ಶನ ಮಾಡಿಸುತ್ತದೆ ಎಂಬುದು ನನ್ನ ಇತ್ತೀಚಿನ ಆವಿಷ್ಕಾರ.

ಕೆಲವು ಪತ್ರಗಳು ಚೆಲುವೆಯರ ಮಿನಿಸ್ಕರ್ಟಿನ ಹಾಗೆ. ಅತ್ಯಂತ ಆಕರ್ಷಕ. ಸಂಕ್ಷಿಪ್ತವಾಗಿ, ತಿಳಿಸಬೇಕಾದ್ದನ್ನು ಖಚಿತವಾಗಿ ತಿಳಿಸುವಂಥವು. Covering what to be covered! ಮತ್ತೆ ಕೆಲವು ಹದಿನಾರು ಮೊಳದ ಜರತಾರಿ ಸೀರೆಗಳ ಹಾಗೆ. ದೀರ್ಘ, ಉಡಲೂ ಬಿಚ್ಚಿಡಲೂ ವೇಳೆ ಬೇಡುವ ವರ್ಗದವು.

ಪ್ರತಿ ಪತ್ರವನ್ನು ಅಂಚೆಯ ಅಣ್ಣನೆಂಬ ದೇವದೂತನಿಂದ ಸ್ವೀಕರಿಸುವಾಗಲೂ, ಎದೆಯ ಡವಡವದ ಸದ್ದು ನಗಾರಿಯ ನಾದ ನೂರುಪಟ್ಟು ಹೆಚ್ಚಿನದಾಗಿರುತ್ತದೆ. ಆತಂಕದ ಸುದ್ದಿಯೋ, ಆನಂದ ವೃದ್ಧಿಸುವ ವಿಚಾರವೋ, ಲಗ್ನ ಪತ್ರಿಕೆಗಳೋ ಅಂತೂ ಆ ಕ್ಷಣದ ಅನುಭವಗಳು ಹಲವು ಭಾವಗಳ ಕಲಸುಮೇಲೋಗರ. ಲಗ್ನಪತ್ರಿಕೆಗಳು ಅಂಚೆಯಲ್ಲಿ ಬಂದರೆ ಆತಂಕವೇ ಎಂದು ನೀವು ಪ್ರಶ್ನಿಸುವುದಿಲ್ಲವೆಂದು ಭಾವಿಸುತ್ತೇನೆ. ಏಕೆಂದರೆ ಭಾಷೆಯ ನಿರಂತರ ಪ್ರವಾಹದಲ್ಲಿ ಒಂದು ಶಬ್ದದ ಉಪಯೋಗ ಹೆಚ್ಚಿದ ಹಾಗೆ ಅದರ ಅರ್ಥಗಳು ನಾನಾ ದಿಕ್ಕಿನಲ್ಲಿ ಟಿಸಿಲೊಡೆದು, ಕೊನೆ ಕೊನೆಗೆ ಮೂಲಾರ್ಥಕ್ಕೂ ಚಲಾವಣೆಯ ಅರ್ಥಕ್ಕೂ ಸಂಬಂಧವೇ ಇರದಿರುವುದು ಅತ್ಯಂತ ಕುತೂಹಲಕಾರಿ ಸಂಗತಿ. ಉದಾಹರಣೆ ಬೇಕೆ? ಸಭಿಕ - ಎಂದರೆ ಈಗಿನ ಅರ್ಥ ಸಭೆಯಲ್ಲಿ ಕುಳಿತಿರುವ ಸಭ್ಯ, ನಾಗರಿಕ. ಮೂಲಾರ್ಥ? ವಿಷಯಾಸಕ್ತ, ಲಂಪಟ, ಜಾರ! ಹಾಗೆಯೇ ಈ 'ಲಗ್ನಪತ್ರಿಕೆ' ಎನ್ನುವುದು.

ಇದು ಮದುವೆಯ ಮಮತೆಯ ಕರೆಯೋಲೆಯಲ್ಲ. ಆದರದಿ ಆಹ್ವಾನಿಸಿ ಔತಣ ನೀಡುವ ಪ್ರೀತಿಯ ಪತ್ರವಲ್ಲ. ಇದು 'ನೋಟೀಸ್'. ಬ್ಯಾಂಕಿನಿಂದ ಬಂದ ಬೇಕಿಲ್ಲದ ಬರಹವಿರಬಹುದು ಅಥವ ಜೀವವಿಮೆ ಇಲಾಖೆಯವರ ಪ್ರೀತಿಯ ಪ್ರೀಮಿಯಂ ಎಚ್ಚರಿಕೆ ಇರಬಹುದು. ಕೆಲವೇಳೆ ಇಂಥ, ನಮ್ಮನ್ನು ನಡು ಬೀದಿಯಲ್ಲಿ 'ನಗ್ನ' ಗೊಳಿಸುವ 'ಲಗ್ನಪತ್ರಿಕೆಗಳು ರಿಜಿಸ್ಟರ್ಡ್ ಅಂಚೆಯಲ್ಲಿ ಬಂದು ಸಹಿ ಹಾಕಿ ಸ್ವೀಕರಿಸುವಾಗ ಎದೆಯಲ್ಲಿ ಅವಲಕ್ಕಿ ಕುಟ್ಟಿದ ಹಾಗೆ. ಬದುಕಿನಲ್ಲಿ ಸೋತು ಹೋದ ಭಾವ.

ಇಂತಹ ಸಾವಿರ ಸೋಲುಗಳ ಸಂದಿಯಲ್ಲೂ ಒಮ್ಮೊಮ್ಮೆ ವಿಶಿಷ್ಟ ರೀತಿಯ ಪತ್ರಗಳು ಬರುತ್ತವೆ. ಒಂದು ಪ್ರತಿಷ್ಠಿತ ಪತ್ರಿಕೆಯ ಸಂಪಾದಕರು ಕಳುಹಿಸಿದ ಲೇಖನ/ಕವನ/ಸ್ವೀಕೃತಿ ಪತ್ರ ಸಾವಿರ ಸೋಲುಗಳ ಹತಾಶೆಯನ್ನು ಮೆಟ್ಟಿ ನಿಲ್ಲುತ್ತದೆ. ಅಭಿಮಾನಿಗಳಿಗೆ, ಹಿತಚಿಂತಕರಿಗೆ ಅದನ್ನು ತೋರಿಸುವಾಗ ಅದೆಷ್ಟು ಉತ್ಸಾಹವಿರುತ್ತದೆಂದರೆ - ಅವರು ಟಾಯ್ಲೆಟ್ಟಿನಲ್ಲಿದ್ದರೂ ಸರಿಯೇ - ಮೂಗು ಕಿವಿಗಳನ್ನು ಮುಚ್ಚಿಕೊಂಡು ಅಲ್ಲಿಯೇ ಕಾದು ಈಚೆ ಬಂದ ನಂತರ ಎದುರು ಹಿಡಿದು ಖುಷಿ ಹಂಚಿಕೊಳ್ಳುವಷ್ಟು! ಇಂಥ ಪುಟ್ಟ ಪತ್ರಗಳ ಪ್ರಭಾವ ತೀರಾ ಪರಿಣಾಮಕಾರಿ.

ಇನ್ನು ಕೆಲವು ಪತ್ರಗಳು ಬರುತ್ತವೆ. ಬರೆಯಲು ಸಮಯದ ಅಭಾವವೋ, ಅನಾದರವೋ - ಅರ್ಥವಾಗದ ಪತ್ರಗಳು. ಒಂದೇ ಓದಿಗೆ ಅರ್ಥಮಾಡಿಕೊಂಡರೆ ಪಿ.ಹೆಚ್.ಡಿ. ಪಡೆದಷ್ಟೇ ಸಾಧನೆ. ಒಮ್ಮೊಮ್ಮೆ ಇದು ಕನ್ನಡವೂ ಅಲ್ಲದ, ಆಂಗ್ಲವಾಗಲು ಸಾಧ್ಯವಿಲ್ಲದ, ಅದ್ಯಾವುದೋ ಅಪರಿಚಿತ ಭಾಷೆಯ ತೀರಾ ಕಗ್ಗಂಟು ಲಿಪಿ ವಿನ್ಯಾಸದ ಸೌರವ್ಯೂಹದ ಆಚೆಗಿನ ಪತ್ರ ಎಂಬ ಭಾವನೆ ಬೆಳೆಸುವಷ್ಟರ ಮಟ್ಟಿಗೆ ಲಿಪಿಕಾರ ಯಶಸ್ಸು ಸಾಧಿಸಿರುತ್ತಾನೆ! ಆತ / ಆಕೆ ಏನು ಹೇಳಲೆತ್ನಿಸಿದ್ದಾರೆ ಎನ್ನುವುದನ್ನು ತಿಳಿಯಲು ಮುಖತಃ ಭೇಟಿ ಮಾಡಿ ಅವರ ಪತ್ರವನ್ನು ಅವರ ಎದುರೇ ಹಿಡಿದರೂ ಅವರೇ ಗೊಂದಲಗೊಳ್ಳುವ ಪರಿಸ್ಥಿತಿ ಎದುರಾಗುವುದು ಶತಃಸಿದ್ಧ.

ತಿಂಗಳ ಹಿಂದೆ ಒಂದು ಪತ್ರ ಬಂದಿತು. ಆರನೇ ತರಗತಿಯ ಪೋರಿಯೊಬ್ಬಳು ಮುದ್ದುಮುದ್ದಾಗಿ 'ಅಂಕಲ್, ನಿಮ್ಮ ಫೋಟೋ ಕಳಿಸಿಕೊಡಿ' ಎಂದು ವಿನಂತಿಸಿದ್ದಳು. ನನಗೆ ವಿಪರೀತ ಖುಷಿಯಾಯಿತು. ನನ್ನ ಕಥೆಗಳನ್ನು ಓದಿ ಆರನೇ ತರಗತಿಯ ಬಾಳೆಹೊನ್ನೂರಿನ ಹುಡುಗಿಯೊಬ್ಬಳು ಪತ್ರ ಬರೆದು ಫೋಟೋ ಕೇಳಿದ್ದಾಳಲ್ಲ ಎಂಬ ಉತ್ಸಾಹದಲ್ಲಿ ಪತ್ರ ಬರೆದು ಫೋಟೋ ಇಟ್ಟು ಕವರ್ ಅಂಟಿಸಿದೆ. ಆದರೆ ಏನೇನೋ ಇಕ್ಕಟ್ಟುಗಳಲ್ಲಿ ಸಿಲುಕಿ ಅಂಚೆಯ 'ಡೇಂಜರ್‌ಡಬ್ಬ'ಕ್ಕೆ ಹಾಕಲು ಮರೆತುಬಿಟ್ಟೆ. ಮತ್ತೆ ಆ ಹುಡುಗಿಯಿಂದ ವಿನಂತಿ ಅಂಚೆಯಲ್ಲಿ ಆಗಮಿಸಿತು. ಈ ಬಾರಿ ಇನ್ನೂ ಸ್ಪಷ್ಟವಾಗಿ ಬರೆದಿದ್ದಳು ''ನಿಮ್ಮ 'ಹಬ್ಬ' 'ಒಡಹುಟ್ಟಿದವರು' ಚಿತ್ರಗಳ ಫೋಟೋ ಕಳಿಸಿ ಕೊಡಿ!'' ಇದನ್ನು ಓದಿ ನಾನು ಧರೆಗಿಳಿದು ಹೋದೆ. ಪಾಪ, ಯಾವುದೋ ಪತ್ರಿಕೆಯಲ್ಲಿ ಅಚ್ಚಾಗಿದ್ದ ಕಥೆಯ ಮೇಲ್ಭಾಗದಲ್ಲಿದ್ದ ವಿಳಾಸ

ಗಮನಿಸಿ, ನಾನೇ ಚಿತ್ರನಟ ಎಂದು ತಪ್ಪಾಗಿ ಭಾವಿಸಿ ಪತ್ರ ಬರೆದಿದ್ದಳು! ಕೊನೆಗೆ ನಾನೇ ಚಿತ್ರನಟನ ಎರಡು ಭಂಗಿಗಳ ಫೋಟೋ ಕಳುಹಿಸಿ, ಅವರ ವಿಳಾಸವನ್ನು ಬರೆದು ಅವರ ತಲೆನೋವು ಹೆಚ್ಚಿಸಲು ಕಾರಣನಾಗಬೇಕಾಯಿತು. ಒಂದೇ ಹೆಸರಿನ ಗೊಂದಲದಿಂದುಟಾದ ಪ್ರಸಂಗವಿದು.

'ನಿಮ್ಮ ಹೆಸರನ್ನು ಗಮನಿಸುತ್ತಿದ್ದೆ. ಆದರೆ ಓದುತ್ತಿರಲಿಲ್ಲ. ಈ ಬಾರಿ ನಿಮ್ಮ ಊರಿನ ಹೆಸರು ಬಳಸಿಕೊಂಡಿದ್ದೀರಿ. ಅದಕ್ಕೆ ಓದಿದೆ. ಪರವಾಗಿಲ್ಲ ಎನಿಸಿದರೂ ತೃಪ್ತಿಯಾಗಲಿಲ್ಲ. ಇನ್ನು ಮುಂದೆ ಇನ್ನೂ ಚೆನ್ನಾಗಿ ಬರೆಯುವ ಶಕ್ತಿ ದೇವರು ನಿಮಗೆ ಕೊಡಲಿ!' ಎಂಬ ಧಾಟಿಯ ಪತ್ರಗಳು ಅಂಚೆಯ ಅಣ್ಣನಿಂದ ರವಾನೆಯಾಗುತ್ತವೆ. ಆಹಾ, ಎಂಥಾ ಅಭಿಮಾನಿ! ಹೆಸರನ್ನು ಮಾತ್ರ ಓದಿ ಕಥೆ ಲೇಖನವನ್ನು ಓದುತ್ತಲೇ ಇರಲಿಲ್ಲವಂತೆ! ಇಂಥವರು ನಿರಂತರವಾಗಿ ಪತ್ರ ಬರೆಯುತ್ತಿದ್ದರೆ ನನ್ನ ಲೇಖನ ಕೃಷಿ ಯಾವ ರೀತಿಯಲ್ಲಿ ಕೃಶವಾಗುತ್ತದೆಂದು ನೀವೇ ಊಹಿಸಿಕೊಳ್ಳಿ.


ಹೆಂಡತಿ ಹೀಗೆಳೆಯುವ ಹಾಗೆ, ಮಕ್ಕಳು ಛೇಡಿಸುವ ಹಾಗೆ ವಿಷಾದ ಪತ್ರಗಳು ಆಗಾಗ್ಗೆ ಹಾಜರಿ ಹಾಕುತ್ತಿರುತ್ತವೆ. ಹತ್ತು ತಿಂಗಳು ಹೊತ್ತು ಯಾತನೆ ಅನುಭವಿಸಿ, ಹೆರುವ ಸಮಯದಲ್ಲಿ ಕೂಸು ಬದುಕುಳಿಯದಿದ್ದರೆ, ಆ ತಾಯಿಯ ವೇದನೆ ಎಷ್ಟಿರುತ್ತದೆ? ಆ ವೇದನೆಯಷ್ಟೇ ವ್ಯಥೆ ತರುವುದು ಈ ವಿಷಾದ ಪತ್ರಗಳು. ''ನೀವು ಸ್ಟಾಂಪಿಗೆ, ಕವರುಗಳಿಗೆ ಖರ್ಚು ಮಾಡಿರುವ ದುಡ್ಡಿನಲ್ಲಿ ಒಂದು ಮನೆ ಕಟ್ಟಿಸಬಹುದಾಗಿತ್ತು'' ಎಂದು ಮಡದಿ ಮೂತಿ ತಿವಿಯುವಷ್ಟು ಪರಿಣಾಮ ಬೀರುವ ಇವು ಪರಮಾಣು ಬಾಂಬಿನ ಹಾಗೆ. ಆತ್ಮಸ್ಥೈರ್ಯವನ್ನು, ಆತ್ಮವಿಶ್ವಾಸವನ್ನೂ, ಹಿರೋಷಿಮಾದಂತೆ ಮಾಡುವ ಪ್ರಭಾವವುಳ್ಳದ್ದು ಈ ಪುಟ್ಟ ಪತ್ರ ಪಿಶಾಚಿಗಳು!

ಕೆಲವೊಮ್ಮೆ ಅಂಚೆಯಲ್ಲಿ ಬರುವ ಕೆಲವು ಪತ್ರಗಳು ಏಕ್‌ದಂ ಖುಷಿಕೊಟ್ಟುಬಿಡುತ್ತವೆ. ಅವು ನಮ್ಮ ಹೆಸರಿಗೆ ಒಂದಷ್ಟು ಗೌರವಧನವನ್ನು ಹೊತ್ತು ತರುವ ಚೆಕ್ಕುಗಳು. ಸಾಕಷ್ಟು ಬಾರಿ ಊಹಿಸಿದ್ದಕ್ಕಿಂತ ಕಡಿಮೆಯಾಗಿ, ಒಂದೊಂದು ಬಾರಿ ಕಲ್ಪಿಸಿಕೊಳ್ಳಲಾಗದಷ್ಟು ದೊಡ್ಡ ಮೊತ್ತದ ಅಡ್ಡಗೀಟಿನ ನಾಲ್ಕೈದು ವಿಚಿತ್ರ ಸಹಿಗಳ ಚೆಕ್ ಬಂದ ತಕ್ಷಣ ಮನಸ್ಸು ಸಂಭ್ರಮಿಸುತ್ತದೆ.

ಈ ಪತ್ರಗಳು ಧನರೂಪಿಯಾದರೆ ಕೆಲವು ಪತ್ರಗಳು ವಿಶ್ವಾಸರೂಪಿ. ಮೈಸೂರಿನಲ್ಲಿರುವ ಕನ್ನಡದ ಖ್ಯಾತ ಸಾಹಿತಿಯೊಬ್ಬರಿಗೆ ಯಾವುದೇ ವಿಚಾರವಾಗಿ ನೀವು ಬರೆದರೂ ಮರು ಟಪಾಲಿನಲ್ಲಿ ಪುಟ್ಟ ಪ್ರತ್ಯುತ್ತರ ಪತ್ರ ಪ್ರತ್ಯಕ್ಷ. ಅತ್ಯಂತ ದುಂಡಾದ ಸ್ಪಷ್ಟವಾದ ಅಕ್ಷರಗಳಲ್ಲಿ ಧನ್ಯವಾದ ತಿಳಿಸಿ ಕ್ಷೇಮ ವಿಚಾರಿಸುವ ಕಾಗದ. ಇಂಥವುಗಳನ್ನು 'ಆ್ಯಂಟಿಕ್' (Antique)ಗಳಂತೆ ಕಾಪಿಡುವುದು ಎಂದು ನಿರ್ಧರಿಸುವ ಮಟ್ಟಕ್ಕೆ ನಮ್ಮನ್ನು ಕೊಂಡೊಯ್ಯತ್ತದೆ. ಪ್ರೀತಿ-ವಿಶ್ವಾಸಗಳ ಸೌಗಂಧವನ್ನೇ ಹೊತ್ತು ತರುವ ಈ ಪತ್ರಗಳ ಮೌಲ್ಯ ಅಪಾರ.

ಇದಕ್ಕೆ ವಿರುದ್ಧವಾಗಿ ಕೆಲವರು ಪ್ರತಿಕ್ರಿಯಿಸುತ್ತಾರೆ. ಅವರ ಕಥೆಗೋ, ಕವನಕ್ಕೋ ನೀವು ಮಾರುಹೋಗಿ ಪತ್ರ ಬರೆದರೆ ಅವರು ಬರೆಯಲೋ ಬೇಡವೋ ಎಂಬಂತೆ ಅಂಚೆ ಕಾರ್ಡಿನ ಹೊರ ಬದಿಯಲ್ಲಿ 'ಧನ್ಯವಾದ' ಎಂದಿಷ್ಟೇ ಸಂದೇಶ ನೀಡಿ ತಮ್ಮ ಸಹಿಯನ್ನೂ ಮಾಡದೆ ಅದರ ಹೆಸರಿನ ಸ್ಟಿಕರ್ ಅಂಟಿಸಿರುತ್ತಾರೆ! ಇಂಥವರನ್ನು ಲೇವಡಿ ಮಾಡಲು ಕೆಲವರು ಬೇಕಾಗಿಯೇ ಪತ್ರ ಬರೆದು ಈ ರೀತಿಯ ಮಾರುತ್ತರ ಪಡೆಯುತ್ತಾರೆಂಬುದಂತೂ ಕಟು ಸತ್ಯ.

'ಕಲಿಯುಗದಲ್ಲಿ ಶ್ರೀ ವೆಂಕಟರಮಣಸ್ವಾಮಿ ಅವತಾರ' ಎಂಬ ಶೀರ್ಷಿಕೆಯಡಿಯಲ್ಲಿ, ''ನೀವು ಇದೇ ರೀತಿ ಪತ್ರಗಳನ್ನು ಅಚ್ಚು ಹಾಕಿಸಿ 1116 ಪ್ರತಿಗಳನ್ನು ಹಂಚಿರಿ. ನಿಮಗೆ ಧನಲಾಭವಾಗುತ್ತದೆ. ಇಲ್ಲದಿದ್ದರೆ ಆತ್ಮೀಯರು ಸತ್ತು ಇರುವ ಹಣವೆಲ್ಲಾ ಇದ್ದ ಜಾಗದಲ್ಲೇ ಮಾಯವಾಗಿ ದೌರ್ಭಾಗ್ಯ ಪ್ರಾಪ್ತಿಯಾಗುತ್ತದೆ'' ಎಂದು ಹೆದರಿಸುವ ಪತ್ರಗಳೂ ಬರುತ್ತವೆ. ನಮ್ಮ ಪತ್ರಿಕೆಗೆ ಚಂದಾದಾರರಾಗಿರಿ. ಆಕರ್ಷಕ ಬಹುಮಾನ ಪಡೆಯಿರಿ ಎಂಬ ಬಹುವರ್ಣ ಪತ್ರಗಳೂ ಬರುತ್ತವೆ. ಅದು ಹೇಗೆ ವಿಳಾಸ ಅರಿಯುತ್ತಾರೋ ಆ ದೇವರೇ ಬಲ್ಲ!



ಕೆಲವು ಪತ್ರಗಳದು ದೇವರ ಕೂರ್ಮಾವತಾರ-ಅರ್ಥಾತ್-ಆಮೆಯ ನಡಿಗೆ. ಅಂಚೆಗೆ ಹಾಕಿದ ಹತ್ತಾರು ತಿಂಗಳುಗಳ ನಂತರ ನೂರೆಂಟು ಕಪ್ಪು ಮುದ್ರೆ ಧರಿಸಿ ತೆವಳಿ ತೆವಳಿ ತಲುಪುತ್ತವೆ. ಮದುವೆಯ ಸಂದರ್ಭದಲ್ಲಿ ಹಾಕಿದ್ದು, ಮಗುವಿನ ನಾಮಕರಣದ ವೇಳೆಗೆ ಸರಿಯಾಗಿ ಸಿಗುತ್ತದೆ! 'ತುರ್ತಾಗಿ ಸೋಮವಾರ ಸಂಧಿಸಿ' ಎಂಬ ಒಕ್ಕಣೆಯ ಪತ್ರ ಖಚಿತವಾಗಿ ಮಂಗಳವಾರ ತಲುಪಿ, ಬುಧವಾರ ಮುಖಾಮುಖಿಯಾದ ಸಂದರ್ಭದಲ್ಲಿ ಮುಖದ ತುಂಬಾ ಬೆವರು ಹರಿಯುವ ಪರಮಸೌಭಾಗ್ಯವೂ ಒಮ್ಮೊಮ್ಮೆ ಪ್ರಾಪ್ತಿ ಆಗುತ್ತದೆ.

ಒಮ್ಮೆ ನನ್ನ ಒಂದು ಕಥೆಗೆ ಬಹುಮಾನ ಬಂದಿತ್ತು. ಮುಂದಿನ ಅಂಚೆಯಲ್ಲಿ ಅಭಿನಂದಿಸುವ ಪತ್ರಗಳು ಬಂದಾವು ಎಂದು ಕಾದರೆ ಬಂದಿದ್ದು ಒಂದು ವಿಶಿಷ್ಟ ಪತ್ರ. ''ಸ್ವಾಮಿ, ನಾನು ತುಂಬಾ ಕಷ್ಟದಲ್ಲಿದ್ದೇನೆ. ಹೆಂಡತಿಗೆ ಕಾಯಿಲೆ. ಮಕ್ಕಳ ಫೀಸು ಕಟ್ಟಿಲ್ಲ. ಈಗ ಬರುವ ಬಹುಮಾನದ ಹಣದಲ್ಲಿ ಅರ್ಧಭಾಗವನ್ನಾದರೂ ಕಳಿಸಿ ಪುಣ್ಯ ಕಟ್ಟಿಕೊಳ್ಳಿ!''. ಇಂಥ ಪತ್ರಗಳಿಗೆ ಯಾವ ರೀತಿ ಪ್ರತಿಕ್ರಿಯಿಸಬೇಕು ಎಂದು ಅರ್ಥವಾಗದೇ ತಲೆ ಕೆಡಿಸಿಕೊಂಡಿದ್ದಾಗ, ಮತ್ತೆ ಆ ವ್ಯಕ್ತಿಯಿಂದ, ''ನಿಮಗೆ ಮಾನವೀಯತೆಯೇ ಇಲ್ಲ !'' ಎಂಬ ಷರಾ ಪತ್ರ ತಲುಪಿತು! ಇದನ್ನು ಓದಿ ನನ್ನ ಮಡದಿಯಂತೂ ''ಸರಿಯಾಗಿ ಬರೆದಿದ್ದಾನೆ'' ಎಂದು ಘೋಷಿಸಿದ್ದೂ ಆಯಿತು!

ಮುದ್ದಾದ ಅಕ್ಷರಗಳಲ್ಲಿ ವಿಳಾಸ ಬರೆದಿದ್ದ ಅಂತರ್ದೇಶೀಯ ಪತ್ರವೊಂದು ವಾರದ ಹಿಂದೆ ಕೈಸೇರಿತು. ತೀರಾ ಅಪರಿಚಿತ ಕೈ ಬರಹದ್ದಾದ್ದರಿಂದ ಕುತೂಹಲದಿಂದ ಬಿಡಿಸಿದೆ.

''ಆತ್ಮೀಯರೇ, ನಿಮ್ಮ ಕಥೆ ಓದಿದೆ. ಸಂತೋಷವಾಯಿತು. ಮುಖ್ಯ ವಿಷಯವೆಂದರೆ ಈ ಪತ್ರದೊಂದಿಗೆ ರಾಖಿ ಕಳಿಸಿದ್ದೇನೆ. ನನಗೆ ಅಣ್ಣಂದಿರಿಲ್ಲ. ನೀವೇ ಅಣ್ಣ ಎಂದು ಭಾವಿಸಿದ್ದೇನೆ. ನನ್ನ ಪರವಾಗಿ ನೀವೇ ಕಟ್ಟಿಕೊಂಡು ಈ ತಂಗಿಯನ್ನು ಹಾರೈಸಿ.''

ಯಾಕೋ ತಟಕ್ಕನೆ ಕಣ್ಣಲ್ಲಿ ನೀರಿಳಿಯಿತು. ಎಲ್ಲಿಂದೆಲ್ಲಿಯ ಅನುಬಂಧ? ಗುರುತು-ಪರಿಚಯ-ಸ್ನೇಹಗಳಿಲ್ಲದ ಓರ್ವ ಹುಡುಗಿ ಅಪರಿಚಿತನಲ್ಲಿ ಅಣ್ಣನನ್ನು ಹುಡುಕಿ ರಾಖಿ ಕಳುಹಿಸಿದ್ದರ ಹಿಂದಿನ ಆರ್ದ್ರತೆ ನನ್ನನ್ನು ತೀರಾ

ಭಾವುಕನನ್ನಾಗಿಸಿತು. ತತ್‌ಕ್ಷಣವೇ ಉತ್ತರಿಸಿ ಗೌರಿ ಹಬ್ಬದ ಕಾಣಿಕೆ ಎಂದು ಹತ್ತು ರೂಪಾಯಿ ನೋಟೊಂದನ್ನು ಇಟ್ಟು ಅಂಚೆಗೆ ಹಾಕಿದೆ. ನನ್ನ ಪತ್ರ ಆಕೆಗೆ ತಲುಪಿದರೆ ಆ ಹೆಣ್ಣಿನ ಹೃದಯ ಅದೆಷ್ಟು ಸಂಭ್ರಮಿಸುತ್ತದೋ ಏನೋ! ಇಂಥ ಅಂಚೆ ಇಲಾಖೆಯ ಬಗ್ಗೆ ಅಂಚೆಯ ಅಣ್ಣನ ಬಗ್ಗೆ ವಿಪರೀತ ಅಭಿಮಾನ ಉಕ್ಕಿ ಬಂದುಬಿಡುತ್ತದೆ.

ತಾಯಿ-ಮಗನ ಅನುಬಂಧವನ್ನು ಹೆಂಡತಿಯ ಮೂಲಕ ಅಭಿವ್ಯಕ್ತಗೊಳಿಸುವ ಒಂದು ಕಥೆ ಬರೆದಿದ್ದೆ. ನಾಲ್ಕೈದು ಅಭಿನಂದನಾ ಪತ್ರಗಳ ಮಧ್ಯೆ ಒಂದು ಪತ್ರ ಹೀಗಿತ್ತು. "ನಿಮ್ಮ ಕಥೆಯನ್ನು ನಾನು ಗಟ್ಟಿಯಾಗಿ ಓದುತ್ತಿದ್ದೆ. ಜೊತೆಗೆ ನಮ್ಮ ತಾಯಿಯವರೂ, ಮನೆಮಂದಿಯೆಲ್ಲಾ ಇದ್ದೆವು. ಅಂತ್ಯದಲ್ಲಿ ಕಣ್ಣೀರು ತಡೆಯಲಾಗಲಿಲ್ಲ. ಎಲ್ಲರ ಮನಸ್ಸೂ ತುಂಬಿ ಬಂದಿದ್ದವು. ದಯವಿಟ್ಟು ಈ ರೀತಿಯ ಕಥೆ ಬರೆಯಬೇಡಿ!"

ಅಭಿಮಾನ ಪೂರ್ಣಮಟ್ಟಕ್ಕೇರಿದರೆ ಈ ರೀತಿಯ ಆಗ್ರಹ ಆಗಾಗ್ಗೆ ವ್ಯಕ್ತವಾಗುತ್ತಿರುತ್ತದೆ. ಇದಕ್ಕೇನೆಂದು ಉತ್ತರಿಸುವುದು ? ಇಂಥ ಪತ್ರಗಳು ಜೀವನದಲ್ಲಿ ಒಮ್ಮೆ ಬಂದರೂ ಸಾರ್ಥಕವೆನಿಸಿಬಿಡುತ್ತದೆ.

ಹೀಗಾಗಿಯೇ, ಪ್ರತಿದಿನದ ಅಂಚೆಗೆ, ಅಂಚೆ ಕಛೇರಿಯ ಬಾಗಿಲ ಬಳಿಯೇ ಕಾಯುವುದು, ನನಗೆ ರೋಮಾಂಚಕ ಅನುಭವ ನೀಡುವ, ಭಾವನೆಗಳು ಒತ್ತಿ ಒತ್ತಿ ಬರುವ ಕಾರಣದಿಂದ. ನನ್ನ ಈ ವಿಚಾರ ಲಹರಿ ಎಷ್ಟೋ ಮಂದಿಗೆ ಅರ್ಥವಾಗುವುದಿಲ್ಲ.

"ಬುಡಕ್ಕೇ ಬಂದು ಪತ್ರ ಒಪ್ಪಿಸುವ ಪೋಸ್ಟ್‌ಮನ್ ಇರುವಾಗ ನಿನಗೇಕೆ ಕರ್ಮ!?" ಎಂದು ನನ್ನ ಭಾವನೆಗಳನ್ನು ಹತ್ತಿಕ್ಕುವ ಅನೇಕರು ಕೇಳಿ ನನ್ನ ಉತ್ಸಾಹಕ್ಕೆ ತಣ್ಣೀರೆರಚುತ್ತಾರೆ. ಅವರಿಗೆ ನನ್ನ ತುಮುಲ ತೋಟಿಗಳು ತಲೆಗೇರುವುದಿಲ್ಲ. ನಾನು ಬಿಡಿಸಿ ಹೇಳಿದಷ್ಟು ಮೂರ್ಖನಾಗುವ ಸಂಭವವಿರುವ ಕಾರಣ ನಾನು ಉದಾಸೀನ ಮಾಡಿಬಿಡುತ್ತೇನೆ. ಸ್ವಲ್ಪವೂ ಭಾವುಕರಲ್ಲದ ಮಂದಿಯೊಂದಿಗೆ ಬೆರೆತು ವ್ಯವಹರಿಸುವುದು ನನ್ನ ಜಾಯಮಾನಕ್ಕೆ ಒಗ್ಗಿರುವ ಸಂಗತಿಯಲ್ಲ. ಮುಷ್ಟಿ ಬಿಗಿದವರೊಂದಿಗೆ ಹಸ್ತಲಾಘವ ನೀಡಲು ಸಾಧ್ಯವೇ? ಅಂಥ ಜಡಭರತರಿಗೆ ಅಂಚೆಯಲ್ಲಿ ಬರುವ ಪತ್ರಗಳ ಪುರಾಣೇತಿಹಾಸಗಳನ್ನು ವರ್ಣಿಸಿ ಕಂಠಶೋಷಣೆ ಏಕೆ ಮಾಡಿಕೊಳ್ಳಬೇಕು? ಅಲ್ಲವೆ?

ಅಂತೂ ಹಲವಾರು ಆಕಾರ-ವಿನ್ಯಾಸಗಳ ಪತ್ರಗಳು ವ್ಯಕ್ತಿಯ ಚಿಂತನೆಯನ್ನು ಪ್ರಚೋದಿಸಿ ಬದುಕನ್ನು ಜೀವಂತವಾಗಿಡುತ್ತವೆಂಬುದರಲ್ಲಿ ಸಂಶಯವೇ ಇಲ್ಲ.

■ ಶ್ಯಾಮಗೊಂಡ್ಲು ಅಂಬರೀಷ್

ರಾಷ್ಟ್ರೀಯ ವೈಶಿಷ್ಟ್ಯಗಳು

ಒಂದು ಹಡಗು ಆಕಸ್ಮಾತ್ ಮುಳುಗಿ ಹೋಗಿ, ಅದರಿಂದ ಇಬ್ಬರು ಯುವಕರು ಹಾಗೂ ಒಬ್ಬಳು ಸುಂದರ ತರುಣಿ ತೇಲಾಡುತ್ತ ನಿರ್ಜನ ದ್ವೀಪಕ್ಕೆ ತಲುಪಿದರೆನ್ನಿ. ಆ ಮೂವರೂ ಒಂದು ತಿಂಗಳವರೆಗೆ ಆ ದ್ವೀಪದಲ್ಲೇ ಇರಬೇಕಾಗುತ್ತದೆ. ಆಗ ಎಂಥ ಪರಿಸ್ಥಿತಿ ಉಂಟಾದೀತು?

ಆ ಮೂವರೂ ಸ್ಪೇನ್ ದೇಶೀಯಾದರೆ ಒಬ್ಬ ಯುವಕ ಇನ್ನೊಬ್ಬನನ್ನು ಕೊಲೆಗೈಯುತ್ತಾನೆ. ಆ ಮೂವರೂ ಇಟೆಲಿಯನ್‌ರಾಗಿದ್ದರೆ ತರುಣಿಯೇ ಒಬ್ಬ ತರುಣನನ್ನು ಕೊಲೆಗೈಯುವಳು. ಮೂವರೂ ಭಾರತೀಯರಾಗಿದ್ದರೆ ಒಬ್ಬ ಯುವಕ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಅವರು ಇಂಗ್ಲಿಷರಾಗಿದ್ದರೆ ಏನೂ ಸಂಭವಿಸದು. ಏಕೆಂದರೆ ಅವರಿಗೆ ಪರಸ್ಪರರ ಪರಿಚಯ ಇರುವುದಿಲ್ಲ. ಸ್ವತಃ ಪರಿಚಯ ಮಾಡಿಸುವುದು ಅವರ ಸ್ವಭಾವಕ್ಕೆ ವಿರುದ್ಧ. ಅವರು ಅಮೇರಿಕನ್ ಆಗಿದ್ದರೂ ಏನೂ ನಡೆಯುವಂತಿಲ್ಲ. ಏಕೆಂದರೆ ಇಬ್ಬರೂ ಯುವಕರು ವ್ಯವಹಾರದ ವಿಷಯದಲ್ಲಿ ಪೂರ್ತಿ ಮಗ್ನರಾಗಿದ್ದು ತಮ್ಮ ಜತೆ ತರುಣಿಯಿದ್ದಾಳೆ ಎಂಬುದನ್ನು ಮರೆತು ಬಿಡುತ್ತಾರೆ?

ಅವರು ಫ್ರೆಂಚರಾಗಿದ್ದರೆ..... ? ಆಗ ಯಾವುದೇ ಸಮಸ್ಯೆ ಅವರಿಗೆ ಎದುರಾಗುವುದಿಲ್ಲ!

ಬುನಾದಿ ಕಲ್ಲು

ಲಾಲ್ ಬಹಾದುರಶಾಸ್ತ್ರಿಗಳು ನಗುಮುಖದ ಸ್ವಭಾವದವರು. ಜನ ಅವರ ಭಾಷಣ ಹಾಗೂ ನಿಃಸ್ವಾರ್ಥಸೇವಾ ಭಾವನೆಗೆ ಸಹಜವಾಗಿಯೇ ಮಾರುಹೋಗಿದ್ದರು. ಆದರೆ ಅವರು ಲೋಕಸೇವಾಮಂಡಳದ ಸದಸ್ಯರಾದಾಗ ತುಂಬಾ ಸಂಕೋಚಶೀಲರಾದರು. ತಮ್ಮ ಹೆಸರು ಪತ್ರಿಕೆಗಳಲ್ಲಿ ಪ್ರಕಟವಾಗುವುದು ಅವರಿಗೆ ಒಂದಿಷ್ಟೂ ಹಿಡಿಸುತ್ತಿರಲಿಲ್ಲ. ತಮ್ಮ ಹೊಗಳಿಕೆಯಾಗಲೀ ಸ್ವಾಗತವಾಗಲೀ ಅವರಿಗೆ ಒಗ್ಗದ ವಿಷಯವಾಗಿತ್ತು.

ಒಂದು ದಿನ ಶಾಸ್ತ್ರಿಗಳ ಕೆಲ ಗೆಳೆಯರು ಅವರೊಡನೆ : 'ನೀವೇಕೆ ಪತ್ರಿಕೆಗಳಲ್ಲಿ ನಿಮ್ಮ ಹೆಸರು ಅಚ್ಚಾಗುವುದನ್ನು ಇಚ್ಛಿಸುವುದಿಲ್ಲ?' ಎಂದು ಕೇಳಿದರು.

ಶಾಸ್ತ್ರೀಜಿ ತುಸು ಹೊತ್ತು ಯೋಚಿಸುತ್ತ ಇದ್ದರು, ಆ ಬಳಿಕ ಇಂತೆಂದರು 'ಲಾಲಾ ಲಾಜಪತರಾಯರು ನನಗೆ ಲೋಕಸೇವಾ ಮಂಡಳದ ಕಾರ್ಯದ ದೀಕ್ಷೆ ಕೊಡುವಾಗ ಹೀಗೆಂದಿದ್ದರು 'ಲಾಲ್ ಬಹಾದುರ್.... ತಾಜಮಹಲಿನಲ್ಲಿ ಎರಡು ರೀತಿಯ ಕಲ್ಲುಗಳನ್ನು ಅಳವಡಿಸಲಾಗಿದೆ. ಒಂದು ಅತ್ಯುತ್ತಮವಾದ ಚಂದ್ರಕಾಂತ ಶಿಲೆಗಳು ಅವನ್ನು ಇಡೀ ಪ್ರಪಂಚವೇ ಹೊಗಳುತ್ತದೆ. ಇನ್ನೊಂದು ಬುನಾದಿಯಲ್ಲಿನ ಕಲ್ಲುಗಳು. ಅವುಗಳ ಬದುಕಿನಲ್ಲಿ ಬರೀ ಕತ್ತಲೆಯೇ ತುಂಬಿರುತ್ತದೆ. ಆದರೆ ತಾಜಮಹಲ್ ಸುಸ್ಥಿತಿಯಲ್ಲಿ ನಿಂತಿರಲು ಈ ಬುನಾದಿಕಲ್ಲುಗಳೇ ಕಾರಣ. ಲಾಲಾಜಿಯ ಈ ಶಬ್ದಗಳು ನನಗೆ ಯಾವಾಗಲೂ ನೆನಪಾಗುತ್ತವೆ. ಎಂತಲೇ ನಾನು ಬುನಾದಿಕಲ್ಲಾಗಿಯೇ ಇರಬಯಸುತ್ತೇನೆ.

ಕೃತಕ ಕಾಲಿನ ಲಾಭ

ರಷ್ಯದ ಒಬ್ಬ ವಿಮಾನ ಇಂಜನೀಯರರ ಒಂದು ಕಾಲು ಮೊದಲನೇ ಮಹಾಯುದ್ಧದ ವೇಳೆ ಕತ್ತರಿಸಿ ಹೋಗಿತ್ತು. ಎರಡನೇ ಮಹಾಯುದ್ಧದ ವೇಳೆ ಅವರು ಆಸ್ಪತ್ರೆಗಳಲ್ಲಿನ ಗಾಯಾಳುಗಳನ್ನು ನೋಡಲು ಹೋದರು. ರೋಗಿಗಳ ಉತ್ಸಾಹ ಹೆಚ್ಚಿಸಲೆಂದು 'ಕೃತಕ ಕಾಲಿನ ಬಹು ದೊಡ್ಡ ಲಾಭವೆಂದರೆ ಪೆಟ್ಟು ತಗಲಿದರೂ ಗೊತ್ತಾಗುವುದಿಲ್ಲ' ಎಂದರು.

ಹೀಗೆಂದು ಅವರು ತಮ್ಮ ಬೆತ್ತವನ್ನು ಒಬ್ಬನ ಕೈಗಿತ್ತು 'ಇದರಿಂದ ಜೋರಾಗಿ ನನ್ನ ಕಾಲಿಗೆ ಹೊಡೆ' ಎಂದರು. ಆತ ಬಲು ಜೋರಾಗಿಯೇ ಅವರ ಕಾಲಿಗೆ ಬಾರಿಸಿದ.

'ನೋಡಿದೆಯಾ, ನನಗೇನೂ ನೋವಾಗಲಿಲ್ಲ' ನಗುತ್ತಾ ನುಡಿದರು ಇಂಜನೀಯರ್. ಅದನ್ನು ಕೇಳಿ ಎಲ್ಲರೂ ನಕ್ಕರು.

ಕೋಣೆಯಿಂದ ಹೊರ ಹೊರಡುತ್ತಲೇ ಅವರ ಮುಖದ ಮೇಲೆ ನೋವಿನ ಗುರುತು ಕಾಣಿಸಿತು. ಜತೆಯ ಅಧಿಕಾರಿ ಕಾರಣ ಕೇಳಿದಾಗ ಅವರೆಂದರು : ಆತ ಮತ್ತೊಂದು ಕಾಲಿಗೆ ಬೆತ್ತದಿಂದ ಹೊಡೆದಿದ್ದ!'


■ 'ಅಡಿಗ'

ದೇ.ಓ.ಗೋ

ಇದೊಂದು ಬೀಜಮಂತ್ರ. ಮುದ್ದಣ್ಣ ಮನೋರಮೆಗೆ ಬರೆದ ಹಾಗೂ ಕನ್ನಡ ರಸಿಕರಿಗೆ ರಸದೌತಣವಿತ್ತ 'ಭವತಿ ಭಿಕ್ಷಾಂದೇಹಿ' ಎಂಬ ಸಪ್ತಾಕ್ಷರಿ ಮಂತ್ರದಷ್ಟು ಪ್ರಖ್ಯಾತವಾಗದಿದ್ದರೂ ಮನೆಮನೆಯ ಮುದ್ದು ಮಡದಿಗೆ ಅತಿ ಆಪ್ತವಾಗಬೇಕಾಗಿರುವ ಗಾಯತ್ರಿ ಮಂತ್ರ. ಇದರರ್ಥವನ್ನು ತಿಳಿಯಲು ಹುಲು ಮಾನವರಾದ ನಾವು, ನಮ್ಮೆಲ್ಲ ಪ್ರಯತ್ನ ಮತ್ತು ಶ್ರದ್ಧೆಯನ್ನು ಮೀಸಲಾಗಿಡಬೇಕಾಗುತ್ತದೆ. ಸಕಲಕಲಾ ಪ್ರವೀಣರಾದ, ಸರ್ವಶಕ್ತನೂ ಜ್ಞಾನಿಯೂ ಆದ ನಿರಾಕಾರನೂ ಸಾಕಾರನೂ ಆಗಿರುವ ಪರಮಾತ್ಮನನ್ನು ಪಡೆಯುವ ಮೊದಲ ಹಂತವಾಗಿ ಈ ಬೀಜಮಂತ್ರವನ್ನು ಶಾಂತಚಿತ್ತದಿಂದ ಧ್ಯಾನಿಸಿದರೆ ಮಾತ್ರ ಲಭಿಸೀತು. ಸೀತಮ್ಮನಿಗೆ ಇದರ ಸಾಕ್ಷಾತ್ಕಾರವಾಗಿತ್ತು.

ಸೀತಮ್ಮ ಎಳೆಯ ಹುಡುಗಿಯಾಗಿದ್ದಾಗ ಅವಳ ಮದುವೆ ಮಾತುಕತೆ ನಡೆದಿತ್ತು. ಆಗೆಲ್ಲ 'ಅಷ್ಟೇ ವರ್ಷೇ ಲಗ್ನಂ' ಎಂದು ಎಂಟು ವರ್ಷಕ್ಕೆ ಹೆಣ್ಣು ಮಕ್ಕಳಿಗೆ ಮದುವೆ ಮಾಡುವ ಸತ್ಸಂಪ್ರದಾಯವಿತ್ತಲ್ಲ! ಮದುವೆ ಲಗ್ನ ನಿಶ್ಚಯವಾದ ಖುಷಿಯಲ್ಲಿ ತಂದೆ ಇದ್ದಾಗ, ಗದ್ದೆಯಲ್ಲೊಮ್ಮೆ ನಾಯಿಕಚ್ಚಿ ಸಕಾಲದಲ್ಲಿ ಸೂಕ್ತ ಆರೈಕೆ ಸಿಗದೆ, ನಾಯಿಯಂತೆ ಬೊಗಳೀ ಬೊಗಳೀ ನೀರು ಕಂಡರೆ ಗಾವುದ ಹಾರಿ, ಪರಂಧಾಮವನ್ನೈದಿದರು. ಆಗಲಿದ್ದ ಮದುವೆ ಮುರಿದು ಬಿತ್ತು. ಹೀಗಾಗುತ್ತದೆಂದು ಗೊತ್ತಿದ್ದರೆ, ಪಾಪ ಆ ನಾಯಿ ಸೀತಮ್ಮನ ತಂದೆಯನ್ನು ಕಡಿಯುತ್ತಲೇ ಇರಲಿಲ್ಲ. ಹುಡುಗಿಯ ಕಾಲ್ಗುಣ ಚೆನ್ನಾಗಿದ್ದರೆ ಹೀಗೇಕಾಗುತ್ತಿತ್ತು ಅಲ್ಲವೇ? ಹುಡುಗನ ಕಾಲ್ಗುಣ ಚಂದವಿದ್ದು, ಈ ಕಾಲ್ಗುಣವನ್ನು ಸರಿಪಡಿಸಲು ಆಗುತ್ತಿರಲಿಲ್ಲವೇ? ಏನೆಲ್ಲ ಪ್ರಶ್ನೆ ಮಾಡುತ್ತೀರಪ್ಪ, ಈ ದೇಶದಲ್ಲಿ ಪ್ರಶ್ನೆ ಮಾಡಬಾರದೆಂದು ಗೊತ್ತಿಲ್ಲವೇ? ನಾವು ಹೇಳಿದ್ದನ್ನು ನೀವು ಕೇಳಬೇಕು. ಕೇಳಿ ಒಪ್ಪಬೇಕು. ಒಪ್ಪಬೇಕೆಂದರೆ ದುಸರಾ ಮಾತಾಡದೆ ಒಪ್ಪಲೇ ಬೇಕು. ನೀವೆಲ್ಲ ಜಗನ್ಮಾತೆಯ ಹಿರಿಯ ಪುತ್ರಿಯಾದ ಭಾರತಾಂಬೆಯ ಮಕ್ಕಳೇ ಹೌದಾದರೆ ನಾವು ಹೇಳಿದ್ದನ್ನು ಕೇಳಬೇಕು; ಅದರಂತೆ ನಡೆಯಬೇಕು. ಪ್ರಶ್ನೆ ಕೇಳದೆ ಸುಮ್ಮನಿದ್ದು ಪುಣ್ಯ ಭಾಜನರಾಗಬೇಕು.

ತಿಥಿ ಮನೆಯಲ್ಲೇ ಎರಡನೇ ಮದುವೆಯ ಪ್ರಸ್ತಾಪ ಮಾಡಿದರು. ಹಾಗೆ ಪ್ರಸ್ತಾಪ ಮಾಡದಿದ್ದರೆ ಮತ್ತೆ ಅಂಥ ಪ್ರಸ್ತಾಪ ಮಾಡಲು ವರ್ಷವಿಡೀ ಕಾಯ ಬೇಕಾಗುತ್ತಿತ್ತಂತೆ. ಎಂಥ ಒಳ್ಳೆಯ ಸಂಪ್ರದಾಯ!



ಸೀತಮ್ಮನ ಕಾಲ್ಗುಣ ಸರಿಯಿರಲಿಲ್ಲ. ಮದುವೆ ತಪ್ಪಿಯೇ ಹೋಯಿತು ಮೇಲಿದ್ದಾನಲ್ಲ ಅವನು, ಸೀತಮ್ಮನಿಗೆ ಬೇರೆ ಕಡೆ ಒಂದು ಗಂಡನ್ನು ಮೊದಲೇ ಸೃಷ್ಟಿಸಿದ್ದ. ಅವನಿಗೆ ಸೀತಮ್ಮನ ಎರಡರಷ್ಟು ವಯಸ್ಸು ಅಷ್ಟೆ. ಇತ್ತೀಚೆಗೆ ಘನ ಸರ್ಕಾರದವರು ನಗರ ಪರಿಹಾರ ಭತ್ಯೆಯನ್ನು ಒಂದಕ್ಕೆರಡು ಹೆಚ್ಚಿಸಿದರಲ್ಲ; ಹೇಗೆಂದರೆ 20 ರೂಪಾಯಿದ್ದ ನ.ಪ.ಭ ಅನ್ನು ಶೇಕಡಾ ನೂರರಷ್ಟು ಏರಿಸಿದ್ದಾರೆ. ಹೌದು ಮತ್ತೆ ಭಿಕ್ಷುಕರಾದರೂ ಸಹ ಈಗ ಐದು ಹತ್ತು ಪೈಸೆಗೆ ಬೆಲೆ ಕೊಡುವುದಿಲ್ಲ. ನಮ್ಮ ಎಳೆತನದಲ್ಲಿ ನಾವು ಒಂದು, ಎರಡು, ಮೂರು, ಐದು ಪೈಸೆಯ, ಇಪ್ಪತ್ತು ಪೈಸೆಯ ನಾಣ್ಯಗಳನ್ನು ನೋಡಿದ್ದೆವು. ಅದು ಈಗ ಇತಿಹಾಸವಾಗಿ, ಪುರಾಣವೂ ಆಗಿ, ಆ ನಾಣ್ಯಗಳೆಲ್ಲ ಮಾಯವಾಗಿವೆ. ಇನ್ನು ಕೆಲವು ದಿನ ನಾಲ್ಕಾಣೆ ಅಲ್ಲ ಐವತ್ತು ಪೈಸೆಯ ನಾಣ್ಯಗಳೇ ಬೆಲೆ ಕಳೆದುಕೊಳ್ಳುತ್ತಿವೆ. ಸರ್ಕಾರಗಳು ಅಷ್ಟೆ. ಅದಕ್ಕೇ ನ.ಪ.ಭ.ಯನ್ನು ನೂರಕ್ಕೆ ನೂರು ಹೆಚ್ಚಿಸಿ ತನ್ನ ಹೊಟ್ಟೆಯ ಮಕ್ಕಳಂತಿರುವ ಸರ್ಕಾರಿ ನೌಕರರಿಗೆ ಮಹೋಪಕಾರವನ್ನು ಮಾಡಿದೆ. ಇಷ್ಟು ಮಾಡಿದರೂ ಸ.ನೌ.ರಿಗೆ ತೃಪ್ತಿಯಾಗದಿದ್ದರೆ ಅದು ಸ.ನೌ.ರ ದುರಾಸೆ ಅಷ್ಟೇ.

ಸೀತಮ್ಮನ ಕಥೆ ಹೇಳುತ್ತ ಸರ್ಕಾರದ ಮಾತು ತೆಗೆದೆ. ಕ್ಷಮಿಸಿ. ಸೀತಮ್ಮನ ಗಂಡನಾಗುವವ ಎಷ್ಟೋ ವರ್ಷಗಳ ಮುಂಚೆ ಹುಟ್ಟಿದ್ದ. ಆತನಿಗಾಗಲೇ ಮದುವೆಯಾಗಿತ್ತು. ಹೆಂಡತಿ ನಾಲ್ಕನೇ ಹೆರಿಗೆಯಲ್ಲಿ ತೀರಿಕೊಂಡಿದ್ದಳು. ಅದು 'ಅಷ್ಟಪುತ್ರ ಸೌಭಾಗ್ಯವತೀ ಭವ' ಎಂದು ಹಿರಿಯರು ಹರಸುತ್ತಿದ್ದ ಕಾಲ. ಮಧ್ಯೆ ಮಧ್ಯೆ ಹೆಣ್ಣುಮಕ್ಕಳು ಎಷ್ಟಾದರೂ ಇರಲಿ, ಒಟ್ಟು ಎಂಟು ಗಂಡು ಮಕ್ಕಳು ಇದ್ದರೆ ಚೆಂದ ಎಂದು ಭಾವಿಸುತ್ತಿದ್ದ ಸಮೃದ್ಧ ಕಾಲ. ಹೆಣ್ಣುಮಕ್ಕಳೇನು ಹೇಗೋ ಬೆಳೆದುಕೊಳ್ಳುತ್ತಲಿದ್ದವು. ತಾಯಿ ಸತ್ತ ಮಕ್ಕಳನ್ನು ನೋಡಿಕೊಳ್ಳಲು ಯಾರಾದರೂ ಬೇಕಿತ್ತು. ಸರಿ ಯಾರು ನೋಡಿಕೊಳ್ಳುತ್ತಾರೆ. ಹೊಟ್ಟೆಗೆ ಹಿಟ್ಟು, ನೆತ್ತಿಗೆ ಎಣ್ಣೆ, ಉಡಲು ಬಟ್ಟೆ, ಒಪ್ಪ ಮಾಡುವವರಾರು? ಆದ್ದರಿಂದ ತಿಥಿ ಮನೆಯಲ್ಲೇ ಎರಡನೇ ಮದುವೆಯ ಪ್ರಸ್ತಾಪ ಮಾಡಿದರು. ಹಾಗೆ ಪ್ರಸ್ತಾಪ ಮಾಡದಿದ್ದರೆ ಮತ್ತೆ ಅಂಥ ಪ್ರಸ್ತಾಪ ಮಾಡಲು ವರ್ಷವಿಡೀ ಕಾಯಬೇಕಾಗುತ್ತಿತ್ತಂತೆ. ಎಂಥ ಒಳ್ಳೆಯ ಸಂಪ್ರದಾಯ. ತಿಂಗಳೊಳಗೆ ಮದುವೆಯ ಹಸೆಮಣೆಯೇರಿದಳು ಪುಟ್ಟ ಸೀತಮ್ಮ. ಒಂದು ಮಾತು ಹೇಳುವುದನ್ನು ಮರೆತೆ. ಸೀತಮ್ಮನ ಕಾಲ್ಗುಣವೇ ಅವಳ ಸವತಿಯ ಸಾವನ್ನು ತಂದಿರಬಹುದೆಂಬ ಗುಮಾನಿ ಅವಳ ಮಲಮಕ್ಕಳಲ್ಲಿದೆ.

ಮದುವೆ ನಡೆಯಿತೆಂದರೆ, ಆ ಮೇಲಿನ ಜೀವನವೂ ಸುಸೂತ್ರವಾಗಿದ್ದೇ ತೀರುತ್ತದೆ ಎಂಬ ನಂಬಿಕೆಯೇನು? ನಾಲ್ಕು ಮಕ್ಕಳ ತಾಯಿಯಾಗಿ ಬಂದವಳು, ತಾನೂ ನಾಲ್ಕೆಂಟನ್ನು ಹೆತ್ತಳು. ಗಂಡ ತರುತ್ತಿದ್ದ ಸಂಬಳ ಸಾಲದೆಂದು ಆಗೀಗ ಗೊಣಗುತ್ತಿದ್ದಳು. ಈಗೀಗ ಮನೆವಾಳ್ತೆಯ ಹೊಣೆಯೂ ಅವಳ ಪಾಲಿಗೆ ಬಂದಿತು. ತಂದು ಹಾಕಿದ ದುಡ್ಡಿಗೆ ಒಂದೊಂದು ಕಾಸು ಕಾಸಿನ ಲೆಕ್ಕವನ್ನು ಒಪ್ಪಿಸಬೇಕಾಯಿತು. ಪ್ರತಿತಿಂಗಳೂ ಸೀತಮ್ಮ ಸರಿಯಾಗಿಯೇ ಲೆಕ್ಕ ಒಪ್ಪಿಸುತ್ತಿದ್ದಳು. ಗಂಡ ಲೆಕ್ಕದ ಚೀಟಿ ಓದಿದ. ಮನಸ್ಸಿನೊಳಗೇ ಭೇಷ್ ಎಂದು ಶಭಾಷ್‌ಗಿರಿ ಕೊಟ್ಟ. ಆದರೂ ಒಂದು ಅನುಮಾನ ಉಳಿಯಿತು. ಚೀಟಿಯ ಕೊನೆಯಲ್ಲಿ ನಮೂದಿತವಾಗಿರುತ್ತಿದ್ದ ಸಾಮಾಗ್ರಿ, ಯಾವುದೆಂದು ಅವನ ತಿಳಿವಳಿಕೆಗೆ ಬರಲಿಲ್ಲ. ಮೊಣಕಾಲ ಕೆಳಗೆ ಬುದ್ಧಿಯಿರುವ ಹೆಣ್ಣು ಹೆಂಗಸರನ್ನು ಏನು ಕೇಳುವುದು ಎಂದು ತಾತ್ಸಾರ ಮಾಡಿದ. ತಿಂಗಳು ತಿಂಗಳೂ ಆ ವಸ್ತುವಿನ ಬೆಲೆ ಏರುತ್ತಲೇ ಇತ್ತು, ಗಂಡ ಚಡಪಡಿಸಿದ, ಕೇಳಿಯೇ ಬಿಟ್ಟ - 'ದೇ.ಓ.ಗೋ ಎಂದರೇನೆ?'

ಕಂಕುಳ ಮಗುವಿಗೆ ಮೊಲೆಯೂಡುತ್ತಿದ್ದ ಸೀತಮ್ಮ ತಣ್ಣಗೆ ಹೇಳಿದಳು - 'ದೇವರು ಒಬ್ಬನಿಗೇ ಗೊತ್ತು' ದೇವರ ಹೆಸರಲ್ಲಿ ಏನು ಮಾಡಿದರೂ ಸರಿಯೇ.

■ ಆರ್. ನಿರ್ಮಲ



ಮಕ್ಕಳಿಗೊಂದು ಸುಂದರ ವಿಹಾರ

> ಪ್ರವಾಸ, ವಿಹಾರಗಳು ನಮಗೆ ಮರೆತೇ ಹೋಗಿವೆ. ಬೋರ್ ಆದಾಗ, ರಜೆಯಲ್ಲಿ ಮಕ್ಕಳನ್ನೂ ಕಟ್ಟಿಕೊಂಡು ಎಲ್ಲಿಗಾದರೂ ಹೋಗುವುದೆಂದರೆ ತೀರಾ ಆತಂಕಿತರಾಗುತ್ತೇವೆ. ಪ್ರವಾಸವೆಂದರೆ ನಮ್ಮ ಪಾಲಿಗೆ ಯಾವುದೋ ಊರಿಗೆ ಹೋಗಿ ಗೋಡೆ ಮುಟ್ಟಿಬರುವುದು, ಇಲ್ಲವೇ ನೆಂಟರ ಮನೆಗೆ ಹೋಗುವುದೇ ಆಗಿರುತ್ತದೆ.
> ಮಕ್ಕಳು ಅವರ ಮನಸ್ಸು, ಕಲ್ಪನೆಗಳು ಗರಿಗಟ್ಟುವ ರೀತಿಯಲ್ಲಿ ಪ್ರವಾಸ, ವಿಹಾರಗಳನ್ನು ಯೋಜಿಸುವುದು ಸಾಧ್ಯ.
> ಅದು ಇಂದಿನ ಅಗತ್ಯ ಕೂಡ.

ಮಕ್ಕಳಿಗೆ ಬೇಸಿಗೆ ರಜೆ. ಇನ್ನು ಶಾಲೆ ಶುರುವಾಗುವವರೆಗೂ ಅವರ ದಾಂಧಲೆ ಮನೆಯವರಿಗೆ ಸಾಕೋ ಸಾಕು ಎನ್ನಿಸುತ್ತದೆ. ನಗರಗಳಲ್ಲಿ ದುಡಿಯುವ ದಂಪತಿಗಳು ಹೆಚ್ಚು. ಅಂಥವರು ಬೇಸಿಗೆಯಲ್ಲಿ ಮಕ್ಕಳನ್ನು ಯಾವುದಾದರೂ ಶಿಬಿರಕ್ಕೋ, ನೆಂಟರ ಮನೆಗೋ ಹೊತ್ತು ಹಾಕುತ್ತಾರೆ. ಮಕ್ಕಳು ರಜೆಯ ದಿನಗಳಲ್ಲಿ ಎಲ್ಲಿಯಾದರೂ ಅವರೊಡನೆ ಹೋಗಿ ಕಳೆಯಬಹುದು. ಅದೊಂದು ಮನಸು, ದೇಹಕ್ಕೆ ಮರು ಚೈತನ್ಯ ತುಂಬುವ ಯಾತ್ರೆ ಆಗಿಸಿಕೊಳ್ಳಬಹುದು. ಈ ಬಗ್ಗೆ ದೊಡ್ಡವರು ಗಮನ ಹರಿಸಬೇಕು.

ಚಿಕ್ಕವರಾಗಿರಿ : ಒಂದು ಕ್ಷಣ ಬಾಲ್ಯದ ನೆನಪು ತಂದುಕೊಳ್ಳಿ, ಶಾಲೆಯಿಂದ ಪ್ರವಾಸ ಹೊರಡುವ ಹಿಂದಿನ ರಾತ್ರಿಯ ಸಂತಸ, ಉದ್ವೇಗಗಳನ್ನು ಮೆಲುಕು ಹಾಕಿ. ನಮ್ಮ ಮಕ್ಕಳಿಗೂ ಪ್ರವಾಸ, ವಿಹಾರಗಳೆಂದರೆ ಹಾಗೇ. ಅದೂ ತಂದೆ, ತಾಯಿ, ಕುಟುಂಬದ ಇತರರ ಜೊತೆ ಪ್ರವಾಸ ಹೋಗುವುದೆಂದರೆ ಇನ್ನಿಲ್ಲದ ಖುಷಿ. ಅಂಥದೊಂದು ಸಂದರ್ಭ ನಾವಾಗಿ ಅವರಿಗೆ ಕೊಡುವುದಗತ್ಯ.

ಹಾಗೆ ಪ್ರವಾಸ ಹೊರಡುವಾಗ ಸರಿಯಾದ ಯೋಜನೆ ಇರಲಿ. ಹೊರಡುವ ಮುನ್ನ ಪದೇ ಪದೇ ಉತ್ಸಾಹಪೂರ್ಣ ಮಕ್ಕಳ ವರ್ತನೆ ಹತ್ತಿಕ್ಕುವುದು ಬೇಡ. 'ನೀವು ಹೀಗೆ ಮಾಡಿದರೆ ಬಿಟ್ಟೇ ಹೋಗುತ್ತೇವೆ' ಎಂಬ ಬೆದರಿಕೆ ಬೇಡ. ಮಕ್ಕಳು ಎಷ್ಟೇ ಚಿಕ್ಕವರಾದರೂ, ತಾವು ಹೊರಟಿರುವ ಪ್ರವಾಸದ ಉದ್ದೇಶ, ಅದನ್ನು ಸಫಲಗೊಳಿಸಲು ಮಕ್ಕಳು ಏನೇನು ಮಾಡಬೇಕು ಎಂಬ ವಿವರಣೆ ನೀಡಿ. ಇದು ಬೇಡ. ಅದು ಮಾಡಬಾರದು ಎಂದು ನಿರ್ಬಂಧಗಳನ್ನು ವಿಧಿಸುವುದಕ್ಕಿಂತ, ಪ್ರತಿಯೊಬ್ಬರೂ ಏನೇನು ಮಾಡಬೇಕೆಂಬ ಸೂಚನೆ ಇರಲಿ. ಇದರಿಂದಾಗಿ ಮಕ್ಕಳಿಗೆ ತಮಗೆ ಯಾವುದೋ ಮಹತ್ವದ ಜವಾಬ್ದಾರಿ ಕೊಟ್ಟಿದ್ದಾರೆಂಬ ಹೊಣೆಗಾರಿಕೆ, ಹೆಮ್ಮೆ ಎರಡೂ ಉಂಟಾಗುತ್ತವೆ.

ಯೋಜನೆ : ಪ್ರವಾಸ, ವಿಹಾರ ಯೋಜಿಸುವಾಗ ಹಲವು ವಿಷಯ ಗಮನಿಸಬೇಕು. ದಿನನಿತ್ಯದ ನಗರದ ಜೀವನದಿಂದ ಹೊರತಾದ ಅನುಭವ ಮಕ್ಕಳಿಗೆ ದೊರಕಬೇಕು. ಅವುಗಳ ಕುತೂಹಲಕ್ಕೆ ಕಾರಣವಾಗುವ, ಮನೋವಿಕಾಸಕ್ಕೆ ಇಂಬು ನೀಡುವಂಥ ತಾಣ ಹಾಗೂ ಕಾರ್ಯಕ್ರಮಗಳು ಇರಬೇಕು.

ಹೊಸ ಬಗೆಯ ಗಿಡ ಮರ, ಚಿಟ್ಟೆ, ಅಳಿಲು, ನಾನಾ ಬಗೆಯ ಪಕ್ಷಿ, ಪ್ರಕೃತಿಯನ್ನು ಕಾಣಲು ಸಾಧ್ಯ ಆಗಿರಬೇಕು. ನೀರು, ಹರಿದಾಡುವ ಮೀನು ನೋಡಲು ಇಷ್ಟ. ಆದರೆ ಮಕ್ಕಳು ಒಂದೇ ಜಾಗದಲ್ಲಿ ಮೌನವಾಗಿ, ತಾಳ್ಮೆಯಿಂದ ಕೂರಬೇಕಾದ ಸ್ಥಿತಿ ಇರಬಾರದು. ಅವರಿಗೆ ಕುಣಿದಾಡುವುದು, ಜಿಗಿದು ನಲಿಯುತ್ತಲೇ ಹೊಸ ವಾತಾವರಣಕ್ಕೆ ತೆರೆದುಕೊಳ್ಳುವುದು ಇಷ್ಟ. ಅಂಥವರನ್ನು ಎಲ್ಲೋ ದೂರದ ನಾಡಲ್ಲಿ ಮೀನು ಹಿಡಿಯುವಂಥ ಮೋಜಿಗೆ ಕರೆದೊಯ್ದು ಪಕ್ಕದಲ್ಲಿ ಕೂರಿಸಿಕೊಂಡರೆ, ಬಹುಬೇಗ ಬೇಸರ, ನಿರಾಸಕ್ತಿ ಮೂಡುತ್ತದೆ. ಟಿವಿ ಮುಂದೆ ಕುಳಿತು ರಿಮೋಟಿನ ಬಟನ್ ಒತ್ತುವ ಮೂಲಕವೇ ತನಗೆ ಬೇಕಾದ ಜಗತ್ತನ್ನು ಕಣ್ಣೆದುರು ತಂದು ನಿಲ್ಲಿಸಿಕೊಳ್ಳುವ ಗೀಳು ಈಗ ಮಕ್ಕಳಲ್ಲಿ ಹೆಚ್ಚು. ಅನಾಯಾಸವಾದ ಇಂಥ ಕೆಲಸ ಬಿಟ್ಟು ಎಲ್ಲಿಯೋ ಹೋಗಿ, ಶ್ರಮವಹಿಸಿ ಏನಾದರೂ ಮಾಡುವುದೆಂದರೇ ನಿರಾಸಕ್ತಿ. ಅಂಥವರಿಗೆ ನಿಜವಾದ ಬದುಕೆಂದರೆ ಇದು ಎಂಬುದು ಮನವರಿಕೆ ಆಗುವಂತೆ ವಿಹಾರ ಯೋಜಿತವಾಗಿರಬೇಕು. ಬಯಲಲ್ಲಿಯೇ ಬೇಕಾದ ತಿಂಡಿ, ಆಹಾರ ತಯಾರಿಸುವುದರಿಂದ ಹಿಡಿದು, ಅವನ್ನು ಒಟ್ಟಿಗೇ ಕುಳಿತು ಹಂಚಿಕೊಂಡು ತಿನ್ನುವ ಆನಂದದವರೆಗೆ ಎಲ್ಲದರಲ್ಲೂ ಮಕ್ಕಳು ಭಾಗಿಗಳಾಗುವಂತೆ ಆಗುವುದು ತೀರಾ ಅಗತ್ಯ. ಇಲ್ಲವಾದಲ್ಲಿ ಮಕ್ಕಳು ಬಹುಬೇಗ ನಿರಾಸಕ್ತರಾಗಿ ಊರಿಗೆ ಮರಳಿ ಹಿಂದಿರುಗಲು ಕಾತರಗೊಳ್ಳಬಹುದು.

ಕುತೂಹಲಕ್ಕೆ ತಡೆ ಬೇಡ : ಮಕ್ಕಳಲ್ಲಿ ಕುತೂಹಲ ಸಹಜ. ಹೊರಗೆ ಹೋದಾಗ ಸಹಜ ಅಡ್ಡಾಡಲೂ ಏನಾದರೂ ಕೆದಕಿ ನೋಡಲು ಮುಂದಾಗುತ್ತವೆ. ಕಲ್ಲುಗಳ ಕೆಳಗಿನ ಹುಳ ಹುಪ್ಪಟೆ ಕಂಡು ರೋಮಾಂಚಿತರಾಗಬಹುದು. ಚಿಟ್ಟೆಯನ್ನೋ, ಓಡುವ ಅಳಿಲನ್ನೋ ಕಂಡರೆ ಹಿಡಿಯಲು ಯತ್ನಿಸಬಹುದು. ಅಂಥ ಸಂದರ್ಭಗಳಲ್ಲಿ ಅವರ ಉತ್ಸಾಹಕ್ಕೆ



ಭಂಗ ತರಬಾರದು. ಆದರೆ ವಿನಾಶಕಾರಿ ಪ್ರವೃತ್ತಿ ತಲೆದೋರಿದಾಗ ಮಾತ್ರ ಎಚ್ಚರ ವಹಿಸಬೇಕು. ಹುಳ, ಚಿಟ್ಟೆ ಮುಂತಾದವನ್ನು ಹಿಡಿದು ಸಾಯಿಸುವುದು, ಗಿಡಗಳನ್ನು ಮುರಿಯುವುದು ಇಂಥ ಕ್ರಿಯೆಗಳಿಂದ ಆನಂದ ಪಡೆಯುವ ಪ್ರವೃತ್ತಿಗೆ ವಿವೇಕಯುತವಾಗಿ ಕಡಿವಾಣ ಹಾಕಬೇಕು.

ಸಂವಹನ ಇರಲಿ : ನಮ್ಮೊಡನೆ ಮಕ್ಕಳು ಪ್ರವಾಸ ಹೋದಾಗ, ನಾವು ದೊಡ್ಡವರು, ನಮಗೆಲ್ಲ ಗೊತ್ತು ಎಂಬ ಹಮ್ಮು ಇರಬಾರದು. ಅವರ ಹಾಗೇ ನಾವೂ ತಿಳಿಯಬೇಕಾದ್ದು, ಕಲಿಯಬಹುದಾದ್ದು ಸಾಕಷ್ಟು ಇದೆ ಎಂಬುದು ಮನದಟ್ಟಾಗಬೇಕು. ಮಕ್ಕಳಿಗೆ ಏನೋ ಹೇಳಬೇಕಾದಾಗಲೂ ದರ್ಪವಿರದೇ, ತಾವೊಂದು ಸಂಗತಿಯನ್ನು ಹಂಚಿಕೊಳ್ಳುತ್ತಿದ್ದೇವೆ ಎಂಬ ಮನೋಭಾವ ಇರಬೇಕು. ಹಾಗಾಗಿಯೇ ಮಕ್ಕಳೊಡನೆ ಮಾತಾಡುವಾಗ ಅವರ ಹತ್ತಿರವೇ ಕುಳಿತು, ತೀರಾ ಸಹಜ, ಸರಳ ರೀತಿಯಲ್ಲಿ ಮಾತಾಡಬೇಕು. ಎರಡಡಿ ಎತ್ತರದ ಮಗುವಿನ ಎದುರು ನಿಂತರೆ ದೊಡ್ಡವರು ದೈತ್ಯರ ಹಾಗೆ ಕಾಣುತ್ತಾರೆ. ಮಗು ಆಗ ತಲೆ ಎತ್ತಿ ನೋಡಬೇಕು. ಮುಖದ ಭಾವನೆಗಳೂ ಅವರಿಗೆ ಕಾಣುವುದಿಲ್ಲ. ಹಾಗಾದಾಗ ಇದ್ಯಾರೋ ತಮಗಿಂತ ಭಿನ್ನವಾದ ದೈತ್ಯನೊಡನೆ ಸಂವಹಿಸುತ್ತಾ ಇದ್ದೇವೆ ಎಂಬ ಭಾವನೆ ಮಕ್ಕಳಿಗೆ ಬರುತ್ತದೆ. ಸಂವಹನ ಸಾಧ್ಯವೇ ಆಗದು.

ನಮ್ಮ ಮಾತಿಗಿಂತ, ವರ್ತನೆಯತ್ತಲೇ ಮಕ್ಕಳಿಗೆ ಗಮನ ಇರುತ್ತದೆ. ನಾವು ಏನು ಮಾತಾಡುತ್ತೇವೆ ಎನ್ನುವುದಕ್ಕಿಂತ ಏನು ಮಾಡುತ್ತೇವೆ ಎಂಬುದೇ ಮುಖ್ಯ. ಬೆಟ್ಟವನ್ನೋ, ಬಂಡೆಯನ್ನೋ ಹೇಗೆ ಹತ್ತಬೇಕು ಎಂದು ವಿವರಿಸುವುದಕ್ಕಿಂತ, ಅದನ್ನು ನಾವೇ ಹತ್ತಿ ತೋರಿಸಬೇಕು. ಅದು ಹೆಚ್ಚು ಪ್ರಭಾವಕಾರಿ.

ಮಕ್ಕಳನ್ನು ತೊಡಗಿಸಿಕೊಳ್ಳಿ : ಹೊರಗೆ ಪ್ರವಾಸ ಅಥವಾ ವಿಹಾರ ಹೋದಾಗ ನಾಲ್ಕು ಗೋಡೆಯ ನಡುವೆ ಇರುವುದಕ್ಕಿಂತ ಪ್ರಕೃತಿ ಜೊತೆ ಅಥವಾ ಬಯಲಲ್ಲಿ ಇರುವುದಕ್ಕೆ ಹೆಚ್ಚು ಗಮನ ಕೊಡಿ. ಹೆಚ್ಚು ಕಾಲ ಪ್ರಕೃತಿಯ ಜೊತೆ ಇರುವುದಕ್ಕೆ ಆದ್ಯತೆ ಇರಲಿ. ಸಾಧ್ಯವಾದಲ್ಲಿ ಅಲ್ಲಿಯೇ ಊಟ, ತಿಂಡಿ ತಯಾರಿಸಿ ತಿನ್ನುವಂತೆ ಯೋಜಿಸಿ. ಅಂಥ ಸಂದರ್ಭಗಳಲ್ಲಿ ಮಕ್ಕಳು ಕೂಡ ತೊಡಗುವಂತಾಗಬೇಕು. ಮಕ್ಕಳು ತಾವೇ ಅಡುಗೆಯನ್ನೋ, ತಿಂಡಿಯನ್ನು ಮಾಡಲು ಮುಂದಾದರೆ ತಡೆಯಬೇಡಿ. ನಿಮ್ಮ ಉಸ್ತುವಾರಿ ಮಾತ್ರ ಇರಲಿ. ಇಲ್ಲವಾದಲ್ಲಿ ಒಲೆ ಹೊತ್ತಿಸಲು ಬೇಕಾದ ಉರುವಲು ಆರಿಸುವುದು, ನೀರು ತಂದುಕೊಡುವುದು ಇಂಥ ಕೆಲಸ ಮಾಡಿಸಬಹುದು. ಹೊಸದೊಂದು ಕೆಲಸದಲ್ಲಿ ತೊಡಗುವುದು, ಅನುಭವಕ್ಕೆ ತೆರೆದುಕೊಳ್ಳುವುದು ಮಕ್ಕಳಿಗೂ ಸಂತಸದ ಸಂಗತಿಯಾಗುತ್ತದೆ.

ರಾತ್ರಿಯ ಹೊತ್ತು ಬಯಲಲ್ಲೋ, ನದೀ ತೀರದಲ್ಲೋ, ಕಾಡಿನ ನಡುವೆಯೋ ಮಲಗುವ ಅವಕಾಶ ಇದ್ದರೆ ಇನ್ನೂ ಒಳ್ಳೆಯದು. ಶಿಬಿರ ಹಾಕಲು, ರಾತ್ರಿ ಮಲಗಲು ಸರಿಯಾದ ಪರಿಕರಗಳನ್ನು ಮೊದಲೇ ಹೊಂದಿಸಿಕೊಂಡು ಹೋಗುವುದಗತ್ಯ.

ಏಕತಾನತೆ ಬೇಡ : ಯಾವುದೇ ಕಾರಣಕ್ಕೆ ಏಕತಾನತೆ ಬೇಡ. ಅಲ್ಲಿಗೆ ಹೋದ ನಂತರ ಕಾರ್ಯಕ್ರಮ ಬದಲಿಸುವುದು ಅಗತ್ಯ ಎನಿಸಿದರೆ ಹಾಗೇ ಮಾಡಿ. ಹೊರಗೆ ಹೋದಾಗ ಹಸಿವು ಹೆಚ್ಚು. ಮಾಮೂಲು ಊಟ ತಿಂಡಿಯ ಜೊತೇ ಆಗಾಗ ಬೇಸರ ಕಳೆಯಲು ಕುರುಕು ತಿಂಡಿಗಳೂ ಇರಬೇಕು. ಆದರೆ ಅದನ್ನು ಮೇಯುವುದೇ ಕೆಲಸ ಆಗಬಾರದು ಮಕ್ಕಳಿಗೆ ಏಕತಾನತೆಯಿಂದ ಬೇಸರ ಮೂಡಿದಾಗ ಇದ್ದಕ್ಕಿದ್ದ ಹಾಗೆ ಇಂಥ ತಿಂಡಿ ನಾಟಕೀಯ ರೀತಿಯಲ್ಲಿ ಉದ್ಭವಿಸಿದರೆ ಎಷ್ಟು ಚೆನ್ನ. ಬಹಳ ಕಾಲದಿಂದ ಪ್ರಯಾಣ ಮುಂದುವರಿದಿರುವಾಗ, ಸೂರ್ಯಾಸ್ತ, ಯಾವುದೋ ಒಂದು ಕ್ರಿಯೆ ಏಕತಾನದ್ದು ಅನಿಸಿ, ಮಕ್ಕಳಲ್ಲಿ ಬೇಸರ ಮೂಡಿದಾಗ, ಅದನ್ನು ಮುರಿಯುವಲ್ಲಿ ತಿಂಡಿ ಕೂಡ ಪ್ರಮುಖ ಪಾತ್ರ ನಿರ್ವಹಿಸಬಲ್ಲದು. ಪ್ರತಿಸಲ ಯಾವಾಗ, ಯಾವ ತಿಂಡಿ ಉದ್ಭವವಾಗುತ್ತದೋ ಎಂಬ ಕುತೂಹಲ ಇದ್ದರೆ ಚೆನ್ನ.

ನೆನಪಿರಲಿ : ಪ್ರವಾಸವೆಂದರೆ ಮೋಜು ಮಜಾ. ತಮ್ಮ ಅಟ್ಟಹಾಸ, ಶ್ರೀಮಂತಿಕೆಯ ಪ್ರದರ್ಶನ ಎಂದಾಗಿದೆ. ಇಂಥ ಜನ ಪ್ರವಾಸ ಹೋದಾಗ ಏಕಾಂತ, ಸುಂದರ ತಾಣಗಳಲ್ಲಿ ತಾವು ಬಳಸಿ ಬಿಸಾಕಿದ ಬಾಟಲು, ಪ್ಲಾಸ್ಟಿಕ್ ರಾಶಿ ಪರಿಸರಕ್ಕೆ ಹಾನಿ ಮಾಡುತ್ತದೆ. ಪರಿಸರ ರಕ್ಷಿಸುವ ದಿಸೆಯಲ್ಲಿ ನೀವು ಇಂಥದ್ದನ್ನು ತಪ್ಪಿಸುವುದು ಮೊದಲ ಅಗತ್ಯ. ಬಳಸಿದ ಪ್ಲಾಸ್ಟಿಕ್ ಹಾಳೆ, ಕವರ್, ಕಪ್‌ಗಳನ್ನು ಅಲ್ಲಿಯೇ ಬಿಸಾಡಿ ಬರಬೇಡಿ. ಅವೆಲ್ಲವನ್ನು ಒಟ್ಟಿಗೇ ಸಂಗ್ರಹಿಸಿ ಹಿಂದಕ್ಕೆ ತಂದು ಸೂಕ್ತ ವಿಲೇವಾರಿ ಮಾಡಿ. ಇದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿ ನೀವು ಹೋದೆಡೆ ಬಿದ್ದಿರಬಹುದಾದ ಪ್ಲಾಸ್ಟಿಕ್ ವಸ್ತುಗಳನ್ನು ಸಂಗ್ರಹಿಸಿ ತಂದು ಸೂಕ್ತ ರೀತಿಯಲ್ಲಿ ವಿಸರ್ಜಿಸಿ. ಇದು ಮಕ್ಕಳಿಗೆ ಎಚ್ಚರಿಕೆಯ ಹಾಗೂ ಅನುಸರಿಸಬಹುದಾದ ಪಾಠವೂ ಆಗುತ್ತದೆ.

ದಾಖಲೆ ಇರಲಿ : ಮಕ್ಕಳು ಆ ಕ್ಷಣಕ್ಕೆ ಪ್ರವಾಸವನ್ನು ಎಷ್ಟೇ ಖುಷಿಯಿಂದ ಕಳೆದಿದ್ದರೂ, ದಿನ ಕಳೆದಂತೆ ಅದರ ಉತ್ಸಾಹ ಹಾಗೂ ನೆನಪು ಮಾಸಿ ಹೋಗುತ್ತದೆ. ಮಕ್ಕಳು ತಾವು ಅನುಭವಿಸಿದ್ದು ಒಂದು ದಾಖಲೆಯಾಗಿ ಮೂಡಬೇಕು. ಮಗು ಪ್ರವಾಸ ಹೋದಾಗ ಬಿಡಿಸಿದ ಚಿತ್ರ ಇರಬಹುದು. ಆನಂತರ ಬರೆದ ಪ್ರಬಂಧ ಇರಬಹುದು. ಇದೆಲ್ಲಕ್ಕಿಂತ ಮುಖ್ಯವಾಗಿ ಮಗು ಅತ್ಯಂತ ಸಹಜ ರೀತಿಯಲ್ಲಿ ಪ್ರವಾಸದಲ್ಲಿ ತೊಡಗಿದ ಭಂಗಿಯ ಫೋಟೋ ಇದ್ದರೆ ಆಯಿತು. ಅದನ್ನು ನೋಡಿದಾಗೆಲ್ಲ ಆ ಮಗುವಿಗೆ ಅಂದಿನ ಎಲ್ಲ ನೆನಪು ಥಟ್ಟನೆ ಮನಸ್ಸಿನ ಪರದೆಯ ಮೇಲೆ ಮೂಡಿ, ಸಂತಸದ ಗೆರೆಯೊಂದು ಮೂಡುತ್ತದೆ ಮುಖದ ತುಂಬಾ.

■ **ಜಿ.ಎ. ಶಾಂತಾರಾಮ್**

ಸೀರಿಯಸ್ !

ಒಬ್ಬ ಗಾಬರಿಯಿಂದ 'ಡಾಕ್ಟ್ರೇ! ನಮ್ಮಾಕೇನ ನಮ್ಮ ಎಮ್ಮೆ ತಿವಿದು ಬಿಟ್ಟಿದೆ. ತುಂಬ ಸೀರಿಯಸ್ಸಾಗಿದೆ. ದಯಮಾಡಿ ಈ ಕ್ಷಣವೇ ನಮ್ಮ ಮನೇಗೆ ಬನ್ನಿ ಡಾಕ್ಟರ್' ಡಾಕ್ಟರ್‌ಗೆ ಫೋನ್ ಮಾಡಿದ ಶ್ರೀನಿವಾಸಯ್ಯ.

'ಸಾರಿ! ನಾನು ವೆಟರ್ನರಿ ಡಾಕ್ಟರ್ ಕಣ್ರೀ! ನಾನು ಬಂದು ಮಾಡೋದೇನಿದೆ' ಎಂದ ಡಾಕ್ಟರ್.

'ನನಗೂ ಗೊತ್ತು ಡಾಕ್ಟರ್. ತಾವು ವೆಟರ್ನರಿ ಅಸಿಸ್ಟೆಂಟ್ ಸರ್ಜನ್ ಅಂತ. ಸೀರಿಯಸ್ಸಾಗಿರೋದು ನಮ್ಮಾಕೆಗಲ್ಲ - ನಮ್ಮ ಎಮ್ಮೆಗೆ' ಎಂದ.

■

‘ಹೃದಯವಿರಲಿ’ ನಿಮ್ಮೆಲ್ಲರಲಿ



ಅಮಚೀ ಮುಂಬಯಿ
ಸುಂದರ ಮುಂಬಯಿ
ಮುಂಬಯಿಯ ಜನ ಹೆಮ್ಮೆಯಿಂದ ಹೇಳುವ ಮಾತಿದು
ನಮ್ಮ ಮುಂಬಯಿ
ಸುಂದರ ಮುಂಬಯಿ

ಆದರೆ ವಾಸ್ತವ ಬೇರೆಯೇ ಇದೆ. ಅರವತ್ತು ಮೈಲುದ್ದದ ಏಳು ದ್ವೀಪಗಳ ಸಮೂಹ ಮುಂಬಯಿ ಇವತ್ತು ದೊಡ್ಡ ಕೊಳೆಗೇರಿ. ಅಲ್ಲಿನ ಧಾರಾವಿ ಎಂಬ ಸ್ಲಂ ಇಡೀ ಏಷಿಯಾದಲ್ಲಿಯೇ ದೊಡ್ಡದು. ಬೆಳಿಗ್ಗೆ ಬಿಳಿಯ ಅಂಗಿ ತೊಟ್ಟು ಮನೆ ಬಿಟ್ಟರೆ ಸಂಜೆ ಮನೆ ಸೇರುವ ಹೊತ್ತಿಗೆ ಹೊಗೆಯ ಕಪ್ಪು, ರಸ್ತೆಯ ಧೂಳಿಂದ ಅಂಗಿಯ ಬಣ್ಣ ಕೆಟ್ಟಿರುತ್ತದೆ. ನಗರದುದ್ದಕ್ಕೂ ಮೈ ಚಾಚಿ ಬಿದ್ದ ಉದ್ದನುದ್ದ ರಸ್ತೆಗಳ ಮೈಮೇಲೆ ಹಗಲಿರುಳೆನ್ನದೆ ತಿರುಗುವ ಲಾರಿ, ಟ್ಯಾಕ್ಸಿ, ಕಾರುಗಳು ಉಗುಳುವ ಹೊಗೆ, ಎಲ್ಲೆಂದರಲ್ಲಿ ಒಟ್ಟಿದ ಕಸದ ರಾಶಿ. ಅದನ್ನು ಎತ್ತಿ ಸಾಗಿಸುವುದು ಕಷ್ಟ ಎಂದು ಇದ್ದಲ್ಲಿಯೇ ಬೆಂಕಿ ಹಚ್ಚಿ ಇನ್ನಷ್ಟು ಊರ ಗಾಳಿ ಹದಗೆಡಿಸುವ ಪರಿಯಿಂದ ಇಲ್ಲಿ ಮೂಗಿಗೇ ಕರ್ಚೀಫು ಒತ್ತಿಕೊಂಡೇ ನಡೆದಾಡಬೇಕು.

ಅದಕ್ಕೆ ಮುಂಬಯಿಯ ಹೃದಯ ತಜ್ಞ ಸಂದೀಪ್ ರಾಣೆ ದನಿಯೆತ್ತಿ ಹೇಳುತ್ತಾರೆ ‘ಹೃದಯವಿರಲಿ ನಿಮ್ಮೊಳಗೆ’. ಕಳೆದ ಹಲವು ವರ್ಷಗಳಿಂದ ಮುಂಬಯಿಯ ಪರಿಸರದ ಕಾಳಜಿ ವಹಿಸಿರುವ ಸಂದೀಪ್ ರಾಣೆ ನಡೆಸಿರುವ ಹೋರಾಟ ಈಗಲೂ ಒಂಟಿ ದನಿ. ಪುಣ್ಯವೆಂದರೆ ಕೋರ್ಟುಗಳು ಅವರ ನೆರವಿಗೆ ಬಂದಿವೆ ಎಂದೇ ಒಂದಿಷ್ಟು ಸಂಚಲನೆ ಸಾಧ್ಯವಾಗಿದೆ.

ಇತ್ತೀಚೆಗೆ ಮುಂಬಯಿ ಟ್ಯಾಕ್ಸಿಗಳು ಮುಷ್ಕರ ಹೂಡಿ ರಸ್ತೆ ಬದಿಗಳಲ್ಲಿ ನಿಂತುಬಿಟ್ಟವು, ಪರಿಸರ ಮಾಲಿನ್ಯ ಉಂಟು ಮಾಡುವ ಟ್ಯಾಕ್ಸಿಗಳ ವಿರುದ್ಧ ಬಿಗಿ ಕ್ರಮ ಕೈಗೊಳ್ಳುವಂತೆ ಮುಂಬಯಿ ನ್ಯಾಯಾಲಯ ಆದೇಶ ನೀಡಿದ್ದೇ ಇದಕ್ಕೆ ಕಾರಣ. ಇಂಥದೊಂದು ಕ್ರಮಕ್ಕೆ ವಿನಂತಿಸಿ ಕೋರ್ಟಿನ ಮೊರೆ ಹೋಗಿದ್ದರು. ಸಂದೀಪ್ ರಾಣೆ.

ಇವತ್ತಿಗೂ ಮುಂಬಯಿಯ ಬಹುಪಾಲು ಟ್ಯಾಕ್ಸಿಗಳು ದಶಕಗಳಿಗೂ ಹಿಂದಿನ ಫಿಯಟ್ ಮತ್ತು ಅಂಬಾಸಿಡರ್ ಕಾರುಗಳು. ಅವುಗಳು ಸಹಜವಾಗಿಯೇ ಗಾಳಿಯೊಳಗೆ ತುಂಬುವ ಕಾರ್ಬನ್‌ಮಾನಾಕ್ಸೈಡ್, ಕಾರ್ಬನ್ ಡೈ ಆಕ್ಸೈಡ್ ಮುಂತಾದ ಅನಿಲಗಳ ಪ್ರಮಾಣ ಆತಂಕಕಾರಿ. ಕಳೆದ ವರ್ಷ ಮಾರುತಿ ಉದ್ಯೋಗ್ ಸಂಸ್ಥೆ, ತಾನು ಮುಂಬಯಿ ಟ್ಯಾಕ್ಸಿಗಳಿಗೆಂದೇ ಹಲವು ನೂರು ವಾಹನ ಆದ್ಯತೆಯ ಮೇಲೆ ಬಿಡುಗಡೆ ಮಾಡುವುದಾಗಿ ಹೇಳಿದೆ. ಆದರೆ ಮುಂಬಯಿಯಲ್ಲಿರುವ ಹಲವು ಲಕ್ಷ ಟ್ಯಾಕ್ಸಿಗಳು ಎಲ್ಲ ಮಾರುತಿ ಕಾರಿಗೆ ಬದಲಾಗಬೇಕೆಂದರೆ ಹಲವಾರು ವರ್ಷಗಳೇ ಬೇಕಾಗುತ್ತದೆ.

ಎರಡು ವರ್ಷಗಳಿಂದ ಜನರಲ್ಲಿ, ಅದರಲ್ಲೂ ಮಕ್ಕಳಲ್ಲಿ ಶ್ವಾಸಕೋಶದ ತೊಂದರೆ ಹೆಚ್ಚುತ್ತಿದ್ದುದು ರಾಣೆ ಗಮನಿಸಿದರು. ‘ಸ್ಮೋಕ್’ ಎಂಬ ಸಂಸ್ಥೆಯ ಅಧ್ಯಕ್ಷರೂ ಆಗಿರುವ ರಾಣೆಗೆ ಇದು ತೀರಾ ಕಾಡಿತು. ಮುಂಬಯಿ ನಿವಾಸಿಗಳು ತಮ್ಮದಲ್ಲದ ತಪ್ಪಿಗೆ ಭಾರೀ ದಂಡ ತೆರುವುದು ಅನ್ಯಾಯ ಎನ್ನಿಸಿತು. ಎರಡು ವರ್ಷದ ಹಿಂದೆ ‘ಯುರೋಪಿಯನ್ ಮಾನದಂಡ’ ಅನುಸರಿಸಬೇಕೆಂದು ಸುಪ್ರೀಂಕೋರ್ಟ್ ನೀಡಿದ್ದ ನಿರ್ದೇಶನ ಅವರನ್ನು ಪ್ರೇರೇಪಿಸಿತು. ಮುಂಬಯಿಯಲ್ಲಿ ವಾಹನಗಳಿಂದಾಗುವ ಪರಿಸರ ಮಾಲಿನ್ಯ ತಗ್ಗಿಸಲು ವಿನಂತಿಸಿ ನ್ಯಾಯಾಲಯಕ್ಕೆ ಮೊರೆ ಹೋದರು.

ಸಾಮಾನ್ಯವಾಗಿ ನ್ಯಾಯಾಲಯ ಕಟ್ಟೆ ಏರಿದರೆ ನ್ಯಾಯ ದೊರೆಯುವಾಗ ತೀರಾ ವಿಳಂಬ ಆಗಿರುತ್ತದೆ. ಅಂಥದರಲ್ಲಿ ಅರ್ಜಿ ಸಲ್ಲಿಸಿದ ಆರು ತಿಂಗಳೊಳಗೆ ಪ್ರಕರಣ ಇತ್ಯರ್ಥವಾಯಿತು. ಪರಿಸರಕ್ಕೆ ಹಾನಿ ಮಾಡುವ ವಾಹನಗಳ ವಿರುದ್ಧ ಕ್ರಮ ಕೈಗೊಳ್ಳಲು ಹನ್ನೆರಡು ಹೆಚ್ಚುವರಿ ಸಂಚಾರಿದಳಗಳನ್ನು ರಚಿಸುವಂತೆ ಕೋರ್ಟು ನಿರ್ದೇಶಿಸಿತು. ಮುಂಬಯಿಯ ಸಾರಿಗೆ ಕಮೀಷನರ್ ವಿ.ಎಂ.ಲಾಲ್ ಅವರನ್ನು ‘ರಸ್ತೆ ಸಾರಿಗೆಯ ಶೇಷನ್’ ಎಂದೇ ಜನ ಕರೆಯುತ್ತಾರೆ. ಅವರು ಹದ್ದಿನ ದಾಳಿ ನಡೆಸಿ ಹೊಗೆಯುಗುಳುವ ವಾಹನಗಳನ್ನು ಎಳೆದು ತಂದು ಕಡಿವಾಣ ಹಾಕಿದರು.

ಸಂಘರ್ಷ ಎಂದೂ ಅವರ ಹಾದಿಯಲ್ಲ. ಟ್ಯಾಕ್ಸಿ ಡ್ರೈವರುಗಳ ಬಗ್ಗೆ ಅನುಕಂಪವಿದೆ. ನದಿಯ ಪ್ರವಾಹದ ವಿರುದ್ಧ ಬಂಡೆ ಸೆಟೆದು ನಿಲ್ಲುತ್ತದಾದರೂ ಅಂತಿಮ ವಿಜಯ ನದಿಯ ಹರಿಯುವ ನೀರಿನದು. ಅದು ಕಲ್ಲಿನ ಹಾಗೆ ಗಟ್ಟಿಯಲ್ಲ. ಆದರೆ ಸತತ ವರ್ತನೆಯಿಂದ ಬಂಡೆಗಲ್ಲನ್ನು ಸವೆಸುತ್ತದೆ ಎಂಬುದು ರಾಣೆಯ ನಿಲುವು.


ಟ್ಯಾಕ್ಸಿ ಡ್ರೈವರ್‌ಗಳಿಗಾಗಿಯೇ ಉಚಿತ ಆರೋಗ್ಯ ತಪಾಸಣೆ ನಡೆಸಲು ಮುಂದಾಗಿರುವ ರಾಣೆ, ಉಳಿದ ಬಹುಪಾಲು ಮುಂಬಯಿಯ ನಿವಾಸಿಗಳ ಬಗ್ಗೆ ಅಷ್ಟೇ ಕಾಳಜಿಯಿಂದ ತುಡಿಯುತ್ತಾರೆ. ನಗರದೊಳಗೆ ಪ್ರತಿ ಪೆಟ್ರೋಲ್ ಬಂಕ್‌ಗಳ ಬಳಿಯೂ ಇರುವ ಮಾಲಿನ್ಯ ಪರೀಕ್ಷಣಾ ಕೇಂದ್ರಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿವೆಯೇ ಇಲ್ಲವೇ ಎಂದು ಹಿರಿಯ ನಾಗರಿಕರು ದಿನದ ಕೆಲವು ಗಂಟೆ ನಿಂತು ಪರೀಕ್ಷಿಸುವಂತೆ ಕೋರಿದ್ದಾರೆ. ನಾಕಾಗಳ ಬಳಿ ಹೊಗೆಯುಗುಳುವ ಟ್ಯಾಕ್ಸಿಗಳ ಮೇಲೆ ಕಣ್ಣಿಡಲು ತಮ್ಮದೇ ಸಂಸ್ಥೆಯ ಸ್ವಯಂ ಸೇವಕರನ್ನು ನಿಯಮಿಸಿದ್ದಾರೆ.

ಮನುಷ್ಯನ ಉಸಿರ ಚೀಲ ಆರೋಗ್ಯಪೂರ್ಣವಾಗಿರಲು ಏನೆಲ್ಲ ಬೇಕೋ ಅದಕ್ಕಾಗಿ ತುಡಿಯುವ ಹೃದಯ ಈ ತಜ್ಞನದು. ಈಗ ಒಂಟಿ ದನಿಯಲ್ಲ. ಐದು ವರ್ಷಗಳ ಹಿಂದೆ ನ್ಯಾಯಾಲಯದಲ್ಲಿ ಸಾಧಿಸಿದ ಗೆಲುವು ಅವರ ಮುಂದಿನ ಕೆಲಸಗಳಿಗೆ ಪ್ರೇರಣೆ. ಮುಂಬಯಿಯ ದೇವನಾರ್‌ನಲ್ಲಿ ಕಸ ಸುಡುತ್ತಿದ್ದ ಕ್ರಮ ಪ್ರಶ್ನಿಸಿ ರಿಟ್ ಸಲ್ಲಿಸಿ ಗೆದ್ದಿದ್ದರು.

‘ಎಲ್ಲರಿಗೂ ಆರೋಗ್ಯ’ ಎಂಬ ವಿಶ್ವ ಆರೋಗ್ಯ ಸಂಸ್ಥೆಯ ಘೋಷಣೆಯಲ್ಲಿ ರಾಣೆಗೆ ತುಂಬಾ ನಂಬಿಕೆ. ಇವರಿರುವ ಚೆಂಬೂರಿನ ಪೆಸ್ರೋನ್‌ಸಾಗರ್ ಸುತ್ತಮುತ್ತ ಇರುವ ಆರು ಸಾವಿರ ಗುಡಿಸಲ ನಿವಾಸಿಗಳ ಆರೋಗ್ಯ ತಪಾಸಣೆ, ಆರೋಗ್ಯ ಶಿಬಿರಗಳನ್ನು ನಡೆಸುತ್ತಾರೆ. ಮುಂದೆ ಕೈಗಾರಿಕೆಗಳು ಉಂಟುಮಾಡುವ ಮಾಲಿನ್ಯ ತಡೆಗೆ ಹೋರಾಡುವ ಉದ್ದೇಶವಿದೆ. ಆ ಬಗ್ಗೆ ಸಂಶೋಧನೆ ಸಾಗಿದೆ. ಮೊದಲ ಹಂತವಾಗಿ ಮಾಲಿನ್ಯ ಉಂಟು ಮಾಡುವ ಕೈಗಾರಿಕೆಗಳವರನ್ನು ಕಂಡು ಮಾತಾಡಿ ಮನ ಒಲಿಸುವ ಉದ್ದೇಶ. ಅದೆಲ್ಲ ಆಗದೇ ಇದ್ದಾಗ, ತೀರಾ ಅನಿವಾರ್ಯವಾದಾಗ ಮಾತ್ರ ನ್ಯಾಯಾಲಯದ ಮೊರೆ ಹೋಗುವುದು ರಾಣೆಯ ಉದ್ದೇಶ.

ಇದಕ್ಕೆಲ್ಲ ಜನ ಬೇಕು. ಆದರೆ ಮುಂಬಯಿ ಜನಕ್ಕೆ ಬಿಡುವೆಂಬುದೇ ಇಲ್ಲ. ಈತ ಮಾತ್ರ ತನ್ನ ಕ್ಲಿನಿಕ್, ಹೆಂಡತಿ, ಎರಡು ಮಕ್ಕಳ ಸಂಸಾರ ನಿರ್ವಹಣೆ ಮಾಡುತ್ತಲೇ ಎಷ್ಟೆಲ್ಲ ಬಿಡುವು ಮಾಡಿಕೊಂಡು ಜನರ ಆರೋಗ್ಯದತ್ತ ಕಾಳಜಿ ತೋರುತ್ತಾರೆ. ಅಂಥವರಿಗೊಂದು ಶಹಬಾಸ್‌ಗಿರಿ ಕೊಡಬೇಕೆನಿಸಿದರೆ, ಪ್ರೋತ್ಸಾಹದ ನುಡಿ ಹೇಳಲು ಬಯಸುವಿರಾದರೆ ಇಲ್ಲಿದೆ ಅವರ ವಿಳಾಸ:

ಡಾ. ಸಂದೀಪ್ ರಾಣೆ, ರಾಣೆ ಹಾಸ್ಪಿಟಲ್, ಪೆಸ್ರೋನ್ ಸಾಗರ್, ಚೆಂಬೂರು, ಮುಂಬಯಿ - 400 089. ದೂರವಾಣಿ : 022 5220277. ■



ಕಪ್ಪು ವಿಧವೆ ಜೇಡ ಸಂಭೋಗದ ಸಮಯಕ್ಕೆ ಗಂಡು ಜೇಡವನ್ನು ತಿಂದು ಹಾಕುತ್ತದೆ. ಅದಕ್ಕಾಗಿಯೇ ಅದಕ್ಕೆ ಸದಾ ವಿಧವೆಯ ಪಟ್ಟ.

ಕಪ್ಪು ವಿಧವೆ ಜೇಡ

ಅದರ ಹೆಸರೇ ಹಾಗೇ. ನೋಡಲು ಕಪ್ಪು. ವಿಷಯುಕ್ತ. ಗಂಡಿಗಿಂತ ಬಲ. ಗಂಡಿನ ಜೊತೆ ಕೂಡಿದ ಗಳಿಗೆಯಲ್ಲೇ, ಗಂಡನ್ನು ಕೊಂದು ತಿಂದು ಬಿಡುತ್ತದೆ. ಹಾಗಾಗಿಯೇ ಈ ಜೇಡ ಸದಾ ವಿಧವೆ.

ಹೆಚ್ಚಾಗಿ ಉಷ್ಣ ವಲಯದಲ್ಲಿ ವಾಸ. ಹಲವಾರು ಪ್ರಬೇಧಗಳಿವೆ. ಉತ್ತರ ಅಮೇರಿಕಾದ ಈ ಬಗೆಯ ಜೇಡಗಳಲ್ಲಿ ಶಕ್ತಿಯುತ ವಿಷ ಹೆಚ್ಚು. ಕುತ್ತಿಗೆ ಮತ್ತು ದೇಹದ ಭಾಗದಲ್ಲಿ ವಿಷದ ಗ್ರಂಥಿಗಳಿರುತ್ತವೆ. ಅದನ್ನು ಸಾಗಿಸಲು ನಳಿಕೆ. ವಿಷ ಉಗುಳಲು ಕೊಂಡಿಗಳಿವೆ. ಇದು ನರಗಳ ಮೇಲೇ ತೀವ್ರ ಪರಿಣಾಮಕಾರಿ. ಮನುಷ್ಯರನ್ನೂ ಕೂಡ ಈ ಜೇಡ ಹಾನಿಗೊಳಿಸಬಲ್ಲದು. ಇವುಗಳಲ್ಲಿ ಕೆಲವನ್ನು ಬಟನ್, ಕೆಂಪು ಬೆನ್ನು, ಅವರ್ ಗ್ಲಾಸ್ ಎಂದೆಲ್ಲ ಗುರುತಿಸಲಾಗುತ್ತದೆ.

ಬೇರೆ ಜೇಡಗಳ ಹಾಗೆ ಇದು ಕಸುಬುದಾರಳಂತೆ ಬಲೆ ಹೆಣೆಯುವುದಿಲ್ಲ. ಒಡ್ಡೊಡ್ಡು ಬಲೆ ದೊಡ್ಡದಾಗಿ ನೇಯುತ್ತದೆ. ಕೀಟ ಬಲೆಯ ದಾರದ ಮೇಲೆ ಕುಳಿತ ಕ್ಷಣ ತಿಳಿಯುತ್ತದೆ. ಹಾರಿ ಬಲಿಯ ಮೇಲೆ ಜೊಲ್ಲು, ವಿಷ ಕಾರುತ್ತದೆ. ಕೊಂಡಿಯ ನಳಿಕೆಯ ಮೂಲಕ ಬಲಿಯ ದೇಹದೊಳಗೆ ಇಳಿಯುವ ಇವು ಸಿಕ್ಕಿಬಿದ್ದ ಕೀಟದೊಳಗಿನದನ್ನೆಲ್ಲ ಕರಗಿಸುತ್ತವೆ. ಆ ರಸ ಈ ಜೇಡಕ್ಕೆ ಆಹಾರ. ಉಳಿಯುವುದು ಕೀಟದ ಕವಚ ಮಾತ್ರ. ಕಪ್ಪು ವಿಧವೆ ಜೇಡ ತಯಾರಿಸಿ ಬಳಸುವ ವಿಷದಲ್ಲಿ ನ್ಯೂರೋ ಟಾಕ್ಸಿನ್ ಇರುತ್ತದೆ. ಹೀಗಾಗಿ ಇದು ನರಗಳ ಮೇಲೆ ತೀವ್ರ ಪರಿಣಾಮಕಾರಿ. ಈ ಜೇಡ ಕಚ್ಚಿದರೆ ತೀವ್ರ ನೋವು, ಮೈ ಬಿಗಿತ ಮತ್ತು ಹೈಪರ್ ಟೆನ್ಷನ್ ಉಂಟಾಗತ್ತದೆ. ಈ ವರ್ಗದ ಜೇಡಗಳಲ್ಲಿ ಹೆಣ್ಣಿನದೇ ಪ್ರಾಬಲ್ಯ. ಇದರ ವಿಷ ಎಷ್ಟೇ ಪ್ರಬಲವಾದರೂ, ಮನುಷ್ಯರ ಜೀವ ತೆಗೆಯುವಷ್ಟು ಪ್ರಮಾಣದಲ್ಲಿ ಇರುವುದಿಲ್ಲ. ಹೆಣ್ಣು ಬಲೆ ಕಟ್ಟುವುದು ಎತ್ತರದಲ್ಲಿ. ಗಂಡು ಸಣ್ಣ ಬಲೆ ನೇಯುತ್ತದೆ. ತಂಪಾದ, ಕತ್ತಲ ಪ್ರದೇಶ ಇದಕ್ಕೆ ಇಷ್ಟ, ಸೆಲ್ಲರ್‌ಗಳು, ಪಾಳುಬಿದ್ದ ಮನೆ, ತಿಪ್ಪೆಗುಂಡಿಗಳೆಂದರೆ ಇವಕ್ಕೆ ಬಲೆನೇಯಲು ಪ್ರಶಸ್ತ ಜಾಗ. ಅಲ್ಲಿ ತಾನೇ ನಾನಾ ಬಗೆಯ ಕೀಟಗಳು ಓಡಾಡುವುದು.

ಯೌವನಾವಸ್ಥೆಗೆ ಬಂದ ಜೇಡ ಸಂತಾನೋತ್ಪತ್ತಿಗೆ ಸಜ್ಜಾಗುತ್ತದೆ. ಗಂಡು ಜೇಡ ಸಣ್ಣದೊಂದು ಬಲೆ ನೇಯ್ದು, ಅದಕ್ಕೆ ತನ್ನ ಹೊಟ್ಟೆ ಒತ್ತಿ ವೀರ್ಯವನ್ನು ಕಾರುತ್ತದೆ. ಅದನ್ನು ಬಾಯಿ ಹತ್ತಿರವಿರುವ ಪೆಟಿಪ್ಯಾಲ್ಪಾ ಎಂಬ ಭಾಗದಲ್ಲಿ ಸಂಗ್ರಹಿಸಿ ಇಟ್ಟುಕೊಳ್ಳುತ್ತದೆ. ಇದೊಂದು ರೀತಿಯಲ್ಲಿ ಗಂಡಿನ ವೀರ್ಯ ಕಣಜ. ಇದನ್ನು ಹೆಣ್ಣಿಗೆ ವರ್ಗಾಯಿಸಿ, ಸಂತಾನೋತ್ಪತ್ತಿಗೆ ನೆರವಾಗುತ್ತದೆ. ಎಷ್ಟೋ ವೇಳೆ ಕಣಜದಲ್ಲಿ ವೀರ್ಯಾಣು ತಿಂಗಳುಗಟ್ಟಲೆ ಸಂಗ್ರಹವಾಗಿ ಉಳಿದಿರುತ್ತದೆ.

ಹೆಣ್ಣು ಜೇಡ ಕೂಡ ಗಂಡಿನಿಂದ ಪಡೆದ ವೀರ್ಯಾಣುದಿಂದ ಒಂದೇ ಸಲಕ್ಕೆ ಮೊಟ್ಟೆ ಇಡುವುದಿಲ್ಲ. ತನಗೆ ಬೇಕೆನಿಸಿದಾಗ ಸಂತಾನೋತ್ಪತ್ತಿ ಮಾಡಿಕೊಳ್ಳಲು ಗಂಡಿನಿಂದ ಪಡೆದ ವೀರ್ಯಾಣುವನ್ನು ಸಂಗ್ರಹಿಸಿ ಇಟ್ಟುಕೊಳ್ಳುತ್ತದೆ. ಆ ನಂತರ ಹಲವು ಕಾಲದವರೆಗೆ ಮೊಟ್ಟೆ ಇಡುತ್ತಾ ಹೋಗುತ್ತದೆ. ಮೃದುವಾದ ರೇಷಿಮೆ ಹುಳುವಿನ ಕೋಶದಂತಿರುವ ಈ ಮೊಟ್ಟೆ ಫಲಿತವಾಗಿ ಜೇಡದ ಮರಿ ಹೊರ ಬಂದದ್ದೇ ತನ್ನ ಪಾಡಿಗೆ ತಾನು ಸ್ವತಂತ್ರವಾಗಿ ಬದುಕಲು ಆರಂಭಿಸುತ್ತದೆ.

ಕಪ್ಪು ವಿಧವೆ ಜೇಡ ಸಂಭೋಗದ ಸಮಯಕ್ಕೆ ಗಂಡು ಜೇಡವನ್ನು ತಿಂದು ಹಾಕುತ್ತದೆ. ಅದಕ್ಕಾಗಿಯೇ ಅದಕ್ಕೆ ಸದಾ ವಿಧವೆಯ ಪಟ್ಟ. ಸಂತಾನ ಉತ್ಪತ್ತಿಗಾಗಿ ಅಗತ್ಯ ಇರುವ ಪೋಷಕಾಂಶಗಳನ್ನು ಪಡೆಯಲು ಪ್ರಕೃತಿ ರೂಪಿಸಿರುವ ಕ್ರಮ ಎಂಟು ವಾರವಿದೆ. ಆದರೆ ಇದನ್ನು ಹಲವು ಕೀಟ ವಿಜ್ಞಾನಿಗಳು ಒಪ್ಪುವುದಿಲ್ಲ. ಅವರು ಕಪ್ಪು ವಿಧವೆ ಜೇಡದ ನಾನಾ ಪ್ರಬೇಧಗಳ ಬಗ್ಗೆ ದೀರ್ಘಕಾಲ ಅಭ್ಯಾಸ ನಡೆಸಿದವರು. ತಾವು ಅಂಥ ರಾಕ್ಷಸ ಪ್ರವೃತ್ತಿಯನ್ನು ಕಂಡಿಲ್ಲ ಎಂದು ಅವರು ಹೇಳುತ್ತಾರೆ. ಆದರೂ 'ಕಪ್ಪು ವಿಧವೆ ಜೇಡ' ಎಂಬ ಹೆಸರು ಮಾತ್ರ ಹಾಗೇ ಉಳಿದುಕೊಂಡೇ ಬಂದಿದೆ.

■ ಎಸ್.ಜೆ

ಸಾಕ್ಷಿ ಪ್ರಜ್ಞೆ

ಕಟಕಟೆಯಲ್ಲಿ ನಿಂತ ಸಾಕ್ಷಿಯನ್ನು ತುಸು ಉಬ್ಬಿಸಿ ಅನಂತರ ಹಳ್ಳಕ್ಕೆ ಕೆಡವಬೇಕೆಂದು ಹವಣಿಸಿದ ಲಾಯರು 'ನೀವು ಕಾನೂನು ತಿಳಿದವರೂ ನ್ಯಾಯನಿಷ್ಠರೂ ಪ್ರಾಮಾಣಿಕರೂ ನೀತಿವಂತರೂ ಆಗಿರುವಂತಿದೆ' ಎಂದು ಆತನ ಮುಖವನ್ನು ದಿಟ್ಟಿಸಿದರು. ಆಗ ಲಾಯರ್ ಹುನ್ನಾರವನ್ನು ಊಹಿಸಿದ ಸಾಕ್ಷಿ 'ನಾನು ಭಗವದ್ಗೀತೆಯನ್ನು ಹಿಡಿದು ಪ್ರಮಾಣ ಮಾಡದೇ ಇದ್ದಿದ್ದರೆ ನಿಮಗೂ ನಾನು ಇಂಥವೇ ಮಾತುಗಳನ್ನು ಹೇಳಬಹುದಿತ್ತು' ಎಂದು ಲಾಯರ್ ಹುಷಾರು ತಪ್ಪಿಸಿ ಬಿಟ್ಟ.

■ ಕೆ. ವೆಂಕಣ್ಣಾಚಾರ್

ಪುಸ್ತಕಗಳ ಪುನರ್ಜನ್ಮ

■ ಕೆ.ಸತ್ಯನಾರಾಯಣ

ಆ ಕತೆ ಆ ನೀರವತೆಯಲ್ಲಿ ಮತ್ತೆ ಹುಟ್ಟಿದ ಬಗೆಯೇ ಬೇರೆ. ಕತೆ ಮುಗಿಸಿದ ತಕ್ಷಣ, ಶಕುಂತಲೆ, ದುಷ್ಯಂತ, ಪ್ರಿಯಂವದೆ, ಅನುಸೂಯ, ಎಲ್ಲರೂ ನನ್ನೆದುರಿಗೆ ಬಂದು ಕೂತುಕೊಂಡ ಹಾಗೆ, ಶಕುಂತಲೆಯ ಪ್ರೇಮದ ವಿರಹದ ನೋವಿನ ಕತೆಯನ್ನು ಅವರವರ ದೃಷ್ಟಿಕೋನದಿಂದ ಬೆಳಕಾಗುವ ತನಕವು ಹೇಳಿದ ಹಾಗೆ

ಪುನರ್ಜನ್ಮದ ಕಲ್ಪನೆಯಲ್ಲಿ ನಂಬಿಕೆಯಿಲ್ಲದವರು ಕೂಡ ವಯಸ್ಸಾಗುತ್ತಿದ್ದಂತೆ ಪುನರ್ಜನ್ಮದ ಬಗ್ಗೆ ಆಸೆ ಪಡುತ್ತಾರೆ. ಮತ್ತೆ ತಾವು ಹುಟ್ಟಲು ಸಾಧ್ಯವಾಗುವುದಾದರೆ ಪ್ರಿಯರಾದವರ ಜೊತೆ, ಬಂಧುಗಳ ಜೊತೆ, ಶತ್ರು - ಹಿತ ಶತ್ರುಗಳ ಜೊತೆ ಹೇಗೆ ವ್ಯವಹರಿಸಬೇಕು ಎಂದೆಲ್ಲ ಲೆಕ್ಕ ಹಾಕುತ್ತಾರೆ. ಪುನರ್ಜನ್ಮದ ಕಲ್ಪನೆಯ ಬಗ್ಗೆಯೆ ಮನುಷ್ಯನಿಗೆ ಅದೇಕೆ ಅಷ್ಟೊಂದು ಆಸೆಯೆಂದರೆ ಅಮರತ್ವದ ಅವನ ಬಯಕೆಯನ್ನು ಅದು ಪೂರೈಸುತ್ತದೆ. ಮನುಷ್ಯ ಪುನರ್ಜನ್ಮ ಸಂಬಂಧ ತುಂಬಾ ಗಹನವಾದ ವಿಷಯ. ತಾತ್ವಿಕರಿಗೆ, ಧರ್ಮಭೀರುಗಳಿಗೆ ಅದನ್ನು ಬಿಟ್ಟು ಅಮರತ್ವ ಬಯಸದ, ನಿರ್ಲಿಪ್ತವಾಗಿ ನಿರುಪದ್ರವಿಯಾಗಿ ಗ್ರಂಥಾಲಯದ ಮೂಲೆಯಲ್ಲೋ. ಮನೆಯ ಅಟ್ಟದಲ್ಲೋ ಸೆಕೆಂಡ್ ಹ್ಯಾಂಡ್ ಪುಸ್ತಕದಂಗಡಿಯ ಬಿಕರಿ ವಸ್ತುವಾಗಿ ಫುಟ್‌ಪಾತ್ ಮೇಲೋ ಪುಸ್ತಕವೊಂದು ತಾನು ಬಯಸದೆ ಕೂಡ ಪುನರ್ಜನ್ಮ ಪಡೆಯುವ ಬಗೆ ಸೋಜಿಗವಾದದ್ದು.

ವರ್ಜೀನೀಯಾ ವುಲ್ಫ್‌ದು ಒಂದು ಮಾತಿದೆ. ನಿನ್ನ ಬರವಣಿಗೆಗೆ ಸಮಕಾಲೀನರಿಂದ ಬರುವ ಪ್ರತಿಕ್ರಿಯೆ ಮೆಚ್ಚುಗೆ ಪ್ರಶಸ್ತಿ ಇದೆಲ್ಲ ಸಾಕಾಗುತ್ತಿಲ್ಲವೆಂದು ನೀನು ತಲೆ ಕೆಡಿಸಿಕೊಳ್ಳಬೇಡ. ನಿಜಕ್ಕೂ ನೀನು ಪ್ರತಿಭಾವಂತನಾಗಿದ್ದರೆ, ಅದೃಷ್ಟವಂತನಾಗಿದ್ದರೆ, ಮುಂದೆಂದೋ ಒಂದು ದಿನ ಒಬ್ಬ ಓದುಗ, ಕೇವಲ ಒಬ್ಬ ಓದುಗ ನಿನಗೆ ಪುನರ್ಜನ್ಮ ಕೊಡುತ್ತಾನೆ. ಈ ಮಾತು ಎಷ್ಟು ಸತ್ಯ ಎಂಬುದು ಪ್ರತಿಯೊಬ್ಬ ಓದುಗನ ಅನುಭವಕ್ಕೂ ಬಂದಿರುತ್ತದೆ. ಅಪ್ರಜ್ಞಾಪೂರ್ವಕವಾಗಿ, ಅಸ್ಪಷ್ಟವಾಗಿ.

ದೊಡ್ಡ ಗ್ರಂಥಾಲಯವೊಂದಕ್ಕೆ ನೀವು ಪ್ರವೇಶಿಸುತ್ತೀರಿ. ಹಲವು ಅಂತಸ್ತುಗಳ ಕಟ್ಟಡ ಅದು. ಲಕ್ಷಾಂತರ ಪುಸ್ತಕಗಳು, ಮನುಷ್ಯನಾದವನು ನೂರಾರು ಜನ್ಮವೆತ್ತಿ, ಹತ್ತಾರು ದೇಶಗಳಲ್ಲಿ ಹುಟ್ಟಿ ಬರೆದ ಪುಸ್ತಕಗಳವು. ಒಂದು, ಒಂದೇ ಒಂದು ಪುಸ್ತಕವನ್ನೂ ನೀವು ಕೈಗೆತ್ತಿಕೊಳ್ಳುತ್ತೀರಿ. ಕತೆಯೋ, ಕಾದಂಬರಿಯೋ, ಜೀವನ ಚರಿತ್ರೆಯೋ, ಪ್ರವಾಸ ಕಥನವೋ, ಅದು ನಿಮ್ಮ ಮನಸ್ಸಿಗೆ ಪ್ರಿಯವಾಗುತ್ತದೆ. ಎಂದೋ, ಎಲ್ಲೋ, ಯಾರೋ ಬರೆದದ್ದು. ನಿಮ್ಮ ಅನುಭವಕ್ಕೆ, ಚಿಂತನೆಗೆ ಹೊಂದಿಕೆಯಾಗಿರುವಂತಿರುತ್ತದೆ. ಆ ಕತೆ, ಆ ಚರಿತ್ರೆ, ಆ ಸನ್ನಿವೇಶ, ನಿಮ್ಮೆದುರಿಗೆ ನಡೆದಂತಾಗುತ್ತದೆ. ಮೆಚ್ಚಿ ನೀವು ಸುಮ್ಮನಿರುವುದಿಲ್ಲ. ನಿಮ್ಮ ಗೆಳೆಯರಿಗೆ, ಆಪ್ತರಿಗೆ ಹೇಳುತ್ತೀರಿ. ಕೃತಿ, ಅದರ ಲೇಖಕ ಅವನ ಅನುಭವ ಕಾಣ್ಕೆ, ಎಲ್ಲವೂ ನಿಮ್ಮಿಂದ ಪುನರ್ಜನ್ಮ ಪಡೆದು ಮತ್ತೆ ಚಾಲ್ತಿಗೆ ಬಂದುಬಿಡುತ್ತದೆ. ನೀವು ಲೇಖಕರಾಗಿದ್ದು, ಸಾಹಿತ್ಯವಲಯದಲ್ಲಿದ್ದರೆ ಆ ಕೃತಿಯ ಬಗ್ಗೆ ಲೇಖನವನ್ನು ವಿಮರ್ಶೆಯನ್ನೂ ಬರೆದು ಆ ಕೃತಿಯನ್ನು, ಆ ಲೇಖಕನನ್ನು ಸಮಕಾಲೀನ ಕೃತಿ ಲೇಖಕನನ್ನಾಗಿ ಪರಿವರ್ತಿಸಿ ಬಿಡುತ್ತೀರಿ.

ಇದೆಲ್ಲವೂ ನಮಗೆ ಸ್ಥೂಲವಾಗಿ ಅನುಭವಕ್ಕೆ ಬಂದಿರುವಂಥದ್ದೆ. ನನ್ನ ಅನುಭವದ ಒಂದೆರಡು ಪ್ರಸಂಗಗಳನ್ನು ಹೇಳುತ್ತೇನೆ. ವರ್ಷಗಳ ಹಿಂದೆ ನಡುರಾತ್ರಿಯಲ್ಲಿ ಎಚ್ಚರವಾಯಿತು. ನೀರವತೆ, ಅದೂ ಏನೋ ಹವಣಿಕೆಯ ವಾಸನೆ, ತಹತಹ. ಏನೆಂದೂ ನನಗೂ ತಿಳಿಯುತ್ತಿಲ್ಲ. ಇಡೀ ಕೋಣೆಯೆಲ್ಲ ಯಾರದೋ ಆಗಮನಕ್ಕೆ, ಯಾರದೋ ಕಾಂತಿಗೆ ಸಿದ್ಧವಾಗುತ್ತಿರುವಂತಿದೆ. ನಡುರಾತ್ರಿಯಲ್ಲಿ ಯಾರು ಬರಬೇಕು. ನನಗೆ ದೆವ್ವ ಪ್ರೇತಗಳಲ್ಲಿ ನಂಬಿಕೆ ಕಡಿಮೆ. ನಂಬಲು ಆಸೆಯಿದ್ದರೂ ಏನು ಮಾಡಿದರೂ ನಿದ್ದೆ ಬಾರದೆ ಶೆಲ್ಫ್‌ನಿಂದ ಒಂದು ಪುಸ್ತಕ ತೆಗೆದೆ. ಮಾಸ್ತಿಯವರ ಕತೆಗಳ ಸಂಗ್ರಹ ಅದು. ಪೂರ್ವಾಪರ ಯೋಚನೆಯಿಲ್ಲದೆ ಹೇಮಕೂಟದಿಂದ ಬಂದ ಮೇಲೆ ಕತೆಯನ್ನು ಓದಲು ಪ್ರಾರಂಭಿಸಿದೆ. ಎಷ್ಟೋ ಸಲ ಓದಿದ್ದು, ಆದರೆ ಆ ಕತೆ ಆ ನೀರವತೆಯಲ್ಲಿ ಮತ್ತೆ ಹುಟ್ಟಿದ ಬಗೆಯೇ ಬೇರೆ. ಕತೆ ಮುಗಿಸಿದ ತಕ್ಷಣ, ಶಕುಂತಲೆ, ದುಷ್ಯಂತ, ಪ್ರಿಯಂವದೆ, ಅನುಸೂಯ, ಎಲ್ಲರೂ ನನ್ನೆದುರಿಗೆ ಬಂದು ಕೂತುಕೊಂಡ ಹಾಗೆ, ಶಕುಂತಲೆಯ ಪ್ರೇಮದ ವಿರಹದ ನೋವಿನ ಕತೆಯನ್ನು ಅವರವರ ದೃಷ್ಟಿಕೋನದಿಂದ ಬೆಳಕಾಗುವ ತನಕವು ಹೇಳಿದ ಹಾಗೆ ಸುತ್ತಮುತ್ತಲ ವಾತಾವರಣದಲ್ಲಿದ್ದ ಹವಣಿಕೆ ಯಾವುದೋ ಅತಿಥಿಗಳ ಆಗಮನದ ಸೂಚನೆ ನನಗೆ ಆಮೇಲೆ ಅರ್ಥವಾಯಿತು. ಮಾರನೆ ದಿನ ಬೆಳಿಗ್ಗೆಯಿಂದ ನನ್ನನ್ನು ಇಡಿಯಾಗಿ ಬೆನ್ನು ಹತ್ತಿದ ಈ ಕತೆಯನ್ನು ಹೊತ್ತುಕೊಂಡೇ ಇಡೀ ಬೆಂಗಳೂರು ನಗರದಲ್ಲಿದ್ದ ಸ್ನೇಹಿತರಿಗೆಲ್ಲ ತೋರಿಸಿ, ಅವರೆಲ್ಲರೂ ಕತೆಯನ್ನು ಓದುವಂತೆ ಮಾಡಿದೆ. ಶಕುಂತಲೆ ಅವಳ ಕತೆ, ಎಲ್ಲವೂ ಮತ್ತೆ ನಮ್ಮೊಡನೆ ಬದುಕಲು ಪ್ರಾರಂಭಿಸಿದವು. ಆ ಕತೆಯ ಮೇಲೆ ನಾನು ಟಿಪ್ಪಣಿಯೊಂದನ್ನು ಕೂಡ ಬರೆದದ್ದುಂಟು.

ಸಾಹಿತ್ಯ ವಲಯದ ವಾತಾವರಣ, ಜೀವಂತವಾಗಿರಬೇಕಾದರೆ ಈ ರೀತಿ ಕೃತಿಗಳು, ಲೇಖಕರು ದಿನವೂ ಓದುಗರ ಮನೆಗಳಲ್ಲಿ ಮನಸ್ಸಿನಲ್ಲಿ, ಲೇಖಕರ ಕಲ್ಪನೆಗಳಲ್ಲಿ ಪುನರ್ಜನ್ಮ ಪಡೆಯುತ್ತಿರಲೇಬೇಕು. ವೈಯಕ್ತಿಕವಾಗಿ ನಮಗೆ ಹೀಗೆಲ್ಲ ಆಗುತ್ತಿರಬಹುದೇನೋ. ಆದರೆ ಅದನ್ನು ಉತ್ಸಾಹದಿಂದ, ಸಂಭ್ರಮದಿಂದ ನಾವು ಹಂಚಿಕೊಳ್ಳುವ, ಸಾಂಕ್ರಾಮಿಕಗೊಳಿಸಿರುವ ಉದಾಹರಣೆಗಳು ತೀರಾ ಕಡಿಮೆ. ಕನ್ನಡದ ಯಾವ ದಿನಪತ್ರಿಕೆಗಳೂ, ಸಾಹಿತ್ಯಿಕ ಪತ್ರಿಕೆಗಳು, ಇಂತಹ ಪುನರ್ಜನ್ಮದ ಅನುಭವವನ್ನು, ಅದರಿಂದ ಅನುಭವಿಸಿದ ಉತ್ಸಾಹವನ್ನು ದಾಖಲಿಸಿದ ಉದಾಹರಣೆಗಳು ಕಡಿಮೆ. ಶತಮಾನೋತ್ಸವ ದಶಮಾನೋತ್ಸವ ಸಂದರ್ಭಗಳಲ್ಲೋ, ಸೆಮಿನಾರು ಸಂಕಿರಣಗಳ ಸಂಕಷ್ಟದ ಸಮಯದಲ್ಲೋ ಹಿಂದಿನ ಲೇಖಕರ, ಕೃತಿಗಳ ಬಗ್ಗೆ ಲೇಖನಗಳು, ಪರಿಚಯ ಪ್ರಕಟವಾದರೂ ಇಂತಹ ಲೇಖನಗಳಲ್ಲೆಲ್ಲ ಸಾಂದರ್ಭಿಕ ಕೆಲಸವೊಂದನ್ನು ನಿರ್ವಹಿಸಿದ ಅಚ್ಚುಕಟ್ಟುತನ ಇರುತ್ತದೆಯೆ ಹೊರತು, ಮನುಷ್ಯರಾಗಿ, ಓದುಗರಾಗಿ ನಾವೇ ಅನುಭವಿಸಿದ ಸಂತೋಷ, ಪುಳಕ ಇರುವುದಿಲ್ಲ. ನನಗೆ ತಿಳಿದ ಮಟ್ಟಿಗೆ ಈ ರೀತಿಯ ಅಂಕಣ ಇರುವುದು ಹಿಂದೂ ಪತ್ರಿಕೆಯಲ್ಲಿ ಮಾತ್ರ. ಪ್ರತಿ ತಿಂಗಳಿಗೊಮ್ಮೆ ಪ್ರಕಟವಾಗಿರುವ Classics Revisited ಅನ್ನುವ ಅಂಕಣದಲ್ಲಿ ರವಿ ವ್ಯಾಸ್ ಎನ್ನುವವರು ಹಳೆಯ ಪುಸ್ತಕಗಳ ಓದಿನ ಅನುಭವದಿಂದ ಸಿಗುವ ಸಂತೋಷವನ್ನು, ಆ ಪುಸ್ತಕಗಳು ನಮ್ಮ ಜೀವನಕ್ಕೆ ಹೇಗೆ ಪ್ರಸ್ತುತವೆಂಬುದನ್ನು ಪಂಡಿತ, ಪಾಮರರಿಬ್ಬರಿಗೂ ಪ್ರಿಯವಾಗುವಂತೆ ಸರಳ, ನೇರ, ವಿದ್ವತ್ಪೂರ್ಣ ಶೈಲಿಯಲ್ಲಿ ಹಂಚಿಕೊಳ್ಳುತ್ತಾರೆ. ಆ ಅಂಕಣವನ್ನು ಪ್ರತಿ ಸಲ ಓದುವಾಗಲೂ ಕನ್ನಡದಲ್ಲಿ ಇಂತಹದೊಂದು ಅಂಕಣವಿಲ್ಲದ್ದರ ಬಗ್ಗೆ ಬೇಸರವಾಗುತ್ತದೆ. ವಿಮರ್ಶಕ ಮಿತ್ರರ ಮೇಲೆ ಇನ್ನೊಮ್ಮೆ ಮುನಿಸು ಬರುತ್ತದೆ.

ಲಕ್ಷಾಂತರ, ಕೋಟ್ಯಾಂತರ ಪುಸ್ತಕಗಳು ನಾವು ಹುಟ್ಟುವುದಕ್ಕೆ ಮುಂಚೆಯೆ ಪ್ರಕಟವಾಗಿ ಬಿಟ್ಟಿರುವುರಿಂದ ಯಾವ ಪುಸ್ತಕಕ್ಕೆ ನಮ್ಮ ಮೂಲಕ ಪುನರ್ಜನ್ಮದ ಅದೃಷ್ಟ ಎಂಬುದನ್ನು ನಿರ್ಧರಿಸುವ ಸಂಗತಿ ಯಾವುದು ? ಎಲ್ಲ ಹಳೆಯ ಪುಸ್ತಕಗಳಿಗೂ, ಪುರಾತನ ಹಸ್ತಪ್ರತಿಗಳಿಗೂ ಇಂತಹ ಅದೃಷ್ಟವಿರುವುದಿಲ್ಲ. ಗ್ರಂಥಾಲಯದಿಂದ ನಮ್ಮ ಮನೆಗೆ ಬರುತ್ತವೆ. ಅನಪೇಕ್ಷಿತ ಅತಿಥಿಗಳಂತೆ ನಮ್ಮೊಡನೆ ಇದ್ದು ಬಂದ ದಾರಿಗೆ ಸುಂಕವಿಲ್ಲದಂತೆ ಮತ್ತೆ ಗ್ರಂಥಾಲಯಕ್ಕೆ ವಾಪಸ್ಸಾಗುತ್ತವೆ. ಒಂದು ಕೃತಿ ನಮ್ಮಿಂದ ಪುನರ್ಜನ್ಮ ಪಡೆಯಬೇಕಾದರೆ, ಆ ಕೃತಿಯ ಆಕೃತಿಯಲ್ಲೋ, ಅನುಭವದಲ್ಲೋ, ಸನ್ನಿವೇಶ ವಿನ್ಯಾಸದಲ್ಲೋ, ಆ ಪುಸ್ತಕವನ್ನು ಎತ್ತಿಕೊಂಡ ಕ್ಷಣದಲ್ಲಿ ನಮ್ಮ ಮನಸ್ಸಿನ ಒಳತೋಟಿಗೆ, ಹಸಿವಿಗೆ ತಾಳೆಯಾಗುವಂತಹ ಸಂಗತಿ ಮತ್ತು ಕಾಂತಿಯಿರಬೇಕು. ಆವಾಗ ಮಾತ್ರ ಆ ಕೃತಿ

ನಮ್ಮ ಒಳಗನ್ನು ಪ್ರವೇಶಿಸಿ ಕ್ಷಣಮಾತ್ರದಲ್ಲಿ ನವಮಾಸ ಧರಿಸಿ ವ್ಯಾಸನ ಮಹಾಭಾರತವೋ, ಅದರ ಪ್ರಸಂಗಗಳೋ ನಮ್ಮದಾಗುವುದು ಹೀಗೆ. ಇವು ಪ್ರಸಿದ್ಧ ಕೃತಿಗಳ ಉದಾಹರಣೆಗಳು. ಹೀಗೆ ಪ್ರಸಿದ್ಧವಾಗದ ಎಷ್ಟೋ ಕೃತಿಗಳು ಕೂಡ ಒಬ್ಬ ಓದುಗನಿಂದ ಪುನರ್ಜನ್ಮ ಪಡೆಯಬಹುದು. ನಿಖರವಾಗಿ ಹೇಳಬೇಕೆಂದರೆ ಪ್ರಸಿದ್ಧವಾದ ಕೃತಿಗಳ ಪುನರ್ಜನ್ಮಕ್ಕೆ ಸಾಂಸ್ಕೃತಿಕ ವಾತಾವರಣದಲ್ಲೆ ನಾನಾ ರೀತಿಯ ಪರಿಕರಗಳಿರುತ್ತವೆ. ಪುರಾಣಗಳ ಪಾರಾಯಣವಾಗಬಹುದು, ಪಠ್ಯಪುಸ್ತಕಗಳ ಮೂಲಕವಾಗಬಹುದು, ಸಂಘ ಸಂಸ್ಥೆಗಳಿಂದ ಪುನಮುದ್ರಣದ ಅವಕಾಶವಾಗಬಹುದು, ಹೇಗೋ ಅವು ನಮ್ಮನ್ನು ತಲುಪಿಬಿಡುತ್ತವೆ. ನನ್ನ ಆಸಕ್ತಿಯಿರುವುದು ಅಂತಹ ಕೃತಿಗಳ ಪುನರ್ಜನ್ಮದಲ್ಲಲ್ಲ. ಮನುಷ್ಯರಾಗಿ, ಓದುಗರಾಗಿ ನಾವೇ ಖುದ್ದಾಗಿ ಆಯ್ಕೆ ಮಾಡಿಕೊಟ್ಟ, ಪುನರ್ಜನ್ಮ ಕೊಟ್ಟ ಕೃತಿಗಳಲ್ಲಿ, ಪುಸ್ತಕಕ್ಕೆ ಮಾತ್ರ ಪುನರ್ಜನ್ಮವೆಂದು ತಿಳಿದರೆ ತಪ್ಪಾಗುತ್ತದೆ. ಪುಸ್ತಕಕ್ಕೆ ಪುನರ್ಜನ್ಮ ಕೊಡುವ ಪ್ರಕ್ರಿಯೆಯಲ್ಲಿ, ನಾವೂ, ನಮ್ಮ ಅನುಭವ ಚಿಂತನೆಗಳು ಕೂಡ ಪುನರ್ಜನ್ಮ ಪಡೆಯುತ್ತವೆ. ಹೆಣ್ಣಿನ ಜೀವನ, ದೃಷ್ಟಿಕೋನ ಕುರಿತಂತೆ ನಮ್ಮಲ್ಲಿರುವ ಬಹು ಪಾಲು ಕೃತಿಗಳು ಆಕೆಯನ್ನು ತಾಯಿಯಂತೆ ಮಾತ್ರ ನೋಡಿ ಆಕೆಯ ಪಾಲನಾ ಪ್ರವೃತ್ತಿಗೆ ಮಾತ್ರ ಒತ್ತು ನೀಡಿವೆ. ಕುವೆಂಪು, ಬೇಂದ್ರೆ, ಮಾಸ್ತಿ, ಕಾರಂತ ಎಲ್ಲರ ಬಹುತೇಕ ಸ್ತ್ರೀಪಾತ್ರಗಳು ಮಾತ್ರ ಕಲ್ಪನೆಗೆ ಪಾಲನಾ ಪ್ರವೃತ್ತಿಗೆ ಹತ್ತಿರವಾದವು. ನಂತರದ ಲೇಖಕಿಯರು ಹೆಂಗಸರಲ್ಲಿರುವ ಪ್ರತಿಭಟನೆ, ಬಂಡಾಯ, ಜೀವಂತಿಕೆಯ ಅಂಶಕ್ಕೆ ಒತ್ತು ಕೊಟ್ಟರು. ಹೀಗೆಲ್ಲ ಅಲ್ಲದೆ ಹೆಂಗಸನ್ನು ಬೇರೊಂದು ದೃಷ್ಟಿಯಿಂದ ಕೂಡ ನೋಡಬಹುದೆಂಬುದನ್ನು ಮಹಾಶ್ವೇತಾದೇವಿಯವರ '1084ರ ತಾಯಿ' ಕಾದಂಬರಿ ತೋರಿಸಿಕೊಡುತ್ತದೆ. ಸ್ವಂತ ಮಗನನ್ನೆ ರಾಜಕೀಯ ಕಾರಣಕ್ಕಾಗಿ ಕಳೆದುಕೊಂಡ ತಾಯಿ, ತನ್ನ ಮಗನಂತಹ ಬಂಡಾಯಗಾರರನ್ನು, ಅವರ ಮೂಲಕ ಸಮಾಜವನ್ನು ಪ್ರೀತಿಸುವುದು, ಅರ್ಥ ಮಾಡಿಕೊಳ್ಳುವುದು, ಈ ಕಾದಂಬರಿಯ ವಿನ್ಯಾಸದಲ್ಲಿದೆ. ಹೆಂಗಸಿನ ಎಲ್ಲ ಗುಣಗಳನ್ನು, ಮಾತೃ ಕಲ್ಪನೆಯನ್ನು, ಪಾಲನಾ ಪ್ರವೃತ್ತಿಯನ್ನು ಹೊಸ ದೃಷ್ಟಿಕೋನದಿಂದ ನೋಡಬಹುದೆಂಬುದನ್ನು, ತಾಯಿಯ ಕಲ್ಪನೆಯೇ ಸಾಮಾಜಿಕವಾದಾಗ ಆಧ್ಯಾತ್ಮಿಕ ಆಯಾಮವನ್ನು ಕೂಡ ಪಡೆಯಬಹುದೆಂಬುದನ್ನು ಈ ಕೃತಿ ತೋರಿಸಿಕೊಟ್ಟಿದೆ. ಈ ಕಾದಂಬರಿ ಓದಿ ಮುಗಿಸಿದ ಮೇಲೆ ಒಂದು ದಿನ ನಾನು ಅದರ ಗುಂಗಿನಲ್ಲಿಯೇ ಇದ್ದೆ. ದಿನ ಕಳೆದಂತೆ ಈ ಗುಂಗು ಒಂದು ರೀತಿಯ ಅನುಮಾನಕ್ಕೆ ಕಾರಣವಾಯಿತು. ಇಷ್ಟೊಂದು ಉದಾತ್ತವಾದ ಪಾತ್ರವನ್ನು, ಕಲ್ಪನೆಯನ್ನು ಮಾತ್ರವೇ ನಾವೇಕೆ ಮೆಚ್ಚಿಕೊಳ್ಳಬೇಕು. ಹೆಂಗಸು ನಮ್ಮ ತಾಯಂದಿರಂತೆ, ಹೆಂಡತಿಯರಂತೆ, ಸೋದರಿಯರಂತೆ, ಒಂದೇ ಕಾಲದಲ್ಲಿ ಎಲ್ಲ ಆಯಾಮಗಳನ್ನೊಳಗೊಂಡಿರಬಹುದಲ್ಲವೆ? ಸಾಧಾರಣ ಹೆಂಗಸರಲ್ಲೂ ಪಾಲನಾ ಪ್ರವೃತ್ತಿ ಕನಸುಗಾರಿಕೆ ಬಂಡುಕೋರತನ, ಜೀವನ ಪ್ರೀತಿ, ವ್ಯಾವಹಾರಿಕತೆ, ಜಿಗುಟುತನ, ಸೌಂದರ್ಯಾರಾಧನೆ, ಎಲ್ಲವೂ ಇರುತ್ತದಲ್ಲ. ಹಾಗಾದರೆ ಮಹಾಶ್ವೇತಾದೇವಿಯವರ ಉದಾತ್ತ ಕಲ್ಪನೆ ಮತ್ತು ಅದನ್ನು ನಾನು ಇಷ್ಟಪಟ್ಟಿದ್ದು ಸುಳ್ಳೆ.

ಈ ಗೊಂದಲದಲ್ಲಿರುವಾಗ ನನಗೆ ಆಕಸ್ಮಿಕವಾಗಿ ಸಿಕ್ಕಿದ್ದು ಹಿಂದಿ ಲೇಖಕಿ ಕೃಷ್ಣಾ ಸೋಬತಿಯವರ 'ವಾಯ್, ಲಡಕಿ' ಕಿರುಕಾದಂಬರಿಯ ಇಂಗ್ಲಿಷ್ ಅನುವಾದ. ಈ ಕಾದಂಬರಿಯ ನಾಯಕಿ ನಮಗೆ ನಿಮಗೆ ಗೊತ್ತಿರುವ ಸಾಮಾನ್ಯ ಹೆಂಗಸಿನ ಎಲ್ಲ ಗುಣ ಸ್ವಭಾವಗಳನ್ನು ಒಳಗೊಂಡಿದ್ದಾಳೆ. ಹಾಗೆ ಸಾಮಾನ್ಯ ಹೆಂಗಸಾಗಿರುವುದರಲ್ಲೇ ವಿಶಿಷ್ಟವಾಗಿದ್ದಾಳೆ. ಈಕೆ ಸಾವನ್ನು ಸಮೀಪಿಸುತ್ತಿದ್ದು ತೀವ್ರವಾದ ಅನಾರೋಗ್ಯವನ್ನು ಅನುಭವಿಸುತ್ತಿದ್ದಾಳೆ. ಸಿಂಹಾವಲೋಕನದ ಕ್ರಮದಲ್ಲಿ ಅವಳ ಬಾಲ್ಯ, ಯೌವ್ವನ, ಕಾಮ ಜೀವನ, ಗಂಡನೊಡನೆ ಜೀವನ, ಅತೃಪ್ತಿ ಕೌಟುಂಬಿಕ ಬಯಕೆ, ಮುಂದಿನ ಪೀಳಿಗೆಗೆ ಹೊಂದಿಕೊಳ್ಳುವ ಕಷ್ಟ, ಹೆಂಗಸರಿಗೆ ವಿಶಿಷ್ಟವಾಗಿರುವ ಜೀವನ ವಿವರಗಳ ಕಕ್ಕುಲಾತಿ, ಬಂಡಾಯದ ಆಸೆ, ಆತ್ಮಜ್ಞಾನ, ದೈವದ ಬಯಕೆ - ಏನುಂಟು, ಏನಿಲ್ಲ ಅನ್ನುವಂತೆ, ಎಲ್ಲವೂ ಸೇರಿಕೊಂಡಿವೆ. ಈ ಕಾದಂಬರಿಯನ್ನು ಓದಲು ಕೊಟ್ಟಿದ್ದ ಸ್ನೇಹಿತರು ಕೃತಿಯ ಬಗ್ಗೆ ಬಹಳ ಶಿಫಾರಸ್ ಮಾಡಿದ್ದರು. ಹಾಗಾಗಿ ಒಂದು ರೀತಿಯ ಅನುಮಾನದಿಂದ ನಾನು ಕೃತಿಯನ್ನು ಕೆಲದಿನ ತಡೆದೇ ಓದಿದೆ. ಒಂದು ಸಲ, ಎರಡು ಸಲ, ಮೂರು ಸಲ, ಓದಿ, ಒಳಗಡೆ ಇಳಿದ ಮೇಲೆ ಒಂದು ರೀತಿಯ ರಿಲೀಸ್ ಭಾವನೆಯನ್ನು ಅನುಭವಿಸಿದೆ. ನನ್ನ ಇದುವರೆಗಿನ ಜೀವನದಲ್ಲಿ, ನನ್ನ ಅನುಭವಕ್ಕೆ ಬಂದ ಹೆಂಗಸರೆಲ್ಲರು ತಾಯಿ, ತಂಗಿ, ಹೆಂಡತಿ, ಗೆಳತಿ, ಸಹೋದ್ಯೋಗಿಗಳು ಈ ತೀರಾ ಸಾಧಾರಣದವರು - ಎಲ್ಲರೂ ಹೊಸ ಪ್ರಭೆಯಲ್ಲಿ, ಹೊಸ ಸಾರ್ಥಕ ರೂಪದಲ್ಲಿ ಕಾಣತೊಡಗಿದರು. ಮಹಾಶ್ವೇತಾದೇವಿಯವರ ಉದಾತ್ತ ಪಾತ್ರದ ಕಲ್ಪನೆಯ ನೆರವಿಲ್ಲದೆಯೂ ಕೃಷ್ಣಾ ಸೋಬತಿಯವರ ಕೃತಿ ನಾನು ಓದಿದ್ದರಿಂದ ಆ ಕೃತಿ ಅದರಿಂದ ಮೂಡಿದ ಉತ್ಸಾಹದಿಂದಾಗಿ ನನ್ನ ಮತ್ತು ಸ್ನೇಹಿತರ ವಲಯದಲ್ಲಿ ಪುನರ್ಜನ್ಮ ಪಡೆದದ್ದು ಮಾತ್ರ ನಿಜವಲ್ಲ. ಅದರ ಮೂಲಕ ನನ್ನ ಇದುವರೆಗಿನ ಅನುಭವ ಚಿಂತನೆಗಳು ಪುನರ್ಜನ್ಮ ಪಡೆದದ್ದು ಕೂಡ ಅಷ್ಟೇ ನಿಜ. ಹೀಗೆ ಪುಸ್ತಕಗಳಿಗೆ ಪುನರ್ಜನ್ಮ ಕೊಡಲು ಹೋಗಿ ನಾವೇ ಪುನರ್ಜನ್ಮ ಪಡೆಯುವುದು ಎಷ್ಟು ಅದೃಷ್ಟವಲ್ಲವೆ?

ಕೆ.ಸತ್ಯನಾರಾಯಣ
503/2, ಸೆಂಟ್ರಲ್ ರೆವಿನ್ಯೂ ಕ್ವಾರ್ಟರ್ಸ್, 15ನೇ ಮುಖ್ಯರಸ್ತೆ,
ಅಣ್ಣಾ ನಗರ್, ಚೆನ್ನೈ - 6000 040.

ವ್ಯಂಗ್ಯ



ಅರಮನೆಯಲ್ಲಿಯೆ ಹುಟ್ಟಿ....
ಹುಟ್ಟುತ್ತಲೆ....
ಬಾಯಿಯಲಿ ಬೆಳ್ಳಿ ಚಮಚೆ
ಇಟ್ಟು.... ಬಂದವರೂ....
ಮಣ್ಣು ಸೇರುವುದು
ಬದುಕಿನ ವ್ಯಂಗ್ಯ!

■ ಕ.ಬ.ವೀರಣ್ಣ ಕಣ್ಣಾಗಾಲ

ಕಾದಂಬರಿಗಳ ಪ್ರಪಂಚ

ಅಮೇರಿಕನ್ ಕಾದಂಬರಿ : ಇಬ್ಬರು ಪ್ರೇಮಿಗಳ ಕತೆ. ಅವರು ಪರಸ್ಪರ ಭೇಟಿಯಾದಾಗ ಬಯಸಿದರೂ ಪುಸ್ತಕದ ಕೊನೆಯ ಪುಟದವರೆಗೂ ಭೇಟಿಯಾಗಲಾರರು.

ಫ್ರೆಂಚ್ ಕಾದಂಬರಿ : ಕತೆಯ ಆರಂಭದಲ್ಲಿ ಪ್ರೇಮಿಗಳು ಪರಸ್ಪರ ಭೇಟಿಯಾಗುತ್ತಾರೆ. ಮತ್ತೆ ಕೊನೆಯ ಪುಟದವರೆಗೂ ಒಬ್ಬರು ಇನ್ನೊಬ್ಬರಿಂದ ದೂರವೇ ಉಳಿಯುತ್ತಾರೆ.

ರಷ್ಯನ್ ಕಾದಂಬರಿ : ಪರಸ್ಪರ ಭೇಟಿಯಾಗದ ಪ್ರೇಮಿಗಳ ಕತೆ. ಕನಿಷ್ಠ 800 ಪುಟಗಳವರೆಗೂ ಯೋಚಿಸಿ ಯೋಚಿಸಿ ಬೋರ್ ಆಗುತ್ತಾ ಇರುತ್ತಾರೆ. ಓದುಗರನ್ನು ಬೋರ್ ಮಾಡುತ್ತಾರೆ.

ಉರ್ದು ಕಾದಂಬರಿ : ಇಬ್ಬರೂ ಕಾದಂಬರಿಯ ಆರಂಭದಿಂದ ಅಂತ್ಯದವರೆಗೂ ಪರಸ್ಪರ ಭೇಟಿಯಾಗಲು ಚಡಪಡಿಸುತ್ತಾರೆ. ಆದರೆ ಭೇಟಿಯಾಗುವುದೇ ಇಲ್ಲ. ಸಮಾಜವೇ ಅಡ್ಡಗೋಡೆಯಾಗಿ ಇಬ್ಬರ ನಡುವೆ ನಿಲ್ಲುತ್ತದೆ.

ಹಿಂದೀ ಕಾದಂಬರಿ : ಬಾಲ್ಯದಲ್ಲಿ ಭೇಟಿಯಾಗಿ ಬೇರ್ಪಡುತ್ತಾರೆ. ಯೌವನದಲ್ಲಿ ಮತ್ತೆ ಭೇಟಿಯಾಗಿ ವಿಯೋಗಕ್ಕೀಡಾಗುತ್ತಾರೆ. ಮೂರನೇ ಬಾರಿ ಭೇಟಿಯಾದಾಗ ಇಬ್ಬರೂ ಮುದುಕರಾಗಿರುತ್ತಾರೆ. ಅಲ್ಲಿಗೆ ಕಾದಂಬರಿಯ ಮುಕ್ತಾಯ!


■

ಹೊಸ ಪುಸ್ತಕ



ಪ್ರಿಯಾಂಕಳ ಪ್ರೇಮ ಪ್ರಕರಣ

ಲೇ: ಆರ್.ಎಸ್.ವೆಂಕಟರಾಜ್
ಪ್ರ: ಸಂಕೇತ ಪ್ರಕಾಶನ
673, 8ನೇ 'ಎ' ಮೇನ್,
ಮೊದಲ ಮಹಡಿ, 3ನೇ ಸ್ಟೇಜ್
ಮೂರನೇ ಬ್ಲಾಕ್ ಬಸವೇಶ್ವರ ನಗರ
ಬೆಂಗಳೂರು - 560 079.
ಪುಟ: 64, ಬೆಲೆ: 35/-



ಇವರು ಮುಖ್ಯಮಂತ್ರಿಯಾದರೆ...!

ಲೇ: ಬೀchi
ಪ್ರ: ಬೀchi ಬಳಗ, 84, ರೆಸಿಡೆನ್ಸಿ ರಸ್ತೆ,
ಬೆಂಗಳೂರು - 560 025.
ಪುಟ: 52, ಬೆಲೆ: 20/-




ಕನಸುಗಳು ಚೆಲ್ಲಿವೆ

ಲೇ: ಗೀತಾಂಜಲಿ ಎಸ್.ಸಿ.
ಪ್ರ: ಸಂವಹನ ಪ್ರಕಾಶನ
ಕನಸು ಗ್ರಾಫಿಕ್ಸ್, 5ನೇ ಅಡ್ಡರಸ್ತೆ
ಹಳೇ ಸಂತೆವೇರಿ ಬಡಾವಣೆ
ಸಕಲೇಶಪುರ - 573134
ಪುಟ: 48, ಬೆಲೆ: 30/-




ಭಾವ ಸಂವಹನ

ಸಂ : ದಿನೂ ಸ.ಚಂ.
ಪ್ರ: ಸಂವಹನ ಪ್ರಕಾಶನ,
ಕನಸು ಗ್ರಾಫಿಕ್ಸ್, 5ನೇ ಅಡ್ಡರಸ್ತೆ,
ಹಳೇ ಸಂತೆವೇರಿ,
ಸಕಲೇಶಪುರ - 573134
ಪುಟ: 80, ಬೆಲೆ: 35/-



ಇವನಾರವ

ಲೇ: ಶಿವಲಿಂಗಶಾಸ್ತ್ರಿ ಹಿರೇಮಠ
ಪ್ರ: ಡಾ.ಎಸ್. ಸಂತೋಷಕುಮಾರ
ಹಿರೇಮಠ, ಗುಡೂರು ಶ್ರೀ ಪ್ರಭುರಾಜೇಂದ್ರ
ಕ್ಲಿನಿಕ್, ಬರಗೂರ, ತಾ.ಗಂಗಾವತಿ
ಪುಟ: 62, ಬೆಲೆ: 25/-



ಸೂಕ್ತಿಗಳಲ್ಲಿ ಸಾಹಿತ್ಯ

ಲೇ: ಟಿ.ವಿ. ವೆಂಕಟರಮಣಯ್ಯ
ಪ್ರ: ಟಿ.ವಿ. ವೆಂಕಟರಮಣಯ್ಯ,
ಕೆ.ಎಚ್.ಬಿ. ಕಾಲೋನಿ,
EWS-218, 2ನೇ ಹಂತ, 5ನೇ ಕ್ರಾಸ್,
ಬಸವೇಶ್ವರ ನಗರ,
ಬೆಂಗಳೂರು - 560 079.
ಪುಟ:64, ಬೆಲೆ: 15/-



ವೈದ್ಯ ಕಂಡದ್ದು ಕೇಳಿದ್ದು

ಲೇ:ಡಾ. ರಾಘವೇಂದ್ರರಾವ್
ಪ್ರ: ಶ್ರೀ ಗುರುರಾಯ ವೈದ್ಯ ವಾಙ್ಮಯ
ಪ್ರಕಾಶನ, 202/24, 6ನೇ ಮುಖ್ಯ ರಸ್ತೆ,
ವೈಯಾಲಿ ಕಾವಲ್, ಬೆಂಗಳೂರು - 560 003.
ಪುಟ: 76, ಬೆಲೆ: 30/-




ಭಾರತ ಗೀತ ನೂರೊಂದು ಕವಿತೆಗಳು

ಸಂ:ಅಹ್ಮದ್ ಅನ್ವರ್ (ಅಬೂ ಅಸ್ರಾ)
ಪ್ರ: ವಿಚಾರ ಪ್ರಕಾಶನ, ಮೊದಲನೇ
ಮಹಡಿ, ವಿಜಯಶ್ರೀ ಮಹಲ್,
ಪಾಂಡೇಶ್ವರ, ಮಂಗಳೂರು - 575 001.
ಪುಟ: 142, ಬೆಲೆ: 40/-

ಜೇಮ್ಸ್ ಬಾಂಡ್ ಬದಲಾಗಬೇಕೇ?

ಒಂದು ಕಾಲವಿತ್ತು. ಆರಾಮಕುರ್ಚಿ ಪತ್ತೇದಾರರೇ ಜನಪ್ರಿಯ. ಆರ್ಥರ್ ಕಾನನ್ ಡಾಯ್ಲ್‌ನ ಶೆರ್ಲಾಕ್ ಹೋಮ್ಸ್ ಮತ್ತು ಅಗಾಥಾ ಕ್ರಿಸ್ಟಿಯ ಪಿರೂಟ್ ಇಂಥ ಪತ್ತೇದಾರರು. ಆ ಕಾಲಕ್ಕೆ ಹೊಸ ಕಲ್ಪನೆ 'ಜೇಮ್ಸ್ ಬಾಂಡ್'. ಸೃಷ್ಟಿಸಿದವನು ಇಯಾನ್ ಫ್ಲೆಮಿಂಗ್. ಈ ಹೊಸಬ, ಪತ್ತೇದಾರ ಎನ್ನುವುದಕ್ಕಿಂತ ಒಂದು ದೇಶದ ಏಜೆಂಟ್. ದೇಶ, ವಿದೇಶಗಳಲ್ಲಿ ತನ್ನ ಸಾಮ್ರಾಜ್ಯದ ವಿರುದ್ಧ ನಡೆಯುವ ಘಾತಕ ಚಟುವಟಿಕೆಗಳನ್ನು ನಿಗ್ರಹಿಸುವ ಹೊಣೆ ಈತನದು. ಹೀಗೆ ಈತ ಮನೆಯ ನಾಲ್ಕು ಗೋಡೆ ಅಥವಾ ದೇಶದ ಗಡಿಯಾಚೆಗೆ ವಿಸ್ತರಿಸಿದ್ದು ಒಂದು ಆಯಾಮ. ಅದು ಒಂದು ರೀತಿಯಲ್ಲಿ ಬ್ರಿಟೀಷ್ ಸಾಮ್ರಾಜ್ಯಶಾಹಿಯ ಪ್ರತೀಕ ಕೂಡ. ಅದನ್ನು ಇಡೀ ಪ್ರಪಂಚ ಒಪ್ಪಿಕೊಂಡಿತು. ಜೇಮ್ಸ್ ಬಾಂಡ್ ಅತ್ಯಂತ ಜನಪ್ರಿಯನಾದ. ಮೂವತ್ತೇಳು ವರ್ಷಗಳ ಹಿಂದೆ ಆತ ಬೆಳ್ಳಿತೆರೆಗೂ ಏರಿದ. ಅಂದಿನಿಂದ 'ಬಾಂಡ್' ಒಂದು ಸಂಪ್ರದಾಯ ಸೃಷ್ಟಿಸಿದ. ಆ ಸಂಪ್ರದಾಯದಾಚೆ ಕಾಲಿಡಲು ನಿರ್ಮಾಪಕರು ಒಪ್ಪುತ್ತಿಲ್ಲ. 'ಬಾಂಡ್' ಬದಲಾಗಬೇಕೆಂದು ಹೊಸ ತಲೆಮಾರು ಬಯಸುತ್ತದೆ.



ಜೇಮ್ಸ್ ಬಾಂಡ್ ಸರಣಿಯ ಇತ್ತೀಚಿನ ಚಿತ್ರ 'ದಿ ವರ್ಲ್ಡ್ ಈಸ್ ನಾಟ್ ಎನಫ್' ತೈಲ ಸಾಮ್ರಾಜ್ಯದ ಮಾಫಿಯಾ ಬೇಧಿಸುವ ಕತೆ. ಎಂದಿನ ಹಾಗೆ ಜೇಮ್ಸ್‌ಬಾಂಡ್‌ನ ಕಸುವು ತುಂಬಿದ ಹೊಡೆದಾಟ, ಹೆಣ್ಣುಗಳ ಜೊತೆಗಿನ ಚೆಲ್ಲಾಟ, ವೈರಿಗಳನ್ನು ದಿಕ್ಕುಗೆಡಿಸುವ ಅನೂಹ್ಯ ವರ್ತನೆ ಎಲ್ಲ ಇವೆ. ಆದರೆ ಚಿತ್ರ ನಿರೀಕ್ಷಿಸಿದ ಯಶಸ್ಸು ಗಳಿಸಲಿಲ್ಲ. ಟರ್ಮಿನೇಟರ್, ಮ್ಯಾಟ್ರಿಕ್ಸ್, ಇಂಡಿಪೆಂಡೆನ್ಸ್ ಡೇ ಮುಂತಾದ ಅತ್ಯಾಧುನಿಕ ತಂತ್ರಜ್ಞಾನದ ಮನರಂಜನೆ ಪಡೆದ ತಲೆಮಾರಿನ ಜನಕ್ಕೆ ಇದು ಸಪ್ಪೆ ಎನಿಸುತ್ತದೆ.

'ಡಾ. ನೋ' ಚಿತ್ರದಿಂದ ಆರಂಭಿಸಿ ಈ ವರೆಗೆ ಹತ್ತೊಂಬತ್ತು ಬಾಂಡ್ ಚಿತ್ರಗಳು ತೆರೆ ಕಂಡಿವೆ. ಇಯಾನ್ ಫ್ಲೆಮಿಂಗ್‌ನ ಕಾದಂಬರಿ ಚಿತ್ರಿಸುವ ಹಕ್ಕು ಬ್ರಾಕೋಲಿ ಕುಟುಂಬದ್ದು. ಆಲ್ಬರ್ಟ್ ಆರ್ 'ಕಬ್ಬ' ಬ್ರಾಕೋಲಿ ನಂತರ ಆತನ ಕುಟುಂಬದ ಮೈಕೇಲ್ ವಿಲ್ಸನ್ ಹಾಗೂ ಬಾರ್ಬರಾ ಬ್ರಾಕೋಲಿ ಈ ಸರಣಿಯ ಚಿತ್ರ ನಿರ್ಮಿಸುತ್ತಾ ಬಂದಿದ್ದಾರೆ. ಎಂ.ಜಿ.ಎಂ. ಸ್ಟುಡಿಯೋ ಈ ಎಲ್ಲ ಚಿತ್ರಗಳಿಗೆ ಹಣಕಾಸು ಸಹಾಯ ಮಾಡುತ್ತಾ ಬಂದಿದೆ. ಇತ್ತೀಚಿನ ಚಿತ್ರ 'ವರ್ಲ್ಡ್ ಈಸ್ ನಾಟ್ ಎನಫ್' ಹಿಂದಿನ ಎಲ್ಲ ಬಾಂಡ್ ಚಿತ್ರಗಳ ಹಾಗೇ ಅದ್ಧೂರಿತನ, ಗುಣಮಟ್ಟ ಕಾಯ್ದುಕೊಂಡು ಬಂದಿದೆ. ಆದರೆ ಇಷ್ಟೆಲ್ಲ ವೆಚ್ಚ ಮಾಡಿಯೂ 'ಬಾಂಡ್'ನಂಥ ಅದೇ ಹಳೇ ಶೈಲಿಯ ಏಜೆಂಟ್‌ನನ್ನು ತೆರೆಯ ಮೇಲೆ ನೋಡಬೇಕೆ? ಎಂಬುದು ಈಗಿನವರ ಪ್ರಶ್ನೆ.

ಹೀಗೆ ಬದಲಾವಣೆ ಬೇಕೆಂದವರು ಎಂ.ಜಿ.ಎಂ. ಸ್ಟುಡಿಯೊದವರು. ಅದಕ್ಕೆ ನಿರ್ಮಾಪಕರು ಒಪ್ಪುತ್ತಿಲ್ಲ. ಅವರಲ್ಲಿ ಒಬ್ಬರಾದ ವಿಲ್ಸನ್ ಇಂಥ ಬದಲಾವಣೆಗೆ ಕಡುವಿರೋಧಿ. ಬ್ರಾಕೋಲಿ 'ಬಾಂಡ್' ಸಿನಿಮಾಗಳ ನಿರ್ಮಾಣದಲ್ಲಿ ಗುಣಮಟ್ಟ ಮತ್ತು ಕಥೆ ಹೇಳುವ ಶೈಲಿಯಲ್ಲಿ ಅತ್ಯುತ್ತಮ ಮಟ್ಟ ಕಾಯ್ದುಕೊಂಡು ಬಂದವರು. ಹಾಗಾಗಿಯೇ ಈ ಸಿನಿಮಾಗಳು ಯಶಸ್ವಿಯಾಗಿವೆ. ಅದನ್ನೇ ತಾನೂ ಮತ್ತು ಬಾರ್ಬರೂ ಮುಂದುವರಿಸಿಕೊಂಡು ಹೋಗುವುದಾಗಿ ಹೇಳುತ್ತಾನೆ. ಅಷ್ಟೇ ಅಲ್ಲ ಯಶಸ್ಸು



ಖಂಡಿತ ಎನ್ನುವುದೂ ಆತನ ನಂಬಿಕೆ.


ಬದಲಾವಣೆ ನಾನಾ ರೀತಿಯಲ್ಲಿ ಆಗಿದೆ. ಆಗುತ್ತಾ ಬಂದಿದೆ. ಹಾಗೆ ನೋಡಿದರೆ ಇಯಾನ್ ಫ್ಲೆಮಿಂಗ್‌ನ ಕಾದಂಬರಿಯ ಬಾಂಡ್‌ಗೂ, ತೆರೆಯ ಮೇಲೆ ಕಾಣುವ ಪಾತ್ರಕ್ಕೂ ಸಾಕಷ್ಟು ವ್ಯತ್ಯಾಸ ಇದೆ. ಕಾದಂಬರಿಯ 'ಬಾಂಡ್' ಸಾಮಾನ್ಯ ಇಂಗ್ಲೀಷ್‌ಮನ್. ಮೂವತ್ತರ ಪ್ರಾಯ. ಸರ್ಕಾರಿ ಕಚೇರಿಯ ಓಬೀರಾಯನ ಕಟ್ಟಡದಲ್ಲಿ ಕೆಲಸ. ಕಾರಕೂನನ ಹಾಗೆ ನಿತ್ಯ ಆ ಕಚೇರಿಗೆ ಅವನ ಯಾತ್ರೆ. ಬಿಡುವಿನ ವೇಳೆಯಲ್ಲಿ ನಿವೃತ್ತಿ, ಪೆನ್ಷನ್ ಯಾವಾಗಪ್ಪ ಬರುತ್ತದೆ ಎಂದು ತಲೆ ಕೆಡಿಸಿಕೊಳ್ಳುವ ಮನುಷ್ಯ. ಅವನ ಸಾಹಸ, ರಂಜನೆಯ ಬದುಕು ಬಿಚ್ಚಿಕೊಳ್ಳುವುದು ಆಫೀಸು ಒಪ್ಪಿಸಿದ ಕೆಲಸದ ಮೇಲೆ ಲಂಡನ್ ಬಿಟ್ಟು ತೆರಳಿದಾಗ. ಹಾಗೆ ಕೆಲಸದ ಮೇಲೆ ಎಲ್ಲೋ ಹೋಗಿ ಏರ್‌ಪೋರ್ಟ್, ವಿಮಾನ ನಿಲ್ದಾಣದಲ್ಲಿ ಕುಳಿತು ಕಾಯುವಾಗ, ತನ್ನ ವ್ಯಕ್ತಿತ್ವವನ್ನೇ ನಾಶಪಡಿಸುತ್ತಿರುವ ವೃತ್ತಿಯ ಬಗ್ಗೆ ಚಿಂತಿಸುವವನು.

ಪ್ರತಿ ಕಾದಂಬರಿಯಲ್ಲೂ ಅವನ ಜೊತೆಗೊಂದು ಹೆಣ್ಣು. ಅಷ್ಟೇನೂ ಆಕರ್ಷಕವಲ್ಲದ, ಕೆಲವೊಮ್ಮೆ ಈತನಿಗೇ ಕೈ ಕೊಡುವ ನಾಯಕಿಯರು. ಹಾಗೆ ದೊರಕಿದ ನಾಯಕಿ ಒಬ್ಬಳಿಗೆ ಮೂಗಿನ ಮೂಳೆ ಮುರಿದು ವಿಕಾರಗೊಂಡಿದೆ. ಇನ್ನೊಬ್ಬಳಿಗೆ ಒಂದು ಕಾಲುಗಿಡ್ಡ. ತುಂಬಾ ಹೆಸರಾದ 'ಫ್ರಂ ರಷಿಯಾ ವಿತ್ ಲವ್'ನಲ್ಲಿ ಆತ ಪ್ರೀತಿಸಬೇಕಾದ ತಾತಾನಿಯಾ ರಮನೋವ್, ಹಿಂದಿಂದ ನೋಡಿದರೆ ಗಂಡಸಿನ ಹಾಗೆ ಕಾಣುತ್ತಾಳೆ. 'ಮೂನ್‌ರೇಕರ್'ನಲ್ಲಿ ಬರುವ ಗಾಲ್‌ಬ್ರಾಂಡ್ ಈತನಿಗೆ ಕೈಕೊಟ್ಟು ಇನ್ನೊಬ್ಬ ಏಜೆಂಟ್‌ನನ್ನು ಮದುವೆಯಾಗುತ್ತಾಳೆ.

ದೇಶದ ಹಿತಕ್ಕಾಗಿ ಆತ ರಷಿಯಾದ ತಾತಾನಿಯಾ ರಮನೋವ್‌ಳನ್ನು ಒಲಿಸಿಕೊಳ್ಳಬೇಕು ಎಂಬ ಸಂದೇಶ ಕೇಂದ್ರ ಕಚೇರಿಯಿಂದ ಬಂದಾಗ 'ಇಂಗ್ಲೆಂಡಿನ ಹಿತಕ್ಕಾಗಿ ತಾನೊಬ್ಬ ತಲೆ ಹಿಡುಕನಂತಾಗಬೇಕಾಗಿದೆ' ಎಂದು ಆತ ಪರಿತಪಿಸುತ್ತಾನೆ.

ಸಿನಿಮಾದ ಬಾಂಡ್ : ತೆರೆಕಂಡಿರುವ ಎಲ್ಲ ಬಾಂಡ್ ಸಿನಿಮಾಗಳ ಹೀರೋ, ಕಾದಂಬರಿಯ ಪಾತ್ರಕ್ಕೆ ತದ್ವಿರುದ್ಧ. ಹೆಣ್ಣುಗಳ ಜೊತೆ ಚೆಲ್ಲಾಟ ನಡೆಸುವವನು. ಅವೆರಲ್ಲ ಸಾಮಾನ್ಯವಾಗಿ ಸುಂದರಿಯರು. ಡಬಲ್ ಏಜೆಂಟರು. ಒಂದಲ್ಲ ಒಂದು ಹಂತದಲ್ಲಿ ಕೊಲೆಯಾಗುವವರು. ಹೀಗಾಗಿ ಆತನದು ಪ್ರೇಮವಲ್ಲ. ಚಿತ್ರದುದ್ದಕ್ಕೂ ಸಿಕ್ಕ ಸಿಕ್ಕ ಹೆಣ್ಣುಗಳೊಡನೆ ಕಾಮದಾಟ, ಚೆಲ್ಲಾಟ ನಡೆಸುವವನು. ಸರಿಯಾಗಿ ಹೇಳಬೇಕೆಂದರೆ ಆತ ಕಾದಂಬರಿಯ ಖಳನಾಯಕರನ್ನೇ ಹೆಚ್ಚಾಗಿ ಹೋಲುತ್ತಾನೆ.

ಕಾದಂಬರಿಗಳಲ್ಲಿ ಆತ ಮೂವತ್ತರ ಹರೆಯದವನು. ಸಿನಿಮಾಗಳಲ್ಲಿ ಬಾಂಡ್ ಮಧ್ಯವಯಸ್ಕ. ಭಾರೀ ಸೊಗಸುಗಾರ. ಅತ್ಯಂತ ಆಧುನಿಕ ಉಡುಗೆ, ತೊಡುಗೆ, ಆತ ಕುಡಿಯುವುದು ವೋಡ್ಕಾ ಮಾರ್ಟಿನಿ, ಬಳಸುವುದು ಸಿಕೋ ವಾಚ್. ಅದರೊಳಗೆ ಅಡಗಿಸಿಟ್ಟ ನಾನಾ ಸೂಕ್ಷ್ಮ ವಿನಾಶಕಾರಿ ಉಪಕರಣಗಳು. ಆತನ ವಾಹನವನ್ನೇ ನೋಡಿ. ನೀರು ನೆಲ ಎರಡರ ಮೇಲೂ ಅನಾಯಾಸವಾಗಿ ಚಲಿಸಬಲ್ಲದು. ಇತ್ತೀಚಿನ ಸಿನಿಮಾದಲ್ಲಿ ಬಳಸುವ ಕೂದಲೆಳೆಯಂಥ ಹಗ್ಗ ಐವತ್ತು ಅಡಿ ಉದ್ದವಿದೆ. ಅದು ಎಂಟುನೂರು ಪೌಂಡ್ ಭಾರವನ್ನೂ ಭದ್ರವಾಗಿ ಹಿಡಿದುಕೊಳ್ಳಬಲ್ಲದು.



ಒಂದು ಕಾಲಕ್ಕೆ ಇಂಥ ಉಪಕರಣಗಳೇ 'ಬಾಂಡ್'ಗೆ ಜನಪ್ರಿಯತೆ ತಂದಿದ್ದು ನಿಜ. ಆತನಿಗಾಗಿ ಇಂಥ ವಿಶೇಷ ಬಗೆಯ ಉಪಕರಣ ರೂಪಿಸಿಕೊಡುವ ಪಾತ್ರದ ಹೆಸರೇ 'ಕ್ಯೂ'. ಈಚಿನ ಸಿನಿಮಾದಲ್ಲಿ ಬಾಂಡ್ ಬಳಸುವ ಕಾರು ಅತ್ಯಾಧುನಿಕ ಶಸ್ತ್ರಾಸ್ತ್ರ ಎಲ್ಲ ತನ್ನೊಳಗೆ ಬಚ್ಚಿಟ್ಟುಕೊಂಡದ್ದು. ಹೆಡ್‌ಲೈಟುಗಳು ಬೇಕೆಂದಾಗ ಲೇಸರ್ ಕಿರಣ ಉಗುಳುತ್ತವೆ. ಬೇಕೆನಿಸಿದಾಗ ಕ್ಷಿಪಣಿಗಳನ್ನು ತೂರಿ ಬಿಡುತ್ತವೆ. ಇಂಥ ಕಾರನ್ನು ಅಗತ್ಯವೆಂದೆನಿಸಿದಾಗ ರಿಮೋಟ್ ಕಂಟ್ರೋಲ್‌ಗೆ ಒಪ್ಪಿಸಬಹುದು.


ಕಾದಂಬರಿಯ ಪಾತ್ರವನ್ನೇ ಹೀಗೆ ಸಿನಿಮಾಗಳಲ್ಲಿ ನಾನಾ ರೀತಿ ಕುಲಗೆಡಿಸಲಾಗಿದೆ. ಆದರೆ 'ಬಾಂಡ್' ಸಿನಿಮಾ ಎಂದರೇ ಹೀಗೆ ಎಂಬ ಪರಿಕಲ್ಪನೆ ಒಂದು ದಟ್ಟವಾಗಿದೆ. ಅದಕ್ಕೆ ಧಕ್ಕೆ ಬರಬಾರದು ಎಂಬುದು ನಿರ್ಮಾಪಕರ ಕಾಳಜಿ.

ನಾಯಕರು : ಬಾಂಡ್ ಸರಣಿಯ ಅತಿ ಹೆಚ್ಚು ಚಿತ್ರಗಳಲ್ಲಿ ನಟಿಸಿದವನು ಸಿಯಾನ್ ಕಾನರಿ. ಆತನಿಗೆ ವಯಸ್ಸಾಗಿ, ಬಾಂಡ್‌ನ ಚುರುಕುತನ ಮರೆಯಾಗತೊಡಗಿತು. ಆಗ ಮತ್ತೊಬ್ಬ ನಾಯಕನ ಆಯ್ಕೆ ಅನಿವಾರ್ಯವಾಯಿತು. ಆಗ ಬಂದವನು ರೋಜರ್ ಮೂರ್. 'ಮೂನ್‌ರೇಕರ್'ನಿಂದ ಆರಂಭಿಸಿ ಆರು ಸಿನಿಮಾಗಳಲ್ಲಿ ನಟಿಸಿದ. ಆದರೆ ಅವನಿಗೆ ಸಿಯಾನ್ ಕಾನರಿಗೆ ಸಿಕ್ಕಂಥ ಮಾನ್ಯತೆ ದೊರೆಯಲಿಲ್ಲ. ಹಿಂದಿನ ನಾಯಕನಿಗೆ ಒಗ್ಗಿ ಹೋಗಿದ್ದ ಪ್ರೇಕ್ಷಕರೇ ಹೆಚ್ಚಾಗಿದ್ದುದು ಇದಕ್ಕೆ ಕಾರಣ.

ಆನಂತರ ಈಚಿನ ಮೂರು ಚಿತ್ರಗಳಲ್ಲಿ ಕಾಣಿಸಿಕೊಂಡವನು ಪಿಯರ್ಸ್ ಬ್ರಾಸ್ನನ್. ಆತ ಅಭಿನಯಿಸಿದ 'ಗೋಲ್ಡನ್ ಐ' ಮತ್ತು 'ಟುಮಾರೋ ನೆವರ್ ಡೈಸ್' ಸಾಕಷ್ಟು ಜನಪ್ರಿಯ. ಇತ್ತೀಚಿನ 'ವರ್ಲ್ಡ್ ಈಸ್ ನಾಟ್ ಎನಫ್' ಮಾತ್ರ ಅಂಥ ಯಶಸ್ಸು ಪಡೆಯಲಿಲ್ಲ.

ಬಾಂಡ್ ಸಿನಿಮಾಗಳಲ್ಲಿನ ನಾಯಕಿಯರು ಕೇವಲ ಮುದ್ದಾದ ಬೊಂಬೆಗಳು. ಅವರು ಅಭಿನಯಿಸಬೇಕಿಲ್ಲ. ಮಾದಕ ಉಡುಪು, ಚೆಲ್ಲಾಟಗಳಿಂದ ನೋಡುಗರ ಕಣ್ಣು ತಣಿಸಿದರೆ ಸಾಕು. ಹಾಲಿವುಡ್‌ನ ಹೆಸರಾಂತ ನಟಿಯರೆಂದೂ ಬಾಂಡ್ ಸಿನಿಮಾಗಳ ನಾಯಕಿಯರಾಗುವುದಿಲ್ಲ. ಅದರ ಅಗತ್ಯವೂ ಇಲ್ಲ ಎನ್ನುತ್ತಾರೆ ನಿರ್ಮಾಪಕರು. ಅಂಥ ನಾಯಕಿಯರನ್ನು ಆರಿಸಿಕೊಂಡರೆ ದುಬಾರಿ ಸಂಭಾವನೆ ಕೊಡಬೇಕು. ಅವರ ನಾನಾ ರೀತಿಯ ಕರಾರುಗಳಿಗೆ ಒಪ್ಪಬೇಕು. ಅದೆಲ್ಲ ಕಿರಿಕಿರಿ ಬೇಡ ಎಂದೇ ಆರಿಸಿಕೊಂಡ ಮಾರ್ಗ ಇದು.

ಬಾಂಡ್ ಸಿನಿಮಾದಲ್ಲಿ ನಾಯಕಿಯಾಗಿದ್ದ ಉರ್ಸಿಲಾ ಅಂಡ್ರ್ಯೂಸ್ ಆನಂತರ ಹಾಲಿವುಡ್‌ನಲ್ಲಿ ಹೆಸರು ಮಾಡಿದಳು. ಆದರೆ ಆಕೆಯನ್ನು ಜನ ತಮಾಷೆಗೆ ಉರ್ಸಿಲಾ 'ಅನ್‌ಡ್ರೆಸ್' ಎಂದೇ ಕರೆಯುತ್ತಿದ್ದರು.' ಏಕೆಂದರೆ ಬಟ್ಟೆ ಬಿಚ್ಚುವ ವಿಷಯದಲ್ಲಿ ಆಕೆ ಎತ್ತಿದ ಕೈ.



ಉಡುಗೆ, ತೊಡುಗೆ : ಕಾದಂಬರಿಯ ನಾಯಕ ಫ್ಯಾಷನಬಲ್ ಅಲ್ಲ. ನೀಲಿ ಬಣ್ಣದ ಸೂಟು. ಕೈಯಿಂದ ಹೆಣೆದ ಕಪ್ಪು ಟೈ ಅವನ ಬ್ರ್ಯಾಂಡ್. ಸಿನಿಮಾದಲ್ಲಿ ಸರಳತೆ ಮಾರಾಟದ ವಸ್ತುವಾಗುವುದಿಲ್ಲ. ಆತ ಧರಿಸುವ ಬೆಲ್ಟ್, ಕೈಗೆ ಕಟ್ಟುವ ಸೀಕೋ ಗಡಿಯಾರ, ನಾನಾ ಬಗೆಯ ಸೂಟು, ಟೈಗಳು, ಗಾಗಲ್ಸ್ ಎಲ್ಲದಕ್ಕೂ ಬ್ರ್ಯಾಂಡ್ ಮಾರುಕಟ್ಟೆ ಇರುತ್ತದೆ. ಸಿನಿಮಾ ಜನಪ್ರಿಯವಾಗಿಬಿಟ್ಟರೆ ಈ ಎಲ್ಲ ಉಡುಗೆ, ತೊಡುಗೆಗೂ ಭಾರೀ ಮಾರುಕಟ್ಟೆ ದೊರೆಯುತ್ತದೆ. ಹಾಗಾಗಿಯೇ ಇಂಥ ವಿನ್ಯಾಸಗಳಿಗಾಗಿ ನಿರ್ಮಾಪಕರು ಹೆಸರಾಂತ ವಿನ್ಯಾಸಕಾರರ ಮೊರೆ ಹೋಗುತ್ತಾರೆ. ನಾಯಕನ ಹಾಗೇ ಪ್ರಮುಖ ಸ್ತ್ರೀ ಪಾತ್ರಗಳ ಉಡುಗೆ, ತೊಡುಗೆ ತಯಾರಾಗುತ್ತದೆ. ವಿನ್ಯಾಸಕಾರ ಒದಗಿಸಿದ ರೂಪುರೇಖೆ ಬಳಸಿಕೊಂಡು ನಾಯಕನ ಡ್ಯೂಪ್‌ಗಾಗಿಯೇ ಬೇರೆ ಅಂಥದೇ ವಸ್ತುಗಳನ್ನು ನಿರ್ಮಾಪಕ ಮಾಡಿಕೊಳ್ಳಬೇಕಾಗುತ್ತದೆ. ಸ್ಟಂಟ್ ದೃಶ್ಯದಲ್ಲಿ ಬಳಕೆ ಆಗುವ ಇಂಥ ಬಾಂಡ್‌ನ ಒಂದೊಂದು ಉಡುಪೇ ಇಪ್ಪತ್ತೈದರಷ್ಟು ಇರುತ್ತವೆ. ಅಷ್ಟೇ ಸಂಖ್ಯೆಯಲ್ಲಿ ಡ್ಯೂಪ್‌ಗಳಿಗೂ ವಸ್ತ್ರ ತಯಾರಾಗಬೇಕು. ಇಂಥ ವೆಚ್ಚಕ್ಕೆ ಅವರೆಂದೂ ಹಿಂದೂ ಮುಂದೂ ನೋಡುವುದಿಲ್ಲ.

ಬಾಂಡ್ ಧರಿಸುವ ಉಡುಪು ಲಂಡನ್‌ನ 'ಸ್ಯಾವಿಲ್‌ರೋ' ಟೈಲರ್ಸ್‌ನಿಂದ ಬಂದಂತಿರಬೇಕೇ ಹೊರತು ರೆಡಿಮೇಡ್ ಉಡುಪು ತಯಾರಿಸುವ ಕಂಪೆನಿಗಳಿಂದ ಬಂದಂತೆ ಇರಬಾರದು ಎಂಬುದು ನಿರ್ಮಾಪಕರ ವಿಚಾರ. ಹಾಗಾಗಿಯೇ ಉಡುಗೆ, ತೊಡುಗೆಗೆ ಇಷ್ಟೊಂದು ಶ್ರೀಮಂತಿಕೆಯ ವೆಚ್ಚ.

ಕಾದಂಬರಿ ಚಿತ್ರಗಳಲ್ಲಿ ಕಾಣಿಸಿಕೊಳ್ಳುವ ಬಾಂಡ್ ಭಾರೀ ಓದಿಕೊಂಡವನು. ಜರ್ಮನ್, ರಷ್ಯನ್ ಮುಂತಾದ ಭಾಷೆ ತಿಳಿದವನು. ಆತನ ವರ್ತನೆ, ಮಾತೆಲ್ಲ ಅಂತಾರಾಷ್ಟ್ರೀಯ ಮಟ್ಟದ್ದು. ಆ ಕಾರಣಕ್ಕೋ ಆತನ ವೇಷ ಭೂಷಣದ ಬಗ್ಗೆ ಇಷ್ಟೊಂದು ಕಾಳಜಿ.

ಹೆಸರಿನ ಹುಟ್ಟು : ಇಯಾನ್ ಫ್ಲೆಮಿಂಗ್ ತನ್ನ ಕಾದಂಬರಿಯಲ್ಲಿ ಸೃಷ್ಟಿಸಬೇಕೆಂದಿದ್ದ ಪಾತ್ರಕ್ಕೆ ಹೆಸರಿಡಲು ಒದ್ದಾಡುತ್ತಿದ್ದ. ಅದು ಮಾಮೂಲಿ ಹೆಸರು ಆಗಿರಬಾರದು. ಒಮ್ಮೆ ಚಾಲ್ತಿಗೆ ಬಂದರೆ ಅದು ಜನಪ್ರಿಯವಾಗಬೇಕು. ತೀರಾ ಉದ್ದವೂ ಇರಬಾರದು. ನಿತ್ಯ ಬಳಸುವ ಮೊಟಕು ಮಾಡಿದ ಜನಪ್ರಿಯ ಹೆಸರಾಗಿರಬಾರದು. ಇಂಥ ಸಂದಿಗ್ಧದಲ್ಲಿ ತೊಳಲಾಡುತ್ತಾ ಇದ್ದಾಗ ಕಣ್ಣಿಗೆ ಬಿದ್ದ ಪುಸ್ತಕ 'ಬರ್ಡ್ಸ್ ಆಫ್ ವೆಸ್ಟ್ ಇಂಡೀಸ್'. ಅದನ್ನು ಬರೆದಿದ್ದ ಲೇಖಕನ ಹೆಸರು ಜೇಮ್ಸ್ ಬಾಂಡ್. ಈ ಹೆಸರು ರೊಮ್ಯಾಂಟಿಕ್ ಅಲ್ಲ. ಅಲ್ಲೊಂದು ಗಡಸುತನ ಇದೆ ಎನ್ನಿಸಿತು. ಫ್ಲೆಮಿಂಗ್‌ಗೊಂದು ಹೆಸರು ಸಿಕ್ಕಿತು. ತನ್ನ ಅಂತಾರಾಷ್ಟ್ರೀಯ ಗೂಢಚಾರನ 007 ಎಂಬ ಸಂಕೇತ ನಾಮದ ಹಾಗೇ ಈ ಜೇಮ್ಸ್‌ಬಾಂಡ್ ಕೂಡ ರೂಪು ಪಡೆದು ಕಾದಂಬರಿಯ ಪಾತ್ರವಾದ. ಜನಪ್ರಿಯನೂ ಆದ.

ಚಿತ್ರೀಕರಣಕ್ಕೆ ರಮ್ಯ ಹೊರಾಂಗಣ : ಖ್ಯಾತ ನಿರ್ದೇಶಕ ಡೇವಿಡ್ ಲೀನ್ 'ಡಾ. ಜಿವಾಗೋ' ಬಹಳ ಮೆಚ್ಚುಗೆ ಪಡೆದ ಚಿತ್ರ, ರಷಿಯಾದಲ್ಲಿ ನಡೆಯುವ ಈ ಕತೆಯನ್ನು ಚಿತ್ರೀಕರಿಸಿದ್ದು ಸ್ಪೇನ್‌ನಲ್ಲಿ. ಏಕೆಂದರೆ ಬೋರಿಸ್ ಪಾಸ್ಟರ್‌ನಾಕ್ ಬರೆದ ಆತ್ಮ ಚರಿತ್ರೆಯಂಥ ಈ ಕಾದಂಬರಿ ರಷ್ಯಾದಲ್ಲಿ ವಿವಾದಕ್ಕೆ ಗುರಿಯಾಗಿತ್ತು. ಅದರ ಚಿತ್ರೀಕರಣಕ್ಕೆ ರಷಿಯಾ ಅನುಮತಿ ನೀಡುವುದು ಅಸಾಧ್ಯ ಎಂದು ಲೀನ್‌ಗೂ ತಿಳಿದಿತ್ತು. ಜೇಮ್ಸ್‌ಬಾಂಡ್ ಸಿನಿಮಾಗಳಿಗೆ ಮಾತ್ರ ಇಂಥ ತೊಂದರೆ ಅಷ್ಟಾಗಿ ಎದುರಾಗಿಲ್ಲ. ವ್ಯಾಪಕವಾಗಿ, ಅಷ್ಟೇ ರಮ್ಯ ತಾಣಗಳಲ್ಲಿ ಚಿತ್ರೀಕರಣ ನಡೆಸುವುದು ಈ ಚಿತ್ರಗಳ ಹೆಗ್ಗಳಿಕೆ.

ಇತ್ತೀಚಿನ 'ವರ್ಲ್ಡ್ ಈಸ್ ನಾಟ್ ಎನಫ್' ಚಿತ್ರಕ್ಕೆ ಟರ್ಕಿ, ಆಝುರ್ ಬೈಜಾನ್, ಫ್ರಾನ್ಸ್, ಸ್ಪೇನ್ ಹಾಗೇ ಇಂಗ್ಲೆಂಡಿನಲ್ಲಿಯೂ ನಾನಾ ಭಾಗಗಳ ಚಿತ್ರೀಕರಣ ನಡೆದಿದೆ. ಕ್ಯಾಸ್ಪಿಯನ್ ಸಮುದ್ರ ತೀರದ ಬಾಕು ರಾಜ್ಯದ ರಾಜಧಾನಿ ಆಝುರ್ ಬೈಜಾನ್. ರಷಿಯಾದ ತೈಲ ಪೂರೈಕೆ ಎಲ್ಲ ಇಲ್ಲಿಂದರೇ. ಈ ನಗರ ವಶಪಡಿಸಿಕೊಂಡರೆ ರಷಿಯಾ ಗೆಲ್ಲಬಹುದೆಂದು ಹಿಟ್ಲರ್ ದ್ವಿತೀಯ ಮಹಾಯುದ್ಧದ ವೇಳೆ ಯೋಚಿಸಿದ್ದ. ಸಿನಿಮಾದಲ್ಲಿ ಬರುವ ತೈಲ ಮಾಫಿಯಾದ ಕೇಂದ್ರ ಇರುವುದು ಇಲ್ಲೇ.

ಈ ಹಿಂದೆ ರೋಜರ್ ಮೂರ್ ಅಭಿನಯದ ಮೂನ್‌ರೇಕರ್ ಚಿತ್ರಕ್ಕೆ ಭಾರತದಲ್ಲೂ ಚಿತ್ರೀಕರಣ ನಡೆದಿತ್ತು. ಹಿಂದೆಂದೂ ಯಾವುದೇ ಚಿತ್ರೀಕರಣಕ್ಕೆ ಅನುಮತಿ ನೀಡದ ತಾಜ್‌ಮಹಲ್‌ನ ಮುಂಭಾಗದಲ್ಲೂ ಬಾಂಡ್ ಚಿತ್ರ ತಂಡಕ್ಕೆ ವಿಶೇಷ ಪರವಾನಗಿ ಸರಕಾರ ನೀಡಿತ್ತು. ಆಗ ಅದೇ ದೊಡ್ಡ ವಿವಾದವಾಗಿತ್ತು. ಅದೇ ಸಿನಿಮಾದಲ್ಲಿ ರಾಜಾಸ್ಥಾನದ ಮರುಳುಗಾಡಿನ ವ್ಯಾಪಕ ಚಿತ್ರೀಕರಣವೂ ಆಗಿತ್ತು.

ಬದಲಾವಣೆ ಅಗತ್ಯವೇ? : ಇತ್ತೀಚಿನ ಬಾಂಡ್ ಚಿತ್ರಕ್ಕೆ ಅಷ್ಟೇನೂ ಉತ್ಸಾಹದ ಪ್ರತಿಕ್ರಿಯೆ ಇಲ್ಲ. ಅದಕ್ಕೆ ಕಾರಣವೇನು? ಎಂಬ ಪ್ರಶ್ನೆ ಎದ್ದಿದೆ. ಹಾಗೇ ಹೊಸ ತಲೆಮಾರಿನ ಜನಕ್ಕೆ ಬಾಂಡ್ ಶೈಲಿಯೇ ಅಪ್ರಸ್ತುತ ಎನಿಸುತ್ತದೆಯೇ? ಎಂಬ ಚಿಂತನೆಯೂ ಶುರುವಾಗಿದೆ.

ಅತ್ಯಾಧುನಿಕ ತಂತ್ರಜ್ಞಾನದ ಜನಪ್ರಿಯ ಸಿನಿಮಾಗಳು ಬಂದಿವೆ. ಸ್ಪಿಲ್‌ಬರ್ಗ್‌ನ 'ಜುರಾಸಿಕ್ ಪಾರ್ಕ್', ಸ್ಪೀಡ್, ಟರ್ಮಿನೇಟರ್ ಮುಂತಾದ ಚಿತ್ರಗಳಿಗೆ ಅತ್ಯಂತ ಉತ್ಸಾಹದಿಂದ ಜನ ಪ್ರತಿಕ್ರಿಯಿಸಿದ್ದಾರೆ. ಇಂಥ ಸನ್ನಿವೇಶದಲ್ಲಿ 'ಬಾಂಡ್' ಕೇವಲ ಸಂಪ್ರದಾಯಸ್ಥ, ಹಳೇ ತಲೆಮಾರಿನ ರೋಮ್ಯಾಂಟಿಕ್ ಆಗಿ ಕಾಣುತ್ತಾನೆ. ಆತ ಎಷ್ಟೇ ವಿನೂತನ ಶೈಲಿಯ ಅಸ್ತ್ರ, ಉಪಕರಣ ಬಳಸಿದರೂ, ಹೊಸ ಬಗೆಯ ಸಿನಿಮಾಗಳ ತಂತ್ರಜ್ಞಾನದ ಮುಂದೆ ಅವೆಲ್ಲ ತೀರಾ ಬಾಲಿಶವಾಗಿ ಇಂದು ಕಾಣುತ್ತಿವೆ.

ಹೀಗಾಗಿಯೇ ಬಾಂಡ್‌ನನ್ನು ಅಚ್ಚಿನಲ್ಲಿ ರೂಪಿಸಬೇಕು. ಕತೆಗಳ ವಿನ್ಯಾಸ ಮಾಡಿ ಬದಲಿಸಬೇಕು ಎಂದು ಜನ ನಿರೀಕ್ಷಿಸುತ್ತಾರೆ. ಆದರೆ ಬ್ರಾಡೋಲಿ ಕುಟುಂಬ ಮಾತ್ರ ತನ್ನ ಹಳೇ ಜಾಡಿಗೆ ಅಂಟಿ ಉಳಿದೇ ಯಶಸ್ಸು ಗಳಿಸುವ ಮಾತಾಡುತ್ತಿದೆ.

ಕನ್ನಡದಲ್ಲಿ : ಕನ್ನಡದಲ್ಲೂ ಬಾಂಡ್ ಸಿನಿಮಾಗಳು ತಯಾರಾಗಿವೆ. ಇದಕ್ಕೆ ನಾಂದಿ ಹಾಡಿದವರು ದೊರೈ ಭಗವಾನ್. 'ಪ್ರತಿಧ್ವನಿ' ಇಂಥ ಮೊದಲ ಚಿತ್ರ. ಇದರಲ್ಲಿ ಕೌಬಾಯ್ ಮತ್ತು ಬಾಂಡ್ ಎರಡರ ಮಿಶ್ರಣವಿದೆ. ಆನಂತರ ಬಂದ ಈ ಮಾದರಿ ಚಿತ್ರಗಳೆಂದರೆ ಗೋವಾದಲ್ಲಿ ಸಿಐಡಿ 999 ಹಾಗೂ ಆಪರೇಷನ್ ಜಾಕ್‌ಪಾಟ್, ಆಪರೇಷನ್ ಡೈಮಂಡ್ ರಾಕೆಟ್, ಜೇಡರ ಬಲೆ.

ಈ ಎಲ್ಲ ಸಿನಿಮಾಗಳಲ್ಲಿ ನಾಯಕನಾಗಿ ನಟಿಸಿದ್ದು ರಾಜ್‌ಕುಮಾರ್. ಬೇರೆ ಯಾವ ನಾಯಕರೂ ಇಂಥ ಪಾತ್ರ ಮಾಡುವ ಸಾಹಸ ಮಾಡಲಿಲ್ಲ. ಅಥವಾ ಅಂಥ ಅವಕಾಶ ಬರಲಿಲ್ಲ ಎನ್ನುವುದೇ ಸರಿ.

ಬಾಂಡ್ ಪಾತ್ರಕ್ಕೆ ಬೇಕಾದ ಚುರುಕುತನ ಹಾಗೂ ಕಸುವು ಬೇರೆ ನಟರಲ್ಲಿ ಇರಲಿಲ್ಲ. ಅದಕ್ಕೆ ಬೇರೆ ಬಾಂಡ್ ಸಿನಿಮಾಗಳೂ ಬರಲಿಲ್ಲ. ಅಷ್ಟೇಕೆ, ಅಷ್ಟೆಲ್ಲ ವ್ಯಾಪಕ ಮಾರುಕಟ್ಟೆ ಇರುವ ಹಿಂದಿಯಲ್ಲೂ ಹೆಸರು ಹೇಳುವಂಥ ಬಾಂಡ್ ಮಾದರಿ ಚಿತ್ರಗಳು ಬಂದಿಲ್ಲ.

■ ಶ್ರೀವತ್ಸ

ಹೀಗೆ ಈ ಬದುಕು....

ಜೋಗದ ಸಿರಿ ಬೆಳಕಿನಲ್ಲಿ

ಜೋಗ ಜಲಪಾತವು ಪ್ರಕೃತಿ ಸೌಂದರ್ಯಕ್ಕೆ ಎಷ್ಟು ಪ್ರಸಿದ್ಧವೋ ಕುಡುಕರ ಹಾವಳಿಗೂ ಅಷ್ಟೇ ಪ್ರಸಿದ್ಧಿ. ಒಮ್ಮೆ ನಾವು 4 ಜನ ಸ್ನೇಹಿತರೊಡಗೂಡಿ ಜೋಗಕ್ಕೆ ಹೋಗಿದ್ದೆವು. ಅಲ್ಲಿ ಪ್ರಕೃತಿ ಸೌಂದರ್ಯವನ್ನು ವೀಕ್ಷಿಸುತ್ತಾ ಮೆಟ್ಟಿಲೇರುತ್ತಿರುವಾಗ ಅಲ್ಲಿಯೇ ಇದ್ದ ಇಂಜನಿಯರಿಂಗ್ ಮೆಡಿಕಲ್ ವಿದ್ಯಾರ್ಥಿಗಳಂತೆ ಕಾಣುತ್ತಿದ್ದ ಕುಡುಕರ ಗುಂಪೊಂದು ಅಲ್ಲಿ ಪ್ರವಾಸಕ್ಕೆ ಬಂದ ಹುಡುಗಿಯರನ್ನು ಚುಡಾಯಿಸುವುದರಲ್ಲಿ ತೊಡಗಿತ್ತು. ಪಾಪ ಆ ಹುಡುಗಿಯರು ಇವರ ಕೀಟಲೆಯನ್ನು ಸಹಿಸಲಿಕ್ಕೂ ಆಗದೇ, ಪ್ರತಿಭಟಿಸಲಿಕ್ಕೂ ಆಗದೇ ಮುಜುಗರದಿಂದಲೇ ಪ್ರಕೃತಿ ವೀಕ್ಷಣೆಯಲ್ಲಿ ತೊಡಗಿದ್ದರು. ಆ ಕುಡುಕರ ಗುಂಪು ಮಲಯಾಳಂ ಭಾಷೆಯಲ್ಲಿ ಏನೇನೋ ಅಶ್ಲೀಲವಾಗಿ ಮಾತಾಡುತ್ತಿದ್ದವು. ನಮ್ಮ ಗುಂಪಿನಲ್ಲಿ ನಾನೊಬ್ಬನೇ ಮಲಯಾಳಂ ಬಲ್ಲವನಾದ್ದರಿಂದ ಅವರ ಅಶ್ಲೀಲ ನುಡಿಗಳು ನನಗೆ ಅರ್ಥವಾಗಿ ಅವರ ಬಗ್ಗೆ ಹೇಸಿಗೆ ಎನಿಸತೊಡಗಿತು. ನಾನು ಪ್ರತಿಭಟಿಸಿದೆ.

'ಏನಯ್ಯಾ, ನೋಡಲು ಎಜುಕೇಟೆಡ್ ಥರ ಕಾಣಿಸ್ತೀರ. ಹುಡುಗಿಯರಿಗೆ ಅಷ್ಟೊಂದು ಅಶ್ಲೀಲವಾಗಿ ಮಾತಾಡುತ್ತಿದ್ದೀರಲ್ಲ ನಾಚ್ಕೆ ಆಗೋದಿಲ್ಲವೆ?' ಎಂದೆ.

ನಾನು ಮಲಯಾಳಂನಲ್ಲಿ ಮಾತಾಡಿದ್ದು ಕೇಳಿ ಇದ್ದಕ್ಕಿದ್ದಂತೆ ಅವರು ಅಪ್ರತಿಭರಾದರು. 'ಹೌದಯ್ಯ, ನಾವೇನಾದ್ರೂ ಮಾಡ್ತೀವಿ ನೀನಾರು ಹೇಳೊದಿಕ್ಕೆ?' ಅಂತ ಅವರಲ್ಲೊಬ್ಬ ಜಗಳಕ್ಕೆ ಬಂದ. ನನ್ನ ಸ್ನೇಹಿತರು ಕುಡುಕರೊಡನೆ ಏನು ಜಗಳ ಸುಮ್ಮನಿರು ಎಂದರೂ ನಾನು ಸುಮ್ಮನಿರದೇ,

'ನಾನು ಇದೇ ಊರಿನವನು. ನೀವೇನಾದ್ರೂ ಇಲ್ಲಿಂದ ಜಾಗ ಖಾಲಿ ಮಾಡದಿದ್ರೆ ಅಗೋ ಅಲ್ಲಿ ಕಾಣ್ತಾ ಇದೆಯಲ್ಲ ಆ ಅಂಗಡಿ ಅದು ನಮ್ಮದು. ಒಂದು ಕೂಗು ಹಾಕಿದ್ರೆ ಸಾಕು ಐದಾರು ಜನ ಬಂದು ನಿಮ್ಮ ಕೈಕಾಲು ಮುರಿದು ನಿಮಗೊಂದು ಗತಿ ಕಾಣಿಸ್ತಾರೆ' ಎಂದೆ ಮಲಯಾಳಂನಲ್ಲಿ.

ಅವರು ಗಾಭರಿಯಾಗಿ 'ಸಾರಿ ಸಾರ್, ನಿಮಗೆ ಮಲಯಾಳಂ ಬರೋ ವಿಷಯ ನಮ್ಗೆ ಗೊತ್ತೇ ಇರಲಿಲ್ಲ. ಅಲ್ಲದೇ ನೀವು ನಮ್ಮ ಹಾಗೆ ಬೇರೆ ಊರಿಂದ ಬಂದ ಪ್ರವಾಸಿಗರೆಂದು ತಿಳಿದಿದ್ದೆವು. ದಯವಿಟ್ಟು ನಮ್ಮಿಂದ ನಿಮಗೆ ನೋವಾಗಿದ್ರೆ ಕ್ಷಮಿಸಿ' ಎನ್ನುತ್ತಾ ಅಲ್ಲಿಂದ ಜಾಗ ಖಾಲಿ ಮಾಡಿದರು. ಅವರ ವರ್ತನೆಯಿಂದ ಮುಜುಗರಗೊಂಡಿದ್ದ ಆ ಹುಡುಗಿಯರು ನನ್ನನ್ನು ಕೃತಜ್ಞತಾಭಾವದಿಂದ ನೋಡಿ ಕಣ್ಸನ್ನೆಯಲ್ಲೇ ವಂದನೆ ಸಲ್ಲಿಸಿದರು.




- ಸಂಶುದ್ದೀನ್ ವಿ.ಕೆ. ಜೋಗ್‌ಫಾಲ್ಸ್.

★

ದೀಪ ಆರಿಸಿದ ಭೂಪ

ಇತ್ತೀಚೆಗೆ ಸರಕಾರವು ಗ್ರಾಮೀಣ ಅಭ್ಯರ್ಥಿಗಳಿಗೆ ನೀಡುವ ಕೃಪಾಂಕವನ್ನು ರದ್ದುಗೊಳಿಸಿದೆಯಷ್ಟೆ. ಆದರೆ ಇದು ಎಷ್ಟರಮಟ್ಟಿಗೆ ಪ್ರಸ್ತುತವೆಂಬುದು ಯೋಚಿಸಬೇಕಾಗಿದೆ. ಗ್ರಾಮೀಣ ಮತ್ತು ನಗರ ಅಭ್ಯರ್ಥಿಗಳಿಗೆಲ್ಲ ಒಂದೇ ವರ್ಗಕ್ಕೆ ಸೇರಿದವರೆಂಬ ಯೋಚನೆ ಸರಕಾರದ್ದು. ಆದರೆ ಇಂದಿನ ಗ್ರಾಮೀಣ ಅಭ್ಯರ್ಥಿಗಳು ಪಟ್ಟಣದವರಿಗಿಂತ ಎಲ್ಲಾ ವಿಧದಲ್ಲಿ ಹಿಂದುಳಿದಿದ್ದಾರೆ ಎಂಬುದಕ್ಕೆ ಇಪ್ಪತ್ತುವರ್ಷಗಳ ಹಿಂದೆ ನನ್ನ ಸ್ನೇಹಿತರೊಬ್ಬರ ಜೀವನದಲ್ಲಿ ನಡೆದ ಒಂದು ಘಟನೆ ನೆನಪಾಗುತ್ತಿದೆ.




ನನ್ನ ಸ್ನೇಹಿತರು, ಪಟ್ಟಣದಲ್ಲಿ ಹುಟ್ಟಿ ಬೆಳೆದವರು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ನಗರಕ್ಕೆ ಬಂದು ಅಲ್ಲಿಯ ಹಾಸ್ಟೆಲೊಂದರಲ್ಲಿ ಇದ್ದರು. ಅವರ ರೂಮಿನಲ್ಲಿ ಒಬ್ಬ ಹಳ್ಳಿಯ ವಿದ್ಯಾರ್ಥಿ ಇದ್ದನಂತೆ. ನಡೆ-ನುಡಿ ಚಟುವಟಿಕೆಗಳಲ್ಲಿ ಅವನು ನನ್ನ ಸ್ನೇಹಿತರಿಗೆ ಸರಿಸಾಟಿಯೇ ಇರಲಿಲ್ಲ. ರಾತ್ರಿಯ ಸಮಯದಲ್ಲಿ ಹಾಸ್ಟೆಲಿನ ರೂಮಿನಲ್ಲಿ ಉರಿಯುತ್ತಿರುವ ವಿದ್ಯುದ್ದೀಪವನ್ನು ಹೇಗೆ ಆರಿಸಬೇಕೆಂದು ಗೊತ್ತಿರದ ಆ ಹಳ್ಳಿಯವ ತಮ್ಮ ಹಳ್ಳಿಯ ಮನೆಯಲ್ಲಿ ದೀಪವನ್ನು ಬಾಯಿಂದ 'ಉಫ್' ಎಂದು ಊದುವಂತೆ ವಿದ್ಯುದ್ದೀಪವನ್ನು ಬಾಯಿಂದ 'ಉಫ್' ಎಂದು ಊದಿ ಆರಿಸಲು ಪ್ರಯತ್ನಿಸುತ್ತಿದ್ದನಂತೆ. ಇದನ್ನು ನೋಡಿ ಪಟ್ಟಣದ ನನ್ನ ಸ್ನೇಹಿತ ಹಳ್ಳಿಯವನಲ್ಲಿನ ಆ ಅಜ್ಞಾನವನ್ನು ಕಂಡು ಎಷ್ಟೋ ಸಾರಿ ಮರುಕಪಟ್ಟಿದ್ದುಂಟು.

ಈಗ ಕಾಲ ಬದಲಾಗಿದೆ. 21ನೇ ಶತಮಾನದಲ್ಲಿ ನಾವು ಕಾಲಿರಿಸಿದ್ದರೂ, ಎಷ್ಟೋ ಹಳ್ಳಿಗಳು ಇನ್ನೂ ಸ್ವಾತಂತ್ರ್ಯ ಪೂರ್ವದಲ್ಲಿ ಇದ್ದಂತಹ ಸ್ಥಿತಿಯಲ್ಲಿಯೇ ಇವೆ. ಎಷ್ಟೋ ಮನೆಗಳಲ್ಲಿ ವಿದ್ಯುದ್ದೀಪಗಳಿಲ್ಲ. ಸಾರಿಗೆ ಸೌಲಭ್ಯಗಳಿಲ್ಲ, ಕುಡಿಯುವ ನೀರಿಲ್ಲ, ಅಕ್ಷರ ಕಲಿಕೆಯಂತೂ ಇಲ್ಲವೇ ಇಲ್ಲ. ಇಂಥ ಕುಗ್ರಾಮಗಳಲ್ಲಿದ್ದುಕೊಂಡೇ ಕಷ್ಟಪಟ್ಟು ಕಲಿತು ಮುಂದೆ ಬಂದವರು ಕೇವಲ ಬೆರಳೆಣಿಕೆಯಷ್ಟೇ ಜನ. ಇಂಥ ಹಳ್ಳಿಯಲ್ಲಿದ್ದು ಓದುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವುದು ಸದ್ಯದ ಪರಿಸ್ಥಿತಿಯಲ್ಲಿ ಅವಶ್ಯ. ಹಾಗೆಂದೇ ಹಿಂದಿನ ಸರಕಾರಗಳು ಗ್ರಾಮೀಣ ವಿದ್ಯಾರ್ಥಿಗಳಿಗೆ ಕೃಪಾಂಕಗಳನ್ನು ನೀಡಿದ್ದವು. ಈಗಲೂ ಕಾಲ ಮಿಂಚಿಲ್ಲ. ಹಳ್ಳಿಯ ಜನ, ಹಳ್ಳಿಯ ವಿದ್ಯಾರ್ಥಿ, ಹಳ್ಳಿಗರ ಬದುಕು ಮುಂದುವರಿಯಬೇಕಾದರೆ 'ಕೃಪಾಂಕ' ನೀಡುವ ಸಂಪ್ರದಾಯ ಮತ್ತೆ ಜಾರಿಯಲ್ಲಿ ಬರಬೇಕು. ಆಗ ಮಾತ್ರ ಹಳ್ಳಿಗಳ ಅಭಿವೃದ್ಧಿ ಸಾಧ್ಯ.

- ವಿಜಯಕುಮಾರ ಎಸ್. ಅಂಟೀನ, ಧಾರವಾಡ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ ಸಂದರ್ಶನ

ಅಮೇರಿಕಾ ಅಧ್ಯಕ್ಷ ಬಿಲ್ ಕ್ಲಿಂಟನ್ ಭಾರತ ಭೇಟಿ ಹಿನ್ನೆಲೆಯಲ್ಲಿ ನಡೆಸಲಾದ ವಿಶೇಷ ಸಂದರ್ಶನ



ಪ್ರೊ. ಎಂ. ಡಿ. ನಂಜುಂಡಸ್ವಾಮಿ ಹೆಸರು ಕೇಳುತ್ತಿದ್ದಂತೆ ನೆನಪಾಗುವುದು ತೆಳು ಆಕೃತಿ, ಹಸಿರು ಟೋಪಿ, ಶಾಲು. ಆ ಸಣ್ಣ ಆಕೃತಿಯ ಬೃಹತ್ ಸಂಕೇತ ರಾಜ್ಯ ರೈತ ಸಂಘ. ಅವರು ಬಡಿದೆಬ್ಬಿಸಿದ ಹಳ್ಳಿಯ ಜನ, ಅವರು ಕಟ್ಟಿದ ಸಂಘಟನೆ, ನಡೆಸಿದ ಉಗ್ರ ಚಳುವಳಿಗಳು, ಸಾಮಾನ್ಯ ರೈತ ಕೂಡ ಇವತ್ತು ಎದೆ ಎತ್ತಿ ನಿಂತು ದುಷ್ಟ ಸರ್ಕಾರಿ ಅಧಿಕಾರಿಗಳನ್ನು ಪ್ರಶ್ನಿಸುವ ತಾಕತ್ತು ತಂದಿತ್ತಿವೆ. ದೇಶದ ಪ್ರಭುತ್ವ, ರಾಜಕಾರಣದ ವಿನಾಶಕಾರಿ ಪ್ರವೃತ್ತಿಯನ್ನು ತಡೆಯುವ ದಿಕ್ಕಿನಲ್ಲಿ ಸತತ ಪ್ರಯತ್ನ ನಡೆಸುತ್ತಾ ಬಂದವರು. ಈಗ ರೈತರು ಅನೇಕ ಬಾಹುಗಳು ಅಂತಾರಾಷ್ಟ್ರೀಯ ವ್ಯವಸ್ಥೆಯಲ್ಲಿ ಚದುರಂಗದ ದಾಳವಾಗಿದ್ದಾರೆ. ಅಂಥವರ ವಿರುದ್ಧವೂ ಅವರ ದನಿ ಗಟ್ಟಿಯಾಗಿ ಎದ್ದಿದೆ. ಚಳವಳಿಯ ಹಾಗೇ, ನ್ಯಾಯಾಲಯದ ಮೆಟ್ಟಿಲೇರಿ ಟ್ರಾನ್ಸ್ ಜೆನಿಕ್ ಬೀಜಗಳ ಪ್ರಯೋಗಾತ್ಮಕ ಬೆಳೆ ನಾಶಕ್ಕೆ ನ್ಯಾಯಾಂಗದ ಸಿಂಧುತ್ವ ಕೂಡ ಪಡೆದವರು ಅವರು.

ಇತ್ತೀಚೆಗೆ ರಾಜ್ಯದಾದ್ಯಂತ ವ್ಯಾಪಕವಾಗಿರುವ ತೆಂಗಿನ ನುಸಿ ಪೀಡೆ, ಕೇವಲ ಪ್ರಕೃತಿಯು ಹುಟ್ಟು ಹಾಕಿದ ಪಿಡುಗಲ್ಲ. ಅದರ ಹಿಂದೆ ಅಂತಾರಾಷ್ಟ್ರೀಯ ಸಂಚು ಇದೆ ಎಂದು ಅವರ ವಾದ. ಆ ಹಿನ್ನೆಲೆಯಲ್ಲಿ 'ಬದುಕು'ಗಾಗಿ ನೀಡಿದ ವಿಶೇಷ ಸಂದರ್ಶನದಲ್ಲಿ ಪ್ರೊಫೆಸರ್ ಮಾತಾಡಿದ್ದು ಇಲ್ಲಿದೆ.

ಬದುಕು : ತೆಂಗಿನ ನುಸಿ ಪೀಡೆಯ ಹಿಂದೆ ಅಂತಾರಾಷ್ಟ್ರೀಯ ರೋಗಾಣು ಸಮರದ ಸಂಚು ಇದೆ ಎಂದು ಇತ್ತೀಚೆಗೆ ಹೇಳಿದ್ದೀರಿ.

ಪ್ರೊಫೆಸರ್ : ನಿಜ ಹೇಳಬೇಕೆಂದರೆ 1974ರಲ್ಲಿಯೇ ನಾನು ರೋಗಾಣು ಸಮರದ ಪ್ರಸ್ತಾಪ ಮಾಡಿದ್ದೆ. ಆ ಕುರಿತು ಧಾರವಾಡದಿಂದ ಪ್ರಕಟವಾಗುತ್ತಿದ್ದ 'ಆಂದೋಲನ' ವಾರಪತ್ರಿಕೆಗೆ ಲೇಖನ ಬರೆದಿದ್ದೆ.

ಅಮೇರಿಕಾ ಸೈನ್ಯದ ಕೇಂದ್ರ ಕಛೇರಿ ಪೆಂಟಗನ್. ಅಲ್ಲಿ ಜೈವಿಕ ಸಮರ ವಿಭಾಗ ಒಂದಿದೆ. ಇದು ಮಾಡುವ ಕೆಲಸ ಇದೆಲ್ಲ. ನಮ್ಮ ದೇಶಕ್ಕೆ ಪಾರ್ಥೇನಿಯಂ ಕಳಿಸಿದ್ದು ಇವರೇ. ಕೆರೆಗಳನ್ನು ಬತ್ತಿಸುವ ಐಕಾರ್ನಿಯಾ ಬಂದಿದ್ದು ಇವರಿಂದ. ಇತ್ತೀಚಿನ ರೋಗಾಣು ಸಮರದ ಉದಾಹರಣೆ ಎಂದರೆ ಸೂರತ್‌ನ ಪ್ಲೇಗ್ ಪ್ರಕರಣ. ಪ್ಲೇಗ್ ಬಂದರೆ ಇಲಿ ಸಾಯಬೇಕು. ಆದರೆ ಇಲ್ಲಿ ಒಂದೂ ಇಲಿ ಸಾಯಲಿಲ್ಲ. ಮನುಷ್ಯರು ಸತ್ತರು. ಇಂಗ್ಲೀಷಿನ ವಾರಪತ್ರಿಕೆ 'ದಿ ವೀಕ್' ಇದೊಂದು ಅಮೇರಿಕನ್ ರೋಗಾಣು ಸಮರ ಪ್ರಯೋಗದ ಸೃಷ್ಟಿ ಉದಾಹರಣೆ ಎಂದು ಸವಿಸ್ತಾರ ಲೇಖನ ಪ್ರಕಟಿಸಿತು.

ಆಫ್ರಿಕಾದಲ್ಲಿ ಇವತ್ತು ಏಡ್ಸ್ ವ್ಯಾಪಕವಾಗಿದೆ. ಅಲ್ಲಿನ ಶೇಕಡಾ 60ರಿಂದ 70ರಷ್ಟು ಜನಕ್ಕೆ ಏಡ್ಸ್ ತಗುಲಿದೆ. ಇದಕ್ಕೆ ಕಾರಣ ಗೊತ್ತೇ? ಇದೇ ಅಮೇರಿಕನರು ಸಿಡುಬು ನಿರ್ಮೂಲನದ ನೆಪದಲ್ಲಿ ನೀಡಿದ ಲಸಿಕೆಯಲ್ಲಿ ಏಡ್ಸ್ ರೋಗಾಣು ಜನರ ದೇಹದಲ್ಲಿ ಬಿತ್ತಿದ್ದರು.

ಇಂಥ ಅನೇಕ ಪ್ರಯೋಗಗಳು ನಡೀತಾ ಇದ್ದರೂ ನಮ್ಮ ವಿಜ್ಞಾನಿಗಳಿಗೆ ಪ್ರಜ್ಞೆ ಅನ್ನೋದು ಬಂದಿಲ್ಲ, ಇವತ್ತು ರಾಷ್ಟ್ರ ವ್ಯಾಪಿಯಾಗಿ ಪೋಲಿಯೋ ಲಸಿಕೆ ನೀಡ್ತಾ ಇದಾರೆ. ಅದರಲ್ಲಿ ನಿಜವಾಗಿ ಏನಿದೆ? ಯಾರೂ ನೋಡಿಲ್ಲ. ಪೋಲಿಯೋ ನಿರೋಧಕ ಲಸಿಕೆ ಜೊತೆ ಇನ್ನೂ ಏನಾದರೂ ಇದೆಯಾ ಅಂತ ಯಾರೂ ಪರೀಕ್ಷಿಸಿ ನೋಡುವ ಗೋಜಿಗೇ ಹೋಗಿಲ್ಲ. ಆ ಬಗ್ಗೆ ಯಾರಿಗೂ ಅನುಮಾನ ಕೂಡ ಇಲ್ಲ. ಹೀಗೆ ಇದ್ದಾರೆ ನಮ್ಮ ವಿಜ್ಞಾನಿಗಳು.

ರಾಷ್ಟ್ರ ವ್ಯಾಪಿಯಾಗಿ ಪೋಲಿಯೋ ಲಸಿಕೆ ನೀಡ್ತಾ ಇದಾರೆ. ಅದರಲ್ಲಿ ನಿಜವಾಗಿ ಏನಿದೆ? ಯಾರೂ ನೋಡಿಲ್ಲ.

ಬದುಕು : ತೆಂಗಿನ ನುಸಿಗೂ ಅಂತಾರಾಷ್ಟ್ರೀಯ ಕೈವಾಡಕ್ಕೂ ಏನು ಸಂಬಂಧ? ಅದು ಮಲೇಷಿಯಾದಿಂದ ಬಂದಿದ್ದು ಅಂತ ಹೇಳಿಕೆ ಇದೆ.

ಪ್ರೊಫೆಸರ್ : ನಮ್ಮ ವಿಜ್ಞಾನಿಗಳು ಬಾಯಿಗೆ ಬಂದ ಹಾಗೆ ಮಾತಾಡುತ್ತಾರೆ. ನಮ್ಮಲ್ಲಿ ಎಣ್ಣೆ ಉತ್ಪಾದನೆಗೆ ಬಳಸೋ ತೆಂಗು ಬೆಳೆಯೋದು ಕೇರಳದಲ್ಲಿ. ತಿನ್ನುವ ತೆಂಗು ಬೆಳೆಯೋದು ಕರ್ನಾಟಕದಲ್ಲಿ. ತಾಳೆ ಬೆಳೆಯೋ ದೇಶಗಳ

ಲಾಬಿಯಿಂದ ಈ ನುಸಿ ಮೊದಲು ಶುರುವಾದದ್ದು ಕೇರಳದಲ್ಲಿ. ಅಲ್ಲಿಂದ ಕರ್ನಾಟಕಕ್ಕೂ ಬಂತು. ಅವರಿಗೆ ತಮ್ಮ ತಾಳೆ ಎಣ್ಣೆಗೆ ಮಾರುಕಟ್ಟೆ ನಿರ್ಮಿಸಿಕೊಳ್ಳಬೇಕು.

ಈ ದೃಷ್ಟೀಲಿ ಸಂಶೋಧನೆ ಮಾಡೋ ರಾಜಕೀಯ ಪ್ರಜ್ಞೆ ನಮ್ಮ ವಿಜ್ಞಾನಿಗಳಿಗಿಲ್ಲ. ನಮ್ಮ ರಾಜಕಾರಣಿಗಳಿಗೆ ವಿಜ್ಞಾನ ಗೊತ್ತಿಲ್ಲ. ಓದಿ ತಿಳಕೊಳ್ಳೋ ಪುರುಸೊತ್ತೂ ಇಲ್ಲ. ಅವರು ಓದೋದೂ ಇಲ್ಲ.

ಬದುಕು : ತನ್ನ ಮಾರುಕಟ್ಟೆ ಗಳಿಸಿಕೊಳ್ಳಲು ಇಷ್ಟೆಲ್ಲ ಮಾಡುತ್ತಾರೆಯೇ?

ಪ್ರೊಫೆಸರ್ : ಅದು ಅಷ್ಟು ಸರಳ ವಿಚಾರ ಅಲ್ಲ. ಎಲ್ಲೆಲ್ಲಿ ಮಾಜಿ ಗುಲಾಮರಿದ್ದಾರೋ ಅಲ್ಲೆಲ್ಲ ಗುಲಾಮಗಿರಿ ಮುಂದುವರಿಸೋ ಪ್ರಯತ್ನದ ಒಂದು ಭಾಗ ಇದು. ಸಾಮ್ರಾಜ್ಯಶಾಹಿ ಮುಂದುವರಿಕೆಗೆ ಸಂಚು. ಹಾಗಾಗಿ ಇಂಥ ಕೃತ್ಯಗಳನ್ನು ಅವರ್‍ಯಾರೂ ಮುಂದುವರಿದ ದೇಶಗಳ ಮೇಲೆ ಪ್ರಯೋಗಿಸೋದಿಲ್ಲ. ಕೇವಲ ಅಭಿವೃದ್ಧಿಶೀಲ ತೃತೀಯ ವಿಶ್ವದ ದೇಶಗಳ ಮೇಲೆ ನಡೆಸ್ತಾರೆ.

ಬದುಕು : ಇಂಥ ವಿಚಾರಗಳ ಅರಿವು ಮಾಡಿಸೋ ಯತ್ನ ಯಾಕೆ ಆಗ್ತಾ ಇಲ್ಲ?


ಪ್ರೊಫೆಸರ್ : ಸೂರತ್ ಪ್ಲೇಗ್ ಪ್ರಕರಣದಲ್ಲಿ 'ದಿ ವೀಕ್' ಬರೆಯಿತು. ಮೂರನೇ ಪ್ರಪಂಚದ ಚಳವಳೀ (Third world network) ಅನ್ನುವ ಸಂಘಟನೆ ಸಾಕಷ್ಟು ಇಂಥ ಲೇಖನಗಳನ್ನು ಪ್ರಕಟಿಸುತ್ತಾ ಬಂದಿದೆ. ಇಂಥ ಪ್ರಯತ್ನ ಕೇವಲ ಕೆಲವರಿಂದ ಹಾಗಾಗಿ ಜನರನ್ನು ತಲುಪಿಲ್ಲ. ಸರಿಯಾದ ರೀತಿಯಲ್ಲಿ ಪ್ರಯತ್ನ ಮಾಡಬೇಕು.

ಬದುಕು : ಬಹುರಾಷ್ಟ್ರೀಯ ಸಮುದಾಯ ಇಂಥ ಸಮರ ಯಾಕೆ ಕೈಗೊಂಡಿದೆ?


ಪ್ರೊಫೆಸರ್ : ಉದ್ದೇಶ ಸ್ಪಷ್ಟ. ಸ್ಥಳೀಯ ಉತ್ಪಾದನೆ ನಾಶ ಮಾಡೋದು. ಅದು ರೈತರ ಉತ್ಪನ್ನ ಇರಬಹುದು. ಕೈಗಾರಿಕಾ ಉತ್ಪಾದನೆ ಇರಬಹುದು. ಆನಂತರ ಇಡೀ ದೇಶಾನ ತನ್ನ ಮಾರುಕಟ್ಟೆಯಾಗಿ ಪರಿವರ್ತಿಸೋದು ಗ್ಲೋಬಲೈಸೇಷನ್, ಉದಾರೀಕರಣದ ಉದ್ದೇಶವೇ ಇದು.

ಬದುಕು : ನಮ್ಮ ಆಹಾರ ಧಾನ್ಯಗಳ ತಳಿಗಳೆಲ್ಲ ಇವತ್ತು ನಮ್ಮಲ್ಲಿಂದ ಕಣ್ಮರೆ ಆಗುತ್ತಾ ಇದ್ದರೂ, ಇವುಗಳ ಸಂಗ್ರಹವನ್ನು ಬಹುರಾಷ್ಟ್ರೀಯರು ಉಳಿಸಿಕೊಂಡಿದ್ದಾರೆ ಎಂಬ ಮಾತಿದೆ.

ಪ್ರೊಫೆಸರ್ : ನಮ್ಮ ಎಲ್ಲಾ ತಳಿಗಳ ಸಂಗ್ರಹ ಜೀನ್ ಬ್ಯಾಂಕ್‌ಗಳಲ್ಲಿ ಇದೆ. ನಮ್ಮಲ್ಲಿ ಒಂದು ಕಾಲಕ್ಕೆ ಮೂವತ್ತು ಸಾವಿರ ಬಗೆಯ ಭತ್ತದ ತಳಿಗಳು ಇದ್ದವು. ಇವತ್ತು ನಮ್ಮಲ್ಲಿ ಇರುವ ಭತ್ತದ ತಳಿಗಳು ಹೆಚ್ಚೆಂದರೆ ನೂರು ಇರಬಹುದು. ಇದು ಜಸ್ಟ್ ಒಂದರ ಉದಾಹರಣೆ. ಇನ್ನೂ ಇಂಥ ಎಷ್ಟು ತಳಿಗಳ ಜೀನ್‌ಗಳನ್ನು ಅವರು ಸಂಗ್ರಹಿಸಿ ಇಟ್ಟಿರಬಹುದು ಲೆಕ್ಕ ಹಾಕಿ. ಸಣ್ಣ ಉದಾಹರಣೆ. ನಮ್ಮಲ್ಲಿದ್ದ ಬಾಳೆ ತಳಿಗಳನ್ನೇ ನೋಡಿ. ಕಾಡು ಬಾಳೆ, ರಾಜಬಾಳೆ, ರಸಬಾಳೆ ಹೀಗೆ ಒಂದೊಂದು ಭಾಗದಲ್ಲಿ ಒಂದೊಂದು ಬಾಳೆ ಇರತಾ ಇತ್ತು. ಇವತ್ತು ಆ ಬಾಳೆ ಗಿಡಗಳು ಮಾಯವಾಗಿ ಎಲ್ಲೆಲ್ಲೂ ಹೈಬ್ರಿಡ್ ತಳಿಗಳು ಬಂದಿವೆ. ಅದಕ್ಕೇ ಜೀನ್ ಬ್ಯಾಂಕ್‌ನವರನ್ನು ನಾವೀಗ ಒತ್ತಾಯಿಸ್ತಾ ಇದೀವಿ. ನಮ್ಮ ತಳಿಗಳ ಜೀನ್‌ಗಳನ್ನು ವಾಪಸ್ ಮಾಡಿ ಅಂತ.



ಇದರ ಜೊತೆಗೇ, ನಮ್ಮಲ್ಲಿ ಉಳಿದುಕೊಂಡಿರೋ ತಳಿಗಳನ್ನು ಉಳಿಸಿ, ಬೆಳೆಸೋ ಯತ್ನಾನೂ ನಡೀತಾ ಇದೆ. ಒಂದು ವಿಶೇಷ ತಿಳಿಯ ಭತ್ತದ ತಳಿ ಉಳಕೊಂಡು ಬಂದಿದ್ದರೆ, ಅದನ್ನು ಹುಡುಕಿ ಒಂದು ಬೊಗಸೆ ಬೀಜ ತಂದು ಬಿತ್ತಿದರೆ ಆಯಿತು. ಅದರ ಬೀಜ ನಾಲ್ಕು ಜನಕ್ಕೆ ಹಂಚಿ ಮತ್ತೆ ಬೀಜ ಮಾಡ್ಕೋಬಹುದು. ಆ ನಿಟ್ಟಿನಲ್ಲಿ ನಾವು ಪ್ರಯತ್ನಿಸ್ತಾ ಇದೀವಿ.



ಆಫ್ರಿಕಾದಲ್ಲಿ ಶೇಕಡಾ 60ರಿಂದ 70ರಷ್ಟು ಜನಕ್ಕೆ ಏಡ್ಸ್ ತಗುಲಿದೆ. ಇದಕ್ಕೆ ಕಾರಣ ಗೊತ್ತೇ? ಇದೇ ಅಮೇರಿಕನರು ಸಿಡುಬು ನಿರ್ಮೂಲನದ ನೆಪದಲ್ಲಿ ನೀಡಿದ ಲಸಿಕೆಯಲ್ಲಿ ಏಡ್ಸ್ ರೋಗಾಣು ಜನರ ದೇಹದಲ್ಲಿ ಬಿತ್ತಿದ್ದರು.

ಬದುಕು : ಆರ್ಥಿಕ ಉದಾರೀಕರಣದ ಹಿನ್ನೆಲೆಯಲ್ಲಿ ನಾವು ಬದಲಾಗಬೇಕು. ಇಲ್ಲವಾದಲ್ಲಿ ನಮ್ಮ ಅಂತಾರಾಷ್ಟ್ರೀಯ ವಾಣಿಜ್ಯ ವ್ಯವಹಾರಕ್ಕೆ ಧಕ್ಕೆ ಬರುತ್ತದೆ ಎಂಬ ವಾದ ಇದೆಯಲ್ಲ?

ಪ್ರೊಫೆಸರ್ : ಇದೆಲ್ಲ ಬರೀ ಬೊಗಳೆ. ಅಂತಾರಾಷ್ಟ್ರೀಯ ವಾಣಿಜ್ಯ ಮಾರುಕಟ್ಟೆಯಲ್ಲಿ ಭಾರತದ ಪಾಲು ಶೇಕಡಾ 0.05 ಅದು ನೆಗ್ಲಿಜಿಬಲ್.

ಬದುಕು : ಹಾಗಾದರೆ ನಮ್ಮಲ್ಲಿ ಹಸಿರು ಕ್ರಾಂತಿ ಆದದ್ದು ಸುಳ್ಳಾ?

ಪ್ರೊಫೆಸರ್ : ಯಾವ ಹಸಿರು ಕ್ರಾಂತಿ? ಇದರ ಹಿಂದಿನ ಉದ್ದೇಶ ನಿಮಗೆ ಗೊತ್ತಾ? ಹಸಿರು ಕ್ರಾಂತಿ, ಮಿಶ್ರತಳಿ, ಹೆಚ್ಚಿನ ಇಳುವರಿ ಅಂದರು. ನಮ್ಮವರೂ ಪೆದ್ದರ ಹಾಗೆ ಅದಕ್ಕೆ ಮುಗಿಬಿದ್ದರು. ಈ ಹೆಸರಲ್ಲಿ ಅವರು ಕೊಟ್ಟಿದ್ದು ರೋಗ ಪೀಡಿತ ತಳಿಗಳನ್ನು. ಬೀಜ ಅವರಿಂದ ಕೊಂಡ್ಕೋಬೇಕು, ಅದಕ್ಕೆ ಗೊಬ್ಬರ ಅವರಿಂದ ಕೊಂಡ್ಕೋಬೇಕು. ಆಮೇಲೆ ಅದಕ್ಕೆ ರೋಗ ಬರುತ್ತೆ. ಅದರ ನಿವಾರಣೆಗೆ ಅವರಿಂದಲೇ ಕೀಟನಾಶಕ ಕೊಂಡುಕೋಬೇಕು. ಬಿತ್ತನೆ ಬೀಜಕ್ಕೂ ಗುಲಾಮಗಿರಿ.

ಬದುಕು : ಟರ್ಮಿನೇಟರ್ ಸೀಡ್ ಕೂಡ ಅಂಥದ್ದೇ ವ್ಯವಸ್ಥೆಯ ಇನ್ನೊಂದು ಮುಖ ಅಲ್ಲವೇ?

ಪ್ರೊಫೆಸರ್ : ನೀವು ಟರ್ಮಿನೇಟರ್‌ವರೆಗೆ ಹೋಗಬೇಡಿ. ಟ್ರಾನ್ಸ್‌ಜೆನಿಕ್ ಸೀಡ್ ಬಗ್ಗೆ ತಗೊಳ್ಳಿ. ರೋಗ ನಿರೋಧಕ ಶಕ್ತಿ ರೂಢಿಸಿಕೊಂಡ ತಳಿ ಅದು ಅಂತಾರೆ. ಇದು ಶುರುವಾದದ್ದು ಹತ್ತಿ ವಿಷಯದಲ್ಲಿ, ಬಿ.ಟಿ. ಕಾಟನ್ ಅಂತಾರೆ. ಕೊರೆಯೋ ಹುಳುಗಳ ನಿಯಂತ್ರಣಕ್ಕೆ, ಸಸ್ಯದಲ್ಲಿಯೇ ನಿರೋಧಕ ಶಕ್ತಿ ಮೂಡಿಸಲು ಜೀನ್ಸ್‌ಗಳನ್ನು ರೂಪಾಂತರಿಸಲಾಗಿದೆ. ಅದು ಆ ಕೀಟಗಳನ್ನು ಕೊಲ್ಲುವ ವಿಷ ತುಂಬಿಕೊಂಡಿರುತ್ತೆ. ನಾಳೆ ದಿನ ಏನಾಗುತ್ತೆ ? ಆ ಕೀಟ ನಿರೋಧಕ ಶಕ್ತಿ ಬೆಳೆಸಿಕೊಳ್ಳುತ್ತವೆ. ಅದನ್ನು ಯಾವುದರಿಂದಲೂ ಕೊಲ್ಲೋದು ಸಾಧ್ಯ ಆಗೋದಿಲ್ಲ. ಸೊಳ್ಳೆಗಳು ಡಿಡಿಟಿಗೆ ಪ್ರತಿರೋಧ ಬೆಳೆಸಿಕೊಂಡಿದ್ದು ಹೀಗೆ. ಇಂಥ ಕೀಟಗಳು ಬೇರೆ ಕೀಟಗಳ ಜೊತೆ ಸೇರಿ ವಂಶೋದ್ಧಾರ ಮಾಡುತ್ತವೆ. ಅವುಗಳಿಂದ ಹುಟ್ಟುವ ಕೀಟಗಳು ಜನಿಸಿದಾಗಲೇ ಬಿಟಿ ಕಾಟನ್‌ನಂಥ ಸಸ್ಯದ ಕೀಟ ನಿರೋಧಕ ಶಕ್ತಿಯ ಬಗ್ಗೆಯೇ ನಿರೋಧ ಬೆಳೆಸಿಕೊಂಡು ಹುಟ್ಟುತ್ತವೆ. ಆಗ ಗತಿ ಏನಾಗಬಹುದು?

ಇಂಥ ಸಸ್ಯಗಳು ಒಂದು ಕಡೆ ಬೆಳೆದರೆ, ಅದರ ಆಸು ಪಾಸಿನ ಜಮೀನಿನ ಹತ್ತಿ ಗಿಡಗಳ ಜೊತೆ ಪರಾಗಸ್ಪರ್ಶ ನಡೆಸಿ, ಅದರದೇ ತಳಿಗಳು ಹುಟ್ಟುತ್ತವೆ. ಇದು ಮೈಯೆಲ್ಲಾ ವಿಷ ತುಂಬಿಕೊಂಡ ಗಿಡ. ಟಾಕ್ಸಿನ್ ಇರುತ್ತೆ ಅದರಿಂದ ನಮ್ಮ ಮಣ್ಣಿನ ಸೂಕ್ಷ್ಮಾಣುಜೀವಿಗಳು ಸಾಯುತ್ತವೆ. ಬೂಷ್ಟು ಅಥವಾ ಫಂಗಸ್‌ಗಳೂ ಸಾಯುತ್ತವೆ. ಇದು ಅತಿ ಸೂಕ್ಷ್ಮವಾದ



ನಮ್ಮಲ್ಲಿ ಒಂದು ಕಾಲಕ್ಕೆ ಮೂವತ್ತು ಸಾವಿರ ಬಗೆಯ ಭತ್ತದ ತಳಿಗಳು ಇದ್ದವು. ಇವತ್ತು ನಮ್ಮಲ್ಲಿ ಇರುವ ಭತ್ತದ ತಳಿಗಳು ಹೆಚ್ಚೆಂದರೆ ನೂರು ಇರಬಹುದು.

ಪ್ರಕೃತಿಯ ವ್ಯವಸ್ಥೆ. ಒಮ್ಮೆ ಸೂಕ್ಷ್ಮಾಣು ಜೀವಿಗಳು, ಫಂಗಸ್‌ಗಳು ಸತ್ತವೆಂದರೆ ಇಡೀ ನೆಲ ಬಂಜೆಯಾಗುತ್ತದೆ. ಆಮೇಲೆ ಬೋಲ್ಗಾರ್ಡ್ ಕಾಟನ್ ಅಲ್ಲ, ಅಲ್ಲಿ ನೀವೂ ಏನೂ ಬೆಳೆಯೋದು ಸಾಧ್ಯ ಇಲ್ಲ.

ಬದುಕು : ಇದು ಅಪಾಯಕಾರಿ ಅಲ್ಲ ಅಂತ ಕೃಷಿ ಮಂತ್ರಿಗಳೇ ಹೇಳ್ತಾರೆ.

ಪ್ರೊಫೆಸರ್ : ಇಂಥ ಜನ ಮೊದಲು ಮಂತ್ರಿಗಳನ್ನು ಜೇಬಿಗೆ ಹಾಕ್ಕೋತ್ತಾರೆ. ಅದಕ್ಕೇ ಜಯಚಂದ್ರ ಅವರಂಥ ಕೃಷಿ ಸಚಿವರು ಮಾನ್‌ಸಾಂಟೋ ಕಂಪೆನಿ ಪರವಾಗಿ ಮಾತಾಡೋದು.

ಬದುಕು : ಹಿಂದಿನ ಸಚಿವರು ಇದೇ ರೀತಿ ಹೇಳಿದ್ದರು.

ಪ್ರೊಫೆಸರ್ : ಈ ವಿಚಾರದಲ್ಲಿ ಬೈರೇಗೌಡರು, ಜಯಚಂದ್ರ ಅಣ್ಣತಮ್ಮಂದಿರು. ಇಂಥ ಹುಚ್ಚು ಪ್ರಯೋಗಗಳಿಂದ ನಮ್ಮ ಇಡೀ ಜೈವಿಕ ವೈವಿಧ್ಯ ನಾಶ ಆಗುತ್ತೆ ಮತ್ತೆ. ಯಾವತ್ತೂ ಅದು ತಲೆ ಎತ್ತದಂತೆ ನಮ್ಮ ಜೀವ ವೈವಿಧ್ಯ ನಾಶ ಆಗುತ್ತದಲ್ಲ ಅದೇ ಬಹಳ ದೊಡ್ಡ ಅಪಾಯ.

ಸಂಶೋಧನೆ ಮಾಡೋ ರಾಜಕೀಯ ಪ್ರಜ್ಞೆ ನಮ್ಮ ವಿಜ್ಞಾನಿಗಳಿಗಿಲ್ಲ. ನಮ್ಮ ರಾಜಕಾರಣಿಗಳಿಗೆ ವಿಜ್ಞಾನ ಗೊತ್ತಿಲ್ಲ.

ಬದುಕು : ಈ ಅಪಾಯ ಎದುರಿಸೋಕ್ಕೆ ನೀವೇನು ಮಾಡ್ತಾ ಇದೀರ?

ಪ್ರೊಫೆಸರ್: ನಾವು ಏನು ಮಾಡಬಹುದೋ ಅದೆಲ್ಲ ಮಾಡ್ತಾ ಇದೀವಿ. ಕೆಲವು ಪತ್ರಿಕೆಗಳೂ ಇಂಥ ಕೆಲಸ ಮಾಡ್ತಾ ಇವೆ. ಆಗಲೇ ಹೇಳಿದ ಹಾಗೆ 'ದಿ ವೀಕ್' ನ ಉದಾಹರಣೆ. ಇದೆ. ಇದೆಲ್ಲ ಪರಿಣಾಮಕಾರಿಯಾಗಿ ಆಗಬೇಕಾದರೆ ಪತ್ರಿಕೆಗಳೂ ಈ ದಿಕ್ಕಿನಲ್ಲಿ ಸರಿಯಾಗಿ ಕೆಲಸ ಮಾಡಬೇಕು. ಆ ಕೆಲಸ ಮಾಡ್ತಾ ಇಲ್ಲ.

ಬದುಕು : ರಾಜಕಾರಣಿಗಳು? ಸರ್ಕಾರಗಳು?

ಪ್ರೊಫೆಸರ್ : ದಿಕ್ಕೇ ಇಲ್ಲ ಮುಂಡೇಗಂಡರಿಗೆ. ಸೆನ್ಸ್ ಆಫ್ ಡೈರೆಕ್ಷನ್ ಅನ್ನೋದೇ ಇಲ್ಲ ನಮ್ಮ ಸರ್ಕಾರಗಳಿಗೆ. ಗಾಳಿ ಬಂದ ಹಾಗೆ ತೂರಿ ಕೊಳ್ಳೋದು ಪ್ರವಾಹದಲ್ಲಿ ಸತ್ತ ಹೆಣ ತೇಲಿ ಹೋದ ಹಾಗೆ ತೇಲಿಕೊಂಡು ಹೋಗ್ತಾ ಇದಾರೆ ಇವರೆಲ್ಲ.

ಬದುಕು : ಜಪಾನಿನಲ್ಲಿ ಫುಕೋವುಕಾ ಅಂಥವರು ನಡೆಸಿದ ಸಹಜ ಕೃಷಿಯ ಪ್ರಯೋಗ ಇಡೀ ಜಗತ್ತಿನ ಕಣ್ಣು ತೆರೆಸೋದು ಸಾಧ್ಯ ಆಯಿತು. ನಮ್ಮಲ್ಲಿ ಆ ದಿಕ್ಕಿನಲ್ಲಿ ಏನಾದರೂ ನಡೆದಿದೆಯಾ?

ಪ್ರೊಫೆಸರ್ : ನಮ್ಮಲ್ಲೂ ಅಂಥ ಸಾಕಷ್ಟು ಪ್ರಯೋಗಗಳು ಆಗ್ತಾ ಇವೆ. ದಿನ ದಿನಕ್ಕೂ ಸಹಜ ಕೃಷಿಯತ್ತ ಒಲವು ತೋರಿಸುವವರ ಸಂಖ್ಯೆ ಜಾಸ್ತಿ ಆಗ್ತಾ ಇದೆ. ಈ ನಮ್ಮ ಎಲ್ಲ ದುರಂತಗಳಿಗೆ ಪರಿಹಾರ ಅಂದರೆ ಸಹಜ, ಸಾಂಪ್ರದಾಯಿಕ ಕೃಷಿ. ಕೇವಲ ಕೃಷಿ ಒಂದಕ್ಕೆ ಅಲ್ಲ, ಕೈಗಾರಿಕೆಗಳಿಗೂ ಇದು ಅನ್ವಯಿಸುತ್ತೆ. ಆ ಕಾರಣಕ್ಕೇ ಗಾಂಧೀಜೀ ಇವತ್ತಿಗೂ ರೆಲವೆಂಟ್.

ಬದುಕು : ನಮ್ಮ ರೈತರೂ ದುಡ್ಡಿನ ಆಸೆಗೆ ಆಹಾರ ಧಾನ್ಯ ಬೆಳೆಯೋದು ಬಿಟ್ಟು ವಾಣಿಜ್ಯ ಬೆಳೆಗಳತ್ತ ಒಲವು ತೋರ್‍ತಾ ಇರೋದೂ ಇಂಥ ಬೆಳವಣಿಗೆಗಳಿಗೆ ಕಾರಣ ಅಲ್ಲವೇ?

ಪ್ರೊಫೆಸರ್ : ಇದಕ್ಕೆಲ್ಲ ಕಾರಣವಾದೋರು ಯಾರು? ನಮ್ಮ ಸರ್ಕಾರಗಳು, ಇಳುವರಿ ಹೆಚ್ಚಬೇಕು, ವ್ಯಾಪಾರ ಹೆಚ್ಚಬೇಕು ಅಂತ ಬೊಬ್ಬೆ ಅದಕ್ಕೆ ಬೇಕಾದ ಬೀಜ, ಗೊಬ್ಬರ ಎಲ್ಲ ಒದಗಿಸ್ತಾ ಬಂದರು. ಹೀಗಾಗಿ ನಮ್ಮಂಥ ದೇಶಗಳು ಬಿಳೀ ಮನುಷ್ಯರ ಡೈನಿಂಗ್ ಟೇಬಲ್ಲಿಗೆ ಏನೇನು ಬೇಕೋ ಅದೆಲ್ಲ ಬೆಳೀತಾ ಹೋದೆವು. ಉತ್ಪಾದಿಸ್ತಾ ಹೋದೆವು. ಅವರು ತಿನ್ನೋ ದನಕ್ಕೆ ಪಶು ಆಹಾರ ಬೇಕು. ಅದಕ್ಕೆ ನಾವು ಇಲ್ಲಿ ಸೋಯಾ ಬೆಳೀತೀವಿ. ಅವರ ಅಡುಗೆಗೆ ಎಣ್ಣೆ ಬೇಕು. ಅದಕ್ಕೆ ನಾವು ಸೂರ್ಯಕಾಂತಿ ಬೆಳೀತೀವಿ. ಅದು ಹಾಳಾಗಲಿ. ಆ ಬಿಳೀ ಮನುಷ್ಯರು ತಿನ್ನೋ ಆಡು, ಕುರಿ ಕೂಡ ನಾವೇ ಒದಗಿಸ್ತಾ ಇದೀವಿ. ಅದಕ್ಕೆ ನಮ್ಮ ದರಿದ್ರ ಸರ್ಕಾರಗಳು ಆಡು, ಕುರಿ ಸಾಲ ಎಲ್ಲ ಕೊಡುತ್ತವೆ.

ಅಲ್ಲೆಲ್ಲ ಚಳಿ ಜಾಸ್ತಿ. ಕುರಿ, ಆಡುಗಳು ಮೈಯಲ್ಲಿ ಕೊಬ್ಬು ಬೆಳೆಸಿಕೊಂಡು ಬಿಡುತ್ತವೆ. ನಮ್ಮಂಥ ಉಷ್ಣ ವಲಯದ ದೇಶದ ಆಡು, ಕುರಿಗಳಲ್ಲಿ ಕೊಬ್ಬಿನ ಅಂಶ ಕಡಿಮೆ. ಇದನ್ನ 'ಲೀನ್‌ಮೀಟ್' ಅಂತಾರೆ.

ನಡೀತಾ ಇರೋದು ಇದು. ಈ ಪೆದ್ದು ಸರ್ಕಾರಗಳು ನಮ್ಮ ಮಾಂಸ ರಫ್ತು ಅಷ್ಟು ಹೆಚ್ಚಾಯಿತು, ಇಷ್ಟು ಹೆಚ್ಚಾಯಿತು ಅಂತ ಜಂಭ ಕೊಚ್ಚಿಕೊಳ್ಳುತ್ತವೆ. ಇವತ್ತಿಗೆ ನಮ್ಮ ಪಶು ಸಂಪತ್ತು ತೀವ್ರ ರೀತಿಯಲ್ಲಿ ಕ್ಷೀಣಿಸ್ತಾ ಇದೆ. ಆ ಬಿಳಿಯರ ಕಡೆ ಏಜೆಂಟರು ದನ ಖರೀದಿಗೆ ಬರ್‍ತಾರೆ. ಸಾಮಾನ್ಯವಾಗಿ ಸಿಗೋ ದರಕ್ಕಿಂತ ಎರಡು ಪಟ್ಟು ಬೆಲೆ. ಅದನ್ನು ಕೇಳಿ ರೈತ ಖುಷಿ ಆಗ್ತಾನೆ. ಇದೊಂದು ಕರು ಮಾರಿದರೆ, ಪಕ್ಕದ ಹಳ್ಳಿಯವರ ಎರಡು ಕರು ಖರೀದಿಸಬಹುದು ಅಂದುಕೋತಾನೆ. ಆದರೆ ಆ ಏಜೆಂಟು ಇವನಿಗಿಂತ ಮುಂಚೇನೇ ಅಲ್ಲಿನ ಎಲ್ಲಾ ಕರುಗಳನ್ನು ಖರೀದಿಸಿರ್‍ತಾನೆ. ಮುಂದೆ ಒಂದು ಕಾಲಕ್ಕೆ ನಮ್ಮಲ್ಲಿ ಸಣ್ಣ ರೈತ ಉಳೋಕ್ಕೆ ನೇಗಿಲಿಗೆ ಹೂಡೋದಕ್ಕೆ ದನ ಇರೋದಿಲ್ಲ. ಗಂಡ ನೇಗಿಲು ಎಳೀಬೇಕು, ಹೆಂಡತಿ ಬಿತ್ತಬೇಕು, ಹಾಗಾಗುತ್ತೆ ಪರಿಸ್ಥಿತಿ.

ಕೆಂಟುಕಿ ಫ್ರೈಡ್ ಚಿಕನ್ (ಕೆ.ಎಫ್.ಸಿ) ಅಂತ ಕಂಪೆನಿಗಳು ಬಂದಿರೋದು ನಮಗೆ ಚಿಕನ್ ತಿನ್ನಿಸೋಕ್ಕಲ್ಲ. ಇಲ್ಲಿನ ಪ್ರಾಣಿಗಳನ್ನ ಖರೀದಿಸಿ ತಮ್ಮ ದೇಶಗಳಿಗೆ ರಫ್ತು ಮಾಡೋದಕ್ಕೆ. ಅದರ ನಿಜವಾದ ಉದ್ದೇಶ ಮಾಂಸದ ರಫ್ತು ಮಾಡೋದು ಈಗಾಗಲೇ ಕಲ್ಲೀಕೋಟೆ, ಮಂಗಳೂರು ಮುಂತಾದ ಕಡೆ ಇವರ ಕಸಾಯಿಖಾನೆಗಳು ಆಗಿವೆ. ನಮ್ಮ ದನ ಹೊಡಕೊಂಡು ಹೋಗಿ ಮಾಂಸ ಮಾಡಿ ಟಿನ್‌ಗೆ ತುಂಬ್ತಾರೆ. ಅವುಗಳ ರಕ್ತ ಕೂಡ ವಿದೇಶಗಳಿಗೆ ರಫ್ತಾಗುತ್ತೆ.

ನಾನು ಒಂದು ಕಾಳೂ ಲೆವಿ ಕೊಡಲಿಲ್ಲ

1965ರಲ್ಲಿ ಜರ್ಮನಿಯಿಂದ ಬಂದೋನು ಅಪ್ಪ ಕೊಟ್ಟ ನಂಜನಗೂಡಿನ ಜಮೀನಲ್ಲಿ ಬೆಳೆ ತೆಗೆಯೋಕ್ಕೆ ಶುರು ಮಾಡಿದೆ. ಆಗ ಲೆವಿ ಬಂತು. ಸುಗ್ಗಿ ಆದ ಮೇಲೆ ಭತ್ತ ಲಾರೀಲಿ ತುಂಬಿಕೊಂಡು ಸೀದಾ ಮೈಸೂರಿನ ಮನೆಗೆ ಬರ್‍ತಾ ಇದ್ದೆ. ಗೇಟಲ್ಲಿ ಯಾರಾದರೂ ತಡೆದರೆ, ಅವರ ರಿಜಿಸ್ಟರ್‌ನಲ್ಲಿ 'ನಾನು ಲೆವಿ ಕೊಡುವುದಿಲ್ಲ' ಅಂತ ಬರೆದು ಸಹಿ ಹಾಕಿ ಬರ್‍ತಾ ಇದ್ದೆ.

ಇವತ್ತಿನವರೆಗೂ ಒಂದು ಕಾಳೂ ಲೆವಿ ನಾನು ಕೊಟ್ಟಿಲ್ಲ. ಅವತ್ತು ಒಂಟಿಯಾಗಿ ಹೋರಾಟ ಶುರು ಮಾಡಿದೋನು ನಾನು.

ಪ್ರೊಫೆಸರ್ ನಂಜುಂಡಸ್ವಾಮಿ ಸಂದರ್ಶನದ ವೇಳೆ ಹೇಳಿದ ಲೆವಿ ಕತೆ ಇದು.

ನಾವು ಸುಮ್ಮನೆ ಕೂತರೆ ದೇಶೀ ತಳಿ ಒಂದೂ ಉಳಿಯೋದಿಲ್ಲ. ಅಮೃತ ಮಹಲ್, ಹಳ್ಳೀಕಾರ್ ಅಂತ ಏನು ಅಂತಾ ಇದ್ದವೋ, ಅವೆಲ್ಲ ಬರೀ ನೆನಪಾಗಿ ಉಳಿಯುತ್ತವೆ. ಅದಕ್ಕೇ ಕೆ.ಎಫ್.ಸಿ. ವಿರುದ್ಧ ನಾವು ಚಳುವಳಿ ಹೂಡಿದ್ದು.

ಬದುಕು : ಹಾಗಾದರೆ ಇದು ಅನೇಕ ಮುಖಗಳ ಆಕ್ರಮಣ ಅಂತೀರಾ? ಇದರ ಪರಿಣಾಮ ಏನಾಗಬಹುದು?

ಪ್ರೊಫೆಸರ್ : ಖಂಡಿತ ಇದು Many Pronged Attack ಇದರಿಂದ ಮೊದಲು ನಾಶವಾಗೋದು ನಮ್ಮ ಸಣ್ಣ ರೈತರು, ಕೃಷಿ ಕಾರ್ಮಿಕರು. ಕೇವಲ ಕೃಷಿ ಒಂದೇ ಅಲ್ಲ ನಮ್ಮ ಎಲ್ಲ ಉತ್ಪಾದನೆಗಳನ್ನು ಹಾಳು ಮಾಡೋದೇ ಬಹುರಾಷ್ಟ್ರೀಯ ಕಂಪೆನಿಗಳ ಉದ್ದೇಶ. ದೇಶೀಯವಾದದ್ದು ಏನೂ ಉಳಿಯೋದೇ ಇಲ್ಲ. ಈಗಾಗಲೇ ಮುಕ್ತವಾಗಿ ಆಮದು ಮಾಡಿಕೊಳ್ಳಬಹುದಾದ 714 ವಸ್ತುಗಳನ್ನು ಪಟ್ಟಿ ಮಾಡಿದ್ದಾರೆ. ಮುಂದಿನ ವರ್ಷ ಈ ಪಟ್ಟಿ ಡಬಲ್ ಆಗುತ್ತೆ. ಮುಂದಿನ ವರ್ಷ ಏಪ್ರಿಲ್‌ನಿಂದ ಬಳಸಿದ ಹಳೇ ಕಾರುಗಳನ್ನು ಆಮದು

ಒಂದು ಸಣ್ಣ ಮುದ್ದೆ ಎರಡು ಮೆಣಸಿನಕಾಯಿ, ಹರಳು ಉಪ್ಪು ಇದೇ ಅವರ ಊಟ. ಸ್ವಲ್ಪ ದುಡ್ಡಿರೋನಾದರೆ ಅದರ ಜೊತೆಗೆ ಒಂದು ಈರುಳ್ಳಿ ತಿಂತಾನೆ. ಇನ್ನೂ ಬಡತನ ಬಂದರೆ ಕರೀ (ಹಾಲಿಲ್ಲದ) ಬೆಲ್ಲದ ಟೀಗೆ ಒಂದಿಷ್ಟು ಮಂಡಕ್ಕಿ, ಪುರಿ ಹಾಕ್ಕೊಂಡು ತಿಂದರೆ ಅದೇ ಅವರ ಲಂಚ್ ಅನ್ನಬೇಕಾದ ಸ್ಥಿತಿ ಬರುತ್ತೆ. ಮೊರಾರ್ಜಿ ದೇಸಾಯಿ ಬೆಲೆಗಳನ್ನು ಇಳಿಸಿದಾಗ ಆ ಸ್ಥಿತಿ ಬಂದಿತ್ತು. ಈಗಿನದೇ ಸ್ಥಿತಿ ಮುಂದುವರೆದರೆ ಆ ಕಾಲ ಬರೋದೇನೂ ದೂರವಿಲ್ಲ.



ಮಾಡಿಕೊಳ್ಳಬಹುದು. ಆಗ ಮೂರು ವರ್ಷ ಬಳಸಿದ ಫೋರ್ಡ್ ಕಾರು ಎಪ್ಪತ್ತು ಸಾವಿರಕ್ಕೆ ಸಿಗುತ್ತೆ. ಆಗ ಯಾರಾದರೂ ಈ ಮಾರುತಿ ಕಾರು ಕೊಂಡ್ಕೋತಾರಾ?

ಬದುಕು : ಇದಕ್ಕೆ ತುರ್ತು ಪರಿಹಾರ ಏನು?

ಪ್ರೊಫೆಸರ್ : ಏನಿಲ್ಲ. ನಮ್ಮವರು ಆರು ತಿಂಗಳು ನೋಟೀಸ್ ಕೊಡಬೇಕು ಆಮೇಲೆ WTO ವಿಶ್ವವಾಣಿಜ್ಯ ಸಂಸ್ಥೆಯಿಂದ ಹೊರ ಬರಬೇಕು.

ಬದುಕು : ಗ್ಲೋಬಲೈಸೇಷನ್ ವ್ಯಾಪಕವಾಗ್ತಾ ಇರೋ ಇಂದಿನ ದಿನಗಳಲ್ಲಿ ಇದು ಸಾಧ್ಯವೇ? ಸಾಧುವೇ?

ಪ್ರೊಫೆಸರ್ : ಸ್ವಾಮೀ, ನೀವು ಗ್ಲೋಬಲೈಸೇಷನ್ ಅಂತೀರ. ಈ ಉದಾರೀಕರಣ ಬಂದ ಮೇಲೆ ರೈತರು, ಹಳ್ಳಿಗರು ತಿನ್ನೋ ಆಹಾರದ ಪ್ರಮಾಣ ಕಮ್ಮಿ ಆಗಿದೆ. 1992 - 96ರ ಅವಧಿಯಲ್ಲಿ ನಮ್ಮ ಬಡ ರೈತರು ಸೇವಿಸೋ ಆಹಾರದ ಪ್ರಮಾಣ ಶೇಕಡಾ 40ರಷ್ಟು ಕಮ್ಮಿ ಆಗಿದೆ.

ಒಂದು ಸಣ್ಣ ಮುದ್ದೆ ಎರಡು ಮೆಣಸಿನಕಾಯಿ, ಹರಳು ಉಪ್ಪು ಇದೇ ಅವರ ಊಟ. ಸ್ವಲ್ಪ ದುಡ್ಡಿರೋನಾದರೆ ಅದರ ಜೊತೆಗೆ ಒಂದು ಈರುಳ್ಳಿ ತಿಂತಾನೆ. ಇನ್ನೂ ಬಡತನ ಬಂದರೆ ಕರೀ (ಹಾಲಿಲ್ಲದ) ಬೆಲ್ಲದ ಟೀಗೆ ಒಂದಿಷ್ಟು ಮಂಡಕ್ಕಿ, ಪುರಿ ಹಾಕ್ಕೊಂಡು ತಿಂದರೆ ಅದೇ ಅವರ ಲಂಚ್ ಅನ್ನಬೇಕಾದ ಸ್ಥಿತಿ ಬರುತ್ತೆ. ಮೊರಾರ್ಜಿ ದೇಸಾಯಿ ಬೆಲೆಗಳನ್ನು ಇಳಿಸಿದಾಗ ಆ ಸ್ಥಿತಿ ಬಂದಿತ್ತು. ಈಗಿನದೇ ಸ್ಥಿತಿ ಮುಂದುವರೆದರೆ ಆ ಕಾಲ ಬರೋದೇನೂ ದೂರವಿಲ್ಲ.

ಬದುಕು : ಇಂಥ ಸ್ಥಿತಿಯಿಂದ ನಾವು ಹೊರ ಬರ್ತೀವಿ ಅನ್ನೋ ಆಸೆ, ಭರವಸೆ ಇದೆಯಾ?

ಪ್ರೊಫೆಸರ್ : ಖಂಡಿತ. ಇದು ಬರೀ ದೇಶದ ಪ್ರಶ್ನೆ ಒಂದೇ ಅಲ್ಲ. ಅಲ್ಲಿರೋ ಜನ ಉಳೀಬೇಕಾದರೆ ಹೋರಾಟ ಮಾಡಬೇಕಾಗುತ್ತೆ. ಇದು ಗೆಲ್ಲಲೇಬೇಕಾದ ಹೋರಾಟ. ಗೆಲ್ಲದೇ ಹೋದರೆ ನೀವು ಸಾಯ್ತೀರಿ. ಅಂಥ ಸ್ಥಿತಿ ಇದು.

ಬದುಕು : ಇದು ಮನವರಿಕೆ ಆಗಬೇಕು ಅಲ್ಲವಾ?

ಪ್ರೊಫೆಸರ್ : ಯಾರಿಗೆ ತೊಂದರೆ ಆಗುತ್ತೋ ಅವರಿಗೆ ಮನವರಿಕೆ ಆಗುತ್ತೆ. ಈಗ ಆಗಿಲ್ಲ ಅಂತ ಅನ್ನೋಬೇಡಿ. ಪಡಿತರ ಧಾನ್ಯದ ಬೆಲೆ ಒಂದು ಕಡೆ ಹೆಚ್ಚಿಸಿದ್ದಾರೆ. ಇನ್ನೊಂದು ಕಡೆ ರಾಸಾಯನಿಕ ಗೊಬ್ಬರಗಳ ಬೆಲೆ ಏರಿಸಿದ್ದಾರೆ. ಇದರಿಂದ ಬಡವರಿಗೆ ತೊಂದರೆ ಆಗಿಲ್ಲ, ಅವರಿಗೆ ಇದೆಲ್ಲ ಅರ್ಥ ಆಗಿಲ್ಲ ಅಂದುಕೊಂಡಿದೀರಾ?

ಹೀಗೆ ಆದರೆ ಗಂಡ ನೇಗಿಲೆಳೀಬೇಕು ಹೆಂಡತಿ ಬಿತ್ತನೆಯಾಡಬೇಕು. ಆಗ ಜನ ಮೆಟ್ಟು ಕೈಗೆ ತಗೋತಾರೆ.

■ ಎಂ.ಎಲ್.ದೇಶಿಕರ್

ಬೆರಳು ಕತ್ತರಿಸಿದರು


ನೀವು ಢಾಕಾ ಮಸ್ಲಿನ್ ವಿಚಾರ ಕೇಳಿದೀರ. ನೂರು ಮೀಟರ್ ಬಟ್ಟೆ ಬೆಂಕಿ ಪೊಟ್ಟಣದಲ್ಲಿ ಸುತ್ತಿ ಇಡಬಹುದಿತ್ತು ಅಂತ ಶಾಲೇಲಿ ಹೇಳಿರ್ತಾರೆ. ಇವತ್ತು ಅದೆಲ್ಲಿದೆ.

ಇದನ್ನ ಮಾಡ್ತಾ ಇದ್ದೋರು ಬಾಂಗ್ಲಾದ ನೇಕಾರರು. ಅವರು ಉಗುರು ಉದ್ದಕ್ಕೆ ಬೆಳೆಸಿ, ಅದರ ರಂಧ್ರಗಳಿಂದ ನೂಲು ತೆಗೀತಾ ಇದ್ದರು. ಬ್ರಿಟಿಷರು ಅಂಥ ನೇಕಾರರ ಬೆರಳೇ ಕತ್ತರಿಸಿ ಹಾಕಿದರು.

ಅವರ ಮ್ಯಾಂಚೆಸ್ಟರ್, ಲಂಕಾಶೈರ್ ಬಟ್ಟೆಗಳನ್ನು ತಂದು ಇಲ್ಲಿ ತುಂಬಿದರು. ಸಾಮ್ರಾಜ್ಯ ಶಾಹಿಗಳು ಇವತ್ತು ಮಾಡ್ತಾ ಇರೋದು ಅದೇ. ದೇಶೀ ಉತ್ಪಾದನೆ ಆಗದ ಹಾಗೆ ನೋಡಿಕೊಳ್ಳೋದು. ತಮ್ಮ ವಸ್ತುಗಳಿಗೆ ಇಲ್ಲೊಂದು ಮಾರುಕಟ್ಟೆ ನಿರ್ಮಾಣ ಮಾಡಿಕೊಳ್ಳೋದು.

ಕಾಂಡಂ ಪವರ್ : ಕಾಂಡಂ ಇರುವುದು ಮಕ್ಕಳಾಗದಂತೆ ತಡೆಯಲು. ಆದರೆ ಅದನ್ನು ಲೈಂಗಿಕ ಶಕ್ತಿ ವೃದ್ಧಿಯ ಸಾಧನವಾಗಿ ಬಳಸಿದರೆ! ಅಂಥ ಸಾಹಸ ಮಾಡಿದ ಹಾಂಗ್‌ಕಾಂಗ್‌ನ ಅಂಗಡಿ ಮಾಲೀಕರು ದುಬಾರಿ ದಂಡ ತೆತ್ತಿದ್ದಾರೆ. ಅವರು ಮಾರುತ್ತಿದ್ದ ದುಬಾರಿ ಬೆಲೆಯ ಕಾಂಡಂಗಳಿಗೆ ಪುರುಷಾಂಗ ದೀರ್ಘಕಾಲ ನೆಟ್ಟಗೆ ನಿಲ್ಲುವಂತೆ ಮಾಡುವ ಕೆಲವು ಅಕ್ರಮ ಡ್ರಗ್‌ಗಳನ್ನು ಲೇಪಿಸಲಾಗುತ್ತಿತ್ತು. ಇದನ್ನು ಪತ್ತೆ ಹಚ್ಚಿದ ಅಲ್ಲಿನ ಪೊಲೀಸರು ದಾಳಿನಡೆಸಿ ಅಂಥ ಡ್ರಗ್ ಲೇಪಿತ ಕಾಂಡಂಗಳನ್ನು ವಶಪಡಿಸಿ ಕೊಂಡಿದ್ದಾರೆ. ಜೊತೆಗೇ ಅಂಗಡಿ ಮಾಲೀಕರಿಗೆ ದುಬಾರಿ ದಂಡ ಕೂಡ ವಿಧಿಸಿದ್ದಾರೆ.


ವಿಚಿತ್ರ ಜಗತ್ತು



ಜೈಲೇ ವಾಸಿ : ನಮ್ಮಲ್ಲಿ ಜೈಲಿನಲ್ಲಿ ಇರಬೇಕಾದವರೆಲ್ಲ ಹೊರಗಿದ್ದಾರೆ ಎಂದು ಹೇಳುವುದುಂಟು. ಅಪರಾಧ ಲೋಕದಲ್ಲಿ ಹೆಸರು ಮಾಡಿದವರು ಹೊರಗಿರುವುದಕ್ಕಿಂತ ಜೈಲಲ್ಲಿ ಇರುವುದೇ ವಾಸಿ ಎಂದು ನಿರ್ಧರಿಸುವುದೂ ಉಂಟು. ಅಂಥವರು ಜೈಲಲ್ಲಿ ಕುಳಿತೇ ತಮ್ಮ ಸುಲಿಗೆ, ಕೊಲೆ, ಬೆದರಿಕೆ ಎಲ್ಲ ನಿರ್ವಹಿಸುತ್ತಾರೆ. ಇಂಥದೇ ಸುದ್ದಿಯೊಂದು ಕೊಲಂಬಿಯಾದಿಂದ ಬಂದಿದೆ.

ಆ ದೇಶದ ಬೋಗಾಟ ಪ್ರಾಂತ್ಯದ ಪಿಕೋಟಾ ಜೈಲಿನಲ್ಲಿದ್ದ ಕ್ರಿಮಿನಲ್ ಒಬ್ಬ ಅಲ್ಲಿಯೇ ಕುಳಿತು ಕಳೆದೆರಡು ವರ್ಷಗಳಿಂದ ಕೊಲೆ, ಬೆದರಿಕೆಗಳಿಂದ ಮಿಲಿಯಾಂತರ ಹಣ ಸಂಪಾದಿಸಿದ್ದು ಈಚೆಗೆ ಬೆಳಕಿಗೆ ಬಂತು. ಅಲ್ಲೂ ಜೈಲಿನ ಸ್ಥಿತಿ ಭಾರತದ ಹಾಗೆ ಎಂಬುದೀಗ ಅರಿವಾಗಿದೆ.

ವ್ಯತ್ಯಾಸ : ಆಕೆಯ ಹೆಸರು ಥೆರೇಸಾ ಮೇ. ಇನ್ನೊಬ್ಬಳಿದ್ದಾಳೆ. ಆಕೆಯ ಹೆಸರು ತೆರೇಸಾ ಮೇ. ಮೊದಲಿನಾಕೆ ಬ್ರಿಟನ್‌ನ ವಿರೋಧ ಪಕ್ಷದ ವಕ್ತಾರೆ.ತೆರೇಸಾ ಸ್ವಲ್ಪ ಹಾಗೆ ಹಾಗೆ. ಪೋಲಿ ಸಿನಿಮಾಗಳ ನಾಯಕಿ. ಥೆರೇಸಾ ಒಳ್ಳೆಯ ಉಡುಗೆ ತೊಟ್ಟರೆ, ಇನ್ನೊಬ್ಬಾಕೆ ಬಟ್ಟೆ ಎಂದರೆ ಅಲರ್ಜಿ ಎನ್ನುವ ಹಾಗೆ ಕಾಣಿಸುವುದೇ ಹೆಚ್ಚು. ಇದನ್ನರಿಯದ ರಸಿಕರು ಫೋನ್ ಕರೆ ಮಾಡಿ 'ಬರುತ್ತೀಯಾ?' ಎಂದು ಥೆರೇಸಾನ ಆಹ್ವಾನಿಸುತ್ತಾರೆ. ಉತ್ತರ ಹೇಳುವುದು ಆಕೆಗೆ ಕಷ್ಟವಾಗುತ್ತಿದೆ.



ನೆಬೋ ಪರ್ವತದ ಮೇಲೆ ನಿರ್ಮಿಸಲಾಗಿರುವ ಮೋಸಸ್ ಸ್ಮಾರಕದ ಬಳಿ ಎರಡನೆಯ ಪೋಪ್ ಜಾನ್‌ಪಾಲ್ ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ. ಜೋರ್ಡಾನ್ ಇಸ್ರೇಲ್ ದೇಶಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಈ ಪ್ರಾರ್ಥನೆ ನಡೆಯಿತು.

ಟಿವಿ ಮದುವೆ: ಇದೊಂದು ಬಗೆಯ ಸ್ವಯಂವರ. ಮಿಲಿಯನೇರ್ ವರನೊಬ್ಬನಿಗೆ ವಧು ಬೇಕಾಗಿತ್ತು. ಟಿವಿಯಲ್ಲಿ ಇದಕ್ಕೊಂದು ವ್ಯವಸ್ಥೆ ಮಾಡಿದರೆ? ವಿಷಯ ಪ್ರಕಟವಾಗಿ ಫ್ಯಾಕ್ಸ್ ಸ್ಟುಡಿಯೋಗೆ ನೂರಾರು ಬೆಡಗಿಯರು ಬಂದರು. ಅವರ ಬಿನ್ನಾಣದ ನಡಿಗೆಯ ನಂತರ ವರ ರಿಕ್‌ರಾಕ್‌ವೆಲ್ ಎಂಬಾತ ಡೇವ್ ಕಾಂಜರ್ ಎಂಬಾಕೆಯನ್ನು ಮೆಚ್ಚಿ ಮದುವೆ ಆದ. ಅಪ್ಪಿ ಮುದ್ದಿಸಿದ.

ಇದರಲ್ಲೇನು ತಪ್ಪು ಎನ್ನುತ್ತೀರಾ? ಈ ನೂತನ ವಧು ಪರೀಕ್ಷೆ, ಮದುವೆ ಹಾಗೂ ಆಲಿಂಗನ ಚುಂಬನಗಳು ಟಿವಿಯಲ್ಲಿ ನೇರವಾಗಿ ಬಿತ್ತರಗೊಂಡವು. ಜನರೇನೋ ಈ ನೂತನ ಮಾದರಿ ಮದುವೆ ಮುಗಿಬಿದ್ದು ನೋಡಿದರು. ನೋಡಿದ ನಂತರ ಆ ಥರ ಮಾಡೋದೆಲ್ಲ ಚೆನ್ನಾಗಿರೊಲ್ಲ ಎಂದು ಗೊಣಗುತ್ತಿದ್ದಾರೆ. ಗೊಣಗಾಟ ಏನೇ ಇರಲಿ ಜನರಂತೂ ಮುಗಿಬಿದ್ದು ಶೋ ನೋಡಿದರಲ್ಲ! ಅಷ್ಟು ಸಾಕು ಎನ್ನುತ್ತಿದೆ ಟಿವಿ ಚಾನೆಲ್.

ಆತ್ಮಹತ್ಯೆ ಎಷ್ಟೊಂದು ಸುಲಭ : ಹೀಗೆ ನಾಗಪುರದ ಶೇಷರಾವ್ ತಾಂಡೂಲ್ಕರ್‌ಗೆ ಅನ್ನಿಸಿತು. ಹೆಂಡತಿ ಮತ್ತು ಹದಿನೇಳು ವರ್ಷದ ಮಗಳು ಒಪ್ಪಲಿಲ್ಲ. ಆತ್ಮಹತ್ಯೆ ಸುಲಭ ಎಂದು ತೋರಿಸಲು ರಾವ್ ಮುಂದಾದ. ತಾರಸಿಯ ಕಬ್ಬಿಣದ ತೊಲೆಯಿಂದ ನೇಣು ಇಳಿಬಿಟ್ಟ. ಸ್ಟೂಲಿನ ಮೇಲೆ ನಿಂತು ಕುಣಿಕೆ ಕುತ್ತಿಗೆಗೆ ಹಾಕಿಕೊಂಡ. ಸ್ಟೂಲ್ ಒದ್ದರೆ ಆಯಿತು ಸಾವು ಎಂದ. ಅದ್ಯಾವ ಮಾಯೆಯೋ! ಸ್ಟೂಲ್ ಮಗುಚಿತು. ರಾವ್ ಕುಣಿಕೆಯಲ್ಲಿ ನೇತಾಡಿದ. ಹೆಂಡತಿ ಕಿರುಚಾಡಿ, ನೆರೆಹೊರೆಯವರನ್ನು ಸೇರಿಸಿ, ಆತನನ್ನು ಕುಣಿಕೆಯಿಂದ ಇಳಿಸುವಾಗ ಪ್ರಜ್ಞೆ ತಪ್ಪಿತ್ತು. ಆಸ್ಪತ್ರೆಗೆ ಹೋಗುವಾಗ ಪ್ರಾಣವೂ ಹೋಗಿತ್ತು. ಆತ್ಮಹತ್ಯೆ ಎಷ್ಟೊಂದು ಸುಲಭ ಅಲ್ಲವೇ?

ಸತ್ತಂತೆ ನಟಿಸಿ ಬದುಕಿದ : ಸಾಯುವುದು ಸುಲಭ ಎಂದು ಸಾಬೀತುಪಡಿಸಿದ್ದ ನಾಗಪುರದವನಿಗಿಂತ ಆಂಧ್ರದ ಈ ಪೊಲೀಸ್ ಪೇದೆ ವಾಸಿ. ವಿಶಾಖಪಟ್ಟಂ ಜಿಲ್ಲೆಯಲ್ಲಿ ದಾರಕೊಂಡ ಒಂದು ಪೊಲೀಸ್ ಔಟ್ ಪೋಸ್ಟ್. ಇತ್ತೀಚೆಗೆ ಅದರ ಮೇಲೆ ನಕ್ಸಲೀಯರು ಗ್ರೆನೇಡ್ ದಾಳಿ ನಡೆಸಿದರು. ಹಲವರು ಸತ್ತರು. ಸಾಯದಿದ್ದರೂ ಪೇದೆ ಹೇಮಗಿರಿರಾವ್ ಸತ್ತಂತೆ ಬಿದ್ದುಕೊಂಡ. ತಪ್ಪಿಸಿಕೊಳ್ಳಲು ಯತ್ನಿಸಿದರೆ ಅವರ್‍ಯಾರೂ ಉಳಿಸುವುದಿಲ್ಲ ಎಂದು ಗೊತ್ತಿತ್ತು. ನಕ್ಸಲೀಯರು ಸ್ಟೇಷನ್ ಲೂಟಿ ಮಾಡಿ, ಶಸ್ತ್ರಾಸ್ತ್ರ ಒಯ್ಯುವಾಗ ಸತ್ತು ಬಿದ್ದವರ ದೇಹಗಳನ್ನು ಒದ್ದರು. ಇವನ ದೇಹ ಕೂಡ ಒದೆಯ ರುಚಿ ನೋಡಿತು. ಆದರೂ ಆತ ಕಮಕ್ ಕಿಮಕ್ ಎನ್ನಲಿಲ್ಲ. ಹಾಗಾಗಿ ಬದುಕಿ ಉಳಿದ.

ಡಯಾನಾಳ ಗೌನ್‌ನ ತುಂಡು ಬೇಕೇ? : ದಿವಂಗತ ರಾಜಕುಮಾರಿ ಡಯಾನಾಳ ಉಡುಪೊಂದರ ಬೆಲೆ ನೂರು ಮಿಲಿಯನ್ ಡಾಲರ್. ಅದನ್ನು ಇಡಿಯಾಗಿ ಕೊಳ್ಳುವದು ದುಬಾರಿ. ಅದನ್ನು ನೂರು ತುಂಡಾಗಿಸಿ, ಒಂದೊಂದನ್ನೂ ಒಂದು ಮಿಲಿಯನ್ ಡಾಲರ್‌ಗೆ ಮಾರಿದರೆ! ಒಳ್ಳೇ ಐಡಿಯಾ ಅಲ್ಲವೇ? ಇಂಥ ಯೋಜನೆಗೆ ಅಮೇರಿಕಾದ ಗ್ರೇಟ್ ಅಮೇರಿಕನ್ ಡಾಲ್ ಕಂಪೆನಿಯ ಮುಖ್ಯಸ್ಥ ಮೈಕೇಲ್ ಲ್ಯಾಮ್ ಮುಂದಾಗಿದ್ದಾನೆ. ಡಯಾನಾಳ ಗೌನ್ ತುಂಡು ಮಾರಿ ಬರುವ ಹಣದಿಂದ ತೃತೀಯ ವಿಶ್ವದ ಮಕ್ಕಳ ಕಲ್ಯಾಣಕ್ಕೆ ವಿನಿಯೋಗಿಸುವುದು ಆತನ ಯೋಜನೆ. ■

ಕ್ರಿಕೆಟ್ ಆಧುನಿಕ ಕ್ರೀಡೆ. ಟೆನಿಸ್ ಬಿಟ್ಟರೆ ಅತಿ ಹೆಚ್ಚು ಹಣ ತರುವ ಆಟ ಅದು. ಆಧುನಿಕ ತಂತ್ರಜ್ಞಾನ, ನಿಯಮಗಳು ಕ್ರಿಕೆಟ್ಟನ್ನು ಸಂಪೂರ್ಣವಾಗಿ ಬದಲಿಸಿವೆ. ಆದರೆ ಜಗತ್ತಿನಾದ್ಯಂತ ಆಟಗಾರರು ತಮ್ಮ ಯಶಸ್ಸಿಗಾಗಿ ಆತ್ಮವಿಶ್ವಾಸ, ತಂತ್ರವನ್ನಲ್ಲದೇ ಬೇರೊಂದನ್ನು ಅವಲಂಬಿಸುತ್ತಾರೆ. ಅವೇ ಅಂಧ ನಂಬಿಕೆಗಳು. ಇಂಗ್ಲೆಂಡಾಗಲೀ, ಆಸ್ಟ್ರೇಲಿಯಾ ಆಗಲಿ ಇಂಥ ಅಂಧ ನಂಬಿಕೆಗಳಿಗೆ ಹೊರತಲ್ಲ. ಹಾಗೆ ಕ್ರಿಕೆಟ್ ಆಟಗಾರರು ಅನುಸರಿಸುವ ಹಲವಾರು ಅಂಧ ನಂಬಿಕೆಗಳ ವಿವರ ಇಲ್ಲಿವೆ.



ಅದೃಷ್ಟಕ್ಕಾಗಿ ಅಂಧ ನಂಬಿಕೆಗಳು

ದಶಕಗಳ ಹಿಂದೆ ಎಲ್ಲರಿಗೂ ಗೊತ್ತಿದ್ದ ಸಂಗತಿ ಇದು. ಸ್ಲಿಪ್‌ನಲ್ಲಿ ಫೀಲ್ಡಿಂಗ್‌ಗೆ ನಿಲ್ಲುತ್ತಿದ್ದ ಶ್ರೀಕಾಂತ್ ಅತ್ಯಂತ ಯಶಸ್ವೀ ಆಟಗಾರ. ಮಹಾ ಸಂಪ್ರದಾಯಸ್ಥ. ಅನ್ನ ಸಾರು ಬಿಟ್ಟರೆ ಬೇರೇನೂ ತಿನ್ನುತ್ತಾ ಇರಲಿಲ್ಲ. ಬೇರೆ ದೇಶಗಳಿಗೆ ಹೋದರೆ, ಜೊತೆಗೊಂದು ಪ್ರೆಷರ್ ಕುಕ್ಕರ್ ಕೊಂಡೊಯ್ಯುತ್ತಾ ಇದ್ದ. ಅಲ್ಲಿ ಸಸ್ಯಾಹಾರಿ ಊಟ ದೊರೆಯದೇ ಹೋದರೆ ಕುಕ್ಕರ್‌ನಲ್ಲಿ ತಾನೇ ಅಡುಗೆ ಮಾಡಿಕೊಳ್ಳುತ್ತಿದ್ದ.

ಆತ ಅತ್ಯಂತ ಯಶಸ್ವೀ ಆರಂಭಿಕ ಆಟಗಾರ. ವಿಶ್ವಕಪ್‌ನಲ್ಲಿ 1983ರಲ್ಲಿ ಕಪ್ ಗೆದ್ದು ತಂದ ತಂಡದಲ್ಲಿ ಇದ್ದವನು. ಹಲವು ಕಾಲ ಯಶಸ್ವೀ ಕ್ಯಾಪ್ಟನ್. ಆಟಗಾರರ ಪರವಾಗಿ ನಿಯಂತ್ರಣ ಮಂಡಳಿ ಜೊತೆ ಜಗಳಕ್ಕೆ ಇಳಿದು, ಕೊನೆಗೆ ಆಟದಿಂದಲೇ ನಿರ್ಗಮಿಸಿದ.

ಆತ ಸ್ಲಿಪ್‌ನಲ್ಲಿ ಫೀಲ್ಡಿಂಗ್ ಮಾಡುತ್ತಾ ನಿಂತಿರಲಿ. ಬ್ಯಾಟಿಂಗ್ ಮಾಡುತ್ತಾ ಇರಲಿ, ಬಾಯಿ ಮಣಮಣಿಸುತ್ತಲೇ ಇರುತ್ತಿತ್ತು. ಸದಾ ಮಂತ್ರ ಗುಣಗುಣಿಸುತ್ತಿದ್ದ. ಅದರಿಂದ ಗಮನ ಕೇಂದ್ರೀಕರಿಸುವ ಶಕ್ತಿ ಬರುತ್ತದೆ, ದೇವರ ಸ್ಮರಣೆಯಿಂದ ತನಗೆ ಒಳ್ಳೆಯದಾಗುತ್ತದೆ ಎಂಬುದೇ ಆತನ ನಂಬಿಕೆಯಾಗಿತ್ತು.

ಇಂಥ ಕುರುಡು ಅಥವಾ ನಂಬಿಕೆಗಳು ಹಲವು. ಕ್ರಿಕೆಟ್‌ನಲ್ಲಿ ಇಂದಿಗೂ ಜೀವಂತ. ಆಸ್ಟ್ರೇಲಿಯಾದ ಅತ್ಯಂತ ಯಶಸ್ವೀ ನಾಯಕ ಸ್ಟೀವ್ ವಾ. ಆಟಕ್ಕೆ ಆತ ಮೈದಾನಕ್ಕೆ ಇಳಿದರೆ ಪ್ಯಾಂಟ್ ಜೇಬಿನೊಳಗಿಂದ ಹೊರಗೆ ಕಾಣುವಂತೆ ಕೆಂಪು ಕರ್ಚೀಪು ಒಂದು ಇರಲೇಬೇಕು. ಇಂಥದ್ದರಿಂದ ತನ್ನ ತಂಡ ಯಶಸ್ಸು ಗಳಿಸುತ್ತದೆ ಎಂದೇ ಆತನ ನಂಬಿಕೆ.

ಇಂಥ ಪರಿಪಾಠ ಮೊದಲು ಆರಂಭಿಸಿದ್ದು ನಮ್ಮವರೇ ಆದ ಮೊಹಿಂದರ್ ಅಮರ್‌ನಾಥ್. ಎಷ್ಟೋ ಸಮಯ ಇದೇ ಕೆಂಪು ಕರ್ಚೀಫ್ ಇಟ್ಟುಕೊಳ್ಳುವ ಪದ್ಧತಿಯನ್ನು ಹಲವರು ಅನುಸರಿಸುತ್ತಾ ಬಂದಿದ್ದಾರೆ.

ಇದೇ ಪದ್ಧತಿಯನ್ನು ಬೇರೊಂದು ರೀತಿಯಲ್ಲಿ ಪಾಲಿಸುತ್ತಾನೆ ಸಚಿನ್ ತೆಂಡೂಲ್ಕರ್. ಆತ ಬ್ಯಾಟಿಂಗ್‌ಗೆ ಹೋಗುವ ಮುನ್ನ ತನ್ನ ಪ್ಯಾಡುಗಳೊಳಗೆ ಇಂಥ ಕೆಂಪು ಕರ್ಚೀಫನ್ನು ಇಟ್ಟುಕೊಳ್ಳುತ್ತಾನೆ. ಮುಂಬಯಿನ ಶಿವಾಜಿ ಪಾರ್ಕಿನಲ್ಲಿ ಹುಡುಗನಾಗಿದ್ದಾಗ ಕ್ರಿಕೆಟ್ ಅಭ್ಯಾಸ ಮಾಡುತ್ತಿದ್ದ ಕಾಲದಿಂದಲೂ ಆತ ಅನುಸರಿಸಿಕೊಂಡು ಬಂದ ಸಂಪ್ರದಾಯ ಅದು. ಅದರಿಂದ ತಾನು ಚೆನ್ನಾಗಿ ಬ್ಯಾಟಿಂಗ್ ಮಾಡಲು ಸಾಧ್ಯವಾಗುತ್ತದೆ ಎಂದೇ ಸಚಿನ್ ನಂಬಿಕೆ.

ಇದೇ ಸರಿ ಎನ್ನಿಸುವಂತೆ, ಕರ್ಚೀಫ್ ಸಂಪ್ರದಾಯ ಅನುಸರಿಸಲು ಆರಂಭಿಸಿದಾಗಿಂದ ಸ್ಟೀವ್ ವಾ ಪವಾಡ ಸದೃಶ ಗೆಲುವು ಸಾಧಿಸಿದ್ದಾನೆ. ಹದಿನಾಲ್ಕರಲ್ಲಿ ಹತ್ತು ಸಲ ಟಾಸ್ ಅವನ ಪರವಾಗಿ ಬಿದ್ದಿದೆ. ಇತ್ತೀಚಿನ ವಿಶ್ವಕಪ್ ಸರಣಿ ವೇಳೆ ಏಳು ಬಾರಿ ಸತತ ಟಾಸ್ ಗೆದ್ದು ದಾಖಲೆ ಮಾಡಿದ್ದಾನೆ.

ಮುಂದಿನ ಭಾರತ ತಂಡದ ನಾಯಕ ಸೌರವ್ ಗಂಗೂಲಿ ತನ್ನ ಬ್ಯಾಟಿಂಗ್



ಯಶಸ್ಸಿಗಾಗಿ ವಿಚಿತ್ರ ಸಂಪ್ರದಾಯ ಅನುಸರಿಸುತ್ತಾನೆ. ಆತ ಬ್ಯಾಟಿಂಗ್‌ಗೆ ಹೋಗುವ ದಿನ ಗಡ್ಡ ಮಾಡಿಕೊಳ್ಳುವುದಿಲ್ಲ. ಅದರಿಂದ ತಾನು ಚೆನ್ನಾಗಿ ಆಡುವುದು ಸಾಧ್ಯ ಎಂದೇ ಗಂಗೂಲಿಯ ನಂಬಿಕೆ.

ಇದೆಲ್ಲಕ್ಕಿಂತ ವಿಚಿತ್ರ ನಂಬಿಕೆ ಸುನೀಲ್ ಗವಾಸ್ಕರ್‌ದು. ಆತ ಪ್ರತಿಸಲ ಬ್ಯಾಟಿಂಗ್‌ಗೆ ಇಳಿಯುವ ಮುನ್ನ ಏನಾದರೊಂದು ಹೊಸ ಉಡುಗೆ ತೊಡುತ್ತಿದ್ದ. ಅದು ಸಾಕ್ಸ್ ಇರಬಹುದು. ಕೊನೆಗೆ ಒಂದು ಬನಿಯನ್ ಇರಬಹುದು. ಏನಾದರೊಂದು ಹೊಸ ವಸ್ತ್ರ ಇರಲೇಬೇಕಿತ್ತು. ಆತ ಹದಿನೇಳು ವರ್ಷದಷ್ಟು ಸುದೀರ್ಘ ಕಾಲ ಕ್ರಿಕೆಟ್ ಆಟಗಾರ ಆಗಿದ್ದ. 125 ಟೆಸ್ಟ್, ಅದರ ದುಪ್ಪಟ್ಟು ಇನ್ನಿಂಗ್ಸ್‌ಗಳು. ಅಸಂಖ್ಯ ಒಂದು ದಿನದ ಪಂದ್ಯ ಆಡಿದವನು. ತನ್ನ ನಂಬಿಕೆಗಾಗಿ ಆತ ಎಷ್ಟೆಲ್ಲ ಹೊಸ ಉಡುಪು ಖರೀದಿಸಿರಬಹುದು ನೀವೇ ಲೆಕ್ಕ ಹಾಕಿ.


ಪುಣ್ಯವೆಂದರೆ ಇಂಥದ್ದೇ ಹೊಸ ಉಡುಪು ಬೇಕೆಂದು ಆತ ಹಟ ಹಿಡಿಯುತ್ತಾ ಇರಲಿಲ್ಲ. ಕೊನೆಗೊಂದು ಹೊಸ ಕರ್ಚೀಫು, ಹ್ಯಾಂಡ್ ಗ್ಲೋವ್, ಅಂಗಿ ಹೀಗೆ ಏನಾದರೊಂದು ಹೊಸತು ಇದ್ದರೆ ಸಾಕೆನ್ನುತ್ತಿದ್ದ. ಆತ ಕೆಲವು ಕಾಲ ತಾಯಿತ ಬಿಗಿದ ಕಪ್ಪು ದಾರವನ್ನು ಕೊರಳಲ್ಲಿ ಧರಿಸುತ್ತಾ ಇದ್ದದ್ದು ಉಂಟು.

ಭಾರತಕ್ಕೆ ವಿಶ್ವಕಪ್ ಗಳಿಸಿಕೊಟ್ಟ ನಾಯಕ ಕಪಿಲ್‌ದೇವ್. ಈಗ ಆತ ಭಾರತ ಕ್ರಿಕೆಟ್ ತಂಡದ ಕೋಚ್. ಕ್ರಿಕೆಟಿನ ಆರಂಭದ ದಿನಗಳಲ್ಲಿ ಆತ ಲೋಹದ ಕೈಕಡಗ ಹಾಗೂ ಅದೇ ಲೋಹದ ಸರ ಒಂದನ್ನು ಧರಿಸುತ್ತಿದ್ದ. ನಂತರದ ದಿನಗಳಲ್ಲಿ ಅದೇನನ್ನಿಸಿತೋ! ಸಂಪ್ರದಾಯ ಕೈಬಿಟ್ಟ.

ಇದು ಇಲ್ಲಿನವರ ಕತೆ. ಪಾಶ್ಚಿಮಾತ್ಯರಲ್ಲಿಯೂ ಇಂಥ ಅನೇಕ ಸಂಪ್ರದಾಯ, ನಂಬಿಕೆಗಳಿವೆ. ಆಸ್ಟ್ರೇಲಿಯಾದ ಖ್ಯಾತ ವಿಕೆಟ್ ಕೀಪರ್ ರಾಡ್ನಿ ಮಾರ್ಷ್ ತನ್ನ ದೇಶದ ಮೊದಲ ವಿಕೆಟ್ ಕೀಪರ್ ಜಾನ್‌ಬ್ಲ್ಯಾಕ್ ಹ್ಯಾಂನ ಫೋಟೋ ಒಂದನ್ನು ಜೇಬಲ್ಲಿ ಇಟ್ಟುಕೊಂಡಿರುತ್ತಿದ್ದ. ಅದೇ ತಂಡದ ನಾಯಕ ಇಯಾನ್ ಚಾಪೆಲ್ ದಕ್ಷಿಣ ಆಫ್ರಿಕಾದುದ್ದಕ್ಕೂ ಮೈದಾನಕ್ಕಿಳಿದಾಗ ಒಂದೇ ಜೊತೆ ಸಾಕ್ಸ್ ಬಳಸಿದ್ದ. ಅದಕ್ಕೆ ತಾನು ಈ ಸಾಕ್ಸ್ ಧರಿಸಿದರೆ ಮಾತ್ರ ಯಶಸ್ಸು ಪಡೆಯುವೆ ಎಂಬ ನಂಬಿಕೆ ಕಾರಣವಾಗಿತ್ತು.

ಆಡಂ ಗಿಲ್‌ಕ್ರಿಸ್ಟ್‌ಗೆ ಎಡದಲ್ಲಿಯೇ ನಂಬಿಕೆ. ನಮ್ಮವರು ಯಾವತ್ತೂ ಬಲಗಾಲು ಮುಂದಿಡಬೇಕು ಎಂದು ಹೇಳುತ್ತಾರೆ. ಆದರೆ ಈತ ಮೊದಲು ಪ್ಯಾಡ್ ಕಟ್ಟಿಕೊಳ್ಳುವುದು ಎಡಗಾಲಿಗೆ. ಮೈದಾನಕ್ಕೆ ಬರುವಾಗಲೂ ಮೊದಲು ಇರಿಸುವುದು ಎಡಗಾಲನ್ನು.


ಮೈದಾನಕ್ಕಿಳಿಯುವಾಗ ತಾನು ಕೊನೆಯದಾಗಿ ಬಂದರೆ ಮಾತ್ರ ಅದೃಷ್ಟ



ಎಂದು ನಂಬಿಕೊಂಡಿದ್ದ ಡೆನಿಸ್ ಲಿಲ್ಲಿ. ಹಾಗಾಗಿ ಯಾವತ್ತೂ ಅವನು ಕೊನೆಯವನಾಗಿ ಮೈದಾನಕ್ಕೆ ಬರುತ್ತಿದ್ದ. ಅಷ್ಟೇ ಅಲ್ಲ ಪ್ರತಿ ಸಲ ತರಬೇತಿ ಸಮಯದಲ್ಲೂ ಐದಾರು ಕಿಲೋಮೀಟರ್ ಓಡಬೇಕಿತ್ತು. ಆಗ ಹಿಂದಿಗಿಂತ ಬೇಗ ಓಡಿದರೆ, ಮುಂಬರುವ ಟೆಸ್ಟ್‌ಗಳಲ್ಲಿ ತನ್ನ ಬೌಲಿಂಗ್ ವೇಗ ಹಿಂದಿಗಿಂತ ಹೆಚ್ಚು ವೃದ್ಧಿಸುತ್ತದೆ ಎಂದು ನಂಬಿದ್ದ. ಹಾಗೇ ಚೆನ್ನಾಗಿ ವಿಕೆಟ್ ಬೀಳುತ್ತದೆಂದೂ ಆತ ನಂಬುತ್ತಿದ್ದ.


ಇದೆಲ್ಲ ಒಂದು ಬಗೆಯದಾದರೆ ಜೆಫ್ ಥಾಂಸನ್‌ನ ಸಂಪ್ರದಾಯ ಇವರೆಲ್ಲರಿಗಿಂತ ವಿಚಿತ್ರವಾದದ್ದು. ಹಿಂದಿನ ರಾತ್ರಿ ಚೆನ್ನಾಗಿ ಕುಡಿದು ಮರುದಿನದ ಮುಂಜಾನೆ ಹ್ಯಾಂಗೋವರ್ ಇದ್ದರೆ ಮಾತ್ರ ತಾನು ಒಳ್ಳೆಯ ಬೌಲಿಂಗ್ ಮಾಡುತ್ತೇನೆ, ಚೆನ್ನಾಗಿ ವಿಕೆಟ್‌ಗಳು ಬೀಳುತ್ತವೆ ಎಂದು ನಂಬಿಕೊಂಡಿದ್ದ ಈ ಮಹಾನುಭಾವ.

ಜನ ಎಷ್ಟೇ ಆಧುನಿಕರಾಗಲಿ. ಅಂದೆಂಥದ್ದೇ ಆಟವಾಡಲಿ, ಇಂಥ ಹಲವು ಹತ್ತು ಅಂಥ ಸಂಪ್ರದಾಯಗಳು ಇದ್ದೇ ಇರುತ್ತವೆ. ■



ಸಸ್ಯಾಹಾರ - ಮಾಂಸಾಹಾರ

ಯಾವುದು ಪುಷ್ಟಿಕರ?



ಮಾಂಸಾಹಾರ ಪುಷ್ಟಿಕರ

ಎಂಬುದು ನಂಬಿಕೆ.

ಇದು ಎಷ್ಟರ ಮಟ್ಟಿಗೆ ನಿಜ?

ನಗರ, ಪಟ್ಟಣಗಳ ರಸ್ತೆಗಳ ಇಬ್ಬದಿಗಳಿಗೂ ಕಣ್ಣು ಹಾಯಿಸುತ್ತಾ ನಡೆದರೆ ಇಂದು ಮಾಂಸಾಹಾರಿ ಹೋಟೆಲುಗಳ ಫಲಕಗಳೇ ಪ್ರಾಮುಖ್ಯವಾಗಿ ಕಾಣಸಿಕೊಳ್ಳುತ್ತವೆ. ಮಾಂಸಾಹಾರದತ್ತ ಜನರು ಆಕರ್ಷಿತರಾಗಿರುವುದೇ ಇದಕ್ಕೆ ಕಾರಣವಾಗಿರಬಹುದೆ? ದೇಶದ ಜನರೆಲ್ಲಾ ಶಾಖಾಹಾರಿಗಳಾಗಿರುತ್ತಿದ್ದರೆ ನಮಗೆ ಇಂದಿಗಿಂತ ಎರಡು ಪಟ್ಟು ದವಸ ಧಾನ್ಯಗಳ ಅವಶ್ಯಕತೆ ಇರುತ್ತಿತ್ತು. ಅಂದರೆ ನಮಗೆ ಅವಶ್ಯವಿರುವ ಪೋಷಕಾಂಶಗಳ ಅರ್ಧಪಾಲನ್ನು ಮಾಂಸಹಾರ ಒದಗಿಸುತ್ತದೆ ಎಂದರ್ಥ. ಆದರೆ ನಿಜವಾಗಿ ನಮಗೆ ಅವಶ್ಯವಿರುವ ಕ್ಯಾಲರಿಗಳ ಶೇಕಡಾ 5ರಷ್ಟನ್ನು ಮಾತ್ರ ಮಾಂಸ ಒದಗಿಸುತ್ತದೆ. ಈಗ ಕೋಳಿ ಮಾಂಸದ ಬೆಲೆ ಕಿ.ಗ್ರಾಮಿಗೆ 60 ರೂಪಾಯಿಗಳಷ್ಟಿದೆ. ಕುರಿ, ಆಡಿನ ಮಾಂಸದ ಬೆಲೆ ಕಿ.ಗ್ರಾಮಿಗೆ 120 ರೂಪಾಯಿಗಳಷ್ಟು, ಮಾಂಸದ ಬೆಲೆ ಶ್ರೀಮಂತರ ಕೈಗೆ ಮಾತ್ರ ಸಿಗುವ ಮಟ್ಟದಲ್ಲಿದೆ. ಒಂದು ಕಿಲೋ ಕೋಳಿ ಮಾಂಸ ಉತ್ಪಾದಿಸಲು 10 ಕಿ.ಗ್ರಾಂ. ಕಾಳುಗಳ ಅವಶ್ಯಕೆಯಿರುವುದರಿಂದ ಆಹಾರ ಧಾನ್ಯಗಳ ಬೆಲೆ ಸಸ್ಯಾಹಾರದಿಂದಾಗಿಯೇ ಕಡಿಮೆ ಮಟ್ಟದಲ್ಲಿದೆ.

ಕೋಳಿ ಫಾರ್ಮುಗಳು ಮಿಲಿಯಗಟ್ಟಲೆ ಟನ್ ಜೋಳ, ರಾಗಿ ಮೊದಲಾದ ಕಾಳುಗಳನ್ನು ಉಪಯೋಗಿಸಿಕೊಳ್ಳುತ್ತವೆ. ಮಾಂಸಕ್ಕಾಗಿ ಕೋಳಿಗಳನ್ನು ಸಾಕುವುದರಿಂದ ದನಗಳಿಗೆ ದೊರೆಯುವ ಆಹಾರ ಕಡಿಮೆಯಾಗಿ ಹಾಲಿನ ಬೆಲೆ ಏರುತ್ತದೆ. ಆಡುಗಳ ಅನಿಯಂತ್ರಿತ ಮೇಯುವಿಕೆಯಿಂದಾಗಿ ಜಮೀನು ಬಂಜರಾಗುತ್ತದೆ. ಹುಲ್ಲಿನ ಬೆಳವಣಿಗೆ ಕುಂಠಿತವಾಗಿ ಮಣ್ಣಿನ ಸವಕಳಿ ಅಧಿಕವಾಗಿ ಭೂಮಿ ವ್ಯವಸಾಯಕ್ಕೆ ಅಯೋಗ್ಯವಾಗುತ್ತದೆ. ಮಣ್ಣಿನ ಸವಕಳಿ, ನೆರೆ ಮತ್ತು ನದಿಗಳಲ್ಲಿ ಧೂಳು ತುಂಬುವುದು ಅಧಿಕವಾಗುತ್ತದೆ. ಮಾಂಸದ ಅವಶ್ಯಕತೆಯಿಲ್ಲದಿರುತ್ತಿದ್ದರೆ ಈ ಜಮೀನುಗಳನ್ನು ಕೃಷಿಗಾಗಿ ಉಪಯೋಗಿಸಿಕೊಳ್ಳಬಹುದಾಗಿತ್ತು. ಆಹಾರಧಾನ್ಯ, ಹಣ್ಣು ಹಂಪಲು, ತರಕಾರಿಗಳ ಬೆಲೆ ಕಡಿಮೆಯಾಗುತ್ತಿತ್ತು. ಬಡಜನರು ಆಹಾರ ಸಾಮಗ್ರಿಗಳನ್ನು ಕಡಿಮೆ ಬೆಲೆಗೆ ಕೊಂಡುಕೊಳ್ಳುತ್ತಿದ್ದರು.

ಒಂದು ಹೆಕ್ಟೇರ್ ಪ್ರದೇಶದಲ್ಲಿ ಆಲೂಗಡ್ಡೆ ಬೆಳೆಸಿದರೆ 20,000 ಕಿ.ಗ್ರಾಂ ಆಲೂಗಡ್ಡೆ ದೊರೆಯಬಲ್ಲುದು. ಇದೇ ಪ್ರದೇಶದಲ್ಲಿ ಮೇವಿನ ಬೆಳೆ ಬೆಳೆಸಿದರೆ 500 ಕಿ.ಗ್ರಾಂ ಮಾಂಸ ಉತ್ಪಾದನೆ ಮಾಡಬಹುದು. ಸಸಾರಜನಕದ ದೊರೆಯುವಿಕೆಯತ್ತ ಗಮನ ಹರಿಸಿದರೆ 1,000 ಹೆಕ್ಟೇರ್ ಪ್ರದೇಶದಲ್ಲಿ ಸೋಯಾ ಅವರೆ ಬೆಳೆಸಿದರೆ 1, 124 ಕೆ.ಜಿ. ಸಸಾರಜನಕ, ಮೆಕ್ಕೆ ಜೋಳದಿಂದ 1,043 ಕೆ.ಜಿ. ಮತ್ತು ಭತ್ತದಿಂದ 938 ಕೆ.ಜಿ. ಉಪಯೋಗಕ್ಕೆ ದೊರೆಯುವ ಸಸಾರಜನಕ ಉತ್ಪತ್ತಿಯಾಗುತ್ತದೆ. ಅಧಿಕ ಜನಸಂಖ್ಯೆಯುಳ್ಳ ಚೀನಾ ಮತ್ತು ಭಾರತದಲ್ಲಿ ಸಸ್ಯಾಹಾರಿಗಳೇ ಅಧಿಕ ಸಂಖ್ಯೆಯಲ್ಲಿರುವುದರಿಂದ ಜನರ ಆಹಾರದ ಅವಶ್ಯಕತೆಗಳನ್ನು ಸುಧಾರಿಸಿಕೊಳ್ಳಲಾಗುತ್ತಿದೆ. ಭಾರತದಲ್ಲಿ ಪ್ರತಿಯೊಬ್ಬರೂ ಮಾಂಸಾಹಾರಿಯಾದರೆ ಇತರ ರಾಷ್ಟ್ರಗಳ ಉತ್ಪಾದನೆಯನ್ನು ಬಳಸಿಕೊಳ್ಳಬೇಕಾಗುವ ಸಂದರ್ಭ ಒದಗಿಬರಬಹುದು.

ಸಸ್ಯಗಳಿಗೂ ಜೀವವಿದೆ, ಆಹಾರಕ್ಕಾಗಿ ಅವುಗಳನ್ನು ಹಿಂಸೆಗೀಡು ಮಾಡಬೇಕೆ? ಎಂಬ ಪ್ರಶ್ನೆ ಉದ್ಭವಿಸಬಹುದು. ಸಸ್ಯಗಳಿಗೆ ನರಮಂಡಲವಿಲ್ಲದಿರುವುದರಿಂದ ಅವು ನೋವಿಗೆ ಪ್ರತಿಕ್ರಿಯಿಸುವುದಿಲ್ಲವೆನ್ನಬಹುದು. ಅಕ್ಕಿಕಾಳನ್ನು ಜಗಿದರೆ ಕಾಳು ಹೆಚ್ಚಿಸುತ್ತದೆ ಎಂಬ ನಂಬಿಕೆಯಿದೆ. ಆದರೆ ಭಾರತದ ಜನಸಮೂಹದಲ್ಲಿ ಹೆಚ್ಚು ಮಂದಿ ಬುದ್ಧಿವಂತರು, ವ್ಯವಹಾರಸ್ಥರು, ಮೇಧಾವಿಗಳು, ಶಿಕ್ಷಣ, ಪಾಂಡಿತ್ಯ ಹೊಂದಿದವರು ಸಸ್ಯಾಹಾರಿಗಳ ಗುಂಪಿಗೆ ಸೇರಿದವರಾಗಿದ್ದಾರೆ.

ಕಡಿಮೆ ಆಹಾರ ಧಾನ್ಯಗಳನ್ನು ಉಪಯೋಗಿಸಿ ಮಾಂಸಾಹಾರಿಗಳು ಇತರರಿಗೆ ಉಪಕಾರ ಮಾಡುತ್ತಿದ್ದಾರೆನ್ನುವುದೊಂದು ತಪ್ಪು ಭ್ರಮೆ - ಬಹು ಜಾತಿ, ಜನಾಂಗಗಳನ್ನೊಳಗೊಂಡ ಒಂದು ರಾಷ್ಟ್ರದಲ್ಲಿ ಪ್ರತಿಯೊಬ್ಬನೂ ಸಸ್ಯಾಹಾರಿಯಾಗಿರುವುದು ಅಸಾಧ್ಯ. ಬಹು ಪಾಲು ಜನರು ಮಾಂಸಾಹಾರಿಗಳಾಗಿರುವುದರಿಂದ ಬಡ ರಾಷ್ಟ್ರವೊಂದರ ಆರ್ಥಿಕ ಸ್ಥಿರತೆಗೆ ಸಹಕಾರಿಯಾಗದು. ಪ್ರಪಂಚದ ನಾನಾ ಭಾಗಗಳಲ್ಲಿ ನಡೆಸಿದ ಸಂಶೋಧನೆಗಳು ಸಮತೋಲನವುಳ್ಳ ಸಸ್ಯಾಹಾರ ಕ್ರಮವು ಆರೋಗ್ಯಕ್ಕೆ ಉತ್ತಮವೆಂದು ಸಾಬೀತು ಪಡಿಸಿವೆ.

■ ಪಿ.ಎಸ್.ರೈ.



ಅಪರೂಪದ ಛಾಯಾಗ್ರಾಹಕ
ಪರಶುರಾಮ

ಕ್ಯಾಮರಾ ಹಿಡಿದು ಕ್ಲಿಕ್ಕಿಸುವವರೆಲ್ಲ ಛಾಯಾಗ್ರಾಹಕರೇ. ಆದರೆ ಅಪರೂಪದ ಸನ್ನಿವೇಶ ಸೆರೆ ಹಿಡಿಯುವುದು ಒಂದು ಕಲೆ. ಅದನ್ನು ಸಾಧ್ಯವಾಗಿಸಿಕೊಂಡ ಇಳಕಲ್ಲಿನ ಪರಶುರಾಮ ಮುಂದೊಂದು ದಿನ ಅಪರೂಪದ ಸಾಧನೆ ಮಾಡುವ ಹಂಬಲದ ತರುಣ.



ಕ್ಯಾಮರಾ ಹಿಡಿದು ಕಂಡದ್ದನ್ನು ಕ್ಲಿಕ್ಕಿಸುವ ಜನ ಸಾಕಷ್ಟು ಕಾಣ ಸಿಗುತ್ತಾರೆ. ಆದರೆ ಅವರೆಲ್ಲ ನುರಿತ ಫೋಟೋಗ್ರಾಫರ್ ಆಗಿರಲು ಸಾಧ್ಯವಿಲ್ಲ. ಆಕಸ್ಮಿಕ, ಅಪರೂಪದ ದೃಶ್ಯಗಳನ್ನು ಸೆರೆ ಹಿಡಿಯುವ ವಿಶಿಷ್ಟ ಫೋಟೋಗ್ರಾಫರ್‌ಗಳ ಸಂಖ್ಯೆ ಕೈ ಬೆರಳೆಣಿಕೆಯಷ್ಟು ಮಾತ್ರ. ಈ ವಿಶಿಷ್ಟ ಗುಂಪಿಗೆ ಸೇರಿರುವ ಯುವಕನೇ ಪರಶುರಾಮ ಯಂಗಾಲಿ.

22 ವರ್ಷಗಳ ಈ ಯುವಕ ಬಾಗಲಕೋಟೆ ಜಿಲ್ಲೆಯ ಇಳಕಲ್ಲಿನವನು. ನಗರದಲ್ಲಿ ಹಾಗೂ ಸುತ್ತಮುತ್ತಲಿನಲ್ಲಿ ಯಾವುದೇ ಮದುವೆ, ಸಭೆ - ಸಮಾರಂಭಗಳಿರಲಿ, ಹೆಗಲಿಗೆ ಚೀಲ ನೇತಾಡಿಸಿಕೊಂಡು, ಕ್ಯಾಮರಾ ಜೊತೆ ಹಾಜರಾಗುತ್ತಾನೆ. ಈತ ತೆಗೆದ ಅಪರೂಪದ, ಅದ್ಭುತ ಸನ್ನಿವೇಶಗಳ ಫೋಟೋಗಳು ಈಗಾಗಲೇ ಹಲವಾರು ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಪತ್ರಕರ್ತರಿಗೆ ಸಭೆ - ಸಮಾರಂಭಗಳ ಅಪರೂಪದ ಸನ್ನಿವೇಶಗಳ ಫೋಟೋಗಳನ್ನು ದೊರಕಿಸಿ ಕೊಡುವ ಈತ, ಈ ರಂಗಕ್ಕೆ ಕಾಲಿಟ್ಟಿದ್ದೂ ಆಕಸ್ಮಿಕ.

ಎಸ್.ಎಸ್.ಎಲ್.ಸಿ. ಓದುತ್ತಿದ್ದಾಗ ಗಜಾನನ ಕಾರ್ಯಕ್ರಮಕ್ಕಾಗಿ ಓಣಿಯಲ್ಲಿಯ ಸಹಪಾಠಿಗಳೊಂದಿಗೆ ಸಣ್ಣ ಕಾರಣಕ್ಕೆ ಜಗಳ ಮಾಡಿಕೊಂಡ. ಇದರಿಂದ ಬೇಸತ್ತ ತಾಯಿ, ವಿಜಯ ಚಿತ್ರ ಕಲಾಶಾಲೆಯಲ್ಲಿ ಮಗನನ್ನು ಸಿಪಾಯಿ ಕೆಲಸಕ್ಕೆಂದು ಸೇರಿಸಿದಳು. ಬಡ ಕುಟುಂಬದಿಂದ ಬಂದ ಈತ ಚಿತ್ರಕಲಾ ಶಾಲೆಯ ವಿದ್ಯಾರ್ಥಿಗಳಿಗೆ ಚಿತ್ರ ತೆಗೆಯಲು ಮಾದರಿಯಾಗಿ ನಿಲ್ಲುವುದು, ಪ್ರಾಚಾರ್ಯರ ಜೊತೆಗೆ ಫೋಟೋ ತೆಗೆಯಲು ಸಹಾಯಕನಾಗಿ ಹೋಗುವುದು, ಇತ್ಯಾದಿ ಕೆಲಸ ಮಡಿಕೊಂಡಿದ್ದ. ಒಂದು ಸಂದರ್ಭದಲ್ಲಿ ಪ್ರಾಚಾರ್ಯ ಬಸವರಾಜ ಗವಿಮಠ ತಮಗೆ ಬಿಡುವಿಲ್ಲದ ಕಾರಣದಿಂದ ಈತನ ಕೈಗೆ ಕ್ಯಾಮೆರಾ ಕೊಟ್ಟು ಫೋಟೋ ತೆಗೆಯುವ ಜವಾಬ್ದಾರಿ ನೀಡಿದರು. ಇವನ ಶಿಸ್ತು ಜಾಣ್ಮೆಗಳನ್ನು ಕಂಡ ಗವಿಮಠರು ಬೆನ್ನು ತಟ್ಟಿ ಪ್ರೋತ್ಸಾಹಿಸಿದ್ದೇ




ಅರಳುವ ಮೊಗ್ಗು



ಮೂಷಿಕ ಸೈನ್ಯ



ಆರತಿಗಳ ಮೆರವಣಿಗೆ



ಒಡೆದ ಹಣ್ಣು

ಪರಶುರಾಮ ಒಬ್ಬ ಹವ್ಯಾಸಿ ಫೋಟೋಗ್ರಾಫರ್ ಆಗಲು ಕಾರಣವಾಯಿತು. ಇದೀಗ ಅದನ್ನು ವೃತ್ತಿಯನ್ನಾಗಿ ಮಾಡಿಕೊಳ್ಳುತ್ತಿದ್ದಾನೆ.

ಹಿರಿಯರಿಗೆ ಮೆಚ್ಚಿನ ಫೋಟೋಗ್ರಾಫರ್‌ನಾದರೆ ಬಾಲಕರ ಪಾಲಿಗೆ ಉತ್ತಮ ಕರಾಟೆ ಗುರು. ತನ್ನ ಶಿಷ್ಯರೊಂದಿಗೆ ಸುತ್ತಮುತ್ತಲಿನ ಊರುಗಳಲ್ಲಿ ಕರಾಟೆ ಪ್ರದರ್ಶನಗಳನ್ನು ನೀಡುತ್ತಿರುವ ರಾಮುವಿನ ಕನಸು ಸಿನೆಮಾ ರಂಗದಲ್ಲಿ ಉತ್ತಮ ಛಾಯಾಚಿತ್ರಗ್ರಾಹಕ ಆಗುವದಾಗಿದೆ. ಛಾಯಾ ಚಿತ್ರರಂಗದಲ್ಲಿ ಏನನ್ನಾದರೂ ಹೊಸದನ್ನು ಸಾಧಿಸುವ ಹಂಬಲ ಈತನದು.

■ ಚಂದ್ರಕಾಂತ ಕೆ. ವಗ್ಗಾ

ಸಿರಿಕಂಠದ ಪದ್ಮಾಲಕ್ಷ್ಮೀಪತಿ



ವಿದೇಶಕ್ಕೆ ಹೋಗಿ ಬಂದವರ ವರ್ತನೆಗಳೇ ವಿಚಿತ್ರವಾಗಿರುತ್ತವೆ. ದೇಶೀಯವಾದ ಎಲ್ಲ ಜರಿಯುವುದು ಅದರಲ್ಲಿ ಮುಖ್ಯ. ಅಂಥದ್ದರಲ್ಲಿ ಹತ್ತು ವರ್ಷ ವಿದೇಶದಲ್ಲಿದ್ದು ಬಂದ ಮಹಿಳೆ ಒಬ್ಬರು ತಮ್ಮ ಅಪೂರ್ವ ಗಾಯನ ಪ್ರತಿಭೆಗೆ ಸಮಯ ಮೀಸಲಿಟ್ಟಿದ್ದಾರೆ ಎಂದರೆ ಆಶ್ಚರ್ಯ ಅನ್ನಿಸೀತು. ಅಂಥ ಹೆಣ್ಣು ಮಗಳು ಪದ್ಮಾ ಲಕ್ಷ್ಮೀಪತಿ.

ವಿದೇಶದಲ್ಲಿ ಹತ್ತು ವರ್ಷ ಇದ್ದು, ತಮ್ಮ ಸ್ವಂತದ ಊರಾದ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯಲ್ಲಿ ಈಗ ನೆಲೆಸಿದ್ದಾರೆ. ಜಿಲ್ಲೆಯ ಹಲವೆಡೆ ಅವರು ನೀಡುತ್ತಾ ಬಂದಿರುವ ಸಂಗೀತ ಕಾರ್ಯಕ್ರಮ ಜನಪ್ರಿಯವಾಗಿದೆ.


ಹೊಸಪೇಟೆಯ ಅನೂಪಕುಮಾರ್ ಅವರಲ್ಲಿ ಸಂಗೀತ ಕಲಿತ ಪದ್ಮಾ, ಈಗಲೂ ತಮ್ಮ ಶಿಷ್ಯ ವೃತ್ತಿ ಮುಂದುವರಿಸಿದ್ದಾರೆ.

ವಚನ, ದಾಸರ ಪದ, ಭಾವಗೀತೆ, ಜಾನಪದ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡುವ ಕಲೆ ಅವರಿಗೆ ಸಿದ್ಧಿಸಿದೆ. ಭಾವಪೂರ್ಣತೆ, ಸುಶ್ರಾವ್ಯತೆಯಿಂದಾಗಿ ಕೇಳುಗರನ್ನು ಮಂತ್ರಮುಗ್ಧರನ್ನಾಗಿಸುತ್ತಾರೆ ಪದ್ಮಾ. ಇಬ್ಬರು ಮಕ್ಕಳಾದ ವಿಷ್ಣು, ವಿನಯ ಕೂಡ ತಾಯಿಯ ಹೆಜ್ಜೆ ಜಾಡಿನಲ್ಲಿಯೇ ಸಾಗುವ ಸೂಚನೆ ಈಗಾಗಲೇ ತೋರಿದ್ದಾರೆ.

ಇವರ ಜನಪ್ರಿಯತೆ, ಯಶಸ್ಸು ವೃದ್ಧಿಸುವ ಮತ್ತೊಂದು ಗುಣ ಅವರ ವಿನಯ. ಹೀಗಾಗಿ ಈಚಿನ ದಿನಗಳಲ್ಲಿ ಅವರ ಪ್ರತಿಭೆ ಹೆಚ್ಚು ಜನಕ್ಕೆ ಪರಿಚಯ ಆಗುತ್ತಿರುವುದು ಸಂತೋಷದ ಸಂಗತಿ.

■ ಸಾಲಿಮಠ ದೊಡ್ಡಯ್ಯ ಶಾಸ್ತ್ರಿ

ಪುಸ್ತಕ ಪ್ರೀತಿ ಬಿತ್ತುವ ವಿಶ್ವಗ್ರಾಮ'



ಟಿವಿ ಪಿಡುಗು ಓದನ್ನು ಕುಂಠಿತಗೊಳಿಸಿದೆ. ಮನೆಮಂದಿಗೆಲ್ಲ ಟಿವಿ ಮನರಂಜನೆಯ ಸಾಧನ. ಸೋಫಾಕ್ಕೆ ಅಂಟಿಕುಳಿತ ಮಂದಿಗೆ ಬದುಕಿನ ಪರಿವೆಯೇ ಇಲ್ಲದಂತಾಗುತ್ತಿದೆ. ಇದೊಂದು ಗೀಳಾಗುತ್ತದೆ. ಜನರಲ್ಲಿ, ಅದರಲ್ಲೂ ಎಳೆಯ ಮಕ್ಕಳಲ್ಲಿ ಪುಸ್ತಕ ಓದುವ ಆಸಕ್ತಿಯೇ ಇಲ್ಲವಾಗುತ್ತಿದೆ. ಇದಕ್ಕೆ ಕೊನೆ ತಂದು ಪುಸ್ತಕ ಪ್ರೀತಿ ಬೆಳೆಸುವ ಕಾರ್ಯದಲ್ಲಿ ಗುಜರಾತ್‌ನ 'ವಿಶ್ವಗ್ರಾಮ' ಸಂಘಟನೆ ಮುಂದಾಗಿದೆ.

ಭಾನುವಾರ ಹಾಗೂ ರಜೆಯ ದಿನಗಳಲ್ಲಿ ರಾಜಕೋಟೆಯ ಜನ ವಿಚಿತ್ರ ದೃಶ್ಯ ಒಂದನ್ನು ನೋಡುತ್ತಾರೆ. ಊರಿನ ಮುಖ್ಯ ಬೀದಿಗಳಲ್ಲಿ ಸಣ್ಣದೊಂದು ಗುಡಾರ ಏಳುತ್ತದೆ. ಗುಡಾರದ ತುಂಬಾ ನಾನಾ ಪುಸ್ತಕಗಳು. ಕೆಲವು ಜನ' ಸಾಹಿತ್ಯ ಕೃತಿಗಳ ಆಕರ್ಷಣೀಯ ಸಾಲುಗಳನ್ನು ಬರೆದ ಫಲಕ ಹಿಡಿದಿರುತ್ತಾರೆ. ಬಂದ ಜನಕ್ಕೆ ಪುಸ್ತಕ ಪ್ರಪಂಚದ ಅದ್ಭುತಗಳನ್ನು ವಿವರಿಸುತ್ತಾರೆ. ಕೇವಲ ಕುತೂಹಲಕ್ಕೆ ಬಂದವರು ಅಲ್ಲಿ ಪುಸ್ತಕ ಕೊಳ್ಳುತ್ತಾರೆ. ಕಡಿಮೆ ಹಣ ಇದ್ದರೂ ಚಿಂತೆ ಇಲ್ಲ. ಪುಸ್ತಕದ ಪೂರ್ತಿ ಬೆಲೆ ತೆತ್ತೇ ಖರೀದಿಸಬೇಕೆಂದಿಲ್ಲ. ಪುಸ್ತಕ ಹಿಡಿಸಿದರೆ ಆಯಿತು. ಅದನ್ನೆತ್ತಿ ನಿಮ್ಮ ಕೈಗಿಡುತ್ತಾರೆ. ಕೊಟ್ಟಷ್ಟು ಹಣ ಸ್ವೀಕರಿಸುತ್ತಾರೆ. ತೀರಾ ಎಳೆಯ ಕುತೂಹಲಿಗಳಾದರೆ, ಅವರಿಗೆ ಹಿಡಿಸುವ ಪುಸ್ತಕ ಉಚಿತವಾಗೇ ನೀಡಲಾಗುತ್ತದೆ. ಕೆಲವರು ಪುಸ್ತಕದ ಬೆಲೆಗಿಂತ ಜಾಸ್ತಿ ಹಣಕೊಟ್ಟು ಖರೀದಿಸುತ್ತಾರೆ. ಇನ್ನು ಕೆಲವರು ಈ ಸಂಘಟನೆ ಮಾಡುತ್ತಿರುವ ಕೆಲಸ ಮೆಚ್ಚಿ ಉದಾರ ದೇಣಿಗೆ ನೀಡುತ್ತಾರೆ.

ಪುಸ್ತಕ ನಮಗೆ ಏನೆಲ್ಲ ಕೊಟ್ಟಿದೆ. ಅದನ್ನು ಜನಕ್ಕೆ ಮುಂದಿನ ಪೀಳಿಗೆಗೆ ಪರಿಚಯಿಸಲೆಂದೇ ಇಂಥ ಆಂದೋಲನ ನಡೆಸುವುದಾಗಿ ಸಂಘಟನೆಯ ಶೀತಲ್ ಪಟೇಲ್ ಹೇಳಿದರೆ, ಟಿವಿ ಮಾಹಿತಿ, ಮನರಂಜನೆ ಒದಗಿಸುತ್ತದೆ. ಆದರೆ ಪುಸ್ತಕಗಳು ವ್ಯಕ್ತಿತ್ವ ಬೆಳೆಸುತ್ತವೆ. ಆದ್ದರಿಂದಲೇ ಅವುಗಳು ಜನಕ್ಕೆ ಅಗತ್ಯ ಎನ್ನುತ್ತಾರೆ ಇನ್ನೊಬ್ಬ ಸಂಘಟಕ ಸಂಜಯ್. ಈ ಚಳವಳಿ ಹುಟ್ಟು ಪಡೆದು ಆರೇಳು ತಿಂಗಳಾಗಿದೆ. ರಾಜಕೋಟೆಯ 'ವಿಶ್ವಗ್ರಾಮ' ಒಂದು ಸಾರ್ವಜನಿಕ ವೇದಿಕೆ. ನಾನಾ ವಿಚಾರಗಳ ಚರ್ಚೆ ಇಲ್ಲಿ ನಡೆಯುತ್ತಾ ಬಂದಿದೆ. ಆರೇಳು ತಿಂಗಳ ಹಿಂದೆ ಜನರ ಬಳಿಗೇ ಪುಸ್ತಕ ಕೊಂಡೊಯ್ಯುವ ವಿಚಾರ ಪ್ರಸ್ತಾಪವಾಯಿತು. ಅಲ್ಲಿಯೇ ಅದಕ್ಕೊಂದು ಸ್ವರೂಪ ಕೂಡ ನೀಡಲಾಯಿತು.

ಪುಸ್ತಕ ಜನಗಳ ಬಳಿಗೆ ಕೊಂಡೊಯ್ಯಬಹುದು. ಆದರೆ ಜನಕ್ಕೆ ಅವುಗಳ ಬಗ್ಗೆ ಆಸಕ್ತಿ ಮೂಡಬೇಕಲ್ಲ! ತಾವು ಅತ್ಯುತ್ತಮ ಎಂದು ಆರಿಸಿದ್ದು ಜನಕ್ಕೆ ಬೇಡದೇ ಹೋಗಬಹುದು. ಯುವಕರಿಗೆ, ಹೊಸ ಪೀಳಿಗೆಯ ಜನಕ್ಕೆ ಮೆಚ್ಚುಗೆ ಆಗಬಹುದಾದ ಪುಸ್ತಕಗಳ ಪಟ್ಟಿ ಒಂದನ್ನು ಸಂಘಟಕರು ತಯಾರಿಸಿದ್ದರು. ಆ ಪಟ್ಟಿ ಗುಜರಾತೀ ಭಾಷೆಯ ಪ್ರಸಿದ್ಧ ಸಾಹಿತಿಗಳಾದ ಗುಣವಂತ ಶಹಾ, ಮತಕರಂದ ದವೆ, ವಿಮಲಾ ತಾಯಿ ಅವರಂಥವರಿಗೆ ಕಳಿಸಲಾಯಿತು. ಅವರ ಸಲಹೆಗಳನ್ನು ಕೋರಲಾಯಿತು. ಪಟ್ಟಿಯಲ್ಲಿ ಕೆಲವು ಹೆಸರು ತೆಗೆದು, ಮತ್ತೆ ಕೆಲವನ್ನು ಸೇರಿಸಿ ಅಂತಿಮ ಪಟ್ಟಿ ತಯಾರಿಸಲಾಯಿತು.

ಪಟ್ಟಿಯಲ್ಲಿ ಪ್ರಮುಖ ವ್ಯಕ್ತಿಗಳ ಆತ್ಮ ಚರಿತ್ರೆಗಳಿವೆ. ಗುಜರಾತೀ ಭಾಷೆಗೆ ಅನುವಾದಗೊಂಡಿರುವ ಮಹತ್ವದ ಕೃತಿಗಳಿವೆ. ಇಡೀ ವಿಶ್ವದ ಚಿಂತಕರ, ಅತ್ಯುತ್ತಮ ಸಾಹಿತ್ಯದ ಪುಸ್ತಕಗಳನ್ನು ಆರಿಸಲಾಗಿದೆ. ಕೆಲವು ಹಳೆಯ ಪುಸ್ತಕಗಳು ಕೆಲವು ಆಧುನಿಕರ ಸಾಹಿತ್ಯ. ಬಹುಪಾಲು ಎಲ್ಲ ಪುಸ್ತಕಗಳೂ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಂದ ಬಂದವು.

'ವಿಶ್ವಗ್ರಾಮ'ದ ಸದಸ್ಯರೇ ಪುಸ್ತಕ ಕೊಳ್ಳಲು ಬೇಕಾದ ಹಣ ನೀಡಿದರು. ವಿಚಾರ ತಿಳಿದ ಶೀತಲ್ ಪಟೇಲ್ ಅವರ ತಾಯಿ ಇಂದುಬೆನ್ ಪಟೇಲ್ ಕಾರ್ಯಕ್ರಮಕ್ಕೆ ಮೂವತ್ತು ಸಾವಿರ ರೂಪಾಯಿ ದೇಣಿಗೆ ನೀಡಿದರು. ಆಕೆ ಕೂಡ 'ವಿಶ್ವಗ್ರಾಮ' ಸಂಸ್ಥೆಯ ಸಕ್ರಿಯ ಕಾರ್ಯಕರ್ತೆ.

ಆನಂತರ ಜನರ ಬಳಿಗೆ ಹೋಗುವ ಕಾರ್ಯ. ಅದಕ್ಕಾಗಿ ಜನ ಸಂಚಾರ ಹೆಚ್ಚಾಗಿರುವ ರಸ್ತೆಗಳನ್ನು ಆರಿಸಿಕೊಂಡರು. ಕಾರ್ಯಕರ್ತರು ಜನರನ್ನು ಕೂಗಿ ಕರೆದರು. ಸಾಹಿತ್ಯದ ಮಹತ್ವ ಸಾರುವ ಘೋಷಣಾ ಫಲಕ ಹಿಡಿದು ನಿಂತರು. ಮೊದಲ ದಿನವೇ ಕಾಲವಾಡ ರಸ್ತೆಯಲ್ಲಿ ಒಂದು ಸಾವಿರ ರೂಪಾಯಿ ಬೆಲೆಯ ಪುಸ್ತಕ ಖರ್ಚಾದವು ಎಂದು ಕಾರ್ಯಕರ್ತೆ ಲೋಪಾ ಹೆಮ್ಮೆಯಿಂದ ಹೇಳುತ್ತಾರೆ. ಇದೊಂದು ಆಂದೋಲನದ ಸ್ವರೂಪ ಪಡೆದಿದ್ದು, ಈಗಿನ ಸರಾಸರಿ ಎರಡೂವರೆ ಸಾವಿರ ರೂಪಾಯಿ ಬೆಲೆಯ ಪುಸ್ತಕ ಖರ್ಚಾಗುತ್ತಿವೆ. ಜನ ತಮಗೆ ಇಷ್ಟವಾದ ಆಧ್ಯಾತ್ಮ, ಸಾಹಿತ್ಯ ಹಾಗೂ ಕತೆಗಳ ಪುಸ್ತಕ ಕೊಂಡೊಯ್ಯುತ್ತಾರೆ.

ಇಲ್ಲಿ ದೊರೆಯುವ ಪುಸ್ತಕಗಳು ಅತ್ಯುತ್ತಮ. ಇಡೀ ರಾಜಕೋಟೆಯ ಯಾವುದೇ ಒಂದು ಪುಸ್ತಕದಂಗಡಿಯಲ್ಲೂ ಇಷ್ಟೊಂದು ವೈವಿಧ್ಯಮಯ ಹಾಗೂ ಅತ್ಯುತ್ತಮ ಪುಸ್ತಕಗಳ ಸಂಗ್ರಹ ದೊರೆಯದು ಎನ್ನುತ್ತಾರೆ ಸ್ಥಳೀಯ ಶಾಲೆಯೊಂದರ ಟ್ರಸ್ಟೀ ವಿನಯ ತ್ರಿವೇದಿ. ಕಾಲವಾಡ ರಸ್ತೆಯಲ್ಲಿ ಅಡ್ಡಾಡುತ್ತಾ ಹೀಗೇ 'ವಿಶ್ವಗ್ರಾಮ'ದ ಪುಸ್ತಕ ಮಾರಾಟ ಕಂಡು ಕೇವಲ ಕುತೂಹಲಕ್ಕೆಂದೇ ಭೇಟಿ ನೀಡಿದ್ದರು ಅವರು. ಆನಂತರ ತಮ್ಮ ಖಾಸಗಿ ಸಂಗ್ರಹ ಮತ್ತು ತಾವು ನಡೆಸುವ ಶಾಲೆಗೆಂದೇ ಹಲವಾರು ಪುಸ್ತಕಗಳನ್ನು ಅವರು ಖರೀದಿಸಿದ್ದಾರೆ.

ಆನಂತರವೂ ಖರೀದಿ ಮುಂದುವರಿದಿದೆ.

ಹತ್ತಿರದ ಊನಾ ಪಟ್ಟಣದಿಂದ ಬಂದಿದ್ದ ಶಾಲಾ ಶಿಕ್ಷಕ ದೀಪಕ್ ರಾವಲ್ ಮೊದಲ ಸಲ ಇಂಥ ಮಾರಾಟ ಯಾಗ್ನಿಕ್ ರಸ್ತೆಯಲ್ಲಿ ಕಂಡಾಗ, ಯಾರೋ ಕೆಲವು ಯುವಕರು ಒಂದಿಷ್ಟು ಕಾಸು ಮಾಡಿಕೊಳ್ಳಲು ಪುಸ್ತಕ ಮಾರಲು ನಿಂತಿದ್ದಾರೆ ಎಂದುಕೊಂಡಿದ್ದರು.

'ವಿಶ್ವಗ್ರಾಮ'ದ ಯೋಜನೆ ಕೇವಲ ಜನರಲ್ಲಿ ಪುಸ್ತಕ ಕೊಳ್ಳುವ ಉತ್ಸಾಹಕ್ಕೆ ಸೀಮಿತವಾಗಿಲ್ಲ. ಅದರ ಕಾರ್ಯವೈಖರಿಯಿಂದ ಪ್ರಭಾವಿತರಾಗಿ ಎಷ್ಟೋ ಜನ ತಾವೇ ಚಳುವಳಿಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಇತ್ತೀಚೆಗೆ ಸ್ಥಳೀಯ ವಾಣಿಜ್ಯ ತೆರಿಗೆ ಅಧಿಕಾರಿ ಕಾಂತಿಭಾಯಿ ಪರಮಾರ್ ಹಾಗೂ ಅವರ ಪತ್ನಿ ಸಂಸ್ಥೆಗೆ ಹದಿನೈದು ಸಾವಿರ ರೂಪಾಯಿ ದೇಣಿಗೆ ನೀಡುವ ಮೂಲಕ ನೆರವಾದರು.

ಟಿವಿಯಲ್ಲಾದರೆ ನೋಡುಗ ಒಬ್ಬ ಜಡ ಪ್ರೇಕ್ಷಕ ಮಾತ್ರ. ಪುಸ್ತಕ ಓದುವಾಗ ಅವನೊಳಗಿನ ಚಿಂತನೆ, ಕಲ್ಪನೆಗಳು ಸಕ್ರಿಯವಾಗುತ್ತವೆ. ಆ ಕಾರಣಕ್ಕೇ ಪುಸ್ತಕದ ಓದು ಅಗತ್ಯ ಎನ್ನುತ್ತಾರೆ ಸೌರಾಷ್ಟ್ರ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಯಾಸೀನ್ ದಲಾಲ್.

ಇಂಥ ಚಳವಳಿ ಆರಂಭಗೊಂಡು ಕೇವಲ ಆರು ತಿಂಗಳಾಗಿದೆ. ಅದನ್ನು ಕೇವಲ ರಾಜಕೋಟೆ ಪಟ್ಟಣಕ್ಕೆ ಸೀಮಿತಗೊಳಿಸಬಾರದೆಂದು ಸಂಘಟಕರ ಯೋಚನೆ. ಈಗಾಗಲೇ ಜನವರಿಯ ಆರಂಭದಲ್ಲಿ ಅವರು, ಉತ್ತರ ಗುಜರಾತ್‌ನ ದಿಸ್ ಪಟ್ಟಣಕ್ಕೆ ಪುಸ್ತಕ ಮಾರಾಟ ಕೊಂಡೊಯ್ದಿದ್ದರು.

ಕ್ರಮೇಣ ರಾಜ್ಯ ಉಳಿದೆಡೆಗಳಲ್ಲೂ ಪುಸ್ತಕ ಯಾತ್ರೆ ಆರಂಭಿಸಬೇಕು ಎಂಬ ಯೋಚನೆ ಇದೆ. ಹಾಗಾಗಿ ಇದು ಇನ್ನು ಕೆಲವೇ ತಿಂಗಳಲ್ಲಿ ಗುಜರಾತ್ ರಾಜ್ಯದಾದ್ಯಂತ ವಿಸ್ತರಿಸುವ ಎಲ್ಲ ಲಕ್ಷಣ ಕಾಣುತ್ತಿದೆ.

■ ಸಿದ್ದರಾಜು

ಡಾಲಿಯ ಬದುಕಿಗೆ ಬೆಳಕು ತಂದ 'ಸೇವಾ'

ವಯಸ್ಸಾದ ತಂದೆ ತಾಯಿ, ಓದುವ ತಮ್ಮ, ಇಂಥ ಸಂಸಾರದ ಹೊರೆ ಹದಿನೆಂಟರ ಡಾಲಿಯ ಸುಕುಮಾರ ಹೆಗಲುಗಳ ಮೇಲೆ. ಮನೆಗೆಲಸ ಮಾಡಿ ಹೊರಗೆ ಹೋಗಿ ದುಡಿಯುವುದು ಅಸಾಧ್ಯ. ಅಷ್ಟಕ್ಕೂ ಅವಳಿಗೆ ಅಂಥ ಒಳ್ಳೆಯ ಸಂಬಳದ ಕೆಲಸ ಸಿಗುವ ಸಾಧ್ಯತೆಯೂ ಇರಲಿಲ್ಲ. ಆದರೂ ಜೀವನ ಸಾಗಬೇಕಲ್ಲವೇ? ಇಂಥ ನೂರಾರು ಹೆಣ್ಣು ಮಕ್ಕಳಿಗೆ ಮನೆಯಲ್ಲೇ ಕುಳಿತು ದುಡಿದು ಹಣ ಗಳಿಸುವ ಮಾರ್ಗ ದೊರೆತರೆ....!

ಹದಿನೆಂಟರ ಡಾಲಿ ಈಗ ಸಂತೃಪ್ತೆ. ದೆಹಲಿಯ ಸುಲ್ತಾನ್‌ಪುರಿ ಕಾಲನಿಯ ತನ್ನ ಮನೆಯಲ್ಲಿಯೇ ಕುಳಿತು ಅವಳು ದುಡಿಯುತ್ತಾಳೆ. ಹದಿಮೂರು ವರ್ಷದವಳಿದ್ದಾಗ ಈ ಹಾದಿ ಅವಳು ಕಂಡುಕೊಂಡಳು.

ಅದಕ್ಕೆ ಮುಂಚೆ ತಂದೆ, ತಾಯಿ ಇಬ್ಬರೂ ಮೊಟ್ಟೆಗಳನ್ನು ಮಾರಿ ಗಳಿಸಿದ ಹಲವೇ ರೂಪಾಯಿ ದಿನದ ದುಡಿಮೆ ಜೀವನಾಧಾರ. ಈಗ ಅವರಿಗೂ ವಯಸ್ಸಾಗಿದೆ. ಮನೆಗೆಲಸ ಮಾಡುವುದೇ ಕಷ್ಟ. ಈ ಸಮಸ್ಯೆ ಅರಿತ ಡಾಲಿ ತಾನೆ ಕಾರ್ಖಾನೆಗಳಲ್ಲಿ ದುಡಿಯಲು ಆರಂಭಿಸಿದಳು. ದಿನವಿಡೀ ದುಡಿದು ಹಣ್ಣಾಗಿ ಮನೆಗೆ ಬರುತ್ತಿದ್ದ ಆಕೆಗೆ ಹಾಸಿಗೆ ಕಂಡರೆ ಸಾಕು ಎನ್ನಿಸುತ್ತಿತ್ತು. ಆಗಿನ್ನೂ ಸ್ವಲ್ಪ ಗಟ್ಟಿಯಾಗಿದ್ದ ತಂದೆ ತಾಯಿ ಹತ್ತಿರದ ಫ್ಯಾಕ್ಟರಿ ಒಂದರಲ್ಲಿ ಪ್ಯಾಕಿಂಗ್ ಕೆಲಸ ಮಾಡುತ್ತಿದ್ದರು. ಅದೂ ಬೇರೆಡೆಗೆ ಸ್ಥಳಾಂತರಗೊಂಡು, ಇದ್ದ ಕೆಲಸವೂ ಹೋಯಿತು. ಅಂದಿನ ದಿನಗಳಲ್ಲಿ ಇಡೀ ಕುಟುಂಬ ಒಂದು ಹೊತ್ತಿನ ಊಟಕ್ಕೆ ಪರದಾಡಬೇಕಾಯಿತು.

ದಿನ ಕಳೆದಂತೆ ಆರೋಗ್ಯ ಕುಂದಿದ ತಂದೆ ತಾಯಿ. ಡಾಲಿ ಹೊರಗೆ ಹೋದರೆ ಅವರನ್ನು ನೋಡಿಕೊಳ್ಳುವವರಿಲ್ಲ. ಫ್ಯಾಕ್ಟರಿಯಲ್ಲಿ ದುಡಿದು ಸುಸ್ತಾಗಿ ಮನೆಗೆ ಬರುತ್ತಿದ್ದ ಅವಳು ಅಲ್ಲಿಯೂ ಕೆಲಸ ಮಾಡುವುದೆಂದರೆ ಜೀವ ಹೋದಂತಾಗುತ್ತಿತ್ತು.

ಅಂಥ ಸಮಯಕ್ಕೆ ಮನೆ ಬಾಗಿಲಲ್ಲೆ ದುಡಿಯುವ ಅವಕಾಶ ಹುಡುಕಿ ಬಂತು ಡಾಲಿಯನ್ನು, ಅದೂ ಶ್ರಮವಿಲ್ಲದೇ, ಆನಂದ ನೀಡುವಂತಹ ಕೆಲಸ ಮನೆಗೆಲಸ. ತಂದೆ ತಾಯಿಯ ಆರೈಕೆಯ ನಡುವೆ ಬಣ್ಣಬಣ್ಣದ ಗ್ರೀಟಿಂಗ್ ಕಾರ್ಡ್ ತಯಾರಿಸುತ್ತಾಳೆ ಈಗ ಡಾಲಿ. ಆಕೆ ಹುಟ್ಟಾ ಕಲಾವಿದೆ ಅಲ್ಲ. ಹಾಗೆ ನೋಡಿದರೆ ಆಕೆಗೆ ತಾನು ಪೇಂಟಿಂಗ್ ಮಾಡಬಹುದೆಂಬ ಕಲ್ಪನೆಯೇ ಇರಲಿಲ್ಲ. ಇದನ್ನೇಕೆ ಪ್ರಯತ್ನಿಸಿ ನೋಡಬಾರದು? ಎಂದಾಗ ಶುರುಮಾಡಿದ್ದು. ಈಗವಳು ನುರಿತ ಕಲಾವಿದೆಯಂತೆ ಗ್ರೀಟಿಂಗ್ ಕಾರ್ಡ್ ತಯಾರಿಸುತ್ತಾಳೆ. ಅಂಥ ಗ್ರೀಟಿಂಗ್ ಕಾರ್ಡ್‌ಗೆ, ಮುದ್ರಿತ ಕಾರ್ಡ್‌ಗಳಿಗಿಂತ ಹೆಚ್ಚು ಬೇಡಿಕೆ. ಅವುಗಳ ವರ್ಣ ಸಂಯೋಜನೆ, ಕಲಾ ನೈಪುಣ್ಯದಲ್ಲಿ ಏನೋ ಒಂದು ಆಕರ್ಷಣೆ ಇರುತ್ತದೆ. ಹಾಗಾಗಿಯೇ ಬೇಡಿಕೆ.


ಇದೆಲ್ಲ ಸಾಧ್ಯವಾಗಿದ್ದು ಸೇವಾ (Self emloyed women's association) ಮೂಲಕ. ಗುಜರಾತ್‌ನ ಅಹಮದಾಬಾದ್‌ನಲ್ಲಿ ಕೇಂದ್ರ ಹೊಂದಿರುವ ಈ ಸಂಸ್ಥೆ ದೇಶದ ಹಲವೆಡೆ ತನ್ನ ಕಾರ್ಯ ವಿಸ್ತರಿಸಿದೆ. ಸ್ವಂತ ಉದ್ಯೋಗ ಮಾಡುವ ಮಹಿಳೆಯರಿಗೆ ನೆರವಾಗುವುದು ಈ ಸಂಸ್ಥೆಯ ಗುರಿ. ಸಂಸ್ಥೆಯ ಸದಸ್ಯರಾಗಲು ತೆರಬೇಕಾದ ಶುಲ್ಕ ಕೇವಲ ಐದು ರೂಪಾಯಿ. ಸಂಸ್ಥೆ ದುಡಿಮೆಗೆ ಬೇಕಾದ ಕಚ್ಚಾ ಪದಾರ್ಥ ಒದಗಿಸುತ್ತದೆ. ಉತ್ಪನ್ನಗಳ ಮಾರಾಟಕ್ಕೆ ವ್ಯವಸ್ಥೆ ಕೂಡ ಮಾಡುತ್ತದೆ. ಮುಖ್ಯವಾಗಿ ಈ ಸಂಸ್ಥೆ ಮಹಿಳೆಯರು ಮನೆಯಲ್ಲೇ ಕುಳಿತು ದುಡಿದು ಗಳಿಸುವ ಅವಕಾಶ ಕಲ್ಪಿಸುತ್ತದೆ. ಈ ಯೋಜನೆಯಿಂದಾಗಿ ದೇಶದ ನೂರಾರು ಮಹಿಳೆಯರು ಉದ್ಯೋಗ ಗಳಿಸಿದ್ದಾರೆ. ತಮ್ಮ ಪ್ರತಿಭೆಗೆ, ತಮಗಿಷ್ಟವಾದ ರಂಗದ ಆಯ್ಕೆಗೆ ಇಲ್ಲಿ ವಿಪುಲ ಅವಕಾಶ ಇರುವುದು ಇನ್ನೊಂದು ಮೆಚ್ಚಬೇಕಾದ ಸಂಗತಿ.

ಡಾಲಿಯ ನೆರೆಯ ಮನೆಯವಳಾದ ದುರ್ಗೇಶ್ ಹೀಗೆ ದುಡಿದು ಗಳಿಸುತ್ತಾಳೆ. ದೆಹಲಿಯಲ್ಲೇ ಇದ್ದರೂ ಆಕೆ ಎಂದೂ ಶಾಲೆಗೆ ಹೋದವಳಲ್ಲ. ಗಂಡನ ದುಡಿಮೆ ಸಾಲದೆಂದು, ಅವಳೂ ಕಾರ್ಖಾನೆಯ ಕೆಲಸಕ್ಕೆ ಹೋಗುತ್ತಾ ಇದ್ದಳು. ಅಲ್ಲಿನ ಭಯಂಕರ ವಾತಾವರಣ, ಕಾಡುವ ಗಂಡಸರು, ದೂರದ ಆ ಫ್ಯಾಕ್ಟರಿಗಳಿಂದ ಮನೆಗೆ ಬಂದು ಸೇರುವುದೇ ಪುನರ್ಜನ್ಮ ಪಡೆದಂತೆ ಎಂದು ನಿತ್ಯ ಅನ್ನಿಸುತ್ತಿತ್ತು. ಅವಳನ್ನು ಗ್ರೀಟಿಂಗ್ ಕಾರ್ಡ್ಸ್ ಮಾಡುವ ಕೆಲಸಕ್ಕೆ ಪುಸಲಾಯಿಸಿದ್ದು ಡಾಲಿ. ಅನಕ್ಷರಸ್ಥೆ ದುರ್ಗೇಶ್ ರಚಿಸುವ ಗ್ರೀಟಿಂಗ್ ಕಾರ್ಡ್‌ಗಳು ಎಷ್ಟೊಂದು ಅದ್ಭುತವಾಗಿರುತ್ತವೆ ಎಂದರೆ, ಅಂಗಡಿಗಳಲ್ಲಿ ಅವನ್ನು ಎದ್ದು ಕಾಣುವಂತೆ ಪ್ರದರ್ಶಿಸಿರುತ್ತಾರೆ.

ಆಕೆಯ ಗಂಡ ರವಿಗೆ ತನ್ನ ಹೆಂಡತಿ ಗ್ರೀಟಿಂಗ್ ಕಾರ್ಡ್ ಮಾಡುತ್ತಾಳೆ, ಅದರಲ್ಲೂ ಇಷ್ಟೊಂದು ಸುಂದರ ಗ್ರೀಟಿಂಗ್ ಕಾರ್ಡ್‌ಗಳನ್ನು ಎಂದು ನಂಬುವುದು ಮೊದಲು ಸಾಧ್ಯವೇ ಆಗಲಿಲ್ಲ. ಈಗ ಆತ ತನ್ನ ಹೆಂಡತಿಯ ಪ್ರತಿಭೆಯನ್ನು ಹೆಮ್ಮೆಯಿಂದ ಎಲ್ಲರಲ್ಲಿ ಹೇಳಿಕೊಳ್ಳುತ್ತಾನೆ. 'ಸೇವಾ' ಇಂಥ ಹೆಣ್ಣುಗಳ ಪಾಲಿಗೆ ಸಣ್ಣದೊಂದು ಭರವಸೆ, ಪ್ರತಿಭೆಯ ಸದುಪಯೋಗಕ್ಕೆ ಅವಕಾಶ ಮಾಡಿಕೊಟ್ಟಿದೆ. ಹಾಗೇ ತನ್ನ ಕಾರ್ಯಕ್ಷೇತ್ರ ವಿಸ್ತರಿಸಿಕೊಳ್ಳುವತ್ತ ಮುಂದಾಗಿದೆ.

■ ಅನಿತಾ ಆರ್.ಎಸ್.

ಪ್ರೇಮ ಮತ್ಸರ



ಅನುವಾದಿತ ಕಥೆ

ತೂಗಿಬಿದ್ದ ಶ್ಯಾಂಡಿಲಿಯರ್‌ಗಳು. ನೆಲಕ್ಕೆ ಹಾಸಿದ್ದ ಮೆತ್ತನೆಯ ಕಾರ್ಪೆಟ್. ಗಲಗಲ ಮಾತಾಡುತ್ತಾ ಮೋಹ ಉಕ್ಕಿಸಲು ಯತ್ನಿಸುವ ಹೆಂಗಸರು. ಆಗಾಗ ಚಂದದ ಕಟ್‌ಗ್ಲಾಸ್ ಎತ್ತಿ ಹನಿ ಹನಿಯಾಗಿ ವಿಸ್ಕಿ ಗಂಟಲಿಗೆ ಬಸಿದುಕೊಂಡು 'ದಿ ಥಿಂಗ್ ಈಸ್' ಎಂದು ಯಾವುದೋ ಪುರಾಣ ಶುರುಹಚ್ಚಿಕೊಳ್ಳುವ ಗಂಡಸರು. ಗುಂಪು ಗುಂಪಾಗಿ ಹಾಗೆ ನಿಂತವರ ಬಳಿ ಸಿಗರೇಟು, ಖಾದ್ಯ, ಕೆಲವೊಮ್ಮೆ ವಿಸ್ಕಿಯ ಟ್ರೇ ಹಿಡಿದು ಸಾಗುವ ಸೇವಕರು. ಅವರೇನಾದರೂ ಬಯಸಿದರೆ, ಅದೇ ಭಾಗ್ಯ ಎಂಬಂತೆ ನಡುಬಾಗಿಸಿ ಸರ್ವ್ ಮಾಡುವ ವೈಖರಿಯೇ ಪಾರ್ಟಿಯ ಅಂತಸ್ತಿಗೆ ಸಾಕ್ಷಿಯಾಗಿತ್ತು.

ಅಖಿಲಾಳ ಬರ್ತ್‌ಡೇ ಪಾರ್ಟಿ. ಸದಾಶಿವನಗರದ ಶ್ರೀಮಂತ ಬಂಗಲೆಯಲ್ಲಿ, ಆಗತಾನೆ ಚಳಿ ಬಿಡುತ್ತಿದ್ದ ದಿನಗಳಲ್ಲಿ ಇಷ್ಟು ಹೊತ್ತಿಗಾಗಲೇ ರಂಗೇರಬೇಕಿತ್ತು. ಆದರೆ ಆಹ್ವಾನಿತರಾಗಿ ಬಂದಿದ್ದ ಕೆಲವು ಸೈನ್ಯದ ಹಿರಿಯ ಅಧಿಕಾರಿಗಳ ಉಪಸ್ಥಿತಿಯಲ್ಲಿ ಅನಗತ್ಯವಾಗಿ ಗಂಭೀರತೆ ಮನೆ ಮಾಡಿತ್ತು. ಅದಕ್ಕೆ ಕಾರಣ ಆಗತಾನೇ ಮುಗಿದ ಯುದ್ಧ. ಮುಗಿದಿದೆ ಎಂದು ಅಧಿಕೃತವಾಗಿ ಘೋಷಿಸದೇ ಇದ್ದರೂ, ವಿಜಯದ ಕ್ಷಣದಲ್ಲಿ ತಟ್ಟನೆ ಕಾಡಿಬಿಡುವ ಮೈಗಾದ ಗಾಯದ ಹಾಗೆ ಹಲವು ನೋವಿನ ನೆನಪು ಒಸರುತ್ತಾ ಇದ್ದವೆಂದೇ ಇನ್ನೂ ಜನರ ಬಾಯಲ್ಲಿ ಯುದ್ಧದ ಚರ್ಚೆಯೇ ನಡೆದಿತ್ತು. ಅಖಿಲ್ ಖುದ್ದಾಗಿ ಬಂದು 'ನೀನು ಬರಲೇ ಬೇಕು' ಎಂದು ಒತ್ತಾಯಿಸದೇ ಹೋಗಿದ್ದರೆ ಖಂಡಿತ ಶ್ರೀಕಾಂತ ಅವತ್ತಿನ ಪಾರ್ಟಿಗೆ ಬರುತ್ತಲೇ ಇರಲಿಲ್ಲ. ಅಷ್ಟಾಗಿಯೂ ಆತ ಬೇಕೆಂದೇ ಒಂದು ತಾಸು ತಡವಾಗಿ ಬಂದಿದ್ದ. ಈತ ಕಾರಿಂದ ಇಳಿಯುತ್ತಿದ್ದ ಹಾಗೇ, ಅದು ಹೇಗೆ ಮಿಂಚಿನಂತೇ ಸುದ್ದಿ ಮುಟ್ಟಿತೋ! ಬಾಗಿಲ ಬಳಿ ಸಾಗುವಷ್ಟರಲ್ಲಿ ಓಡೋಡಿ ಬಂದಿದ್ದಳು.

'ಓ! ನೀನು ಬರೋದೇ ಇಲ್ಲವೇನೋ ಅನಿಸಿ ಬಿಟ್ಟಿತ್ತು ನೋಡು! ಹೌ ಸ್ವೀಟ್! ಕೊನೆಗೂ ನೀನು ಬಂದೆಯಲ್ಲ!' ತೋಳು ಹಿಡಿದು ಒಳಗೆ ನಡೆಸಿಕೊಂಡು ಕರೆದೊಯ್ದಳು. ಆ ಒಂದು ಕ್ಷಣದಲ್ಲಿ ಅಖಿಲಾಳ ಅಪ್ಯಾಯಮಾನ ಸೌಂದರ್ಯಕ್ಕಿಂತ ತೊಟ್ಟ ವಜ್ರದ ಒಡವೆಗಳೇ ಕಣ್ಣು ಕೋರೈಸಿದಂತಾಗಿತ್ತು. ಬ್ಯೂಟಿ ಪಾರ್ಲರ್‌ನಲ್ಲಿ ತಿದ್ದಿಸಿಕೊಂಡು ಬಂದ ಹೇರ್‌ಸ್ಟೈಲ್, ಮುಖ, ತುಟಿಯ ರಂಗು ಒಂದೂ ಕೆಡದಂತೆ, ಮಾಸದಂತೆ ನಾಜೂಕಾಗಿ ನಡೆದುಕೊಳ್ಳುತ್ತಾ,

'ಮೀಟ್ ಶ್ರೀಕಾಂತ್' ಎಂದು ಒಬ್ಬೊಬ್ಬರಿಗೂ ಪರಿಚಯಿಸುತ್ತಾ ಹೋದಂತೆ, ಏರುವ ಅವರ ಹುಬ್ಬು, ಇಂಥ ಘಟಾನುಘಟಿ ಶ್ರೀಮಂತ ಯುವಕನನ್ನೇ ಈಕೆ ಬುಟ್ಟಿಗೆ ಹಾಕಿಕೊಳ್ಳುವವಳಾದರೆ ತಾವು ಅಂದುಕೊಂಡದ್ದಕ್ಕಿಂತ ಇವಳು ಮಹಾ ಚಾಲಾಕಿ ಎಂದೆಲ್ಲ ಮನಸಲ್ಲೇ ಅಂದುಕೊಳ್ಳುತ್ತಾ ಇರುವಾಗಲೇ, ಮುಂದೆ ಸಾಗುತ್ತಿದ್ದ ಇಬ್ಬರ ಜೋಡಿ.

ಅಲ್ಲಲ್ಲಿ ಒಂದಿಬ್ಬರು ಹೆಂಗಸರು. ಅವರ ಪರಿಚಯವೂ ಮುಗಿದು, ಯಾರನ್ನೋ ಹುಡುಕುತ್ತಾ ಇರುವಂತೆ ಆಚೀಚೆ ಕಣ್ಣಾಡಿಸಿದ ಅಖಿಲಾ ದೂರದಲ್ಲಿ ಹೂದಾನಿಯ ಮೊಗ್ಗು ಕಂಗೊಳಿಸುತ್ತಿದ್ದ ಆಕೃತಿಯೊಂದನ್ನು ನೋಡಿ 'ಓ! ಇವಳಿಗೆ ಕೆಲಸ ಮಾಡದೇ ಹೋದರೆ ಸಮಾಧಾನವೇ ಇರೋಲ್ಲ ಅಂತ ಕಾಣುತ್ತೆ' ಎಂದು ಗೊಣಗಿಕೊಳ್ಳುತ್ತಾ ಶ್ರೀಕಾಂತನನ್ನೂ ಕರೆದೊಯ್ದು ಆಕೆಯ ಬಳಿ ಸಾರುವುದಕ್ಕೂ, ಆಕೆ ಆಗಷ್ಟೇ ಹೂಗಳನ್ನೆಲ್ಲ ಅಂದವಾಗಿಟ್ಟು ಹೊರಳುವುದಕ್ಕೂ ಒಂದೇ ಆಯಿತು.

'ಮೀಟ್ ಶ್ರೀಕಾಂತ್, ಇವಳು ಉಷಾ, ನನ್ನ ಕ್ಲಾಸ್‌ಮೇಟ್. ಈಗ ಸಿಟಿ ಸೋಷಿಯಲ್ ಫೋರಂನಲ್ಲಿ ಕೆಲಸ ಮಾಡ್ತಿದಾಳೆ' ಎಂದೆಲ್ಲ ವಿವರಿಸುತ್ತಾ ಹೋಗುತ್ತಿದ್ದರೂ ಶ್ರೀಕಾಂತನಿಗೆ ಅದ್ಯಾವುದರ ಪರಿವೆಯೂ ಇದ್ದ ಹಾಗಿರಲಿಲ್ಲ. ತೊಳೆದಿಟ್ಟ ಮುಖ, ಒಂದಿಷ್ಟೂ ಕೃತಕ ಶೃಂಗಾರಗಳಿಲ್ಲದ ಸಹಜ ಸೌಂದರ್ಯ. ತೊಟ್ಟಿದ್ದು ಅಷ್ಟೇನೂ ಬೆಲೆಯುದಲ್ಲದ ಸೀರೆ. ತಿಳಿ ಬಣ್ಣದ್ದು ಅಂಥದ್ದೇ ರವಿಕೆ. ಹೆರಳು ಹಾಕಿಕೊಂಡಿದ್ದರೂ, ಅದಕ್ಕಾಗಿ ವಿಶೇಷ ಕಾಳಜಿ ಇಲ್ಲ. ಹಾಗಾಗಿ ಫ್ಯಾನಿನ ಗಾಳಿಗೆ ಹಣೆಯ ಮೇಲೆ ಆಡುವ ಮುಂಗುರುಳು.

'ನೀವು ಮಾತಾಡ್ತಾ ಇರಿ ಒಂದು ನಿಮಿಷ....'

ಎಂದದ್ದೇ ಅಖಿಲಾ ಮಾಯವಾಗಿ ಬಿಟ್ಟಳು. ಆ ಮುಗ್ಧ ಸೌಂದರ್ಯದ ಎದುರು ಒಂಟಿಯಾಗಿ ನಿಂತ ಶ್ರೀಕಾಂತನಿಗೆ, ಅದೇ ಮೊದಲ ಸಲ ಹೆಣ್ಣೊಂದರೊಡನೆ ಮಾತಾಡುವುದು ಕಷ್ಟ ಎನ್ನಿಸಿತು. ಅದೇ ಸಮಯಕ್ಕೆ ಟ್ರೇ ಹಿಡಿದು ಬಂದ ಸರ್ವರ್.

'ನೀವೇನು ತಗೋತೀರ?' ಕೇಳಿದ.

'ಏನಾದರೂ ಫ್ರೂಟ್ ಜ್ಯೂಸ್.... ನೀವು?' ಸಹಜ ಕೇಳಿದ್ದಳು ಉಷಾ.

'ನೀವೇನು ತಗೋತಿರೋ ಅದೇ....'

ಸರ್ವರ್ ಮುಂದೆ ಮಾಡಿದ ಉದ್ದನೆಯ ಲೋಟಾದ ತುಂಬ ತುಂಬಿಕೊಂಡ ಕಿತ್ತಳೆ ರಸವನ್ನು ಎತ್ತಿ ಅವಳಿಗೊಂದು ಕೊಟ್ಟ. ತಾನೊಂದು ಹಿಡಿದ.

ಕಿತ್ತಳೆಯ ರಸ ಸೇವಿಸುತ್ತಾ ಒಂದೊಂದೇ ಮಾತಿಗೆ ಅಣಿಯಾಗುತ್ತಾ ಆಕೆಯ ಕುತ್ತಿಗೆ, ಕಾಲು ಬೆರಳು ಗಮನಿಸಿದ. ಸ್ವಲ್ಪ ನಿಸೂರೆನಿಸಿತು.

★

ಹೆಣ್ಣುಗಳೆಂದರೆ ಆಟದ ಬೊಂಬೆ.

ಬಳಸಿ ಬಿಸಾಕಿ ಬಿಡುವ ವಸ್ತು.

ಹಾಗೆಂದೇ ಶ್ರೀಕಾಂತನ ಭಾವನೆ. ಅವನ ಜೀವನ ಹಾಗೇ ನಡೆದುಕೊಂಡು ಬಂದಿದೆ. ಹಣ ಇದ್ದಲ್ಲಿ ಇಂಥವೆಲ್ಲ ನಡೆಯುತ್ತವೆ. ದೀಪಕ್ಕೆ ಮುತ್ತುವ ಹುಳುಗಳ ಹಾಗೆ.

ಆದರೆ ಅವಳು ಬೇರೆಯೇ.

ಉಷಾ.

ಪಾರ್ಟಿಯಿಡೀ ಅವನ ಕಣ್ಣುಗಳು ಕಾವಲಾಗಿದ್ದವು. ಆಕೆಯ ಪ್ರತಿ ನಡೆ, ನುಡಿ, ಸಣ್ಣದೊಂದು ನಗು, ಕತ್ತಿನ ಕೊಂಕು, ಯಾವೊಂದೂ ಕಣ್ತಪ್ಪಿ ಹೋಗದ ಹಾಗೆ ನಿರುಕಿಸಿದ್ದ. ಒಂದೇ ಒಂದು ತೊಟ್ಟು ವಿಸ್ಕಿಯನ್ನೂ ಆತ ಮುಟ್ಟರಲಿಲ್ಲ. ಮದ್ಯದ ಉತ್ತೇಜನಕ್ಕಿಂತ ಮಿಗಿಲಾದ ಒಂದು ಅವನನ್ನು ಆವರಿಸಿಬಿಟ್ಟತ್ತು.

ಬಣ್ಣ ಬಳಿಯದ ಮುಖ, ತುಟಿ. ಕಾಡಿಗೆ ತೀಡಿರದ ಕಣ್ಣು. ಸಣ್ಣ ಬಿಂದಿ ಇಟ್ಟುಕೊಂಡ ಹಣೆ. ಕೆನೆ ಬಣ್ಣದ ಸೀರೆ. ಅಂಥದ್ದೇ ರವಿಕೆ. ಕುತ್ತಿಗೆಯಲ್ಲೊಂದು ಅಗ್ಗದ ಸರ. ಎಡಗೈಗೆ ಕಟ್ಟಿದ ಪುಟಾಣಿ ವಾಚು. ಅದ್ಯಾವುದೂ ಅವಳ ಬಡತನ ಸಾರುತ್ತ ಇರಲಿಲ್ಲ. ಅವಳ ಸರಳತೆ, ಸಹಜತೆಗೆ ಮೆರುಗು ನೀಡಿದ್ದವು.

ಮಾತಿನ ನಡುವೆ ಹೇಳಿದ್ದಳು.

'ನಾಳೆ ನೀವು ಬಿಡುವಾಗಿ ಇರುತ್ತೀರಾ?'

'ಓ! ಶ್ಯೂರ್!' ಥಟ್ಟನೆ ನುಡಿದಿದ್ದ.

ಸಿಟಿ ಸೋಷಿಯಲ್ ಫೋರಂನ ಮನರಂಜನಾ ಕಾರ್ಯಕ್ರಮ. ಅದರಿಂದ ಬಂದ ಹಣ ಯುದ್ಧದಲ್ಲಿ ಸತ್ತವರ ಕುಟುಂಬಗಳಿಗೆ ಟಿಕೆಟ್ ಹಿಡಿದು ಮಾರಾಟಕ್ಕೆ ಬರುತ್ತಾಳೆ.

ಯೋಚನೆಗೆ ಭಂಗ ಬಂತು. ಆಳು ಬಂದು 'ಯಾರೋ ಬಂದಿದ್ದಾರೆ' ಅಂದ. ಬಾಲ್ಕನಿಯ ಕಿಟಕಿಯಾಚೆ ಹೊರಳಿ ನೋಡಿದ. ಮನೆಯ ದೊಡ್ಡ ಗೇಟಿನ ಆಚೆ ಆಕೆ. ಆಳಿನ ಮೇಲೆ ಸಿಟ್ಟು 'ಯೂ ಫೂಲ್' ಎಂದು ರೇಗಬೇಕೆನ್ನಿಸಿತು. ಸಾಮಾನ್ಯವಾಗಿ ಹಾಗೇ ಮಾಡುತ್ತಾನೆ. ಇಂಥ ಜನ ಹಣಕ್ಕೆ, ನೆರವಿಗೆ ಎಂದು ಬಂದು ಅಂಗಲಾಚುವದುಂಟು. ಅಂಥ ಯಾರೇ ಬಂದರೂ 'ಇಲ್ಲ' ಎಂದು ಹೇಳಿಬಿಡುವುದು ಆಳುಗಳಿಗೆ ಮಾಮೂಲು. ಆದರೂ ಅವರು 'ಬರುವವರೆಗೆ ಕಾಯುವುದಾಗಿ' ಹೇಳಿ ಬಾಗಿಲಲ್ಲೇ ನಿಂತಿರುತ್ತಾರೆ. ಆಳಿಗೆ ಆಕೆಯೂ ಅಂಥವಳೇ ಅನ್ನಿಸಿರಬೇಕು. ಸಿಟ್ಟು ನಿಗ್ರಹಿಸಿಕೊಂಡ ಶ್ರೀಕಾಂತ ಧಡಧಡನೆ ಮೆಟ್ಟಿಲಿಳಿಯಲಾರಂಭಿಸಿದ. ಆಳು ಗಾಬರಿಗೊಂಡು ಹಿಂದೆಯೇ ಬಂದ. ತೆರೆದ ಗೇಟು. ಅರಳಿದ ಆಕೆಯ ಮುಖ.

'ಓ!' ಸಣ್ಣದೊಂದು ಉದ್ಗಾರ, 'ನೀವಿಷ್ಟು ಶ್ರೀಮಂತರು ಅಂತ ಗೊತ್ತಿರಲಿಲ್ಲ!' ಮಾತು ಮುಗಿಸಿದಳು. ವ್ಯಂಗ್ಯವಿದೆಯೇ? ಆಶ್ಚರ್ಯ, ಸಂಭ್ರಮವೇನಾದರೂ ಇದೆಯೇ? ಬೆದರಿ ನೋಡಿದ. ಅವಳ ಪಾಲಿಗೆ ಅದೊಂದು ಸಹಜ ಹೇಳಿಕೆ. ಮನಸಿಗೆ ಅನಿಸಿದ್ದು, ಅಂದು ನಿರಾಳವಾಗಿದ್ದಳು.

'ಬರಬೇಕು....' ನಸುಬಾಗಿ ವಿನಯದಿಂದ ಕರೆದ. ಮನೆಯ ಡೈನಿಂಗ್ ಟೇಬಲ್ ಮೇಲೆ ಬಡಿಸಿದ ತಿಂಡಿ ಕಂಡು ಆಕೆ ತಣ್ಣಗಿನ ಮೌನಕ್ಕೆ ಸರಿದಳು. ಸಣ್ಣದೊಂದು ಮ್ಲಾನತೆ.

'ಒಂದು ಕಾಫಿ ಸಾಕು....' ಏನೋ ಯೋಚನೆಗೆ ಬಿದ್ದವಳಂತೆ ನುಡಿದಳು.

★

ದಿನವಿಡೀ ಆಕೆಯ ಕಾರ್ ಡ್ರೈವರ್‌ನಂತೆ ಹೇಳಿದೆಲ್ಲೆಡೆ ಕರೆದುಕೊಂಡು ತಿರುಗಿದ. ಕಂಡ ಕಚೇರಿಗಳ ಅಧಿಕಾರಿಗಳು, ಶ್ರೀಮಂತರು ಟಿಕೆಟ್ ಖರೀದಿಗೆ 'ಇಲ್ಲ' ಎಂದೇನೂ ಹೇಳಲಿಲ್ಲ. ಆದರೆ ಯಾರೂ ಟಿಕೆಟ್ ದಂಡಿಯಾಗಿ ಖರೀದಿಸಲಿಲ್ಲ. ಕೈಬಿಟ್ಟು ಧಾರಾಳವಾಗಿ ಕೊಡಲಿಲ್ಲ. ಸಂಜೆಯಾಗುವಾಗ ಹತ್ತು ಸಾವಿರ ಸಂಗ್ರಹಿಸಿ ಸುಸ್ತಾಗಿದ್ದಳು. ಈಡನ್ ಗಾರ್ಡನ್‌ನ ಕುರ್ಚಿಯಲ್ಲಿ ಕುಳಿತು ತಣ್ಣಗೆ ನಿಂಬೆ ಹಣ್ಣಿನ ಪಾನಕ ಹೀರುವಾಗ, ಅವಳ ದಣಿದ ಮುಖದಲ್ಲಿ ತೃಪ್ತಿ ಇತ್ತು. ಟೇಬಲಿನ ಮೇಲೆ ಆಕೆ ತನ್ನ ಪರ್ಸ್, ಟಿಕೆಟ್‌ಗಳ ಪುಸ್ತಕ ಇರಿಸಿದ್ದಳು. ಸುಮ್ಮನೆ ಆ ಪುಸ್ತಕ ಎತ್ತಿಕೊಂಡ. ಹತ್ತು ಟಿಕೆಟ್ ಮಾತ್ರ ಖರ್ಚಾಗಿದ್ದವು. ಉಳಿದ ತೊಂಬತ್ತು ಟಿಕೆಟ್....

'ಇವು ನನಗಿರಲಿ....'

ದಾಢ್ಯತೆಯಿಂದ ನುಡಿದ.

ಆಕೆ ಸಣ್ಣಗೆ ಮಿಸುಕಾಡಿದಳು.

ಬ್ರೀಫ್‌ಕೇಸ್ ತೆಗೆದು ಐನೂರರ ನೋಟುಗಳ

ದುಃಖ



ದುಃಖ ಸಮುದ್ರವು

ಯೋಜನಗಳಾಚೆ
ಕೇಳುವುದದರ ಮೊರೆ

ಸಂತೋಷದ ದೊಡ್ಡ
ಹಡಗುಗಳನ್ನೂ
ಅದು ಮುಳುಗಿಸುವುದು

ನೆಮ್ಮದಿಯ ಹುಟ್ಟಡಗಿಸುವುದು

ರಾಕ್ಷಸ ಅಲೆಗಳನ್ನು ರಾಚಿ
ಸುಖೀ ಚಂದ್ರನನ್ನೂ
ನಡುಗಿಸುವುದು

ನಿಷ್ಪಾಪಿ ಹುಲ್ಲು ಕಡ್ಡಿ
ಮಾತ್ರವೇ
ನಿರಾತಂಕವಾಗಿ
ತೇಲಿ ದಡಸೇರುವುದು

■ ಸವಿತಾ ನಾಗಭೂಷಣ

ಕಟ್ಟು ಎರಡು ತೆಗೆದ್ದಿಟ್ಟ. ಅವನ್ನು ಆಕೆಯತ್ತ ಸರಿಸಿದ. ಕಣ್ಣಲ್ಲೇ ಎಣಿಸಿದಳು. ಕ್ಷಣ ಬಿಟ್ಟು ಹೇಳಿದಳು.

'ನನಗೆ ಮಾತು ತೋಚ್ತಾ ಇಲ್ಲ. ಇನ್ನೊಂದು ರೀತೀಲಿ ನಿಮ್ಮನ್ನ ಇಕ್ಕಟ್ಟಿಗೆ ಸಿಕ್ಕಿಸಿದೇನೋ ಅನ್ನಿಸ್ತಾ ಇದೆ....' ನೀಳ ಬೆರಳಿಂದ ತಣ್ಣಗಿನ ಶರಬತ್ತಿನ ಲೋಟಾ ನೇವರಿಸುತ್ತಾ

'ಸೈನಿಕರಿಗಾಗಿ ಇಷ್ಟೊಂದು ಕಾಳಜಿ ನಿಮ್ಮಲ್ಲಿ....'

ಅವಳ ಮಾತು ಮುಗಿಯುವ ಮುನ್ನ ಹೇಳಿದ

'ಅದು ಒಂದು ಕಡೆ. ನಿಮ್ಮ ಬಗ್ಗೇನೂ ಕಾಳಜಿ ಇತ್ತು ಅಂತಲೇ... ಇಲ್ಲದೇ ಹೋದರೆ ಮತ್ತೆ ನೀವು ಆ ಟಿಕೆಟ್ ಪುಸ್ತಕ ಹಿಡಿದು ವಾರವಿಡೀ ಅಲೀತೀರ. ಕಚೇರಿ, ಅಂಗಡಿಗಳ ಮೆಟ್ಟಲು ತುಳಿದು ದಣೀತೀರ....'

ಘಲ್ಲನೆ ನಕ್ಕುಬಿಟ್ಟಳು.

'ನಿಮ್ಮ ಅನುಕಂಪ ತೀರಾ ದುಬಾರಿಯಾಯಿತು'

ಛೇಡಿಸಿದಳು.

★★

ಮುತ್ತಿನ ಓಲೆ

ವಜ್ರದ ಸರ.

ಒಂದೇ ಎರಡೇ....

ಎಲ್ಲ ಬಲವಂತದಿಂದ ಆಕೆಯ ಕೈಗೆ ಇಟ್ಟಿದ್ದು.

ಪ್ರತಿಸಲ ಆಕೆ ಹೇಳುತ್ತಾ ಇದ್ದಳು.

'ಇದೆಲ್ಲ ಅಗತ್ಯ ಇರಲಿಲ್ಲ ಶ್ರೀಕಾಂತ.... ನನಗೆ ಇದರ ಅಗತ್ಯ, ಆಸೆ ಎರಡೂ ಇಲ್ಲ....'

'ಅದು ಗೊತ್ತು....' 'ಬೇಕು ಅಂತ ಕೈಚಾಚಿದೋರಿಗೆ ಕೊಡೋವಾಗ ಅಹಂಕಾರ ಅನ್ನಿಸಿಬಿಡುತ್ತೆ. ಇದು ಒಂದು ರೀತಿಯ ಸಮರ್ಪಣೆ....'

'ದೊಡ್ಡ ಮಾತು ಶ್ರೀಕಾಂತ್. ಸಮರ್ಪಣೆ ಸಾಧ್ಯ ಆಗೋದು ಪ್ರಕೃತಿಯ ಎದುರು, ದೇವರ ಮುಂದೆ, ಸಾವಿನ ಸಮ್ಮುಖದಲ್ಲಿ ನಿಂತಾಗ ಮಾತ್ರ....'

'ಪ್ರೀತಿಯಲ್ಲಿ ಕೂಡ ಅದು ಸಾಧ್ಯ ಉಷಾ'

ಸಣ್ಣಗೆ ಕಂಪಿಸುತ್ತಾ ಇದ್ದಳು.

'ಅದಕ್ಕೆ ನಾನು ಅರ್ಹಳಲ್ಲ....' ತೀರಾ ಸಾದಾ, ಆದರೆ ಅಷ್ಟೇ ಗಟ್ಟಿ ದನಿಯಲ್ಲಿ ಹೇಳುತ್ತಾ ಎದ್ದು ನಿಲ್ಲುತ್ತಿದ್ದವಳ ಕಣ್ಣಲ್ಲಿ ಅಮೂಲ್ಯ ಉಡುಗೊರೆಗಳ ಬಗ್ಗೆ ತಿರಸ್ಕಾರವೂ ಇರುತ್ತಿರಲಿಲ್ಲ. ಸಣ್ಣ ಒಂದು ಆಸೆ ಕೂಡ ಇರುತ್ತಿರಲಿಲ್ಲ.

ಅಂಥದ್ದೇ ಒಂದು ದಿನ.

ಜಗತ್ತಿನಲ್ಲಿ ಯಾರೂ ಕೊಟ್ಟಿರಬಾರದು, ಆಕೆ ಎಂದೂ ಮರೆಯಬಾರದು ಅಂಥದೊಂದು ದುಬಾರಿ ಉಡುಗೊರೆ ಕೊಡಬೇಕೆಂದು ನಿಶ್ಚಯಿಸಿದ್ದ ಶ್ರೀಕಾಂತ. ಆಕೆಗೆ ಫೋನ್ ಮಾಡಿದ್ದ.

'ಹಾಂ. ಒಳ್ಳೇದಾಯಿತು. ನಾನೇ ಫೋನ್ ಮಾಡಬೇಕು ಅಂತಿದ್ದೆ....'

'ಏನಪ್ಪ ಅಂಥದ್ದು. ನೀವೇ ಫೋನ್ ಮಾಡುವಂಥಾದ್ದು....!'

'ಊರಿಗೆ ಹೋಗ್ತಾ ಇದೀನಿ....'

'ಈಸ್ ಇಟ್? ಎಷ್ಟು ದಿನ?'

'ಇನ್ನು ಬರೋದಿಲ್ಲ....'

'ವಾಟ್?' ಚೀರಿಕೊಂಡಿದ್ದ.

ಇಬ್ಬರೂ ಸಂಜೆ ಸೆಂಚುರಿ ಕ್ಲಬ್‌ನ ಲಾನ್‌ನಲ್ಲಿ ಕುಳಿತಿದ್ದರು. ಸಣ್ಣದೊಂದು ಬೇಸರ. ಇದೊಂದು ಕೊನೆಯ ಅವಕಾಶ. ಇದನ್ನು ಕಳೆದುಕೊಳ್ಳಬಾರದು. ನಿಶ್ಚಯಿಸಿದ್ದ ಶ್ರೀಕಾಂತ.

'ನಾನೊಂದು ಮಾತು ಹೇಳ್ತೀನಿ....'

ಕನ್ನಡಿ



ನಾ ಪ್ರೀತಿಸೋದು
ನಾ ನಕ್ಕಾಗ
ನನ್ನಂತೆ ನಕ್ಕು
ನಗುವ ಚೆಲ್ಲುವ
ನನ್ನ ಕನ್ನಡಿಯನ್ನು

■ ನಿವೇದಿತಾ ಕುದ್ವಾಜಿ

'.....'

'ನೀವು ಇಲ್ಲಿಂದ ಹೋಗಬಾರದು....'

ಮುಖವೆತ್ತಿ ನೋಡಿದ್ದಳು.

'ನನ್ನ ಬದುಕಲ್ಲಿ ಸದಾಕಾಲ ನೀವು ಜೊತೆಗಿರಬೇಕು ಅಂತ....'

ಮಾತು ಕೇಳಿದ್ದೇ ಆಕೆ ಗಂಭೀರವಾದಳು. ಎಷ್ಟೋ ಹೊತ್ತು ಮಾತಿಲ್ಲ. ಆಮೇಲೆ ಹೇಳಿದ್ದಳು.

ನನ್ನ ಮದುವೆ ನಿಶ್ಚಯ ಆಗಿದೆ. ಸಂಬಂಧದ ಹುಡುಗ. ನಿಶ್ಚಯ ಆದ ಮೇಲೆ ಅವನು ಯುದ್ಧಕ್ಕೆ ಹೋದ. ಶೆಲ್ ದಾಳಿಯಲ್ಲಿ ಅವನ ಎರಡೂ ಕಾಲು ಹೋಗಿವೆ. ಈಗೀಗ ವೀಲ್ ಚೇರಿನಲ್ಲಿ ಓಡಾಡ್ತಾನೆ. ನಿಶ್ಚಯ ಮಾಡಿಕೊಂಡಿದ್ದೆ ಅಂತ ಅಲ್ಲ, ನಿಮಗೆ ಬೇರೆ ಯಾರಾದರೂ ಹುಡುಗಿ ಸಿಗಬಹುದು. ಬದುಕಿಡೀ ಅಸಹಾಯಕನಾಗಿ ಬಿಡೋ ಅವನಿಗೆ ನಾನಲ್ಲದೆ ಬೇರೆ ಯಾರೂ ಜೊತೆ ಕೊಡೋದಿಲ್ಲ.... ಸ್ಸಾರಿ....

★★

ಎಷ್ಟೆಷ್ಟೋ ಹೇಳಿ ನೋಡಿದ್ದ 'ಇದೆಲ್ಲ ಭ್ರಾಮಕ ಉತ್ಸಾಹ. ಎರಡು ದಿನಕ್ಕೆ ಎಲ್ಲ ಚೆನ್ನ. ಆಮೇಲೆ ನಿಮ್ಮ ಬಗ್ಗೆ ನಿಮಗೇ ದ್ವೇಷ ಶುರುವಾಗಿ ಬಿಡುತ್ತೆ.'

ಅವಳು ಏನೂ ಹೇಳಲಿಲ್ಲ.

'ನೀವು ನನಗೆ ಬೇಕು ಉಷಾ....' ಆರ್ತನಾಗಿ ಕೋರಿದ್ದ.

ಕೊನೆಗೆ, ಯಾವುದಕ್ಕೂ ಮಣಿಯದಿದ್ದಾಗ ಹೇಳಿದ್ದ.

'ನೀವು ಆತನಿಗೆ ಬೇಡ ಅನ್ನಿಸಿದರೆ, ಆತನಿಗೆ ನಿಮ್ಮ ಅಗತ್ಯ ಇಲ್ಲ ಅನ್ನಿಸಿದರೆ ವಾಪಸ್ಸು ನನ್ನ ಹತ್ತಿರ ಬರ್ತೀರಾ?'

'ಖಂಡಿತ.... ಅಷ್ಟು ಹೊತ್ತಿಗೆ ನಾನೂ ಮುದುಕಿ ಆಗಿರ್ತೀನಿ. ಆಗ ನನ್ನ ಯಾರು ಕೈ ಹಿಡಿದು ಕರಕೋತಾರೆ ಹೇಳಿ....'

ಹಗುರಾಗಿ ನಕ್ಕು ಬಿಟ್ಟಿದ್ದಳು.

★★

ಇದೆಲ್ಲ ತಿಂಗಳಿಗೂ ಹಿಂದಿನ ಕಥೆ. ಮನಸ್ಸು, ಮೈ ಉರಿಯಿತು. ಏನೂ ಅಲ್ಲದ ಹೆಣ್ಣೊಬ್ಬಳು ತನ್ನನ್ನು ನಿರಾಕರಿಸಿದಳೆಂಬುದೇ ಆಘಾತ. ಅವಳು ತನ್ನ ಬಳಿಗೆ ಬರಲೇ ಬೇಕು....

ಬರುತ್ತಾಳೆ. ಖಂಡಿತ ಬಂದೇ ಬರುತ್ತಾಳೆ ಅಂದುಕೊಂಡ. ಮುಂಬಯಿಯ ಆ ಜಗತ್ತಿನೊಳಗೆ ಕಾಲಿರಿಸಿ ಬಂದ ಮೇಲೆ.

ಹೆಸರು ಪ್ರವೀಣ.

ಇನ್ನೂ ಇಪ್ಪತ್ತೆರಡು ವರ್ಷ. ಮುಖದ ಮೀಸೆ ಕೂಡ ಸರಿಯಾಗಿಲ್ಲ. ಅಂಥವನನ್ನು ನೆಚ್ಚಬಹುದೇ! ಎಂದು ಒಂದು ಕ್ಷಣ ಹಿಂಜರಿಕೆಯಾಯಿತು.

'ಯಾವುದೇ ಸಾಕ್ಷಿ ಉಳಿಯಬಾರದು. ನಾನು ಇದನ್ನು ಮಾಡಿಸಿದೆ ಅನ್ನೋದು ಯಾವ ಕಾರಣಕ್ಕೂ ಬಹಿರಂಗವಾಗಬಾರದು....'

ಅವನು ನಕ್ಕುಬಿಟ್ಟಿದ್ದ.

'ಪ್ರವೀಣ ಏನೂ ಅಂತ ನಿಮಗೆ ಗೊತ್ತಿಲ್ಲ. ನಾಲ್ಕು ಜನರನ್ನ ಕೇಳಿ. ನಿಮಗೆ ಅಷ್ಟು ಅನುಮಾನ ಅನ್ನಿಸಿದರೆ ಕೆಲಸ ಆದ ಮೇಲೆ ದುಡ್ಡು ಕೊಡಿ. ಬರೀ ಒಂದು ಎಲೆ, ಅಡಿಕೆ ಜೊತೆಗೊಂದು ರುಪಾಯಿ ಕೈ ಮೇಲಿಟ್ಟು ಕೆಲಸ ಒಪ್ಪಿಸಿ ಸಾಕು' ಎರಡು ದಿನ ವಿಚಾರ ನಡೆಸಿದ ಮೇಲೆಯೇ ಅವನು ಪ್ರವೀಣನನ್ನು ನೆಚ್ಚಿ ಕೆಲಸ ವಹಿಸಿದ್ದು. ಅವನು ಈಗ ಕೆಲಸ ಮುಗಿಸಿ ಸಂತಸದ ಸುದ್ದಿ ತರುತ್ತಾನೆಂದು ಲಲಿತಮಹಲ್ ಹೊಟೆಲಿನ ರೂಮಿನಲ್ಲಿ ಕಾಯುತ್ತಾ ಇರುವುದು.

★★

ಕೆಲಸ ಒಪ್ಪಿಕೊಂಡ ಪ್ರವೀಣ ಮಾಡಿದ ಮೊದಲ ಕೆಲಸ ಎಂದರೆ, ಟ್ರಾವೆಲ್ ಏಜೆನ್ಸಿ ಒಂದರ ಮೂಲಕ ಮಡಿಕೇರಿಯ ವ್ಯಾಲಿವ್ಯೂ ಹೋಟೇಲಿನಲ್ಲಿ ಎರಡು

ರೂಂ ಬುಕ್ ಮಾಡಿಸಿದ. ಒಂದು ಸಮೀರ್ ಹೆಸರಲ್ಲಿ ಇನ್ನೊಂದು ಗೌತಂ 'ಎಂಬಾತನಿಗೆ. ರೂಮಿನ ಬಾಡಿಗೆ, ಅಲ್ಲಿನ ಇತರ ವೆಚ್ಚ ಎಲ್ಲ ಮುಂದಾಗಿಯೇ ಪಾವತಿಸಿ ರಶೀದಿ ಪಡೆದ. ಅಲೀಬಾಗ್‌ನ ಅಡ್ಡೆಯ ಬಳಿ ಎರಡು ಸಲ ಠಳಾಯಿಸುವ ಹೊತ್ತಿಗೆ ಕಂಡ ನಾಗರ್. ಹತ್ತಿರದ ಪಾನ್ ಶಾಪಿನವರೆಗೆ ನಡೆಯುವಷ್ಟರಲ್ಲಿ ಮಾತು ಮುಗಿಸಿದ್ದ. 'ಒಂದು ಸಣ್ಣ ಬೋರ್‌ನ, ಸೈಲೆನ್ಸರ್ ಲಗತ್ತಿಸಿದ ಪಿಸ್ತೂಲು ಬೇಕು' ಬೆಲೆ ತಲುಪಿಸಬಹುದಾದ ಸ್ಥಳ ಎರಡೂ ನಿಗದಿಯಾದವು. ಹಾಗೇ ಪಿಸ್ತೂಲೂ ಅವನ ಕೈ ಸೇರಿತು. ಅಂದು ಸಂಜೆ ಬಾಂದ್ರಾದ ಬುಕ್‌ಸ್ಟೋರ್‌ನಲ್ಲಿ ಹುಡುಕಿ, ಹುಡುಕಿ ನಾಲ್ಕು ಪುಸ್ತಕ ಆರಿಸಿಕೊಂಡು ಎರಡು ಪೆಂಗ್ವಿನ್ ಕಾದಂಬರಿಗಳು. ಇನ್ನೊಂದು ಶೇಕ್ಸ್‌ಪಿಯರ್‌ನ ಕಲೆಕ್ಟೆಡ್ ವರ್ಕ್ಸ್, ಮತ್ತೊಂದು ಬರ್ಡ್ಸ್ ಆಫ್ ಇಂಡಿಯಾ. ಒಂದೂವರೆ ಸಾವಿರ ಪುಟಗಳು ಚಂದವಾಗಿ ಮುದ್ರಿಸಿದ್ದ ದಪ್ಪ ಪುಸ್ತಕ. ಖೋಲಿಗೆ ಬಂದು ಕುಳಿತು ರಟ್ಟಿನ ಸಮೇತ ನೂರು ನೂರು ಹಾಳೆಗಳನ್ನು ಹಿಂದಕ್ಕೆ ಸರಿಸಿ, ಉಳಿದ ಹಾಳೆಗಳ ನಡುವೆ ತನ್ನ ಸಣ್ಣ ಪಿಸ್ತೂಲು ಕೂರುವಂತೆ ಸಣ್ಣ ಚಾಕುವಿನಿಂದ ಹಳ್ಳ ಒಂದನ್ನು ಮಾಡಿದ. ಪಿಸ್ತೂಲು ಸರಿಯಾಗಿ ಕೂರುವುದು ಖಚಿತವಾದ ಮೇಲೆ, ಪಿಸ್ತೂಲಿನ ಆಕಾರದ ಟೊಳ್ಳಿನ ಹಾಳೆಗಳು ಬಿಡಿಸಿಕೊಳ್ಳದಂತೆ ಫೆವಿಕಾಲ್ ಅಂಟಿಗೆ ಸವರಿದ. ರಾತ್ರಿ ಒಣಗಿದ ಮೇಲೆ ಅದರೊಳಗೆ ಪಿಸ್ತೂಲ್ ಇರಿಸಿ ರಟ್ಟನ್ನು ಹಿಂದಿನ ಹಾಗೆ ಇರಿಸಿ, ಎರಡು ರಟ್ಟು ಇಟ್ಟು ಪ್ಯಾಕ್ ಮಾಡಿದ.

ಮರುದಿನದ ಮುಂಜಾನೆ ಕೊರಿಯರ್‌ನಲ್ಲಿ ಅದು ಗೌತಂನ ಹೆಸರು, ವ್ಯಾಲಿವ್ಯೂ ಹೋಟೆಲಿನ ಕೇರಾಫ್ ಅಡ್ರೆಸ್ ಹೊತ್ತು ಪ್ರಯಾಣ ಆರಂಭಿಸಿತು.

ಸಂಜೆಯ ಹೊತ್ತಿಗೆ ಮಡಿಕೇರಿಯ ವ್ಯಾಲಿವ್ಯೂ ಹೋಟೆಲಿಗೆ ಫೋನ್ ಮಾಡಿ ತಾನು ಬುಕ್ಮಾಡಿದ ರೂಂ ಬಗ್ಗೆ ಖಚಿತಪಡಿಸಿಕೊಂಡು, ನಾನು ಹದಿನೈದು, ಹದಿನಾರು ಅಲ್ಲಿ ಇರ್ತೀನಿ. ಹಕ್ಕಿಗಳ ಅಧ್ಯಯನಕ್ಕಾಗಿ ಬರ್ತಾ ಇರೋದು. ಪುಸ್ತಕ ಅಥವಾ ಪೋಸ್ಟ್ ಏನಾದರೂ ನನ್ನ ಹೆಸರಿಗೆ ಬರಬಹುದು....' ಎಂದು ಎಚ್ಚರಿಸಿದ.

ಹದಿನಾಲ್ಕರ ಸಂಜೆ ಫ್ಲೈಟಿನಲ್ಲಿ ಮುಂಬಯಿಂದ ಬೆಂಗಳೂರಿಗೆ ಟ್ಯಾಕ್ಸಿ ಹತ್ತಿ ಎಂ.ಜಿ.ರೋಡಲ್ಲಿ ಇಳಿದು ಒಳ್ಳೆಯ ಹೋಟೆಲಲ್ಲಿ ಊಟ ಮಾಡಿದ. ಕ್ಯಾಬರೆ ನೋಡಿದ. ನಡುರಾತ್ರಿ ಸಮೀಪಿಸುವಾಗ, ಸಣ್ಣ ಕಿಟ್ ಬ್ಯಾಗ್ ಹಿಡಿದುಕೊಂಡು ವಿಶಾಲ ಎಂ.ಜಿ.ರಸ್ತೆಯಲ್ಲಿ ಸರಸರ ಹೆಜ್ಜೆ ಹಾಕುತ್ತಾ ಹೋಗಿ, ರಸ್ತೆಯ ಮಗ್ಗುಲಿಗೆ ನಿಲ್ಲಿಸಿದ್ದ ಟಾಟಾ ಸುಮೋ ಒಂದಕ್ಕೆ ಜೇಬಿನ ಕೀಲಿ ಕೈ ಹಾಕಿ ತಿರುಗಿಸಿದ. ಒಳಗೆ ಹತ್ತಿ ಕುಳಿತು ಡ್ರೈವ್ ಮಾಡಿಕೊಂಡು ಹೊರಟು ಬಿಟ್ಟ.

ಕೆಂಗೇರಿಯಾಚೆ ಮಣ್ಣು ರಸ್ತೆಯೊಂದರಲ್ಲಿ ಹೊರಳಿಸಿ, ಸ್ವಲ್ಪ ದೂರ ಹೋಗಿ, ಉಚ್ಚೆ ಹುಯ್ಯಲು ನಿಂತು ಆಚೀಚೆ ಯಾರೂ ಇಲ್ಲ ಎಂಬುದು ಗಮನಿಸಿ, ಸಣ್ಣದೊಂದು ಸ್ಕ್ರೂಡ್ರೈವರ್‌ನಿಂದ ನಂಬರ್ ಪ್ಲೇಟ್ ಕಳಚಿ, ಕಿಟ್ ಬ್ಯಾಗಲ್ಲಿ ತಂದಿದ್ದ ಇನ್ನೆರಡು ಪ್ಲೇಟುಗಳನ್ನು ಕ್ಷಣಾರ್ಧದಲ್ಲಿ ಜೋಡಿಸಿ ಮರಳಿ ಮುಖ್ಯ ರಸ್ತೆಗೆ ಬಂದು ಮೈಸೂರತ್ತ ಹೊರಟ.

ಮಡಿಕೇರಿಯ ವ್ಯಾಲಿವ್ಯೂ ಹೋಟೆಲಿನ ಮುಂದೆ ಪ್ರವೀಣ ಟಾಟಾ ಸುಮೋದಿಂದ ಇಳಿಯುವಾಗ ಬೆಳಗಿನ ಐದೂವರೆ.

★★

ಬೆಳಿಗ್ಗೆ ಸಣ್ಣದೊಂದು ನಿದ್ದೆ. ಮಧ್ಯಾಹ್ನದ ಊಟ. ಅನಂತರ ವಾಹನವೇರಿ ಮಂಗಳೂರು ಕಡೆಯ ಹೈವೇಗೆ ತಿರುಗಿದವನು, ಸ್ವಲ್ಪದೂರ ಸಾಗಿ, ಸರಿಯಾದ ಹಾದಿ ಗುರುತಿಸಿಕೊಂಡು ನಾಲಾಡಿ ಎಂಬ ಬೋರ್ಡಿದ್ದ ಕಡೆ ತಿರುಗಿಸಿದ. ಅಲ್ಲಿಂದಾಚೆ ನಾಲ್ಕು ಕಿಲೋಮೀಟರ್‌ಗೆ 'ಸಿರಿಮಂಗಳ' ಎಸ್ಟೇಟು. ಸುಮೋ ರಸ್ತೆ ಮಗ್ಗುಲಿಗೆ ನಿಲ್ಲಿಸಿ, ಕಿಟ್ ಬ್ಯಾಗ್‌ನಿಂದ ಬೈನಾಕ್ಯುಲರ್ಸ್ ತೆಗೆದು ಆಚೀಚೆ ನೋಡಲಾರಂಭಿಸಿದ.

ಸುಡುವ ಬಿಸಿಲಿನ ಎಲ್ಲ ಸ್ತಬ್ಧವಾಗಿತ್ತು. ಹತ್ತಿರದ ಮರವೇರಿ ಬೈನಾಕ್ಯುಲರ್ಸ್ ತಿರುಗಿಸಿದ. ಆಗ ಕಾಣಿಸಿತು. ಎಸ್ಟೇಟಿನ ಬಂಗಲೆ. ಮನೆಯ ಪೋರ್ಟಿಕೊದಲ್ಲಿ ಒಂದು ವ್ಯಕ್ತಿ. ಆತ ಕುಳಿತಿದ್ದು ಗಾಲಿ ಕುರ್ಚಿಯ ಮೇಲೆ. ಏನನ್ನೋ ಓದುತ್ತಾ ಇದ್ದ ಹಾಗಿತ್ತು. ಇಡೀ ಮನೆಯಲ್ಲಿ ಇನ್ನೊಬ್ಬರಿಲ್ಲ. ಒಂದೂವರೆ ತಾಸು ಕಳೆದರೂ ಇನ್ನೊಂದು ವ್ಯಕ್ತಿಯ ಸುಳಿವಿಲ್ಲ. ಬೈನಾಕ್ಯುಲರ್‌ನ ದೃಷ್ಟಿ ಇನ್ನಷ್ಟು ಸಂಯೋಜಿಸಿ ವ್ಯಕ್ತಿಯ ಮುಖ ನೋಡಿದ. ಜೇಬಿಂದ ಫೋಟೋ ತೆಗೆದು ಹೋಲಿಸಿಕೊಂಡ. ಮರ ಇಳಿದು, ಸುಮೋ ಏರಿ ವಾಪಸು ಬಂದುಬಿಟ್ಟ. ಹೋಟೆಲಿನವನು ಸಂಜೆ ವೇಳೆಗೆ ಕೊರಿಯರ್‌ನಿಂದ ಬಂದ ಪುಸ್ತಕ ಟ್ರೇನಲ್ಲಿ ತಂದು ಹಿಡಿದ. ಅದನ್ನೆತ್ತಿಕೊಂಡು ಸಣ್ಣ ಟಿಪ್ಸ್ ನೀಡಿ, 'ಇದೊಂದು ಒಳ್ಳೆ ಪುಸ್ತಕ. ಇಂಡಿಯನ್ ಬರ್ಡ್ಸ್ ಬಗ್ಗೆ ಬರೆದಿದ್ದಾರೆ' ಎನ್ನುತ್ತಾ ಕಟ್ಟಿದ್ದ ಪ್ಯಾಕೇಜ್ ಬಿಚ್ಚಿ ರೂಂ ಬಾಯ್‌ಗೆ ತೋರಿಸಿದ.


ರಾತ್ರಿ ಪುಸ್ತಕದೊಳಗೆ ಅಡಗಿಸಿಟ್ಟ ಪಿಸ್ತೂಲು ಎತ್ತಿಟ್ಟುಕೊಂಡ.

★★

ಮರುದಿನದ ಮಧ್ಯಾಹ್ನ ಮತ್ತೆ ಊಟ ಮುಗಿಸಿ ನಾಲಾಡಿ, ಸಿರಿ ಮಂಗಳ ಎಸ್ಟೇಟ್. ಅಲ್ಲಿ ಸೇರುವ ಹೊತ್ತಿಗೆ ಸಣ್ಣದೊಂದು ಮಳೆ ಆರಂಭವಾಯಿತು. ವಾಹನದ ಟೈರಿನ ಗುರುತುಗಳು ಮೂಡಬಾರದೆಂದು ಡಾಂಬರ ರಸ್ತೆಯಲ್ಲಿ ವಾಹನ ನಿಲ್ಲಿಸಿ ಕಾಯುತ್ತಾ ಕುಳಿತ. ಮೂರೂವರೆ ಹೊತ್ತಿಗೆ ಮಳೆ ನಿಂತು ಬಿಸಿಲಾಡಿತು. ಎಸ್ಟೇಟಿನ ಅಂಚಿನಲ್ಲಿ ಬೆಳೆದ ಹುಲ್ಲಿನ ಮೇಲೇ ಹೆಜ್ಜೆ ಇಡುತ್ತಾ, ಬಂಗಲೆಯ ಹತ್ತಿರ ಬಂದ ಮೇಲೆ, ಪೊದೆಗಳ ಬೇಲಿ ಜಿಗಿದು ಒಳ ಸೇರಿದ. ಮನೆಯ ಹಿಂಬಾಗಿಲಿಗೆ ಬಂದ. ಗೋಡೆಯಂಚಿನಲ್ಲಿ ನಡೆಯುತ್ತಾ ಪೋರ್ಟಿಕೋ ಕಾಣುವಂತೆ ಮೂಲೆಯಲ್ಲಿ ನಿಂತ. ಆತ ಹಿಂದಿನ ದಿನದ ಹಾಗೆ ಖಾಲಿ ಕುರ್ಚಿ ತಳ್ಳಿಕೊಂಡು ಬಂದ. ಮಳೆಬಿದ್ದು ಬಿಸಿಲಾಡುತ್ತಾ ಶುಭ್ರವಾಗಿದ್ದ ಆಕಾಶ ನೋಡುತ್ತಾ ಖುಷಿಯಾಗಿದ್ದ.

ಸದ್ದು ಮಾಡದೇ ಹೆಜ್ಜೆ ಇಟ್ಟು ಬಂದು ಎದುರು

ನಗು



ನಿನ್ನಯ ಮೊಗದಲ್ಲಿ
ನಗುವೇ
ಸೂರ್ಯ ರಶ್ಮಿಯಂತೆ
ಚಂದ್ರನ ಹೊಳಪಂತೆ
ಅನೇಕಾನೇಕ ತಾರೆಗಳು
ಮಿಂಚು ಚೆಲ್ಲುತ್ತಿರೆ
ಮತ್ತೇಕೆ ಬೇಕು
ಹಬ್ಬಕ್ಕೆ ದೀಪಗಳ
ಅಲಂಕಾರ.

■ ರಾಜಶ್ರೀ ವಿನಾಯಕ ಗುಮಾಸ್ತೆ

ಗಂಡ - ಹೆಂಡತಿ

ಗಂಡ : ಲೇ ಅಡುಗೆ ಆಯ್ತೇನೇ?
ಹೆಂಡತಿ : ಇಲ್ಲಾಂದ್ರೇ....
ಗಂಡ : ಬೇಗ ರೆಡಿ ಮಾಡು ಇಲ್ಲ ಅಂದ್ರೆ, ನಾನು ಹೋಟೆಲಿಗೆ ಹೋಗ್ತೀನಿ.
ಹೆಂಡತಿ : ಒಂದು ಹತ್ತು ನಿಮಿಷ ಕಾಯ್ತೀರಾ?
ಗಂಡ : ಹತ್ತು ನಿಮಿಷದಲ್ಲಿ ಅಡುಗೆ ಆಗುತ್ತೇನೇ?
ಹೆಂಡತಿ : ಇಲ್ಲ. ನಾನೂ ಡ್ರೆಸ್ ಛೇಂಜ್ ಮಾಡ್ಕೊಂಡು ನಿಮ್ಮ ಜೊತೇಲೇ ಬರ್ತೀನ್ರೀ....!

★

ಪತ್ನಿ : ಅವರು ನೋಡಿ. ಎಷ್ಟು ಅನ್ಯೋನ್ಯವಾಗಿದಾರೆ. ಆತ ಪ್ರತಿದಿನ ಆಕೆಗೆ ಹೂ ತಂದು ಮುಡಿಸ್ತಾನೆ. ನೀವು ಹಾಗೆ ಮಾಡೋಕೆ ಏನು?
ಪತಿ : ಮಾಡಬಹುದು. ಆದರೆ ಅವಳ ಗಂಡ ಸುಮ್ನೆ ಇರ್ತಾನೇನೇ?

ನಿರ್ದೇಶಕ : ನೀವೀಗ ಮೂರನೇ ಮಹಡಿಯಿಂದ ಕೆಳಗೆ ಹಾರಬೇಕು.
ನಟ : ಏನಾದರೂ ಅಪಾಯ ಆದರೆ.
ನಿರ್ದೇಶಕ : ಭಯಪಟ್ಟುಕೋಬೇಡಿ. ಇದೇ ಸಿನಿಮಾದ ಕೊನೇ ದೃಶ್ಯ.

ನಿಂತ ಪ್ರವೀಣ.ಜೇಬಿಂದ ತೆಗೆದ ಸೈಲೆನ್ಸರ್ ಲಗತ್ತಿಸಿದ ಪಿಸ್ತೂಲು. ಅದನ್ನು ಕಂಡೇ ಕುರ್ಚಿಯಲ್ಲಿದ್ದ ಆಸಾಮಿ ಬಣ್ಣಗೆಟ್ಟ ಆ ಕಾರಲ್ಲಿ, ಸಣ್ಣದೊಂದು ಸದ್ದುಗುಳಿ ಪಿಸ್ತುಲಿಂದ ಗುಂಡು ಹಾರಿತು. ಕುರ್ಚಿಯಲ್ಲಿ ಕುಳಿತವನ ಹಣೆಯ ನಡುವೆ ತೂರಿದ ಗುಂಡು. ಸಣ್ಣದೊಂದು ಚೀತ್ಕಾರ....

★★

ಮೈಸೂರು ಹೊರವಲಯದ ಡ್ಯೂ ಟ್ರಾಪ್ ಇನ್‌ನ ಡ್ರೈವ್ ವೇ ಒಳಗೆ ಬಂದ ಕಾರು. ಇಂಜಿನ್ ತಣ್ಣಗಾಗಿ ಎರಡು ನಿಮಿಷ ಕಳೆದ ಮೇಲೆ ಬಂದ ವೇಟರ್.

'ಒಂದು ತಣ್ಣನೆಯ ಬಿಯರ್' ಹೇಳಿದ ಶ್ರೀಕಾಂತ.

ಒಂದು ಮಗ್ ಬಿಯರ್ ಮುಗಿಸುವಾಗ ಬಂದ ಟಾಟಾ ಸುಮೋ ಮಗ್ಗುಲಲ್ಲಿಯೇ ನಿಂತಿತು. ಇಳಿದು ಬಂದ ಪ್ರವೀಣ.

ಅವನ ಕೈಯಲ್ಲಿದ್ದ ಕಿಟ್ ಬ್ಯಾಗ್ ಖಾಲಿಯಾಗಿತ್ತು.

ಪರಿಚಿತರ ಜೊತೆ ಹರಟುವಂತೆ ಕಾರಿನ ಬಾಗಿಲಿಗೆ ಒರಗಿ ನಿಂತು ಮಾತಾಡತೊಡಗಿದ.

'ಮುಗಿಯಿತು ಕೆಲಸ'

'ವೆಲ್‌ಡನ್....'

ಇನ್ನೊಂದು ಬಾಟಲ್ ಬಿಯರ್ ಬಂತು. ವೇಟರ್ ಅತ್ತ ಹೋದಾಗ ಪ್ರವೀಣ ಖಾಲಿಕಿಟ್ ಬ್ಯಾಗ್ ಕಿಟಕಿಯೊಳಗೆ ತೂರಿದ. ಹಣ ತುಂಬಿದ ಬ್ಯಾಗ್ ಈಚೆ ಬಂತು.

'ಏನೂ ತೊಂದರೆ ಆಗಲಿಲ್ಲ ಅಲ್ಲಾ!'

'ಇಲ್ಲ ಸಾಬ್'

'ನಾನು ಹೇಳಿದ ಹಾಗೆ ಎಲ್ಲಾ ಮಾಡಿದೆ ತಾನೆ!'

'ಓಹೋ!'

ಮುಂದಿನ ಮಾತು ಬೇಡವೆಂಬಂತೆ ತನ್ನ ವಾಹನದತ್ತ ಹೊರಟು ವಾಹನ ಏರಿ ಡ್ರೈವಿಂಗ್ ಸೀಟಿನಲ್ಲಿ ಕುಳಿತ.

'ಸಾಕ್ಷಿಯಾವುದೂ ಉಳಿಸಲಿಲ್ಲ ತಾನೆ!'

ಕೂತಲ್ಲಿಂದಲೇ ಇವನತ್ತ ಬಾಗಿ

'ಸಾಬ್, ಪ್ರವೀಣ ಎಂದರೆ ಒಪ್ಪಿಕೊಂಡ ಕೆಲಸ ಯಾವತ್ತೂ ಸಾಫ್. ಒಂದೇ ಒಂದು ಸಾಕ್ಷಿ ಉಳಿದುಬಿಡುತ್ತಿತ್ತು....'

'ಹಾಂ....'

'ಕೆಲಸ ಮುಗಿಸಿದ್ದೆ. ಮನೆಯೊಳಗಿಂದ ಅನಿರೀಕ್ಷಿತ ಹುಡುಗಿಯೊಬ್ಬಳು ಬಂದು ಬಿಟ್ಟಳು. ಕೊಲ್ಲುವ ಮನಸ್ಸಾಗಲಿಲ್ಲ. ಆದರೆ ಒಪ್ಪಿಕೊಂಡಿದ್ದೆನಲ್ಲ! ಸಾಕ್ಷಿ ಉಳಿಯಬಾರದು ಎಂದು, ಇನ್ನೊಂದು ಗುಂಡು ಖರ್ಚಾಯಿತು ಅಷ್ಟೇ, ಎಲ್ಲಾ ಸಾಫ್....'

ಥಟ್ಟನೆ ಸ್ಟಾರ್ಟ್ ಆದ ಟಾಟಾಸುಮೋ ಹೊರಗೆ ಜಿಗಿದು ವೇಗದಲ್ಲಿ ಹೊರಟು ಮರೆಯಾಯಿತು.

■ ಶ್ರೀಪಾದ ದೇಸಾಯಿ

(ಫ್ರೆಡ್ರಿಕ್ ಪಾರ್‌ಸಿತ್‌ನ ಕತೆಯೊಂದರಿಂದ ಪ್ರೇರಿತ)


ಶಾಕ್ !

ಮಾಲೀಕ : ನಮ್ಮ ಹೋಟೆಲಲ್ಲಿ ಎಲ್ಲಾ ಐಟಮ್ಸ್ ಕರೆಂಟಿಂದಲೇ ತಯಾರಿಸೋದು ಸಾರ್.

ಗಿರಾಕಿ : ಹೌದಾ! ಅದಕ್ಕೇ ಇರಬೇಕು. ಬಿಲ್ ಮುಟ್ಟಿದರೇ ಶಾಕ್ ಹೊಡೆಯುತ್ತೆ.

ಗಕಲೆಯ ರಾಯಭಾರಿ

ಕು.ಶಿ.



ಅವರು ಕು.ಶಿ. ಎಂದೇ ನಾಡಿನ ಎಲ್ಲೆಡೆ ಪರಿಚಿತ. ಸಾಹಿತ್ಯ, ರಂಗಕಲೆಯಲ್ಲಿ ನಾನಾ ಮುಖದ ಚಟುವಟಿಕೆ ಅವರದು. ಇತ್ತೀಚೆಗೆ 75 ತುಂಬಿದ್ದರೂ ನೀಗದ ಉತ್ಸಾಹ. ಯಾವುದೊಂದನ್ನೂ ಕಟ್ಟುವುದೊಂದೇ ಮುಖ್ಯವಲ್ಲ, ಅದು ನಿರಂತರ ನಡೆಯುವಂಥ ಶಕ್ತಿ, ಚೈತನ್ಯ ಧಾರೆ ಎರೆಯಬೇಕೆಂಬುದೇ ಅವರ ಕಾಳಜಿ.

ಕನ್ನಡ ಸಾಹಿತ್ಯ ಪರಿಸರದಲ್ಲಿ ಕು.ಶಿ.ಯವರನ್ನು ಕಂಡಾಗ ತಟ್ಟನೆ ನೆನಪಾಗುವುದು ವಿ.ಸೀ. ಅವರ ವ್ಯಕ್ತಿತ್ವ. ವಿಸೀಯವರಂತೆಯೇ ಅರ್ಥಶಾಸ್ತ್ರಜ್ಞರಾಗಿ, ಕನ್ನಡ ಸಾಹಿತ್ಯ ಕೃಷಿಯಲ್ಲಿಯೇ ಬೆಳೆದರೂ ಕು.ಶಿ.ಯವರದ್ದು ಬಹುಮುಖ ಪ್ರತಿಭೆ. ಈ ಪ್ರತಿಭೆಯಿದ್ದವರೆಲ್ಲಾ ಒಂದು ಕೇಂದ್ರ-ಸಂಘಟನೆಯನ್ನು ಕಟ್ಟಿ ಬೆಳೆಸುವ ಕಾರ್ಯದಕ್ಷತೆಯನ್ನು ರೂಢಿಸಿಕೊಳ್ಳುವ ವ್ಯಕ್ತಿಗಳು ಸಿಗುವುದು ತುಂಬಾ ವಿರಳ. ಆದರೆ ಕು.ಶಿ.ಯವರಿಗೆ ಅದು ಸಾಹಿತ್ಯದೊಂದಿಗೆ ಸಿದ್ಧಿಸಿದೆ. ಸಂಘಟನಾ ಕ್ಷೇತ್ರವೇ ಒಂದು ದೃಷ್ಟಿಯಲ್ಲಿ ವಿಭಿನ್ನ ಪ್ರಪಂಚ. ಅದಕ್ಕೆ ಉದಾರವಾದ-ಪರಿಶುದ್ಧವಾದ ಹೊಣೆಗಾರಿಕೆಯಿಂದ ಎಲ್ಲವನ್ನು ಎದುರಿಸುವ ಶಕ್ತಿ ಹೊಂದಿರಬೇಕಾಗುತ್ತದೆ. ಅಂತಹ ಗುಣಗಳನ್ನು ಹೇರಳವಾಗಿ ಕು.ಶಿ.ಯವರಲ್ಲಿ ಕಾಣಬಹುದು. ಕೇವಲ ಒಂದು ಸಂಸ್ಥೆಯನ್ನು ಸ್ಥಾಪಿಸಿ ಬಿಟ್ಟರೆ ಸಾಲದು, ಅದು ನಿರಂತರ ಕಾರ್ಯನಿರ್ವಹಿಸುವ ಚೈತನ್ಯದಾಯಕ ಆಧಾರವಾಗಿರಬೇಕು. ಆಗ ಮಾತ್ರ ಪ್ರತಿಫಲ ದೊರೆಯಲು ಸಾಧ್ಯ. ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾದ ಹರಿದಾಸ ಭಟ್‌ರವರ ಕಾರ್ಯಸಾಧನೆಯನ್ನು ಮನಗಂಡು 1999ನೇ ಸಾಲಿನ ಪೊಳಲಿ ಶೀನಪ್ಪ ಹೆಗ್ಗಡೆ ಪ್ರಶಸ್ತಿಯನ್ನು ಅಕ್ಟೋಬರ್ 17ರಂದು ಪ್ರದಾನ ಮಾಡಿದ್ದಾರೆ.

ಒಬ್ಬ ವ್ಯಕ್ತಿ ಏನೆಲ್ಲಾ ಕಾರ್ಯಗಳನ್ನು ಮಾಡಬಲ್ಲ ಎಂಬುದಕ್ಕೆ ಇವರೇ ಸಾಕ್ಷಿ. ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿ, ಲೇಖಕರಾಗಿ, ಅಂಕಣ ಬರಹಗಾರರಾಗಿ, ಒಂದು ಸಂಸ್ಥೆಯ ನಿರ್ದೇಶಕರಾಗಿ, ಸಂಘಟನಾಕಾರರಾಗಿ ಹೀಗೆ ಹಲವು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅಂತಹವರ ಬದುಕೇ ಇಂದು ಯುವ ಪೀಳಿಗೆಗೆ ದಾರಿ ದೀಪವಾಗಿದೆ. ಇವರು ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿದ್ದರೂ, ಬರಹದಲ್ಲಿ ತಮ್ಮದೇ ಆದ ಶೈಲಿಯನ್ನು ಸ್ಫುಟವಾಗಿ ಗುರುತಿಸುವಷ್ಟು ಹದ ಸಾಧಿಸಿದ್ದಾರೆ. ಇವರ ವಿಚಾರಗಳು ಎಷ್ಟು ನೇರವೋ ಅಷ್ಟೇ ಸ್ಪಷ್ಟ. ಗಟ್ಟಿಮಾತಿನ ವಿಚಾರವನ್ನು ಧೈರ್ಯವಾಗಿ ಪ್ರಾಮಾಣಿಕವಾಗಿ ಬರೆಯುವ ಲೇಖನ, ವಸ್ತುನಿಷ್ಠೆಯ ತಳಪಾಯವನ್ನು ಎತ್ತಿ ತೋರಿಸುವ ವಿಚಾರಧಾರೆ ಇವರ ಬರಹದಲ್ಲಿ ಸ್ಪಷ್ಟ ಗೋಚರಿಸುತ್ತದೆ.

ಕು.ಶಿ.ಯವರಿಗೆ ನೆನಪಿನ ಶಕ್ತಿ ದೈವದತ್ತ ಕೊಡುಗೆ. ಕನ್ನಡದ ಪ್ರತಿಯೊಬ್ಬ ಸಾಹಿತಿ, ಕವಿಗಳ ಬರಹವೆಲ್ಲಾ ನೆನಪಿನಲ್ಲಿದೆ. ಯಾವುದೇ ವಿಷಯ ತೆಗೆದುಕೊಂಡರೂ ಅರಳು ಹುರಿದಂತೆ ಲೀಲಾಜಾಲವಾಗಿ ವಿಷಯ ನಮ್ಮ ಮುಂದೆ ಇಡುತ್ತಾರೆ. ಅಷ್ಟೊಂದು ಜ್ಞಾನ ಸಂಪಾದಿಸಿಕೊಂಡಿದ್ದಾರೆ. ಇವರ ಜ್ಞಾನ ಸಾಹಿತ್ಯಕ್ಕೆ ಮಾತ್ರ ಸೀಮಿತವಲ್ಲ, ಕಲೆಗೂ ಪೂರಕವಾದ ವಿಚಾರಗಳೂ ಕೂಡ ಬಹಳಷ್ಟು ಅವರಲ್ಲಿದೆ. ಕು.ಶಿ.ಯವರ ಮಾತಿನಿಂದ ಸಾಂದರ್ಭಿಕ ವಿಷಯ ಪ್ರಸ್ತಾಪಿಸುವುದೇ ಆದೊಂದು ರೀತಿಯ ಖುಷಿ.

ಉಡುಪಿ 'ಜಾನಪದ ಕಾಶಿ' ಎಂದೇ ಪ್ರಸಿದ್ಧಿ ಹೊಂದುತ್ತಿರುವ ಊರು. ಇಲ್ಲಿ ಹಲವಾರು ಕಲೆಗಳು ಒಟ್ಟಾಗಿ ಮೇಳೈಸುತ್ತಿವೆ. ಜಾನಪದ ಕಲೆಗೆಂದೇ 'ಪ್ರಾದೇಶಿಕ ಜಾನಪದ ರಂಗ ಕಲೆಗಳ ಅಧ್ಯಯನ ಕೇಂದ್ರ'ವು (ಆರ್.ಆರ್.ಸಿ) ಕು.ಶಿ.ಯವರ ನಿರ್ದೇಶನದಲ್ಲಿ 1984ರಲ್ಲಿಯೇ ಸ್ಥಾಪಿತಗೊಂಡಿತು. ಈ ರಂಗ ಕಲೆ ಕೇವಲ ದಕ್ಷಿಣ ಕನ್ನಡಕ್ಕೆ ಮಾತ್ರ ಸೀಮಿತವಾಗದೇ, ಇಡೀ ಭಾರತ ದೇಶದ ಉದ್ದಗಲಕ್ಕೂ ಹಬ್ಬಿದ ಆಕರ ಸಂಸ್ಥೆ. ಅವಸಾನಗೊಳ್ಳುತ್ತಿರುವ ಜಾನಪದ ಕಲೆಗಳನ್ನು ಆಡಿಯೋ-ವಿಡಿಯೋ ಹಾಗು ಕಪ್ಪು ಬಿಳುಪಿನ, ವರ್ಣಗಳ ಛಾಯಾ ಚಿತ್ರಗಳಲ್ಲಿ ಸೆರೆ ಹಿಡಿದು ಕಲೆಯ ಇತಿಹಾಸದಲ್ಲಿ ದಾಖಲಿಸಲ್ಪಡುತ್ತದೆ. ಇಲ್ಲಿ ಕಂಪ್ಯೂಟರುಗಳು ಕೂಡ ಕೆಲಸ ನಿರ್ವಹಿಸುತ್ತವೆ. ಈ ಸಂಸ್ಥೆ ವಿದ್ಯಾರ್ಥಿಗಳಿಗೆ, ವಿದ್ವಾಂಸರಿಗೆ ಎಲ್ಲಾ ಜಾನಪದ ಮಾಧ್ಯಮವನ್ನು ಶಾಸ್ತ್ರೀಯವಾಗಿ ಅಭ್ಯಸಿಸಲು ವಿಶ್ವವಿದ್ಯಾಲಯದ ಮಟ್ಟದಲ್ಲಿ ಅನುವುಮಾಡಿಕೊಟ್ಟಿದೆ.

ಕು.ಶಿಯವರು ಸಾಹಿತ್ಯ-ಆಡಳಿತ ಕೌಶಲ್ಯದ ಪುರುಷ ಮಾತ್ರವಲ್ಲ, ಒಳ್ಳೆಯ ವಾಗ್ಮಿ ಕೂಡ. ನಿವೃತ್ತಿಯ ನಂತರ ವಿರಮಿಸದೇ ಸದಾ ಚಟುವಟಿಕೆಯಲ್ಲಿ ಮಗ್ನ ವ್ಯಕ್ತಿ. ಅಮೇರಿಕಾ, ಇಂಗ್ಲೆಂಡ್, ಇಟಲಿ, ಜಪಾನ, ರಷ್ಯಾ, ಯುಗೋಸ್ಲೋವಿಯಾ, ಹಾಂಗ್‌ಕಾಂಗ್, ಅಬುಧಾಬಿ, ಸಿಂಗಪುರ್, ಹಾಲೆಂಡ್, ಬೆಲ್ಜಿಯಂ ಮತ್ತು ಫಿನ್‌ಲ್ಯಾಂಡ್ ಮುಂತಾದ ದೇಶಗಳ ಪರ್ಯಟನೆ ಮಾಡಿದ ಅನುಭವ ಅವರದ್ದು. ದೇಶ ತಿರುಗಿದಷ್ಟೇ ಓದಿಕೊಂಡಿದ್ದಾರೆ. ಎಲ್ಲಾ ವಿಭಾಗದಲ್ಲೂ ಜ್ಞಾನ ಸಂಪಾದಿಸಿಕೊಂಡ ಹರಿದಾಸ ಭಟ್‌ರನ್ನು ನಾಡಿನ ಸಾಹಿತಿಗಳು-ವಿದ್ವಾಂಸರುಗಳು ಸಹ ಇವರನ್ನು 'ಲೋಕಮಿತ್ರ'ರೆಂದೇ ಹಾರೈಸಿದ್ದಾರೆ.

ಕು.ಶಿ. 1924ನೇ ಇಸವಿಯ ಒಂದು ಏಕಾದಶಿ ದಿವಸ ಜನಿಸಿದ್ದರು. ಇದೀಗ ಅವರಿಗೆ 75 ವರ್ಷ. ಅವರಿಗೆ 'ಅಸ್ತಮಾ'ವೆಂಬ ಮಾರಿ ಬೆನ್ನು ಹಿಡಿದಿದ್ದಾಳೆ. ನಿಜ ಜೀವನದಲ್ಲಂತೂ ಹಲವು ನೋವು-ಕಷ್ಟಗಳನ್ನು ವಿಶೇಷವಾಗಿ ಅನುಭವಿಸಿದ್ದರೂ, ಸಹ ತಮ್ಮ ಪ್ರತಿಭೆಯನ್ನು ಒಂದೇ ಕಡೆಗೆ ಸೀಮಿತಗೊಳಿಸದೇ, ಒಂದು ಮರ ಟಿಸಿಲುಗಳಾಗಿ ಹರಡಿ ಹಲವಾರು ಕ್ಷೇತ್ರದ ವಿಷಯಗಳ ಅಭಿವೃದ್ಧಿಗೆ ಚಾಚಿಕೊಂಡಿದೆ. ಇದೀಗ ಸಾಹಿತ್ಯ ಅವರ ಜೀವನದ ಅಂಗವಾಗಿದೆ.

ಕನ್ನಡದಲ್ಲಿ ಕು.ಶಿ.ಯವರು 30ಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದಾರೆ. ಜೊತೆಗೆ ಕವನ ಸಂಗ್ರಹ, ಪ್ರಬಂಧ, ಸಂಕಲನಗಳನ್ನು ಕೂಡಾ ರಚಿಸಿದ್ದಾರೆ. 'ಕಲಾವಿದ ಕಟ್ಟಿಂಗೇರಿ ಕೃಷ್ಣ ಹೆಬ್ಬಾರರ' ಕಲೆ ಮತ್ತು ಬದುಕು, ಜಗದಗಲ, ಇಟಲಿಯಾ ನಾನು ಕಂಡತೆ, ರಷ್ಯದಲ್ಲಿ ಡೊಳ್ಳಿನ ದಿಗ್ವಿಜಯ, ಲೋಕಾಭಿರಾಮದ ಆರು ಸಂಪುಟಗಳು, ಕಾರಂತ ಪ್ರಪಂಚ ಮತ್ತು ಗೋವಿಂದ ಪೈಯವರ ಪತ್ರಗಳು ಇವು ಕು.ಶಿಯವರ ಕೃತಿಗಳು. 1982ರಲ್ಲಿ ಕರ್ನಾಟಕದ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ 1985ರಲ್ಲಿ ಜಾನಪದ ಅಧ್ಯಯನಕ್ಕಾಗಿ ಫಿನ್‌ಲ್ಯಾಂಡಿನ 'ಕಾಲೆವಾಲಾ' ಕಂಚಿನ ಪದಕ, 1989ರಲ್ಲಿ ವಿಶ್ವಮಾನವ, 1999ರಲ್ಲಿ ಕರ್ನಾಟಕ ಸರಕಾರದ ಪ್ರಶಸ್ತಿ, ಅದೇ ವರ್ಷ ಆದಿಚುಂಚನಗಿರಿಯಲ್ಲಿ ನಡೆದ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷಗಿರಿ ಪೀಠ. ಅವರ ಬದುಕಿನಲ್ಲಿ ಸನ್ಮಾನ-ಪುರಸ್ಕಾರಗಳು ಹಲವಾರು. ಕು.ಶಿಯವರ ಸಹಧರ್ಮಿಣಿ 'ಸುಮತಿ' ಎಲ್ಲರ ರೀತಿಯಲ್ಲೂ ಪ್ರೇರಣಾ ಶಕ್ತಿ ಸ್ವರೂಪಿಣಿ. ಇವರ ಮೂವರು ಮಕ್ಕಳಲ್ಲಿ, ಇಬ್ಬರು ಗಂಡು ಮಕ್ಕಳು ತಂದೆಯ ಜಾಡಿನಲ್ಲಿ ಬೆಳೆಯದಿದ್ದರೂ, ಹೋಟೆಲ್ ಉದ್ಯಮದಲ್ಲಿ ತೊಡಗಿಸಿಕೊಂಡು ಯಶ ಕಂಡಿದ್ದಾರೆ. ಮೂರನೇ ಮಗ 'ಹರ್ಷವರ್ಧನ' ಮಾತ್ರ ತಂದೆಯೊಂದಿಗೆ ಆರ್.ಆರ್.ಸಿಯಲ್ಲಿಯೇ ವಿಡಿಯೋ ಗ್ರಾಫರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

■ ಕಾವೆಂಶ್ರೀ

ಹಿಪ್ಪುನೇರಳೆ ಸೊಪ್ಪು ನೂತನ ಫಾಸ್ಟ್‌ಫುಡ್



ರೇಷ್ಮೆ ಹುಳುಗಳಿಗೆ ಮಾತ್ರ ಆಹಾರವಾಗಿದ್ದ ಹಿಪ್ಪು ನೇರಳೆ ಸೊಪ್ಪು ಹಸಿದ ಜನರ ತಟ್ಟೆಗೂ ಬರಲಿದೆ. ರಷಿಯಾ ಮತ್ತು ದಕ್ಷಿಣ ಅಮೇರಿಕಾದ ದೇಶಗಳಲ್ಲಿ ಈಗಾಗಲೇ ಹಿಪ್ಪು ನೇರಳೆ ಸೊಪ್ಪಿನಿಂದ ನಾನಾ ಖಾದ್ಯ ಪದಾರ್ಥಗಳನ್ನು ತಯಾರಿಸುತ್ತಾ ಇದ್ದಾರೆ. ಮುಂದಿನ ಫಾಸ್ಟ್‌ಫುಡ್ ಈ ಸೊಪ್ಪು ಆದರೆ ಆಶ್ಚರ್ಯ ಏನಿಲ್ಲ!

ರೇಶ್ಮೆ ಉದ್ಯಮದ ಪ್ರಮುಖ ಅಂಗ ಹಿಪ್ಪು ನೇರಳೆ. ಕಲಿಯುಗದ ಕಲ್ಪವೃಕ್ಷ ಎನಿಸಿದ ಈ ಸಸ್ಯ ಆಧುನಿಕ ಯುಗದಲ್ಲಿ ವಿವಿಧೆಡೆ ವಾಸಿಸುತ್ತಿರುವ ಜನಕ್ಕೆ ಚಿರಪರಿಚಿತ. ಸಸ್ಯ ಸಂಕುಲದಲ್ಲಿಯೆ ಮಾರೇಸಿ ಕುಟುಂಬದ ಮೋರಸ್ ಪ್ರಭೇದಕ್ಕೆ ಸೇರಿರುವ ಹಿಪ್ಪುನೇರಳೆ ರೇಷ್ಮೆ ಹುಳುವಿನ (ಬಾಂಬಿಕ್ಸ್ ಮೋರಿ) ಏಕೈಕ ಆಹಾರ. ವಿವಿಧ ವಾತಾವರಣದ ವೈವಿಧ್ಯತೆಗೆ ಅನುಗುಣವಾಗಿ ಹೊಂದಿಕೊಂಡು ಬೆಳೆಯುವ ಈ ಸಸ್ಯ ಇತ್ತೀಚಿನ ದಿನಗಳಲ್ಲಿ ರೇಶ್ಮೆ ಹುಳದ ಹೊಟ್ಟೆಯನ್ನು ತುಂಬಿಸುವುದರ ಜೊತೆಗೆ ಮನುಷ್ಯನ ಬಾಯಿ ಚಟ ತೀರಿಸುವ ಶೀಘ್ರ ಆಹಾರವಾಗಿದೆ (ಫಾಸ್ಟ್ ಫುಡ್).


ಉಪಯುಕ್ತ ಪೌಷ್ಠಿಕಾಂಶ ಹೊಂದಿರುವ ಈ ಸಸ್ಯ ಎಲೆ ಉಪಯುಕ್ತತೆ ಬಗ್ಗೆ ನಾನಾ ಉಲ್ಲೇಖಗಳಿವೆ. ಜೀವರಸಾಯನ ತಜ್ಞರ, ರೇಶ್ಮೆ - ಪ್ರಾಣಿ - ಸಸ್ಯಶಾಸ್ತ್ರಜ್ಞರ, ಆಹಾರ ತಜ್ಞರ ಮತ್ತು ಸಂಶೋಧಕರ ಪ್ರಯತ್ನದ ಫಲವಾಗಿ ಇಂದು ವಿಶ್ವದಲ್ಲಿನ ಅತಿ ಮುಂದುವರೆದ ಮತ್ತು ಮುಂದುವರೆಯುತ್ತಿರುವ ರಾಷ್ಟ್ರಗಳಲ್ಲಿ ವಾಸಿಸುವ ಜನ ಈ ಹಿಪ್ಪು ನೇರಳೆ ಎಲೆಯನ್ನು ಆಹಾರವನ್ನಾಗಿ ಉಪಯೋಗಿಸುವತ್ತ ಕಣ್ಣು ಹಾಯಿಸಿದ್ದಾರೆ.


ರೇಷ್ಮೆ ಉದ್ಯಮದಲ್ಲಿ, ನಾನಾ ಬಗೆಯ ಚಟುವಟಿಕೆಗಳಿಂದ ಉತ್ಪತ್ತಿಯಾಗುವ ಅನುಪಯುಕ್ತ ಪದಾರ್ಥಗಳನ್ನು ಉಪಯೋಗಿಸಿಕೊಂಡು ಉಪಯುಕ್ತ ವಸ್ತುಗಳನ್ನು ತಯಾರಿಸುವ ಬಗ್ಗೆ ವರದಿಗಳಿವೆ. ಅಂತಹ ಉಪಯುಕ್ತ ಪದಾರ್ಥಗಳ ತಯಾರಿಕೆಯಲ್ಲಿ ಹಿಪ್ಪು ನೇರಳೆ ಸೊಪ್ಪಿನ ಮಸಾಲೆ ತುಂಬಾ ಹೆಸರುವಾಸಿಯಾಗಿದೆ. ಇತ್ತೀಚೆಗೆ ಆಹಾರ ತಜ್ಞರು ಹಿಪ್ಪು ನೇರಳೆ ಸಸ್ಯದ ಎಲೆಯಲ್ಲಿರುವ ಪೌಷ್ಠಿಕಾಂಶಗಳ ಬಗ್ಗೆ ವರದಿ ಮಾಡಿದ್ದಾರೆ. ಎಳೆಯ ಸೊಪ್ಪಿನಲ್ಲಿ ಶೇ.6 ರಿಂದ 6.8ರಷ್ಟು ಪ್ರೊಟೀನ್, ಶೇ. 4ರ ಶರ್ಕರ ಅಂಶ, ಶೇ.0.6. ಪಿಷ್ಟವು ಮನುಷ್ಯನ ಆಹಾರಕ್ಕೆ ಬೇಕಾದವುಗಳಾಗಿವೆ. ಇವುಗಳ ಜೊತೆಗೆ ಅತ್ಯುಪಯುಕ್ತ ಜೀವ ಸತ್ವಗಳಾದ ಎ,ಬಿ,ಸಿ ಮತ್ತು ಡಿ ಇರುವುದು ತಿಳಿದುಬಂದಿದೆ. ಇವುಗಳಲ್ಲಿ ಜೀವಸತ್ವ'ಸಿ' ಅಂಶವು ತುಂಬಾ ಹೆಚ್ಚಾಗಿರುತ್ತದೆ. ಕ್ಯಾಲ್ಸಿಯಂ, ಪಾಸ್ಫರಸ್, ಸಿಲಿಕಾನ್, ಮ್ಯಾಂಗನೀಸ್, ಮೆಗ್ನಿಶಿಯಂ, ಕಬ್ಬಿಣ, ತಾಮ್ರ ಮತ್ತು ಸತುವಿನಂತಹ ಪದಾರ್ಥಗಳು ಮನುಷ್ಯನ ದೇಹಕ್ಕೆ ಬೇಕಾಗುವ ಉಪಯುಕ್ತ ಲವಣಾಂಶಗಳಾಗಿವೆ. ಅಗತ್ಯಕ್ಕನುಗುಣವಾದ ಆಹಾರ ತಯಾರಿಕೆಯಲ್ಲಿ ತುಂಬಾ ಉಪಯುಕ್ತವಾಗಿರುವ ಈ ಎಲ್ಲ ಪೌಷ್ಟಿಕಾಂಶಗಳ ಬಳಕೆಯಿಂದ ಸುಮಾರು 3000 ಕ್ಯಾಲೋರಿಯಷ್ಟು ಶಕ್ತಿ ಪಡೆಯಬಹುದು. ಈ ಪ್ರಮಾಣದ ಶಕ್ತಿಯು ಮನುಷ್ಯನು ಸಾಮಾನ್ಯ ಚಟುವಟಿಕೆಯಿಂದಿರುವಾಗ ಬೇಕಾಗುವ ಶಕ್ತಿಯಷ್ಟೇ ಇರುತ್ತದೆ ಎಂದು ತಜ್ಞರು ವರದಿ ಮಾಡಿದ್ದಾರೆ.

ಹಿಪ್ಪು ನೇರಳೆಯ ಎಲೆಗಳನ್ನು ಉಪಯೋಗಿಸಿ ಇದರ ಜೊತೆಗೆ ವಗ್ಗರಣೆ ಹಾಕಿ, ವಿವಿಧ ಆಹಾರ ಪದಾರ್ಥಗಳನ್ನು ಮಿಶ್ರಣಮಾಡಿ, ರುಚಿ ರುಚಿಯಾದ ಶೀಘ್ರ ಆಹಾರವನ್ನು (ಫಾಸ್ಟ್‌ಫುಡ್) ತಯಾರಿಸಬಹುದು. ಉದಾಹರಣೆಗೆ ಹಿಪ್ಪು ನೇರಳೆ ವಗ್ಗರಣೆ. ಹಿಪ್ಪು ನೇರಳೆಯ ಎಳೆ ಸೊಪ್ಪನ್ನು ತುಂಡು ತುಂಡಾಗಿ 2 ರಿಂದ 3 ಸೆಂ.ಮೀ ಉದ್ದದ ಮತ್ತು ಅರ್ಧ ಸೆಂ.ಮೀ. ಅಗಲ ಕತ್ತರಿಸಿದ ಎಲೆಗಳನ್ನು ನೀರಿನಲ್ಲಿ 2 ರಿಂದ 3 ನಿಮಿಷ ಚೆನ್ನಾಗಿ ಬೇಯಿಸಬೇಕು. ನಂತರ ಎಣ್ಣೆಯನ್ನು ಬಿಸಿಮಾಡಿ, ಸಾಸ್ವೆ, ಕರಿಬೇವು, ತುಂಡು ಮಾಡಿದ ಹಸಿಮೆಣಸಿನಕಾಯಿ ಮತ್ತು ಈರುಳ್ಳಿ ಹಾಕಿ ಘಮಘಮಿಸುವ ವಗ್ಗರಣೆ ಮಾಡಬೇಕು. ರುಚಿಗೆ ತಕ್ಕಂತೆ ಉಪ್ಪನ್ನು ಹಾಕಿ ಒಂದು ತೆಂಗಿನಕಾಯಿ ತುರಿದ ಕೊಬ್ಬರಿಯನ್ನು ಕೋಳಿ, ಮೊಟ್ಟೆಯನ್ನು ಒಡೆದು ಹಾಕಿ ಚೆನ್ನಾಗಿ ಎಣ್ಣೆಯಲ್ಲಿ ಹುರಿಯಬೇಕು. ನಂತರ ಕೊತ್ತಂಬರಿ ಸೊಪ್ಪನ್ನು ಹಾಕಿ, ಬೇಯಿಸಿದ ಹಿಪ್ಪು ನೇರಳೆ ಎಲೆಗಳನ್ನು ಘಮಘಮಿಸುವ ವಗ್ಗರಣೆಯಲ್ಲಿ ಬೆರೆಸಿ ಚೆನ್ನಾಗಿ ಹುರಿಯಬೇಕು. ನಂತರ ರುಚಿ ರುಚಿಯಾದ ಘಮಿಸುವ ಹಿಪ್ಪು ನೇರಳೆ ಸೊಪ್ಪಿನ ವಗ್ಗರಣೆಯನ್ನು ಉಪಯೋಗಿಸಬಹುದು.

ರೇಶ್ಮೆ ಉದ್ಯಮದಲ್ಲಿ ಅತಿ ಮುಂದುವರಿದ ರಾಷ್ಟ್ರಗಳಾದ ಚೀನಾ, ಜಪಾನ್, ಕೋರಿಯ ದೇಶಗಳಲ್ಲಿ ಈ ಹಿಪ್ಪು ನೇರಳೆ ಸೊಪ್ಪಿನಿಂದ ತಯಾರಿಸಿದ ಆಹಾರ ಹೆಸರುವಾಸಿ. ಭಾರತ, ಥೈಲ್ಯಾಂಡ್, ಫಿಲಿಫೈನ್ಸ್, ಬ್ರೆಜಿಲ್, ವಿಯಟ್ನಾಂ, ರಷ್ಯಾ, ಹಾಂಗ್‌ಕಾಂಗ್, ಬಾಂಗ್ಲಾದೇಶ್ ಮುಂತಾದ ರಾಷ್ಟ್ರಗಳಲ್ಲಿಯೂ ಸಹ ಇತ್ತೀಚಿನ ದಿನಗಳಲ್ಲಿ ಹಿಪ್ಪು ನೇರಳೆ ಸೊಪ್ಪಿನಿಂದ ತಯಾರಾದ ಆಹಾರಕ್ಕೆ ಜನರು ಆಕರ್ಷಣೆಗೊಳಗಾಗಿರುವುದು ತಿಳಿದು ಬಂದಿದೆ. ಆರ್ಥಿಕವಾಗಿ ಹಿಂದುಳಿದ ಮತ್ತು ಮುಂದುವರೆಯುತ್ತಿರುವ ರಾಷ್ಟ್ರಗಳಲ್ಲಿ ಲಕ್ಷ್ಯಾಂತರ ಜನರು ಜೀವ ಉಳಿಸಿಕೊಳ್ಳಲು ಬೇಕಾಗಿರುವ ಆಹಾರ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಇಂತಹ ಸಂದರ್ಭದಲ್ಲಿ ತಾವು ವಾಸಿಸುವ ಪ್ರದೇಶದಲ್ಲಿ ದೊರೆಯುವ ಅಮೂಲ್ಯ ಸಸ್ಯ ಸಂಪತ್ತನ್ನು ಉಪಯೋಗಿಸಿಕೊಂಡು ಆರೋಗ್ಯವನ್ನು ಸುಸ್ಥಿತಿಯಲ್ಲಿಡುವಲ್ಲಿ ಬೇಕಾಗುವ ಪೌಷ್ಠಿಕಾಂಶಯುಕ್ತ ಆಹಾರವನ್ನು ಪಡೆಯಲು ಪ್ರಯತ್ನಿಸಬಹುದಲ್ಲವೆ? ಹಿಪ್ಪು ನೇರಳೆ ಸಸ್ಯದ ಉಪಯೋಗ ಆಹಾರದಲ್ಲಿನ ಪೌಷ್ಠಿಕಾಂಶಗಳ ಕೊರತೆಯನ್ನು ಎದುರಿಸುತ್ತಿರುವ ಸಹಸ್ರಾರು ಜನರ ಸಮಸ್ಯೆಯನ್ನು ಸ್ವಲ್ಪವಾದರೂ ಬಗೆಹರಿಸುವಲ್ಲಿ ಸಹಕಾರಿಯಾಗಬಲ್ಲದು.

■ ಡಾ. ಬಸವರಾಜಪ್ಪ ಎಸ್.


ಉಚಿತ!
ಗುಂಡು ಸೂಜಿ ತರಲು
ಹೋದವ್ರು..... ಅದೇನ್ರಿ...?
ಇದು ಗುಂಡುಸೂಜಿಗೆ
'ಉಚಿತ' ಕಣೇ..


ರೀ ಹೊರಗೆ
ನಿಮ್ಮನ್ನು ಯಾರೋ
ಕರೀತಿದ್ದಾರೆ....
ಕವಿ
ಅಭಿಮಾನಿ

ಹೆಂಡತಿಯೇ ಗಂಡನಿಗೆ ಸ್ಪರ್ಧಿಯೇ?



ಸುಂದರ, ಹೆಚ್ಚು ಸಂಬಳ ತರುವ ಹೆಂಡತಿ ಇರಬೇಕು. ಆದರೆ ಆಕೆ ಎಂದೂ ತನ್ನ ಕೈಗೊಂಬೆಯಂತೆಯೇ, ತನ್ನ ಅಡಿಯಾಳಾಗೇ ವರ್ತಿಸಬೇಕು ಎಂದು ಪುರುಷ ಬಯಸುತ್ತಾನೆ. ಆಧುನಿಕ ಮಹಿಳೆ ಹೆಚ್ಚು ಜವಾಬ್ದಾರಿ ಹೊರಲು ತಯಾರಾಗಿ ಕುಟುಂಬದ ವೃತ್ತದಿಂದಾಚೆ ಕಾಲಿಡುವುದು ಇವತ್ತು ಅನಿವಾರ್ಯ. ಅದರಿಂದಲೇ ಹುಟ್ಟಿಕೊಳ್ಳುತ್ತಿರುವ ಸಮಸ್ಯೆಯನ್ನೂ ಆಕೆ ನಿರ್ವಹಿಸಬೇಕಾದ ಪರಿಸ್ಥಿತಿ ಇವತ್ತು ಇದೆ.

ನಮ್ಮದು ಸ್ಪರ್ಧಾತ್ಮಕ ಜಗತ್ತು. ಪ್ರತಿ ರಂಗದಲ್ಲೂ ಸ್ಪರ್ಧೆ ಇದೆ. ಹಾಗೇ ಕುಟುಂಬದಲ್ಲೂ ಕೂಡ. ಸರಸ, ಸಲ್ಲಾಪಗಳ ಬದಲು ವಾಗ್ವಾದ, ವಾಗ್ಯುದ್ಧ ಹೆಚ್ಚುತ್ತಾ, ವಿಚ್ಛೇದನದ ಮಟ್ಟಕ್ಕೂ ಹೋಗುವುದು ಹೆಚ್ಚುತ್ತಿದೆ. ಆಧುನಿಕ ಮಹಿಳೆ ಹಿಂದಿನ ಸೀತೆಯಂತಲ್ಲ. ಅವಳಿಗೆ ಅವಳದೇ ಕನಸು, ಬದುಕು, ಭವಿಷ್ಯವಿದೆ. ಅದನ್ನು ಈಡೇರಿಸಿಕೊಳ್ಳಲು ಮುಂದಾದಾಗ ಕುಟುಂಬ ಗೌಣವೆನಿಸಿದ್ದೇ ಇಂಥ ವಿರಸಕ್ಕೆ ಕಾರಣವೇ?

ಮೇಲು ನೋಟಕ್ಕೆ ಕಾಣುವ ಕಾರಣ ಇದು. ಪುರುಷರ ಮನಃಸ್ಥಿತಿ, ಅವರ ದೌರ್ಬಲ್ಯ ಎಲ್ಲ ಗಮನಿಸಿ. ಆಗ ಇನ್ನೂ ಸ್ಪಷ್ಟವಾದ ಉತ್ತರ ದೊರೆತೀತು.

ನನ್ನ ಗೆಳತಿ ಗೀತಾ ಮುಂಬಯಿಯಲ್ಲಿ ಉದ್ಯೋಗಿ. ಆಕೆಯ ಪತಿ ದೊಡ್ಡ ಹುದ್ದೆಯಲ್ಲಿ ಇದ್ದಾರೆ. ಇಬ್ಬರೂ ಪರಸ್ಪರ ಮೆಚ್ಚಿ ಮದುವೆ ಆದವರು. ಮದುವೆಯ ಮೊದಲ ದಿನಗಳ ಸಂತೋಷ ಈಗಿಲ್ಲ.

ಮೊನ್ನೆ ಊರಿಗೆ ಬಂದವಳು, ಗಂಡನೊಡನೆ ಮನೆಗೂ ಬಂದಿದ್ದಳು. ಅದು ಇದೂ ಮಾತಾಡುತ್ತಾ ತನಗೆ ಕೆಲಸದಲ್ಲಿ ಭಡ್ತಿ ಸಿಕ್ಕಿದ್ದು ಹೇಳಿದಳು. ಸಂತಸದಿಂದ ನಾನು 'ಕಂಗ್ರಾಟ್ಸ್' ಹೇಳಿದ್ದೇ, 'ಮೆತ್ತಗೆ, ಕಿರುಚಬೇಡ. ಅವರಿಗೆ ಕೇಳಿಸೀತು' ಎಂದು ಎಚ್ಚರಿಸಿದಳು. ಹಿಂದೊಮ್ಮೆ ಆಕೆಗೆ ಭಡ್ತಿ ದೊರಕಿತ್ತು. ಆ ಸಂದರ್ಭದಲ್ಲಿ ಕೇಳಿದ್ದೇ, ಆಕೆಯ ಗಂಡ ಗಿರೀಶ ನಮಗೆಲ್ಲ ಪಾರ್ಟಿ ಕೊಡಿಸಿದ್ದರು. ಅದೇ ಗೀತ ಈಗ ಹೇಳುವ ರೀತಿ ಕಂಡು 'ಯಾಕೇ? ಏನಾಯಿತೇ?' ಎಂದರೆ, ಅದೇ ಪಿಸುದನಿಯಲ್ಲಿ ತಮ್ಮ ಸಂಸಾರ ಮೊದಲಂತೆ ಇಲ್ಲ ಎಂದು ಬಾಯಿಬಿಟ್ಟು ಹೇಳಿದಳು.

ಇಂದಿನ ಪುರುಷರು ತಮ್ಮ ಪತ್ನಿ ಆಧುನಿಕಳಾಗಿರಬೇಕು, ದಿಟ್ಟತನದಿಂದ ವರ್ತಿಸಬೇಕು ಎಂದೆಲ್ಲ ಬಯಸುತ್ತಾರೆ ನಿಜ. ಆದರೆ ಹೆಂಡತಿ ತಮಗಿಂತ ಮುಂದೆ ಹೋಗುವುದನ್ನು ಅವರು ಸಹಿಸುವುದಿಲ್ಲ. ಹೆಂಡತಿ ತನಗಿಂತ ಹೆಚ್ಚು ಸಂಪಾದಿಸಿದರೆ, ಮೇಲಿನ ಹುದ್ದೆಗೆ ಏರಿದರೆ, ಆಕೆ ತನ್ನೊಡನೇ ಸ್ಪರ್ಧೆಗೆ ನಿಂತಿದ್ದಾಳೆ ಎಂಬ ಕೀಳರಿಮೆ ಕಾಡುತ್ತದೆ. ಸಕಾರಣವಾಗಿಯೇ ಕುಟುಂಬದ ಜವಾಬ್ದಾರಿ ನಿರ್ವಹಿಸಲು ಲೋಪ ಆದರೆ, ಕೆಲಸದ ಹೊರೆಯಿಂದಾಗಿ ಮನೆಗೆ ತಡವಾಗಿ ಬಂದರೆ ಗಂಡನಿಗೆ ಮೊದಲು ಏಕಾಂಗಿತನ ಕಾಡುತ್ತದೆ. ಮುಂದಿನ ಹಂತದಲ್ಲಿ ಹೆಂಡತಿ ತನ್ನನ್ನು ಅಲಕ್ಷಿಸುತ್ತಿದ್ದಾಳೆ ಎನ್ನಿಸಬಹುದು.

ಇಂಥ ಹಂತದಲ್ಲಿಯೇ ಮಹಿಳೆ ಎಚ್ಚೆತ್ತರೆ ಅನಾಹುತ ತಪ್ಪಬಹುದು. ಗಂಡನೊಡನೆ ಹೆಚ್ಚು ಕಾಲ ಕಳೆಯುವ ಮೂಲಕ, ತನಗೆ ಗಂಡನಿಗಿಂತ ಹೆಚ್ಚು ಪಗಾರ ದೊರೆಯುತ್ತಾ ಇದ್ದರೂ ಅದು ಅವನ ಮನಸು ನೋಯಿಸದಂತೆ ನೋಡಿಕೊಳ್ಳುವ ಮೂಲಕ ಪರಿಸ್ಥಿತಿ ಸುಧಾರಿಸಬೇಕು. ಸ್ವಲ್ಪ ಕಸಿವಿಸಿ ಆರಂಭ ಬಂದಕೂಡಲೇ ಮಾತು ಬಿಡುವ, ಜಗಳಕ್ಕೆ ಇಳಿಯುವ ಬದಲು, ಸಮಯಾವಕಾಶ ನೋಡಿಕೊಂಡು ಗಂಡನಿಗೆ ತಿಳುವಳಿಕೆ ಬರುವಂಥ ಮಾತಾಡುವುದರಿಂದ ಸಮಸ್ಯೆ ನಿವಾರಣೆ ಸಾಧ್ಯ. ಆಫೀಸಿನ ಕೆಲಸ, ಪಗಾರ, ಅಂತಸ್ತು ಆಫೀಸಿಗೇ ಸೀಮಿತ. ಗಂಡ-ಹೆಂಡತಿ ಸಂಬಂಧದಲ್ಲಿ ಖಂಡಿತ ಅಲ್ಲ ಎಂದು ಮನವರಿಕೆ ಮಾಡಿಕೊಡುವುದು ಮುಖ್ಯ. ಪತಿಯ ಅನಾರೋಗ್ಯ ಸಮಯದಲ್ಲಿ ಹೆಚ್ಚು ಕಾಳಜಿಯಿಂದ ವರ್ತಿಸಬೇಕಾಗುತ್ತದೆ. ತಲೆನೋವು, ಜ್ವರ ಏನು ಮಹಾ! ಇದಕ್ಕಾಗಿ ಆಫೀಸು ಕೆಲಸ ಬಿಟ್ಟು ಕೂರಬೇಕೇ? ಎಂಬ ತರ್ಕಕ್ಕೆ ಇಳಿಯದೇ, ಒಂದು ದಿನ ರಜಾ ಹಾಕಿ ಮನೆಯಲ್ಲಿ ಉಳಿಯುವುದು ಸುಖ ಸಂಸಾರಕ್ಕೆ ಭದ್ರ ಬುನಾದಿ ನಿರ್ಮಿಸುತ್ತದೆ.


ಗಂಡು-ಹೆಣ್ಣಿನ ಸಂಬಂಧದಲ್ಲಿ ಮಹಿಳೆ ವರ್ತಿಸುವುದೇ ಬೇರೆ ರೀತಿ. ಯಾರೂ ತನಗಿಂತ ಕಡಿಮೆ ಓದಿದ, ಕಡಿಮೆ ಸಂಬಳ ತರುವ ಗಂಡನನ್ನು ಒಪ್ಪುವುದಿಲ್ಲ. ಹಣಕ್ಕಾಗಿ ಹೆಂಡತಿ ಎದುರು ಕೈಚಾಚುವ ಗಂಡಸಿನ ಬಗ್ಗೆ ಕನಿಕರವಲ್ಲ, ಹೆಂಡತಿಗೆ ಜಿಗುಪ್ಸೆ ಮೂಡುತ್ತದೆ.

ತಾನು ಹೆಚ್ಚು ಓದಿದ್ದೇನೆ, ಹೆಚ್ಚು ದುಡಿದು ತರುತ್ತೇನೆ ಎಂಬ ಕಾರಣಗಳೇ ಗಂಡ ತನ್ನನ್ನು ಗೌರವಿಸುವುದನ್ನು ಹೆಂಗಸು ಬಯಸುವುದಿಲ್ಲ. ಏಕೋ ಅದು ತೀರಾ ಕೃತಕ ಅನ್ನಿಸಿಬಿಡುತ್ತದೆ. ಹಾಗೇ ಸುಂದರ ಹೆಂಡತಿ, ಪುರುಷರ ನಡುವೆ ಕೆಲಸ ನಿರ್ವಹಿಸಬೇಕಾದ ಸಂದರ್ಭದಲ್ಲಿಯೂ ಗಂಡನಲ್ಲಿ ಅನುಮಾನ ಬೇಗ ಮೂಡುತ್ತದೆ. ಇದಕ್ಕೆ ಗಂಡಸಿನಲ್ಲಿನ ಕೀಳರಿಮೆ ಹಾಗೂ ಅಸೂಯೆಗಳೇ ಕಾರಣ. ಹಾಗೆಂದು ಹೆಂಡತಿಯಾದವಳು ಇದೆಲ್ಲ ಸಹಜ ಎಂದು ನಿರ್ಲಕ್ಷಿಸಿದರೆ ಅಪಾಯ ಕಾದಿದೆ.

ಸ್ಪರ್ಧೆಯ ಅಮಾನವೀಯ ಸಂಗತಿಗಳು ಕುಟುಂಬದ ಸ್ತರಕ್ಕೆ ತಟ್ಟದಂತಿರಲು ಗಂಡಸರು ಹೆಚ್ಚು ತಿಳುವಳಿಕೆಯಿಂದ, ಹೆಂಗಸರು ಇನ್ನಷ್ಟು ವಿವೇಚನೆಯಿಂದ ವರ್ತಿಸಬೇಕಾದ್ದು ಈಗ ಅತ್ಯಗತ್ಯವಾಗಿದೆ.

■ ಸುಜಾತಾ ಜೆ. ಯಲ್ಲೂರ

ದಾರಿ ತೋರಿದ ಹಳ್ಳಿಗರು



ದಾವಣಗೆರೆ ಜಿಲ್ಲೆಯ ಕುಮಾರನ ಹಳ್ಳಿ ಕುಗ್ರಾಮ. ಅಲ್ಲಿನ ನೂರು ಮನೆಗಳ ಜನ ದಶಕಗಳಿಂದ ಶ್ರಮವಹಿಸಿ ಊರ ಮಗ್ಗುಲಿನ ಗುಡ್ಡದ ಮೇಲೆ ಹಸಿರು ಬೆಳೆಸಿದ್ದಾರೆ. ಬದುಕು ಹಸಿರಾಗಿಸಿಕೊಂಡಿದ್ದಾರೆ.

ಅದೊಂದು ಸಣ್ಣ ಹಳ್ಳಿ, ಅಲ್ಲಿ ನೂರು ಮನೆ. ಹತ್ತಿರವೇ ಗುಡ್ಡದ ಸಾಲು. ವರ್ಷಾಂತರಗಳಿಂದ ಹಳ್ಳಿಗೆ ನೀರುಣಿಸುತ್ತಿದ್ದ ಗುಡ್ಡದ ಹಳ್ಳ ಬತ್ತಿಹೋಗಿತ್ತು. ಗುಡ್ಡ ಬೋಳಾಗಿತ್ತು. ದನಕ್ಕೆ ಮೇವಿಲ್ಲ. ಜನಕ್ಕೆ ನೀರಿಲ್ಲ.

ಇವತ್ತು ಅಲ್ಲಿ ಪರಿವರ್ತನೆ ಆಗಿದೆ. ಆ ಗುಡ್ಡಗಳ ಸಾಲಿನಲ್ಲಿ ಒಂದು ಗುಡ್ಡ ಹಸಿರಾಗಿದೆ. ಬತ್ತಿದ್ದ ಸಣ್ಣ ತೊರೆ ವರ್ಷದ ಬಹುಪಾಲು ದಿನಗಳಲ್ಲಿ ತುಂಬಿ ಹರಿಯುತ್ತದೆ. ಉಳಿದೆಲ್ಲ ಬೋಳುಗುಡ್ಡಗಳ ನಡುವೆ ಅದೊಂದೇ ಹಸಿರು ಗುಡ್ಡ. ಅದನ್ನೆಲ್ಲ ಸಾಧ್ಯ ಆಗಿಸಿದವರು ಕುಮಾರನಹಳ್ಳಿಯ ಜನ. ದಾವಣಗೆರೆ ಜಿಲ್ಲೆಯ ಸಣ್ಣದೊಂದು ಹಳ್ಳಿ.

ಇಂಥದೊಂದು ಪರಿವರ್ತನೆ ರಾತ್ರಿ ಬೆಳಗಾಗುವುದರೊಳಗೆ ಆದದ್ದೂ ಇಲ್ಲ. ಅದಕ್ಕೊಂದು ಇತಿಹಾಸವಿದೆ. ಜನರ ದೃಢ ಸಂಕಲ್ಪದ ಕಸುವಿದೆ. ತಮ್ಮ ಪರಿಸರ ಕಾಯ್ದುಕೊಳ್ಳಬೇಕೆಂಬ ಮನಸ್ಸಿದೆ. ದಶಕಗಳ ಈ ಸಂಕಲ್ಪವೇ ಗುಡ್ಡವನ್ನು ಹಸಿರಾಗಿಸಿದೆ. ಜಮೀನಿಲ್ಲದ ಬಡವರು, ಸಣ್ಣ ಹಿಡುವಳಿಯ ರೈತರು ಇವತ್ತು ಗುಡ್ಡದ ಕಾಡಿಗೆ ಹೋಗಿ ಬೀಡಿಕಟ್ಟುವ ಎಲೆ, ಒಣಗಿ ಬಿದ್ದ ಮರದ ಟೊಂಗೆ, ಸಿಹಿ ತಯಾರಿಸುವ ಅಂಟು ಕಾಡು ಹಣ್ಣುಗಳನ್ನು ಆರಿಸಿ ತರುತ್ತಾರೆ. ಅವರ ಬದುಕಿಗೆ ಒಂದಿಷ್ಟು ಹೆಚ್ಚಿನ ಆದಾಯ ದೊರೆಯುತ್ತದೆ.

ಇಂಥ ಬದಲಾವಣೆಗೆ ಪ್ರೇರಣೆ ನೀಡಿದವರು ಸಮಾಜ ಪರಿವರ್ತನೆ ಸಮುದಾಯ. ಈ ಭಾಗದ ಜನಕ್ಕೆ ಪೀಡೆಯಾಗಿ ಬಂದಿದ್ದು ಕರ್ನಾಟಕ ಪಲ್ಯಾವುಡ್ ಲಿಮಿಟೆಡ್. ಹರಿಹರ ಪಾಲಿಫೈಬರ್ಸ್‌ನ ಅಂಗ ಸಂಸ್ಥೆ. ಈ ಕಂಪೆನಿಗೆ ಸರ್ಕಾರ ಅರಣ್ಯ ಭೂಮಿ ಒತ್ತೆ ಇಟ್ಟು ಬಿಟ್ಟಿತ್ತು. ಅವರು ಕಾಡಿನ ತುಂಬಾ ನೀಲಗಿರಿ ಸಸಿ ನೆಟ್ಟು ಬೆಳೆಯುತ್ತಿದ್ದರು. ಬೆಳೆದ ಮೇಲೆ ಕತ್ತರಿಸಿ ಪಾಲಿಫೈಬರ್ ತಯಾರಿಕೆಯ ಕಚ್ಚಾವಸ್ತುವಾದ ಪಲ್ಪ್ ತಯಾರಿಸುತ್ತಾ ಇದ್ದರು.

ಹೀಗೆ ಏಕ ಪ್ರಭೇದದ ಸಸ್ಯ ವರ್ಗ ಬೆಳೆಯುವುದರಿಂದ ಕಾಡು ಹಾಳಾಗುತ್ತದೆ. ಇದನ್ನು ಮನಗಂಡ ಹತ್ತಿರದ ಕುಸನೂರಿನ ಜನತೆ 'ಕಿತ್ತಿರೋ ಹಚ್ಚಿರೋ' ಚಳವಳಿ ಆರಂಭಿಸಿದರು. ನೆಟ್ಟ ಪ್ರತಿ ನೀಲಗಿರಿ ಸಸಿ ಕಿತ್ತು ಅದರ ಜಾಗದಲ್ಲಿ ಹಣ್ಣಿನ ಅಥವಾ ಸಾಗುವಾನಿಯ ಸಸಿ ನೆಡುವುದು ಈ ಆಂದೋಲನದ ಉದ್ದೇಶ. ಇದಕ್ಕೆ ರಾಜ್ಯ ರೈತ ಸಂಘ, ಶಿವರಾಮ ಕಾರಂತರಂಥ ಪರಿಸರ ಪ್ರೇಮಿಗಳ ಬೆಂಬಲ ದೊರೆಯಿತು.

ಸರಕಾರದ ಅರಣ್ಯ ನೀತಿ ಖಂಡಿಸುವುದರ ಜೊತೆಗೇ, ಹಳ್ಳಿಯ ಜನರೇ ಅರಣ್ಯ ಬೆಳೆಸಿ ತೋರಿಸಬೇಕು ಎಂಬುದು ಸಮುದಾಯದ ಮುಂದಿನ ಗುರಿಯಾಯಿತು. ಆಗ ಅವರು ಆರಿಸಿಕೊಂಡಿದ್ದು ಕುಮಾರನ ಹಳ್ಳಿಯನ್ನು.

ಹಳ್ಳಿಯ ಅಂಚಿನ ಗುಡ್ಡದ ಬುಡದಲ್ಲಿ ಒಂದು ಪವಿತ್ರವನ ಇತ್ತು. ಇದು ಸದಾ ಹಸಿರು. ಗುಡ್ಡ ಮಾತ್ರ ಒಣಗಿ ನಿಂತಿತ್ತು. ಪವಿತ್ರವನ ದೇವರದೆಂಬ ಕಾರಣಕ್ಕೆ ಮಾನವ ಅಥವಾ ಪ್ರಾಣಿಗಳ ದಾಳಿ ಇರಲಿಲ್ಲ. ಹಾಗೇ ಗುಡ್ಡದ ಮೇಲೆ ಸಸಿ ನೆಟ್ಟು ಬೆಳೆಸಿ, ಪ್ರಕೃತಿಯ ಮೇಲಾಗುವ ದಾಳಿಯನ್ನು ತಡೆದರೆ ಕಾಡು ಕಾಯ್ದುಕೊಳ್ಳಬಹುದು ಎಂಬುದು ಚಿಂತನೆ. ಇದಕ್ಕೆ ಹಳ್ಳಿಯ ಜನ ಸಮ್ಮತಿಸಿದರು.

ಯೋಜನೆ ಏನೇ ಸರಿ. ಸರ್ಕಾರ ಒಪ್ಪಬೇಕಲ್ಲ ! ರಾಜ್ಯ ಆರು ಜಿಲ್ಲೆಗಳ ಮೂವತ್ತು ಸಾವಿರ ಹೆಕ್ಟೇರ್ ಅರಣ್ಯ ಭೂಮಿ ಕೆ.ಪಿ.ಎಲ್‌ಗೆ ಗುತ್ತಿಗೆ ನೀಡಲಾಗಿತ್ತು. ಇದರ ವಿರುದ್ಧವೇ ಕುಸನೂರಿನಲ್ಲಿ 'ಕಿತ್ತಿರೋ ಹಚ್ಚಿರೋ' ಚಳವಳಿ ಆರಂಭಗೊಂಡಿದ್ದು.

1988ರಷ್ಟು ಹಿಂದೆಯೇ ಸ್ಥಳೀಯರನ್ನು ಸೇರಿಸಿಕೊಂಡೇ ಅರಣ್ಯ ಭೂಮಿ ಅಭಿವೃದ್ಧಿ ಪಡಿಸಬೇಕೆಂಬ ನೀತಿಯನ್ನೇ ಕೇಂದ್ರ ಸರ್ಕಾರ ಪ್ರಕಟಿಸಿತ್ತು. ಆದರೂ ಅರಣ್ಯ ಅಧಿಕಾರಿಗಳು ಕುಮಾರನ ಹಳ್ಳಿ ಜನಕ್ಕೆ ಗುಡ್ಡದ ಅರಣ್ಯ ಬೆಳೆಸಲು ಅನುಮತಿ ನೀಡಲಿಲ್ಲ. ಈ ಮಧ್ಯೆ ಕೆ.ಪಿ.ಎಲ್‌ಗೆ ನೀಡಿದ್ದ ಅರಣ್ಯ ಭೂಮಿ ಗುತ್ತಿಗೆ ಕುರಿತಂತೆ ಮಧ್ಯ ಪ್ರವೇಶಿಸಿದ ಸುಪ್ರಿಂಕೋರ್ಟು ಆಯಾ ಭಾಗದ ಅರಣ್ಯ ಬೆಳೆಸಲು ಸ್ಥಳೀಯ ಪಾಲುಗಾರಿಕೆ ಬೇಕು ಎಂದು ತಿಳಿಸಿದ ಮೇಲೇ ಕುಮಾರನ ಹಳ್ಳಿಯ 'ಗ್ರಾಮ ಅರಣ್ಯ ಸಮುದಾಯ' ಅಸ್ತಿತ್ವಕ್ಕೆ ಬಂದಿದ್ದು. ದನ, ಆಡು ಮೇಯಿಸುವುದು ಮೊದಲು ನಿಂತಿತು. ಗುಡ್ಡದ ಮೇಲೆಲ್ಲ ಸಸಿ ನೆಟ್ಟು ಕಾಪಾಡಿದರು. ಈಗ ದಶಕಗಳೇ ಕಳೆದಿವೆ. ಗುಡ್ಡ ಹಸಿರಾಗಿದೆ. ಬತ್ತಿ ಹಳ್ಳ ವರ್ಷದ ಬಹುಕಾಲ ತುಂಬಿ ಹರಿಯುತ್ತಿದೆ. ಅರಣ್ಯದ ಉಪ ಉತ್ಪನ್ನ ಸಂಗ್ರಹಿಸಿ ಊರಿನ ಬಡ ಜನ ಜೀವನ ನಿರ್ವಹಣೆ ಮಾಡುತ್ತಾರೆ.

ಹೀಗಿದ್ದೂ ಅಲ್ಲೊಂದು, ಇಲ್ಲೊಂದು ಕಹಿ ಪ್ರಸಂಗ, ನಡೆದಿದೆ. ಸ್ಥಳೀಯ ಶಾಸಕರ ಬೆಂಬಲಿಗನೊಬ್ಬ ಕಾಡೊಳಗೆ ಅಕ್ರಮವಾಗಿ ನಾಟಾ ಕಡಿದು ಸಿಕ್ಕಿಕೊಂಡ. ಅರಣ್ಯ ಸಮುದಾಯದ ನಿರ್ವಹಣಾ ಸಮಿತಿ ಆತನಿಗೆ ಸಾವಿರ ರೂಪಾಯಿ ದಂಡ ಹಾಕಿತು. ಶಾಸಕ ಮಹಾಶಯ ಸಮಿತಿ ಜನರನ್ನೇ ಮನೆಗೆ ಕರೆಸಿ ಮನ ಒಲಿಸಲು ಯತ್ನಿಸಿ ವಿಫಲನಾದ. ದಂಡ ತೆತ್ತ ಆತನ ಬೆಂಬಲಿಗ ಇತರರಿಗೆ ಪಾಠವಾದ. ಈಗ ಕಾಡಿನ ದುರ್ಬಳಕೆ ಅಷ್ಟಾಗಿ ಇಲ್ಲ. ತಪ್ಪು ಮಾಡಿದವರು ಯಾರೇ ಆಗಲಿ, ದಂಡ ನೀಡಬೇಕು ಎಂದು ಗೊತ್ತಿದೆ. ಹಾಗಾಗಿ ತಪ್ಪು ಮಾಡುವ ಸಾಹಸಕ್ಕೆ ಹೋಗುವವರು ಇಲ್ಲವೇ ಇಲ್ಲ ಎನ್ನಬೇಕು.

ಅರಣ್ಯ ಇಲಾಖೆಯ ಜನ, ಹಳ್ಳಿಗರಿಗೆ ಜಮೀನು ಒಪ್ಪಿಸಲು ಪ್ರತಿರೋಧ ತೋರಿಸಿದ್ದು ನಿಜ. ಆದರೆ ಒಮ್ಮೆ ಗ್ರಾಮ ಅರಣ್ಯ ಸಮುದಾಯ ಅಸ್ತಿತ್ವಕ್ಕೆ ಬಂದ ಮೇಲೆ, ಹಳ್ಳಿಗರ ಜೊತೆಗೂಡಿ ಅವರೂ ಅರಣ್ಯ ಬೆಳೆಸಿದರು. ಈಗ ರಕ್ಷಣೆಗೂ ನೆರವಾಗುತ್ತಿದ್ದಾರೆ.

ಕುಮಾರನ ಹಳ್ಳಿ ಗುಡ್ಡದ ಮೇಲೆ ಈಗೀಗ ದನ, ಆಡು ಮೇಯಲು ಹೋಗುತ್ತವೆ. ಹೀಗೆ ಮೇಯಿಸುವುದರಿಂದ ಹುಲ್ಲು ನಾಶವಾಗಿ, ಮಣ್ಣು ಮಳೆ ನೀರಲ್ಲಿ ಕೊಚ್ಚಿ ಹೋಗುತ್ತದೆ ಎಂದು ಅರಣ್ಯ ಶಾಸ್ತ್ರಜ್ಞರ ವಾದ. ಇದು ನಿಜವಲ್ಲ ಎಂದು ಹಳ್ಳಿಗರ ಪ್ರಯೋಗ ಸಾಬೀತು ಮಾಡಿದೆ. ಸಸ್ಯಗಳು ಎತ್ತರಕ್ಕೆ ಬೆಳೆದ ಮೇಲೆ ದನ, ಆಡು ಮೇಯಿಸಬಹುದು. ಪಶು ಪ್ರಾಣಿಗಳು ಹುಲ್ಲನ್ನು ಎಂದೂ ಬೇರು ಸಮೇತ ಕೀಳುವುದಿಲ್ಲ. ಹೀಗಾಗಿ ಮಣ್ಣು ಸರಿಯುವ ಪ್ರಶ್ನೆಯೇ ಇಲ್ಲ ಎನ್ನುತ್ತಾರೆ.

ಈಗ ಕುಮಾರನ ಹಳ್ಳಿಯ ಜನರಿಂದ ಪ್ರೇರಿತವಾಗಿ ಸುತ್ತಲ ಹಳ್ಳಿಗಳ ಜನ ಗುಡ್ಡಗಳಲ್ಲಿ, ಊರಂಚಿನ ಬಯಲಲ್ಲಿ ಕಾಡು ಬೆಳೆಸಲು ಸಜ್ಜಾಗುತ್ತಿದ್ದಾರೆ. ■

ಟಾಲ್‌ಸ್ಟಾಯ್ ಹೇಳಿದ

ಮಕ್ಕಳ ಕತೆಗಳು

ಅನುವಾದ : ಚಂದ್ರಾ ನಾಗಭೂಷಣಸ್ವಾಮಿ

ಟಾಲ್‌ಸ್ಟಾಯ್ ರಶಿಯಾ ದೇಶದ ಲೇಖಕ, ಜಗತ್ತಿನ ಅತ್ಯುತ್ತಮ ಸಾಹಿತಿಗಳಲ್ಲಿ ಒಬ್ಬನು ಎಂದು ಪ್ರಸಿದ್ಧನಾಗಿದ್ದಾನೆ. ಆತ ತನ್ನ ರೈತರ ಮಕ್ಕಳಿಗೆಂದು ಕೆಲವು ಮಕ್ಕಳ ಕಥೆಗಳನ್ನು ಬರೆದಿದ್ದಾನೆ. ಬಹಳ ಹಿಂದಿನ ಕಾಲದಲ್ಲಿ ಈಸೋಪ್ ಎಂಬಾತ ಹೇಳಿದ ಕಥೆಗಳನ್ನು ಟಾಲ್‌ಸ್ಟಾಯ್ ಹೊಸ ರೀತಿಯಲ್ಲಿ ಹೇಳಿದ್ದಾನೆ. ಕಥೆಯ ಅರ್ಥ ಏನು, ನೀತಿ ಏನು ಎಂದು ಟಾಲ್‌ಸ್ಟಾಯ್ ಬಿಡಿಸಿ ಹೇಳುವುದಿಲ್ಲ. ಮಕ್ಕಳು ಜಾಣರು, ಕಥೆ ಅವರಿಗೆ ತಿಳಿಯುತ್ತದೆ ಎಂದು ಹೇಳುತ್ತಿದ್ದ. ಅವನು ಹೇಳಿದ ಕಥೆಗಳಲ್ಲಿ ಕೆಲವನ್ನು ಇಲ್ಲಿ ಪ್ರತಿ ತಿಂಗಳು ನೀಡುತ್ತೇವೆ. ನಿಮಗೂ ಇಷ್ಟ ಆದರೆ ಬೇರೆ ಮಕ್ಕಳಿಗೂ ಹೇಳಿ.

ಸೂರ್ಯ ಮತ್ತು ಗಾಳಿ



ಒಮ್ಮೆ ಸೂರ್ಯನಿಗೂ ಗಾಳಿಗೂ ಒಂದು ಪಂದ್ಯ ಬಿದ್ದಿತು. ಇಬ್ಬರೂ ನಾನು ಗಟ್ಟಿ, ನಾನು ಗಟ್ಟಿ ಎಂದು ಜಗಳವಾಡಿದರು. ಯಾರಾದರೂ ಮನುಷ್ಯ ತನ್ನ ಅಂಗಿ ಬಟ್ಟೆ ಎಲ್ಲಾ ಬಿಚ್ಚಿ ಹಾಕುವಂತೆ ಮಾಡಿದವರೇ ಗಟ್ಟಿ ಎಂದು ತೀರ್ಮಾನ ಮಾಡಿಕೊಂಡರು.

ನೆಲದ ಮೇಲೆ ಒಬ್ಬ ಮನುಷ್ಯ ಎಲ್ಲಿಗೋ ನಡೆದುಕೊಂಡು ಹೊರಟಿದ್ದ. ಅದನ್ನು ಕಂಡು ಗಾಳಿ ಜೋರಾಗಿ ಬೀಸಿತು. ನಡೆಯುತ್ತಿದ್ದವನ ಟೋಪಿ ಹಾರಿ ಹೋಯಿತು. ಅವನು ಓಡಿ ಹೋಗಿ ಅದನ್ನು ಎತ್ತಿ ತಲೆಯ ಮೇಲೆ ಇಟ್ಟುಕೊಂಡ. ಅದು ಮತ್ತೆ ಹಾರಿ ಹೋಗದಂತೆ ಕೈಯಲ್ಲಿ ಒತ್ತಿ ಹಿಡಿದುಕೊಂಡ. ಗಾಳಿ ಇನ್ನೂ ಜೋರಾಗಿ ಬೀಸಿತು. ಆಗ ಮನುಷ್ಯ ತನ್ನ ಅಂಗಿಯ ಗುಂಡಿಗಳನ್ನೆಲ್ಲ ಭದ್ರವಾಗಿ ಹಾಕಿಕೊಂಡ. ಗಾಳಿಗೆ ಇನ್ನೇನೂ ಮಾಡಲು ತೋಚಲಿಲ್ಲ.

ಈಗ ಸೂರ್ಯನ ಸರದಿ. ಬಿಸಿಲಿನ ಶಾಖ ಹೆಚ್ಚಾಗುವಂತೆ ಮಾಡಿದ. ಈಗ ಮನುಷ್ಯ ಅಂಗಿಯ ಗುಂಡಿಗಳನ್ನು ಬಿಚ್ಚಿಕೊಂಡ. ಸೂರ್ಯ ತನ್ನ ಶಾಖ ಇನ್ನೂ ಹೆಚ್ಚಿಸಿದ. ಆಗ ಮನುಷ್ಯ ಬಟ್ಟೆಯೆಲ್ಲ ಬಿಚ್ಚಿ ಹಾಕಿ ನೆರಳು ಎಲ್ಲಿ ಸಿಕ್ಕೀತು ಎಂದು ಓಡಿದ.

ಮುದುಕ ಮತ್ತು ಸಾವು



ಒಂದು ಬಾರಿ ಒಬ್ಬ ಮುದುಕ ಕಟ್ಟಿಗೆ ಹೊರೆಯನ್ನು ಹೊತ್ತುಕೊಂಡು ಮನೆಯ ಕಡೆಗೆ ಹೊರಟಿದ್ದ. ಹೊರೆ ಬಹಳ ಭಾರವಾಗಿತ್ತು. ಎಷ್ಟು ದೂರ ನಡೆದರೂ ಮನೆ ಸಿಕ್ಕುತ್ತಲೇ ಇಲ್ಲ ಅನ್ನಿಸಿತು. ಬಹಳ ಆಯಾಸವಾಗಿ, ಹೊರೆಯನ್ನು ಕೆಳಕ್ಕೆಸೆದು ''ಅಯ್ಯೋ! ಎಷ್ಟು ಭಾರ! ಮನೆ ಇನ್ನೂ ಎಷ್ಟು ದೂರ! ಸಾವಾದರೂ ಬರಬಾರದೆ!'' ಎಂದು ತನಗೆ ತಾನೇ ಹೇಳಿಕೊಂಡ.

ಕೂಡಲೆ ಸಾವು ಅವನ ಮುಂದೆ ಬಂದು ನಿಂತಿತು. ''ಇಗೋ! ನಾನು ಇಲ್ಲಿದ್ದೇನೆ. ನನ್ನಿಂದ ನಿನಗೇನು ಆಗಬೇಕು?'' ಎಂದು ಕೇಳಿತು.

ಮುದುಕನಿಗೆ ಭಯವಾಯಿತು. ''ಅಯ್ಯಾ, ಈ ಹೊರೆಯನ್ನು ಹೊತ್ತುಕೊಂಡು ಮನೆಯವರೆಗೂ ತಂದು ಹಾಕು'' ಅಂದ!

ಆಧುನಿಕ ಭಗೀರಥ

ಅಣ್ಣಾ ಹಜಾರೆ

“

ನೀರು ಪಂಚ ಭೂತಗಳಲ್ಲಿ ಒಂದು. ಆ ಕಾರಣಕ್ಕೆ ಅದಕ್ಕೆ ಗೌರವ. ಈ ಗೌರವ ಕೇವಲ ರಿಚುಯಲ್. ‘ಗಂಗೇಚ, ಯಮುನಾ, ಸಿಂಧು, ಗೋದಾವರೀ ಕಾವೇರಿ ಜಲೇಸ್ಮಿನ್ ಸನ್ನಿಧೇ ಕುರು’ ಎಂದು ಬೆಳಗಾದರೆ ಜಪಿಸುವ ಜನ, ಪೂಜಾರ್ಹ ನದಿಗಳ ಪಟ್ಟಿಯನ್ನೇ ಮಾಡಿದರು. ಈ ನದಿಗಳನ್ನೂ ಪೂಜೆ, ಧರ್ಮದ ಹೆಸರಲ್ಲಿ ಕಲುಷಿತಗೊಳಿಸುತ್ತಾ ಹೋದರು. ಆಧುನಿಕತೆ ಕಾಲಿಟ್ಟಿತು. ನಗರ, ಕಾರ್ಖಾನೆಗಳು ಬೆಳೆದವು. ಅವು ಹೊರಹಾಕುವ ಕಲ್ಮಷ ನದಿ ಸೇರಿತು. ನೀರು ವಿಷವಾಯಿತು. ಕಾಡು ಕಡಿಯುತ್ತಾ ಹೋದರು. ಮತ್ತೆ ಬೆಳೆಸುವ ಗೋಜಿಗೆ ಹೋಗಲಿಲ್ಲ.

”

ಕೆಟ್ಟ ಮೇಲೆ ಬುದ್ಧಿ ಬಂದರೆ ಪ್ರಯೋಜನ ಇಲ್ಲ. ನಾವು ಯಾವುದೇ ಅಗತ್ಯ, ಸೌಲಭ್ಯ ಕುರಿತು ಯೋಚಿಸುವುದು ನಗರಗಳ ದೃಷ್ಟಿಯಲ್ಲಿ. ಹಳ್ಳಿಗಳು ಬೆಂಗಾಡಾಗುತ್ತವೆ. ಸಾಯುತ್ತವೆ. ಸರ್ಕಾರಗಳು ತೇಪೆ ಹಾಕುತ್ತವೆ. ಬದುಕಿಯೂ ಸತ್ತಂತೆ ಅಲ್ಲಿನ ಜೀವನ.

ಬೆಳೆಗೆ ಇರಲಿ, ಕುಡಿಯುವ ನೀರಿಗೂ ಪರದಾಟ. ಬರಿಗೊಡ ಹೊತ್ತು ಮೈಲುಗಟ್ಟಲೆ ಸುಡುಬಿಸಿಲಲ್ಲಿ ನಡೆಯಬೇಕು. ಇಂಥ ಎಷ್ಟೋ ಹಳ್ಳಿಗಳಿಗೆ ಇವತ್ತೂ ಜನ ಹೆಣ್ಣು ಕೊಡುವುದಿಲ್ಲ. ರಾಜ್ಯದಲ್ಲಿ ನಜೀರ್‌ಸಾಬ್ ಮಂತ್ರಿಯಾದರು. ಹಳ್ಳಿ ಹಳ್ಳಿಗಳಿಗೂ ಬೋರ್‌ವೆಲ್ ಬಂದವು. ಜನ, ಅದರಲ್ಲೂ ಹೆಣ್ಣು ಮಕ್ಕಳು ಬಾಯ್ತುಂಬ ಹರಸಿದರು. ಅವರನ್ನು ಪ್ರೀತಿಯಿಂದ ‘ನೀರು ಸಾಬ್’ ಎಂದೇ ಕರೆದರು. ಅವರು ಅತ್ತ ಹೋಗುತ್ತಿದ್ದಂತೆ ಬೋರ್‌ಗೆ ಹಾಕಿದ್ದ ಪಂಪು ಕೆಟ್ಟವು. ರಿಪೇರಿ ಮಾಡುವವರಿಲ್ಲ. ಇನ್ನು ಕೆಲವು ಕಡೆ ನೆಲದಾಳದ ನೀರಿನ ಮಟ್ಟ ಕುಸಿಯಿತು. ಇದ್ದ ಬೋರ್‌ವೆಲ್‌ಗಳು ಬರಿದಾದವು. ಜನ ಸರ್ಕಾರ ನೆಚ್ಚಿದಾಗ ಆಗುವುದು ಇಷ್ಟೇ. ಕೇವಲ ತಾತ್ಕಾಲಿಕ ಪರಿಹಾರ. ಆ ಹೆಸರಲ್ಲಿ ವಿಜೃಂಭಣೆ ವೋಟುಗಳು. ಸಮಸ್ಯೆ ಉಳಿದೇ ಇರುತ್ತದೆ. ಹಾಸಿದ ಕಂಬಳಿ ಹಾಸಿದಲ್ಲೇ.


ನಮ್ಮ ಸಮಸ್ಯೆಗೆ ನಾವೇ ಪರಿಹಾರ ಹುಡುಕಬೇಕು. ನಮ್ಮ ಸಂಪನ್ಮೂಲಗಳಿಂದಲೇ ಅದು ಸಾಧ್ಯವಾಗಬೇಕು. ಸರ್ಕಾರದ ಮೂಗು ಹಿಡಿದು, ಅವರ ಬೆನ್ನುಹತ್ತಿ ಕೆಲಸ ಮಾಡಿಸಬೇಕು. ಆಗ ಮಾತ್ರ ಏನಾದರೂ ಆದೀತು.



ಇದೆಲ್ಲ ಪುಸ್ತಕದ ಬದನೇಕಾಯಿ. ಹೇಳಲು, ಕೇಳಲು ಚೆನ್ನ ಅನಿಸುತ್ತದೆ. ಅದನ್ನು ಮಾಡಿ ತೋರಿಸಿದಾಗ! ‘ಓ! ಬಿಡಿ. ಎಲ್ಲೋ ಒಂದು ಕಡೆ ಏನೋ ಆಯಿತು. ಎಲ್ಲರೂ ಹಾಗೆ ಮಾಡೋಕ್ಕೆ ಆಗುತ್ತೆಯೇ?’ ಇದು ಸಾಮಾನ್ಯವಾಗಿ ಕೇಳಿಬರುವ ಪ್ರತಿಕ್ರಿಯೆ. ಒಬ್ಬರಲ್ಲ ಹಲವರು ಇಂಥದ್ದು ಮಾಡಿ ತೋರಿಸಿದ್ದಾರೆ. ಮಹಾರಾಷ್ಟ್ರದ ಪಾಂಡುರಂಗ ಶಾಸ್ತ್ರಿ ಅಥವಳೆ ನೂರಾ ಅರವತ್ತೈದು ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸಿದ್ದಾರೆ. ಅವರನ್ನು ಗುರುತಿಸಿ ಮೊದಲು ಬೆನ್ನು ತಟ್ಟಿದ್ದು ನಾವಲ್ಲ. ಅಮೇರಿಕಾದ ಪ್ರತಿಷ್ಠಿತ ಟೆಂಪಲ್‌ಟನ್ ಪ್ರಶಸ್ತಿ ಬಂದ ಮೇಲೆ ನಾವು ಕಣ್ಣು ಹೊಸಕಿಕೊಂಡು ‘ಇದ್ಯಾರಪ್ಪ?’ ಎನ್ನುವಂತೆ ನೋಡಿದ್ದು.

ರಾಜಸ್ಥಾನದ ಮರುಭೂಮಿಯಲ್ಲಿ ಬತ್ತಿ ಹೋಗಿದ್ದ ನದಿಯೊಂದಕ್ಕೆ ಮತ್ತೆ ಜೀವ ತುಂಬಿದವರು ರಾಜೇಂದ್ರ ಸಿಂಗ್. ಅಲ್ಲಿನ ತೊಂಬತ್ತು ಕಿಲೋಮೀಟರ್ ಉದ್ದಕ್ಕೂ ದಟ್ಟ ಕಾಡಿನ ಮರಗಳು ಹಸಿರುಕ್ಕಿಸಿ ನಗುವಂತೆ ಮಾಡಿದ್ದಾರೆ. ಇದು ಸಾಧ್ಯ ಎಂದು ತೋರಿದ್ದಾರೆ.

ಇವರೆಲ್ಲರಿಗಿಂತ ಮೊದಲು ಇಂಥ ನೀರಿನ ಕ್ರಾಂತಿಗೆ ನಾಂದಿ ಹಾಡಿದವರು ಮಹಾರಾಷ್ಟ್ರದ ಅಣ್ಣಾ ಹಜಾರೆ. ದ್ವಿತೀಯ ವಿಶ್ವ ಯುದ್ಧದ ಸಮಯಕ್ಕೆ ಸೈನಿಕ. ಅಲ್ಲಿಂದ ಹಿಂದಿರುಗಿ ಬಂದದ್ದು ಹಳ್ಳಿಗೆ. ಅಲ್ಲಿನ ಸ್ಥಿತಿ, ಜನರ ಅಸಹಾಯಕತೆ, ಕುಡಿಯುವ ನೀರಿಗೂ ಪರದಾಟ ಎಲ್ಲ ಕಂಡು ದಿಗ್ಭ್ರಾಂತರಾಗಿ ನಿಂತರು. ಅಲ್ಲಿಂದ ಓಡಿ ಹೋಗಿ, ಯಾವುದಾದರೂ ಪಟ್ಟಣ ಸೇರಿ ಸುಖವಾಗಿ ಇರಬಹುದಿತ್ತು. ಹುಟ್ಟಿದೂರಲ್ಲೇ ಏನಾದರೂ ಮಾಡಬೇಕು ಅನ್ನಿಸಿತು. ಹಾಗೆ ಹುಟ್ಟಿತು ರಾಲೇಗಾಂವ್ ಸಿದ್ಧಿಯ ನೀರಿನ ಕನಸು.



ಊರು ಅಭಿವೃದ್ಧಿಯಾದ ನಂತರ ಕಟ್ಟಿಸಿದ ದೇವಸ್ಥಾನ

ರಾಲೇಗಾಂವ್‌ಸಿದ್ಧಿ : ಮಹಾರಾಷ್ಟ್ರದಲ್ಲೀಗ ಚಿರಪರಿಚಿತ ಹೆಸರು. ಅಹ್ಮದ್‌ನಗರ ಜಿಲ್ಲೆಯ ಸಣ್ಣ ಗ್ರಾಮ. ಊರಂಚಿಗೆ ಗುಡ್ಡಗಳ ಸಾಲು. ಇವುಗಳಿಂದಾಗಿ ಊರ ಜಮೀನಿಗೆ ಬೀಳುತ್ತಿದ್ದ ಮಳೆಗೆ ತಡೆ. ಬೀಳುತ್ತಿದ್ದ ಒಂದಷ್ಟು ಮಳೆ ಗುಡ್ಡ ತೋಯಿಸಿ ಇಳಿದು ಮಾಯವಾಗುತ್ತಿತ್ತು.

ಊರಲ್ಲಿ ಒಂದೂವರೆ ಸಾವಿರ ಜನ. ಐದು ಕುಟುಂಬದವರಿಗೆ ಜಮೀನು ಇರಲಿಲ್ಲ. ಜಮೀನು ಇದ್ದವರೂ ಇವರಿಗಿಂತ ಒಳ್ಳೆಯ ಜೀವನ ನಡೆಸುತ್ತ ಇರಲಿಲ್ಲ. ಗೋಧಿ, ಜೋಳ ಬಿತ್ತಿ ಮುಗಿಲು ನೋಡುತ್ತಾ ಕೂರಬೇಕು. ಸುಗ್ಗಿಯಲ್ಲಿ ಕಣ ಮಾಡಿದರೆ ಎಕರೆಗೆ ನಾಲ್ಕೋ, ಐದು ಕ್ವಿಂಟಲ್ ಬಂತೆಂದರೆ ಅದೇ ದೊಡ್ಡದು. ಮಳೆ ಸಕಾಲಕ್ಕೆ ಬರದೇ ಇದ್ದರೆ ಬಿತ್ತಿದ ಕಾಳೂ ನೆಲದ ಪಾಲು. ಹಸಿದ ಹೊಟ್ಟೆ ತುಂಬಿಕೊಳ್ಳಲು ಹತ್ತಾರು ಕಿಲೋಮೀಟರು ದೂರದ ಊರುಗಳಿಗೆ ಕೂಲಿಗೆ ಹೋಗಬೇಕು. ಸಿಗುತ್ತಾ ಇದ್ದುದು ಬೆಳಿಗ್ಗೆಯಿಂದ ಸಂಜೆವರೆಗೆ ಕಲ್ಲು ಒಡೆಯುವ ಕೆಲಸ. ದುಡಿದು ದಣಿದ ಕೈಗಳ ಬೊಗಸೆ ತುಂಬುವಷ್ಟು ದುಡ್ಡೂ ಸಿಗುತ್ತಾ ಇರಲಿಲ್ಲ. ಸಿಕ್ಕಿದಷ್ಟನ್ನು ಹೊತ್ತುಕೊಂಡು, ಸೋತ ಹೆಜ್ಜೆ ಇಡುತ್ತಾ ಊರಿಗೆ ಬಂದರೆ ಕೈಬೀಸಿ ಕರೆಯುತ್ತಾ ಇದ್ದುದು ಪಡಖಾನೆಗಳು. ನೀರಿಲ್ಲದ ಊರಲ್ಲಿ ಹೆಂಡಕ್ಕೆ ಬರವಿಲ್ಲ. ಕೆಲವು ಮನೆತನಗಳಿಗೆ ಅಕ್ರಮ ಮದ್ಯ ತಯಾರಿಕೆಯೇ ಕಾಲ ಕಸುಬು. ದುಡಿದ ಕೂಲಿಯನ್ನು ಅಲ್ಲಿ ತೆತ್ತು ಮತ್ತೇರಿಸಿಕೊಂಡರೆ ಅವತ್ತಿನ ಕತೆ ಮುಗಿಯಿತು.

ಮನೆಗಳಲ್ಲಿ ಹೆಂಗಸರು, ಮಕ್ಕಳ ಗೋಳು ಕೇಳುವವರಿಲ್ಲ. ಮನೆಯ ಹೆಂಗಸರು ದುಡಿದು ತರಬೇಕು. ಮನೆಯ ಒಲೆ ಉರಿಯಬೇಕು. ಹೊರಗೆ ದುಡಿದು ದಣಿದು ಬಂದ ಹೆಣ್ಣುಗಳು, ನೀರು ತರಲು ಮತ್ತೆ ನಿತ್ಯ ಯಾತ್ರೆ. ಕೆಲವೊಮ್ಮೆ ಮೈಲುಗಟ್ಟಲೆ ನಡೆದು ಬರಿಗೊಡಗಳನ್ನು ತುಂಬಿಸಿಕೊಂಡು ಹೊತ್ತು ತರಬೇಕು.

ಸರ್ಕಾರದ ಪರಿಹಾರ : ಸರ್ಕಾರ ಒಂದು ಯಂತ್ರ. ಅದಕ್ಕೆ ಹೃದಯ ಇರುವುದಿಲ್ಲ. ಏನೋ ಒಂದು ಮಾಡಿ ಕುಳಿತರೆ ಆಯಿತು. ಅದರಿಂದ ಪ್ರಯೋಜನ ಆಯಿತೋ ಬಿಟ್ಟಿತೋ ತಿಳಿಯುವ ಗೋಜಿಗೂ ಹೋಗುವುದಿಲ್ಲ. ರಾಲೇಗಾಂವ್ ಸಿದ್ಧಿಯ ವಿಚಾರದಲ್ಲಿ ಆದದ್ದೂ ಅದೇ. ಇಲ್ಲಿನ ಜನರ ಮೊರೆ ಕೇಳಿ ಯಾರೋ ಒಬ್ಬರು ಉಪಾಯ ಮಾಡಿಯೇ ಬಿಟ್ಟರು. ಊರಂಚಿನ ಗುಡ್ಡದ ಮೇಲೆ ಹೇಗೂ ಮಳೆ ಬೀಳುತ್ತದೆ. ಅದೆಲ್ಲ ಸುಮ್ಮನೆ ಹರಿದು ಹೋಗುತ್ತದೆ. ಅದು ಸಂಗ್ರಹವಾಗಲು ಬೆಟ್ಟದ ಬುಡದಲ್ಲಿ ಕಟ್ಟೆ ಕಟ್ಟಿದರೆ ಆಯಿತು. ಸರಿ ಸರ್ಕಾರ ಒಪ್ಪಿತು. ಊರಂಚಿನ ಎರಡು ಗುಡ್ಡಗಳ ಬುಡದಲ್ಲಿ 4.35 ಲಕ್ಷ ರೂಪಾಯಿ ಖರ್ಚು ಮಾಡಿ ಕಟ್ಟೆಕಟ್ಟಿತು. ಮಳೆಗಾಲಕ್ಕೆ ನೀರೂ ಅದರಲ್ಲಿ ಸಂಗ್ರಹವಾಯಿತು. ಜನಕ್ಕೂ ಖುಷಿ. ಬೇಸಿಗೆ ಆರಂಭ ಆಗುತ್ತಾ ಇದ್ದಂತೆ ನೀರೆಲ್ಲ ಸೋರಿ, ಆವಿಯಾಗಿ ಬರಿದಾದ ಕಟ್ಟೆ ಜನರನ್ನು ಅಣಕಿಸಿತು. ಮತ್ತೆ ಅದೇ ಸ್ಥಿತಿ.

ಆದರೆ ಸರ್ಕಾರ ಕಿವುಡಾಗಿ ಕುಳಿತುಬಿಟ್ಟಿತ್ತು. ಅವರ ಯೋಜನೆ, ಯೋಚನೆ ಕಾಗದದಲ್ಲಿ ಸರಿ. ಅದು ವಾಸ್ತವದಲ್ಲಿ ನಡೆಯುವುದಿಲ್ಲ ಎಂಬುದು ಒಪ್ಪಿಕೊಳ್ಳಲೂ ಅವರ್‍ಯಾರೂ ತಯಾರಿರಲಿಲ್ಲ.

ಇದೆಲ್ಲ ಸುಮಾರು ಇಪ್ಪತ್ತೈದು ವರ್ಷದ ಹಿಂದಿನ ಕತೆ. ಬರೀ ಕಟ್ಟೆ ಕಟ್ಟಿ, ಮಳೆಗಾಲದಲ್ಲಿ ನೀರು ನಿಲ್ಲಿಸಿದರೆ ಆಗುವುದಿಲ್ಲ. ಅದು ಇಂಗಿ ಹೋಗದಂತೆ ಮಾಡಬೇಕು. ಅದಕ್ಕೆ ಮಳೆಯ ನೀರಿನ ನಿರ್ವಹಣೆ ಸರಿಯಾಗಿ ಆಗಬೇಕು. ಊರಲ್ಲಿ ಬೀಳುವುದು ವರ್ಷಕ್ಕೆ ಸರಾಸರಿ 25 ಇಂಚು ಮಳೆ. ಆ ನೀರನ್ನೇ ಸರಿಯಾಗಿ ಬಳಸಿದರೆ ಬದುಕು ಮಾಡಬಹುದು. ಇದೆಲ್ಲ ಸರಿ. ಆದರೆ ಇದನ್ನು ಜನಕ್ಕೆ, ಸರ್ಕಾರಕ್ಕೆ ತಿಳಿಸಿ ಹೇಳುವವರು ಯಾರು. ಜನರಿಗೆ ಏನಾದರೂ ಹೇಳಲು ಹೋದರೆ, ಸರ್ಕಾರ ಅಷ್ಟು ದುಡ್ಡು ಖರ್ಚು ಮಾಡಿ ಕಟ್ಟಿದ ಕಟ್ಟೆಯೇ ಒಣಗಿ ಕುಳಿತಿದೆ. ನಮ್ಮ ನಶೀಬೇ ಇಷ್ಟು! ಎಂದು ಉದಾಸೀನದ ಮಾತು ಆಡುತ್ತಾರೆ. ಅಂಥ ಸಮಯಕ್ಕೆ ಜನರಿಗೆ ತಿಳಿಸಿ ಹೇಳುವ, ಅವರಿಂದಲೇ ಇದಕ್ಕೊಂದು ಪರಿಹಾರ ಕಂಡುಕೊಳ್ಳುವ ಕೆಲಸಕ್ಕೆ ಮುಂದಾದರು ಅಣ್ಣಾ ಹಜಾರೆ.

ತಿದ್ದಿ ರೂಪಿಸುವ ಕೆಲಸ : ಆಗಿರುವ ತಪ್ಪು ತಿದ್ದುವುದು, ಸರಿಯಾದ ಹಾದಿ ತೋರುವುದು, ಇದು ಹಜಾರೆ ಅವರ ಹೊಣೆ ಆಯಿತು. ಊರಿನ ಬೆಟ್ಟದ ಬುಡದಲ್ಲಿ ಕಟ್ಟಿದ ಕಟ್ಟೆ ಸರಿಯಾಗಿಲ್ಲ. ಅಲ್ಲಿಗೆ ಬೆಟ್ಟದ ಮೇಲಿಂದ ರಭಸವಾಗಿ ನೀರು ಹರಿದು ಬರಲು ಬಿಡಬಾರದು. ಅದರಿಂದ ಮೇಲ್ಮಣ್ಣು ಕೊಚ್ಚಿ ಹೋಗುತ್ತದೆ. ನೆಲದಾಳಕ್ಕೆ ನೀರು ಇಳಿಯುವುದೇ ಇಲ್ಲ. ಇದನ್ನು ಪಡೆಯಲು ಬೆಟ್ಟದ ಮೇಲೆ ಅಲ್ಲಲ್ಲಿ ಸೂಕ್ತ ಜಾಗದಲ್ಲಿ ತಡೆ ಒಡ್ಡು (ಚೆಕ್‌ಡ್ಯಾಂ) ಆಗಬೇಕು. ಇದೆಲ್ಲ ಮೊದಲು ಜನರ ತಲೆಗೆ ತುಂಬುವ ಕೆಲಸ ಆಯಿತು.

ಪ್ರಯೋಗಕ್ಕಾಗಿ ಎರಡು ಚೆಕ್‌ಡ್ಯಾಂ

ಚಿರಾಪುಂಜಿ ಮತ್ತು ಜೈಸಲ್ಮೇರ್

ನಮಗೆಲ್ಲಾ ಗೊತ್ತು. ಇಡೀ ವಿಶ್ವದಲ್ಲಿಯೇ ಅತಿ ಹೆಚ್ಚು ಮಳೆ ಬೀಳುವ ಪ್ರದೇಶ ಚಿರಾಪುಂಜಿ. ಅಲ್ಲಿನ ವಾರ್ಷಿಕ ಸರಾಸರಿ ಮಳೆ 15000 ಮಿ.ಮೀ. ಇಷ್ಟಾಗಿಯೂ ಬೇಸಿಗೆಯಲ್ಲಿ ಅಲ್ಲಿ ಕುಡಿಯುವ ನೀರಿಗೆ ಬರ.

ಅಲ್ಲಿ ಕಾಡು ಕಡಿಯಲಾಗಿದೆ. ಹೊಳೆ, ಹಳ್ಳಗಳು ಬತ್ತುತ್ತವೆ. ಬೇಸಿಗೆಯಲ್ಲಿ ಹನಿ ನೀರೂ ಸಿಗುವುದಿಲ್ಲ. ಅಲ್ಲಿನ ಯಾರೂ, ಯಾವತ್ತೂ ಇಂಥದೊಂದು ಸ್ಥಿತಿ ಬರುತ್ತದೆಂದೂ ಊಹಿಸಿರಲಿಲ್ಲ. ಯಾವಾಗಲೂ ಮಳೆ. ನೀರಿಗ್ಯಾಕೆ ಚಿಂತಿಸಬೇಕು ಎಂದುಕೊಂಡಿದ್ದರು. ಒಂದು ದಿನಕ್ಕೂ ನೀರನ್ನು ಜತನದಿಂದ ಬಳಸಬೇಕು ಅನಿಸಿರಲಿಲ್ಲ.

ಈಗ ಕಾಲ ಬದಲಾಗಿದೆ. ಅಲ್ಲಲ್ಲಿ ಒಡ್ಡು ಕಟ್ಟಿ ನೀರನ್ನು ಸಂಗ್ರಹಿಸಿ ಇಡುವ ಯತ್ನ ನಡೆಸಲಾಗುತ್ತಿದೆ.

ಅದೇ ರಾಜಸ್ಥಾನದ ಮರಳುಗಾಡಿಗೆ ಸೇರಿದ ಜೈಸಲ್ಮೇರ್ ನೀರಿನ ಉತ್ತಮ ನಿರ್ವಹಣೆಗೆ ಇನ್ನೊಂದು ಮಾದರಿ. ಅತ್ಯಂತ ಕಡಿಮೆ ಮಳೆ ಬೀಳುವ ಪ್ರದೇಶ ಅದು. ನೀರೆಂದರೆ ಅಲ್ಲಿನ ಜನಕ್ಕೆ ಅಮೂಲ್ಯ ಸಂಪತ್ತು. ಬೀಳುವ ಕೆಲವೇ ಕೆಲವೇ ಹನಿ ಮಳೆ ಜತನದಿಂದ ಕಾಯ್ದುಕೊಳ್ಳುವ ಕೆಲಸ ಶತಮಾನದಿಂದಲೂ ನಡೆದುಕೊಂಡು ಬಂದಿದೆ.

ಹಾಗಾಗಿಯೇ ಅಲ್ಲಿಂದೂ ನೀರು ಕಡಿಮೆ ಇದ್ದರೂ, ಚಿರಾಪುಂಜಿಯ ಜನರ ಹಾಗೆ ಪರದಾಡುವುದಿಲ್ಲ. ಅಷ್ಟೊಂದು ಮಳೆ ಬೀಳುವ ಚಿರಾಪುಂಜಿಯಲ್ಲಿ ಏನೊಂದೂ ಕೃಷಿ ನಡೆಯುವುದಿಲ್ಲ. ಆದರೆ ಅತ್ಯಂತ ಕಡಿಮೆ ಮಳೆ ಬೀಳುವ ಜೈಸಲ್ಮೇರ್‌ನಲ್ಲಿ ಇವತ್ತಿಗೂ ಕೃಷಿ ಅನೂಚಾನವಾಗಿ ನಡೆದುಕೊಂಡು ಬಂದಿದೆ.

ಇಲ್ಲೊಬ್ಬ ಮಳೆ ದೇವರು

ಆತನ ಹೆಸರು ಮನಸುಖ್ ಭಾಯಿ ಸುವಾಗಿಯಾ. ವಯಸ್ಸು 53 ವರ್ಷ. ಗುಜರಾತ್‌ನ ಜುನಾಗಡ್ ಜಿಲ್ಲೆಯ ಭೂ ಅಭಿವೃದ್ಧಿ ಮಂಡಳಿಯಲ್ಲಿ ಕಿರಿಯ ಅಧಿಕಾರಿ. ಹಳ್ಳಿಗಾಡಿನ ಹೆಣ್ಣುಮಕ್ಕಳು ಬರಿಗಾಲಲ್ಲಿ ದೂರ ದೂರದಿಂದ ನೀರು ಹೊತ್ತು ತರುವುದು ಕಂಡು ಮನ ಕರಗಿತು. ಇವರಿಗೆ ಕುಡಿಯುವ ನೀರು ಕೊಡಲಾಗದ ಅಸಹಾಯಕತೆ. ಅಲ್ಲಿಂದ ಆತ ಚೆಕ್ ಡ್ಯಾಂ ಕಟ್ಟಲು ಆರಂಭಿಸಿದ. ಕಳೆದ ಒಂದೂವರೆ ವರ್ಷಗಳಲ್ಲಿ ನೂರಕ್ಕೂ ಹೆಚ್ಚು ಚೆಕ್ ಡ್ಯಾಂಗಳನ್ನು ಕಟ್ಟಿದ್ದಾನೆ. ಜನರ ಜಮೀನಿಗೆ ನೀರೊದಗಿಸಿದ್ದಾನೆ. ಕುಡಿಯುವ ನೀರೊದಗಿಸಿದ್ದಾನೆ. ಹಾಗಾಗಿ ಆತನಿಗೆ ಜನ 'ಚೆಕ್‌ಡ್ಯಾಂನ ಅಣ್ಣಯ್ಯ' ಎಂದೇ ಕರೆಯುತ್ತಾರೆ.

ಇದೆಲ್ಲವನ್ನು ಮನ್‌ಸುಖ್‌ಭಾಯಿ ಸರ್ಕಾರವನ್ನು ನೆಚ್ಚದೇ, ಒಂಟಿಯಾಗಿ ಅಲ್ಲಲ್ಲಿ ಜನರ ಸಹಕಾರದಿಂದ ಮಾಡಿದ್ದು. ಸರ್ಕಾರದ ನೆರವಿಗೆ ಕಾಯುತ್ತ ಕುಳಿತಿದ್ದರೆ ಮುಂದಿನ ಶತಮಾನದವರೆಗೂ ಒಂದಾದರೂ ಚೆಕ್ ಡ್ಯಾಂ ಕಟ್ಟಲು ಸಾಧ್ಯವಾಗುತ್ತಾ ಇರಲಿಲ್ಲ.

ಜುನಾಗಡದ ಕುಗ್ರಾಮ ಶಿರ್ವಾನಿಯಾ. ಸ್ವಾತಂತ್ರ್ಯ ಬಂದು 53 ವರ್ಷ ಆಗುತ್ತಾ ಬಂದಿದ್ದರೂ ಈ ಹಳ್ಳಿಗೆ ಇದುವರೆಗೆ ಒಬ್ಬನೇ ಒಬ್ಬ ಶಾಸಕ, ಸಂಸತ್ ಸದಸ್ಯ ಭೇಟಿ ನೀಡಿಲ್ಲವಂತೆ. ಅಂಥ ಕಡೆ ಜನರ ಶ್ರಮದಾನ, ಅವರೇ ಸಂಗ್ರಹಿಸಿದ ನಲವತ್ತೈದು ಸಾವಿರ ರೂಪಾಯಿ ಹಣದಲ್ಲಿ ಆತ ಹನ್ನೊಂದು ಚೆಕ್ ಡ್ಯಾಂ ಕಟ್ಟಿದ್ದಾರೆ. ಅಲ್ಲಿ ಇರುವುದೇ 265 ಜನ. ಈ ಚೆಕ್ ಡ್ಯಾಂಗಳಾದ ಮೇಲೆ ಮನ್‌ಸುಖ್‌ಭಾಯಿ ಅವರೆಲ್ಲರ ಪಾಲಿನ ದೇವರು.

ಗುಜರಾತ್‌ನ ಸೌರಾಷ್ಟ್ರ ಪ್ರದೇಶ ಬೆಂಗಾಡು. ಪ್ರತಿವರ್ಷ ನೀರಿಗಾಗಿ ಪರದಾಟ. ಬೀಳುವ ಅಲ್ಪ ಸ್ವಲ್ಪ ಮಳೆ ಹರಿದು ಹೋಗುತ್ತದೆ. ಅಂತರ್ಜಲದ ಮಟ್ಟ ತೀರಾ ಕೆಳಗೆ. ಇರುವ ಹಳ್ಳ, ತೊರೆ, ಕಿರು ಹಳ್ಳಗಳಿಗೆ ಸರಿಯಾದ ತಡೆ ಒಡ್ಡು ನಿರ್ಮಿಸಿದಲ್ಲಿ ಮಾತ್ರ ಜಲ ಸಂಪತ್ತು ವೃದ್ಧಿಸುತ್ತದೆ.

ಇದನ್ನರಿತ ಮನ್‌ಸುಖ್‌ಭಾಯಿ ತಮಗೆ ತಿಳಿದಷ್ಟು ರೀತಿಯಲ್ಲೇ ಚೆಕ್‌ಡ್ಯಾಂ ಕಟ್ಟಲಾರಂಭಿಸಿದರು. ಕಲ್ಲು, ಮರಳು, ಅಲ್ಪ ಸ್ವಲ್ಪ ಸಿಮೆಂಟ್ ಬಳಸಿ ಕಟ್ಟುವ ಇಂಥ ಒಡ್ಡುಗಳು ತೀರಾ ಅಗ್ಗ.

ಸರ್ಕಾರ ನೆಚ್ಚಿದರೆ ಆಗದು. ನಿಮ್ಮ ಕೆಲಸ ನೀವು ಮಾಡಿಕೊಳ್ಳಿ ಎಂದು ತಿಳಿಸಿ ಹೇಳಿದ. ಜನಕ್ಕೆ ಅಪನಂಬಿಕೆ. ನೀವೇ ಹಣ ಹೊಂದಿಸಿಕೊಳ್ಳಿ ಒಂದು ವಾರ ಶ್ರಮದಾನ ಮಾಡಿ ಚೆಕ್‌ಡ್ಯಾಂ ಸಿದ್ಧವಾಗುತ್ತದೆ ಎಂದು ಹೇಳಿದರೆ ನಂಬಿಕೆ ಬರಲಿಲ್ಲ. ತಿದ್ದಿ ತೀಡಿ ಹೇಳಿದ ಮೇಲೆ, ಅರೆ ಮನಸ್ಸಿನಿಂದಲೇ ಜನ ಹಣ ಸಂಗ್ರಹಿಸಿದರು. ಮಳೆ ಇಲ್ಲದೆ ಜನಕ್ಕೆ ಕೆಲಸ ಇರಲಿಲ್ಲ. ಅವರೂ ಶ್ರಮದಾನಕ್ಕೆ ಬಂದರು. ಸರ್ಕಾರದ ನೆರವಿಲ್ಲದೇ ಚೆಕ್‌ಡ್ಯಾಂ ಸಿದ್ಧವಾಯಿತು. ಮಳೆ ಅಲ್ಪ ಸ್ವಲ್ಪ ಬಂದಿದ್ದು ಸಂಗ್ರಹವಾಗಿ, ಭೂಮಿಯೊಳಗೆ ಅಂತರ್ಜಲದ ಮಟ್ಟ ಏರುತ್ತಿದ್ದಂತೆ ಜನಕ್ಕೆ ಪವಾಡ ಕಂಡಂತಾಯಿತು.

ಹಾಗೆ ಮನ್‌ಸುಖ್‌ಭಾಯಿ ಚೆಕ್ ಡ್ಯಾಂಗಳನ್ನು ಕಟ್ಟುತ್ತಾ ಹೋದ. ತನಗೆ ಇದ್ದಷ್ಟು ತಿಳುವಳಿಕೆಯಲ್ಲೇ ಜಾಗ ಗುರುತಿಸಿದ. ಅಲ್ಪಸ್ವಲ್ಪ ಕಟ್ಟಡ ಕಟ್ಟುವ ಪರಿಜ್ಞಾನ ಬೆಳೆಸಿಯೇ ಚೆಕ್‌ಡ್ಯಾಂ ಕಟ್ಟುತ್ತಾ ಹೋದ. ಇದೊಂದು ರೀತಿಯಲ್ಲಿ ಯಶೋಗಾಥೆ ಆಯಿತು. ಆತ ತಮ್ಮೂರಿಗೆ ಬರಲಿ, ಚೆಕ್‌ಡ್ಯಾಂ ಕಟ್ಟಲಿ ಎಂದು ಜುನಾಗಡ ಜಿಲ್ಲೆಯ ಹಳ್ಳಿಗಳ ಜನ ಕೈಯಲ್ಲಿ ದುಡ್ಡಿಟ್ಟುಕೊಂಡು ಕಾಯುತ್ತಾರೆ. ಅಂಥವರ ದೊಡ್ಡ ಸಾಲೇ ಆತನಿಗಾಗಿ ಕಾಯುತ್ತಾ ಇದೆ.

ಜುನಾಗಡ ತಾಲೂಕಿನಲ್ಲಿ ಆತನೊಬ್ಬ ದೇವ ಪುರುಷ. ಕಳೆದ ಸಲ ಕಟ್ಟಿದ ಚೆಕ್‌ಡ್ಯಾಂಗಳಲ್ಲಿ ನೀರು ಸಂಗ್ರಹವಾಗಿದೆ. ಈ ಸಲ ಅಷ್ಟಾಗಿ ಮಳೆ ಬೀಳದೇ ಇದ್ದರೂ ಬೋರ್‌ವೆಲ್‌ಗಳಲ್ಲಿ ನೀರು ಬತ್ತಿಲ್ಲ. ಇದರಿಂದಾಗಿ ಆ ಭಾಗದ ರೈತರು ಮನ್‌ಸುಖ್‌ಭಾಯಿಯನ್ನು ಕೃತಜ್ಞತೆಯಿಂದ ನೆನೆಸುತ್ತಾರೆ. ■

ಆಯಿತು: ಸರ್ಕಾರದ ರೋಜ್‌ಗಾರ್ ಯೋಜನೆಯ ಹಣ. ಜನಕ್ಕೆ ಕೂಲಿ ಸಿಕ್ಕ ಹಾಗೂ ಆಯಿತು. ಊರಿನ ಕೆಲಸವೂ ಆಯಿತು. ಮರು ವರ್ಷ ಗುಡ್ಡದ ಕಟ್ಟೆಯ ಸಮೀಪದ ಬಾವಿಗಳಲ್ಲಿ ನೀರಿನ ಮಟ್ಟ ಸಹಜ ಏರಿತು. ಆಗ ಜನಕ್ಕೆ ಸ್ವಲ್ಪ ನಂಬಿಕೆ ಬಂತು. ಆಮೇಲೇ ಅವರು ಇಂಥ ಕೆಲಸಗಳ ಬಗ್ಗೆ ಒಲವು ತೋರಿಸಲು ಆರಂಭಿಸಿದ್ದು.

ಎರಡು ಚೆಕ್‌ಡ್ಯಾಂ ಏನೇನೂ ಅಲ್ಲ. ಬೆಟ್ಟದಿಂದ ಹರಿದು ಬರುವ ನೀರಿನ ಹಾದಿಯಲ್ಲಿ ಕನಿಷ್ಠ ಮತ್ತೆ ಹತ್ತು ಹನ್ನೆರಡು ಚೆಕ್‌ಡ್ಯಾಂ ಆಗಬೇಕು. ಒಂದೊಂದಕ್ಕೂ ಹದಿನೈದರಿಂದ ಇಪ್ಪತ್ತು ಸಾವಿರ ರೂಪಾಯಿ ಖರ್ಚು. ಜನ ಒಲ್ಲದ ಮನಸ್ಸಿನಿಂದಲೇ ಈ ಕಾರ್ಯಕ್ಕೆ ಮುಂದಾದರು. ಚೆಕ್‌ಡ್ಯಾಂಗಳು ನಿರ್ಮಾಣ ಆಗುತ್ತಾ ಹೋದವು. ಅದರ ಪೂರ್ಣ ಪ್ರಮಾಣದ ಪರಿಣಾಮ ತಿಳಿಯಲು ನಾಲ್ಕೈದು ವರ್ಷಗಳೇ ಬೇಕಾದವು. ಆಮೇಲಿನದೇ ಇನ್ನೊಂದು ಕತೆ.

ಕಂಬ ಸುತ್ತುವ ಕೆಲಸ : ಸರ್ಕಾರದ ಉದ್ದೇಶಗಳು ಚೆನ್ನಾಗಿರುತ್ತವೆ. ಆದರೆ ಆ ಉದ್ದೇಶಗಳು ಯಾವೂ ಈಡೇರುವುದೇ ಇಲ್ಲ. ತುಟಿಗೂ ತುತ್ತಿಗೂ ನಡುವೆ ದೊಡ್ಡ ಅಂತರ. ಇಂಥ ಅಂತರ ವಿಸ್ತರಿಸುವ ಹೊಣೆ ನಮ್ಮ ಅಧಿಕಾರಶಾಹಿಯದು. ಫೈಲು ಬಂತೆಂದರೆ ಅದಕ್ಕೆ ಒಂದು ಕೆಂಪು ಪಟ್ಟಿ ಲಗಾಯಿಸಿ, ಮೂಲೆಗೆ ಬಿಸಾಡಿದರೆ ಮುಗಿಯಿತು. ಆ ಫೈಲಿನೊಳಗೆ ನೂರಾರು ಜೀವಿಗಳ ಆಸೆ ಇರುತ್ತವೆ, ಜೀವನ ಇರುತ್ತದೆ ಎಂದು ತಿಂಗಳ ಮೊದಲ ದಿನ ಪಗಾರ ಎಣಿಸುವ, ನಿತ್ಯ ಟೇಬಲಿನ ಕೆಳಗೆ ಗಿಂಬಳಕ್ಕೆ ಕೈ ಚಾಚುವ ಜನಕ್ಕೆ ಕಾಳಜಿಯೇ ಇರುವುದಿಲ್ಲ. ಅವರ ಕಾಳಜಿ ಇರುವುದು ಕನಸುಗಳಿಗೂ ಜನ ಬೆಲೆ ತೆರುವ ಬಗ್ಗೆಯೇ.

ಮಹಾರಾಷ್ಟ್ರ ಸರ್ಕಾರ ರಾಲೇಗಾಂವ್‌ನ ಜಲ ನಿರ್ವಹಣೆಯ ಯೋಜನೆ ರೂಪಿಸಿತು. ಅಲ್ಲಿನ ಮೇಲ್ಮಣ್ಣು ರಕ್ಷಿಸಬೇಕು. ಅದಕ್ಕೆ ನಾನಾ ಬಗೆಯ ತಡೆ ಒಡ್ಡುಗಳ ನಿರ್ಮಾಣ ಆಗಬೇಕು. ಜೊತೆಗೇ ಅರಣ್ಯೀಕರಣ ಆಗಬೇಕು. ಜೊತೆಗೇ ಗೋಮಾಳಕ್ಕೆ, ಉರುವಲಿಗೇ ಅಂತಲೇ ಇಂತಿಷ್ಟು ಭೂಮಿ ಎಲ್ಲ ನಿಗದಿಪಡಿಸಿ ಅಭಿವೃದ್ಧಿ ಮಾಡುವ ಕಾರ್ಯಕ್ರಮ. ರಾಲೆಗಾಂವ್ ಜನಕ್ಕೆ ಇದರ ಅರ್ಥ ಗೊತ್ತು. ಅದರ ರುಚಿಯನ್ನು ಅಣ್ಣಾ ಹಜಾರೆ ತೋರಿಸಿಕೊಟ್ಟಿದ್ದರು.

ಈಗಾಗಲೇ ಗುಡ್ಡದ ಬುಡದಲ್ಲಿ ಸರ್ಕಾರ ನಾಲ್ಕೂವರೆ ಲಕ್ಷ ಖರ್ಚು ಮಾಡಿ ಒಡ್ಡು ನಿರ್ಮಿಸಿತ್ತು.



ನೂತನವಾಗಿ ನಿರ್ಮಾಣಗೊಂಡ ಶಾಲೆ



ರಾಲೆಗಾಂವ್ ಸಿದ್ದಿಯ ಕ್ಷೇತ್ರ ವಿಕಾಸ ಪ್ರಶಿಕ್ಷಣ ಕೇಂದ್ರ

ಅದು 'ಕುಟ್ಟಿ ಕುಂದಾಪುರಕ್ಕೆ ಹೋಗಿ ಬಂದ ಹಾಗೆ' ಮಳೆಗಾಲದಲ್ಲಿ ನೀರು ಸಂಗ್ರಹ ಏನೋ ಆಗುತ್ತಿತ್ತು. ಬೇಸಿಗೆಯಲ್ಲಿ ಬತ್ತುತ್ತಾ ಇತ್ತು. ಜನಕ್ಕೆ ಅದೇ ಗೋಳು.

ಈ ಒಡ್ಡು ಕಟ್ಟೋದು ಹೀಗಲ್ಲ. ಕಲ್ಲು ಬಂಡೆ ಸಿಗುವವರೆಗೆ ತಳಪಾಯ ತೋಡಬೇಕು. ಅಲ್ಲಿ ಕಪ್ಪು ಮಣ್ಣು ಮುದ್ದೆ ಕಟ್ಟಿ ತುಂಬುತ್ತಾ ಬರಬೇಕು. ಆಮೇಲೆ ಗಟ್ಟಿ ತಳಪಾಯ ಹಾಕಬೇಕು. ಹಾಗಾದರೆ ಮಾತ್ರ ನೀರು ಬತ್ತುವುದು ನಿಲ್ಲುತ್ತದೆ. ಜನಕ್ಕೆ ಬೇಸಿಗೆಯಲ್ಲೂ ನೀರು ಸಿಗುತ್ತದೆ. ಇದನ್ನು ಅರಿತ ಹಜಾರೆ, ಅಹ್ಮದ್‌ನಗರದ ಜಿಲ್ಲಾ ಪರಿಷತ್‌ಗೆ ವರದಿ ತಯಾರಿಸಿಕೊಟ್ಟರು. ಅಷ್ಟಕ್ಕೇ ಕೆಲಸ ಆಗಿಬಿಡಲು ಇದೇನು 'ರಾಮರಾಜ್ಯ ಕಟ್ಟಿ ಹೋಯಿತೆ?'. ಹಜಾರೆಯವರು ಫೈಲುಗಳನ್ನು ಹೊತ್ತು ಜಿಲ್ಲಾ ಕೇಂದ್ರಕ್ಕೆ ಯಾತ್ರೆ ಹೊರಡಬೇಕಾಯಿತು. ಟೇಬಲಿಂದ ಟೇಬಲ್ಲಿಗೆ ಅದನ್ನು ತಾವೇ ಹೊತ್ತು ಹಾಕಬೇಕಾಯಿತು. ಸರ್ಕಾರೀ ಕಚೇರಿಗಳ ಕಂಬ ಸುತ್ತಬೇಕಾಯಿತು. 1980ರಲ್ಲಿ ಸರ್ಕಾರ ಯೋಜನೆ ರೂಪಿಸಿತು. ರಾಲೇಗಾಂವ್‌ನ ತಡೆ ಒಡ್ಡು ಪುನಃ ನಿರ್ಮಿಸಲು ಒಪ್ಪಿಗೆ ಸಿಗಲು ಮೂರು ವರ್ಷಬೇಕಾಯಿತು. ಹೊಸ ರೀತಿಯಲ್ಲಿ ಕಟ್ಟಿದ ಚೆಕ್‌ಡ್ಯಾಂ 1983-84ರಲ್ಲಿ ಸಿದ್ಧವಾಗಿ ನಿಂತಿತು. ಅದಕ್ಕೆ ಖರ್ಚಾಗಿದ್ದು ನಾಲ್ಕು ಲಕ್ಷ. ಇದರಿಂದಾಗಿ ನೀರು ನಿಧಾನವಾಗಿ ಭೂಮಿಯ ಆಳಕ್ಕೆ ವಿಸ್ತರಿಸಿಕೊಳ್ಳಲು ಆರಂಭಿಸಿತು.

ಇದರಿಂದಾಗಿ ಅಂತರ್ಜಲದ ಮಟ್ಟ ಏರಿತು. ಮೊದಲು ಎಂಬತ್ತು ಅಡಿ ತೋಡಿದರೂ ನೀರಿನ ಪಸೆ ಕಾಣುತ್ತಿರಲಿಲ್ಲ. ಒಡ್ಡಿನ ಜೀರ್ಣೋದ್ಧಾರ ಆದ ಮೇಲೆ ಮೂವತ್ತು ಅಡಿ ತೋಡಿದರೆ ನೀರು ಬೀಳುತ್ತಿತ್ತು. ಒಡ್ಡು ತಯಾರಾದ ಮೇಲೆ ಆಸುಪಾಸಿನ ಬತ್ತಿದ ಬಾವಿಗಳಲ್ಲಿ ನೀರು ಮತ್ತೆ ಬರಲಾರಂಭಿಸಿತು. ಬೇಸಿಗೆಯಲ್ಲೂ ಸಮೃದ್ಧ ನೀರು. ಹಳ್ಳಿ ಜನಕ್ಕೆ ಇದಕ್ಕಿಂತ ಇನ್ನೇನು ಸಾಕ್ಷಿ ಬೇಕು.

ಜನರಿಗೊಂದು ಚೌಕಟ್ಟು: ನೀರೇನೋ ಚೆನ್ನಾಗಿ ದೊರೆಯುತ್ತದೆ. ಅದನ್ನು ಸರಿಯಾಗಿ ಬಳಸದೇ ಇದ್ದರೆ! ಆ ಆತಂಕ ಅಣ್ಣಾ ಹಜಾರೆ ಅವರಿಗೂ ಇತ್ತು. ಅಲ್ಲದೇ ನೀರಿನ ಸಮೃದ್ಧಿಯಿಂದಾಗಿ ಜನರ ಬದುಕಲ್ಲೂ ಸಮೃದ್ಧಿ ಬರುತ್ತದೆ. ಅದು ಧಿಮಾಕಿಗೆ, ದರ್ಪಕ್ಕೆ, ಪ್ರತಿಷ್ಠೆಗೆ ಕಾರಣವಾಗುತ್ತದೆ. ಉಳ್ಳವನೊಬ್ಬ ಜಮೀನು ತುಂಬಾ ಕಬ್ಬು ಬೆಳೆದು, ಒಂದೂವರೆ ವರ್ಷ ಕೂಲಿಗಳನ್ನು ಹಚ್ಚಿ ಗದ್ದೆಗೆ ನೀರು ಬಿಡಿಸಿ, ತಾನು ಆರಾಮಾಗಿ ತಿರುಗುತ್ತಾನೆ. ಕಬ್ಬು ಬೆಳೆದು ನಿಂತ ಮೇಲೆ ಕಾರ್ಖಾನೆಯವರೇ ಬಂದು ಕೊಯ್ಲು ಮುಗಿಸಿ, ಹಣ ಎಣಿಸಿ ಹೋಗುತ್ತಾರೆ. ಹೀಗೆ ಹಣ ಸಂಪಾದಿಸುವ ಮನುಷ್ಯನ ಮಸ್ತಿ ಏರುತ್ತದೆ. ಮೈ ಬಗ್ಗಿಸಿ ದುಡಿಯುವುದಂತೂ ಇಲ್ಲ. ಕೈತುಂಬಾ ಹಣ. ದಿನವಿಡೀ ಚಾಚಿ ಬಿದ್ದಿರುವ ಕಾಲ. ಆಗ ಅವನು ಜೂಜಾಡುತ್ತಾನೆ. ಜನರನ್ನು ಕೂಡಿಸಿಕೊಂಡು ನಾನಾ ತರಲೆ ಮಾಡುತ್ತಾನೆ. ಕುಡಿದು ಇನ್ನಷ್ಟು ಅವಾಂತರ ಸೃಷ್ಟಿಸುತ್ತಾನೆ. ಇಂಥದೆಲ್ಲ ಆಗಬಾರದೆಂದೇ ಅವರು



ಹಲವು ಕಟ್ಟುಪಾಡುಗಳನ್ನು ಮಾಡಬೇಕಾಯಿತು. ಅದೂ ಊರವರು ಸೇರಿ ಚರ್ಚಿಸಿಯೇ ತೀರ್ಮಾನಿಸಿದ್ದು. ಹಾಗೆ ಮೊದಲ ಬಾರಿಗೆ ಬಂದಿದ್ದು 'ಚರ್ನಾ ಬಂದಿ'

ಚರ್ನಾ ಬಂದಿ : ಊರ ಮಗ್ಗಲು ಬೆಟ್ಟಗಳ ಮೇಲೆ ಒಡ್ಡುಗಳು ನಿರ್ಮಾಣ ಆದವು. ಬಿದ್ದ ಮಳೆ ನೀರು ಹರಿದು ಮಣ್ಣು ಕೊರೆದು ವ್ಯರ್ಥವಾಗುವುದು ತಪ್ಪಿಸಲು ಇದು ಮಾಡಿದ್ದು. ಅಂಥ ಒಡ್ಡುಗಳ ನಿರ್ಮಾಣ ಆದಾಗ ಸಹಜವಾಗಿ ಬೆಟ್ಟದಲ್ಲಿ ತಂಪು ಮೂಡಿತು. ನೆಟ್ಟಿದ್ದ ಗಿಡಗಳು ಚಿಗುರಿದವು. ಹುಲ್ಲು ಹಸಿರಾಗಿ ಬೆಟ್ಟದ ಒಡಲು ತುಂಬಿತು. ಇದನ್ನು ಕಂಡ ಊರಿನ ಜನ ಖುಷಿಯಿಂದ ದನ ಅಟ್ಟಿಕೊಂಡು ಹೋಗಿ ಮೇಯಿಸಲು ತೊಡಗಿದರು. ದನ, ಆಡು ಮೇಯಿಸುವುದಕ್ಕೆ ಮರಾಠಿಯಲ್ಲಿ 'ಚರ್ನಾ' ಅನ್ನುತ್ತಾರೆ. ಆಗ ತಾನೇ ಚಿಗುರತೊಡಗಿದ ಗಿಡಗಳಿಗೆ ಪಶುಗಳು ಬಾಯಿ ಹಾಕುತ್ತವೆ. ತುಳಿದು ಹಾಳು ಮಾಡುತ್ತವೆ. ಆಮೇಲೆ ಮತ್ತದೇ ಬೋಳು ಬೆಟ್ಟ ಉಳಿದುಕೊಳ್ಳುತ್ತದೆ. ಇದು ಸಾಲದೆಂಬಂತೆ ಕುರಿ, ಆಡು ಮೇಯಿಸಲು ಹೋದವರು ಹುಲ್ಲು ಸಿಗಲಿಲ್ಲ ಎಂದರೆ, ಕೈಯಲ್ಲಿರುವ ದೋಟಿಯಿಂದ ಮರದ ಕೊಂಬೆ ರೆಂಬೆಗಳನ್ನು ಕತ್ತರಿಸಿ ತಮ್ಮ ಮಂದೆಗಳ ಮುಂದೆ ಹರವುತ್ತಾರೆ. ಕೆಲವೇ ದಿನದಲ್ಲಿ ಬೆಳೆದ ಗಿಡಗಳಿಗೂ ಕುತ್ತು.

ಇದರ ತಡೆಗೆ ಜಾರಿಗೆ ಬಂದಿದ್ದೇ 'ಚರ್ನಾ' ಬಂದಿ. ಬೆಟ್ಟಕ್ಕೆ ಯಾರೂ ದನ, ಕುರಿ, ಆಡು ಅಟ್ಟಿಕೊಂಡು ಹೋಗಬಾರದು. ಅವುಗಳನ್ನು ಕೊಟ್ಟಿಗೆಯಲ್ಲೇ ಕಟ್ಟಿ ಮೇಯಿಸಬೇಕು. ಇಲ್ಲವೇ ತಮ್ಮ ತಮ್ಮ ಹೊಲಗಳ ಅಂಚಲ್ಲಿ ಮೇಯಿಸಬೇಕು ಎಂಬ ಠರಾವು ಮಂಡನೆ ಆಯಿತು. ಜನ ಒಪ್ಪಿದರು.

ಈಗಂತೂ ಸಮೃದ್ಧ ನೀರಿನಿಂದಾಗಿ ರಾಲೇಗಾಂವ್ ಇಡೀ ಹಸಿರಿಂದ ತುಂಬಿದೆ. ಶಾಲೆಯ ಅಂಗಳ, ಪಂಚಾಯ್ತಿ ಕಚೇರಿ. ಎಲ್ಲೆಲ್ಲೂ ಹಸಿರಿನ ತಾಂಡವ. ಹಾಗೇ ಗೋಮಾಳದಲ್ಲೂ ಸೊಂಪಾಗಿ ಮೇವಿನ ಹುಲ್ಲು, ಸಾರ್ವಜನಿಕ ಸ್ಥಳಗಳಲ್ಲಿ ಬೆಳೆದ ಇಂಥ ಎಲ್ಲ ಸಂಪತ್ತು. ಇಡೀ ಊರಿನದು. ಎಲ್ಲರಿಗೂ ಅದು ಸಮಾನವಾಗಿ ಹಂಚಿಕೆ ಆಗಬೇಕು. ಅದಕ್ಕೇ ಸೂಕ್ತ ನಿಯಮ ಕೂಡ ರಚಿಸಲಾಗಿದೆ. ಊರಿನ ದನ ಕರು, ಆಡು ಕುರಿಗಳು ನೆಮ್ಮದಿಯಿಂದ ಮೇವು ಪಡೆಯುವ ವ್ಯವಸ್ಥೆ ಆಗಿದೆ. ಅತ್ತ ಬೆಟ್ಟದ ಹಸಿರು. ಊರಿನ ಗಿಡಮರ ಉಳಿದುಕೊಂಡಿವೆ. ಜನರ ಮೇಲಿನ ಸಮಸ್ಯೆಗೂ ಪರಿಹಾರ ಒದಗಿಸಲಾಗಿದೆ.

'ಕುರ್ಚಿ' ಬಂದಿ: ಮೊದಲು ಮೊದಲು 'ಚರ್ನಾ ಬಂದಿ' ಜಾರಿಗೆ ಬಂದಾಗ ಅದರ ಮಹತ್ವ ಜನಕ್ಕೆ ಗೊತ್ತಾಗಲಿಲ್ಲ. ದನ ಬಿಟ್ಟು ಮೇಯಿಸಬಾರದು ಅಷ್ಟೇ ತಾನೇ! ಎಂದು ಗೊಣಗಿದರು. ತಾವೇ 'ಕುರ್ಪೀ' ಅಥವಾ 'ಕುರ್ಚಿಗೆ' ಹಿಡಿದು ಬೆಟ್ಟದ ಮೇಲೆ ಬೆಳೆದಿದ್ದ ಹುಲ್ಲು ಕೆತ್ತಿ ತರತೊಡಗಿದರು. ಇದು ಇನ್ನೂ ಅಪಾಯಕಾರಿ.

ದನಗಳು ಹುಲ್ಲಿಗೆ ಬಾಯಿ ಹಾಕಿದರೆ, ಮೇಲಿನ ಭಾಗವಷ್ಟೆ ಕಡಿದು ತಿನ್ನುತ್ತವೆ. ಬೇರು

ಸಮೇತ ಕಿತ್ತು ತಿನ್ನುವುದಿಲ್ಲ. ಮನುಷ್ಯ ಯಾವಾಗ ಮೇವು ಸಂಗ್ರಹಕ್ಕೆ ಕೈ ಹಾಕಿದನೋ! ಅಲ್ಲಿಂದ ಇನ್ನೂ ಅಪಾಯಕಾರಿ ಸ್ಥಿತಿ ಬಂತು. ಬೆಟ್ಟದ ಮೇಲೆ ಹುಲ್ಲು ಬೆಳೆದರೆ, ಮೇಲ್ಮೈಯ ಮಣ್ಣು ಕೊಚ್ಚಿ ಹೋಗದಂತೆ ತಡೆಯುತ್ತದೆ. ಮನುಷ್ಯರು ಕುರ್ಪಿ ಹಿಡಿದು ಹುಲ್ಲು ಕೆತ್ತಲಾರಂಭಿಸಿದ ಮೇಲೆ ಮತ್ತೆ ಹಜಾರೆಯವರು ತಲೆ ಚಚ್ಚಿಕೊಳ್ಳಬೇಕಾಯಿತು. ಬೆಟ್ಟದ ಹಸಿರು ಯಾಕೆ ಉಳಿಯಬೇಕು? ಅದು ಉಳಿಯದಿದ್ದರೆ ಮತ್ತದೇ ಹಿಂದಿನ ನೀರಿನ ಬರ ಹೇಗೆ ಬರುತ್ತದೆ ಎಂದೆಲ್ಲ ವಿವರಿಸಿದ ಮೇಲೆ 'ಕುರ್ಪಿ ಬಂದಿ' ಜಾರಿಗೆ ಬಂತು.

ನಶಾ ಬಂದಿ, ನಸ್‌ಬಂದಿ : ರಾಲೇಗಾಂವ್‌ನಲ್ಲಿ ನೀರಿಗೇ ಬರವಿದ್ದಾಗ ಕಳ್ಳಭಟ್ಟಿಗೆ ಬರವಿರಲಿಲ್ಲ. ಬಾವಿಗಳಲ್ಲಿ ನೀರು ತುಂಬಿ, ಜನರ ಕೈಯಲ್ಲಿ ಒಂದಷ್ಟು ಹಣ ಓಡಾಡಲು ಆರಂಭವಾದ ಮೇಲೆ ಇಂಥ ಸಾರಾಯಿ ಅಡ್ಡೆಗಳಲ್ಲಿ ಜನರ ಸಂದಣಿ ಹೆಚ್ಚಾಯಿತು. ಕೈಗೆ ಬಂದ ದುಡ್ಡು ತೆತ್ತು ಅನಾರೋಗ್ಯ ಕೊಳ್ಳುವ, ಜಗಳ, ಹೊಡೆದಾಟಗಳಿಗೂ ನಾಂದಿಯಾಯಿತು. ಇದನ್ನು ಪಡೆಯದೇ ಇದ್ದಲ್ಲಿ ಮತ್ತದೇ ಪರಿಸ್ಥಿತಿ. ಮೈ ಮುರಿದು ದುಡಿದು ಗಳಿಸಿದ್ದೆಲ್ಲ ಅಲ್ಲಿ ಸಾರಾಯಿ ಅಡ್ಡೆಗಳಲ್ಲಿ ಸುರಿದು ಮೈ, ಮನಸ್ಸು ಎರಡೂ ಕೆಡಿಸಿಕೊಳ್ಳುವ ಜನರನ್ನು ತಿದ್ದುವ ದೊಡ್ಡ ಕೆಲಸ ಆಂದೋಲನದ ರೂಪದಲ್ಲಿ ಆರಂಭವಾಯಿತು.

ಅದನ್ನೇ ಅವರು 'ನಶಾ ಬಂದಿ' ಎನ್ನುತ್ತಾರೆ.

ಕೇವಲ ಸಾರಾಯಿ, ಹೆಂಡ ಅಷ್ಟೇ ಅಲ್ಲ ತಂಬಾಕಿನಂಥ ವಸ್ತುಗಳ ಮಾರಾಟ, ಬಳಕೆ ಎರಡನ್ನೂ ಬಹಿಷ್ಕರಿಸಲಾಯಿತು. ಇದರಿಂದಾಗಿ ಅಲ್ಲಿಯಂತೂ ನಶೆಯ ಪದಾರ್ಥಗಳು ದೊರೆಯುವುದು ನಿಂತಿತು. ಅವರ ಜೊತೆಗೇ ಹೊರಗೆಲ್ಲೋ ಹೋಗಿ ಕುಡಿದು ಬರುವವರನ್ನೂ ಹಿಡಿದು ದಂಡಿಸಲಾಯಿತು. ಇದರ ಪರಿಣಾಮವಾಗಿ ರಾಲೇಗಾಂವ್‌ನಲ್ಲಿ ಜನ ಸುಧಾರಿಸಿದ್ದಾರೆ. ಅವರ ಆರೋಗ್ಯ, ಮನಸ್ಸುಗಳೂ ಸ್ವಸ್ಥವಾಗಿವೆ.

ಇಂಥ ನಿರ್ಬಂಧಗಳನ್ನು ಹೇರಿದ ಹಾಗೇ, ಜನಸಂಖ್ಯೆಯ ಮೇಲೂ ನಿಯಂತ್ರಣ ಹೇರಲಾಯಿತು. 'ನಮ್ಮಲ್ಲಿ ಮಕ್ಕಳನ್ನು ಮಾಡುವುದೇ ಬಹುದೊಡ್ಡ ರಂಜನೆ' ಎಂದು ಹಿರಿಯ ಪತ್ರಕರ್ತರೊಬ್ಬರು ಹೇಳಿದ್ದರು. ಸಂಸಾರದ ಹೊರೆ ದೊಡ್ಡದಾದಷ್ಟೂ ಸಮಸ್ಯೆ ಹೆಚ್ಚು, ದುಡಿಮೆ ಸಾಲದಾಗುತ್ತದೆ. ಬಡತನದ ಜೊತೆಗೇ ನಾನಾ ರೀತಿಯ ಸಮಸ್ಯೆ

ಕೆರೆಗಳನ್ನು ಉದ್ಧರಿಸುವ ಮಹಿಳೆಯರು

ಕೋಲಾರದ ಒಣ ಭೂಮಿಯಲ್ಲೂ ನೀರೊಸರುವ ಜಲ ಮೂಲಗಳಿಗೆ ಕೊರತೆ ಇಲ್ಲ. ಬಿದ್ದ ಮಳೆ ನೀರು ಕೊಚ್ಚಿ ಮರೆಯಾಗದಂತೆ, ಸಂಗ್ರಹಿಸಿ ವರ್ಷವಿಡೀ ಬಳಸಲು 4,500 ಕೆರೆಗಳು ಇದ್ದವು. ಈಗ ಅವೆಲ್ಲ ಬತ್ತಿವೆ. ತುಂಬಿಕೊಂಡ ಹೂಳು ಎತ್ತುವವರಿಲ್ಲ. ಕೆರೆಯ ಏರಿ ಒಡೆದರೆ ದುರಸ್ತಿ ಮಾಡುವವರಿಲ್ಲ. ತೂಬುಗಳಂತೂ ಹಳ್ಳ ಹಿಡಿದು ಹೋಗಿವೆ.

ಹಣವಿದ್ದ ಜನಕ್ಕೆ ಇದೆಲ್ಲ ಸಮಸ್ಯೆಯೇ ಅಲ್ಲ. ಭೂಮಿಯ ಆಳದಾಳಕ್ಕೆ ಕೊರೆಯುತ್ತಾರೆ. ಕೊಳವೆ ಬಾವಿ ಹಾಕಿಸುತ್ತಾರೆ. ತರಕಾರಿ ಹಣ್ಣು ಬೆಳೆದು ಹತ್ತಿರದ ಬೆಂಗಳೂರಿಗೆ ಸಾಗಿಸುತ್ತಾರೆ. ಕೈತುಂಬಾ ದುಡ್ಡು ಎಣಿಸಿಕೊಳ್ಳುತ್ತಾರೆ.

ಇಂಥ ಜನ ಕೂಡ ಹೀಗೆ 'ಝುಂ' ಅಂತ ಇರಲು ಸಾಧ್ಯವಿಲ್ಲ. ಆಗಲೇ ಬಾವಿಗಳು ಆಳಕ್ಕೆ ಇಳಿಯುತ್ತಿವೆ. ಅಂತರ್ಜಲದ ಮಟ್ಟ ತೀವ್ರವಾಗಿ ಕುಸಿದಿದೆ. ಮುಂದೊಂದು ದಿನ ಬೆಳೆದು ನಿಂತ ತೋಟದ ಗಿಡ, ಮರ ಒಣಗಿ ನೀರಿಗಾಗಿ ಬಾಯಿ ಬಿಡುತ್ತವೆ. ಆ ಹೊತ್ತಿಗೆ ಕಾಲ ಮಿಂಚಿರುತ್ತದೆ.

ಈಗಾಗಲೇ ಇಲ್ಲಿ ಬೇಸಿಗೆ ಬಂತೆಂದರೆ ದನ, ಕರುಗಳಿಗೆ ಕುಡಿಯುವ ನೀರಿಲ್ಲ. ಜನ ಕೂಡ ಪರದಾಡಿ ನೀರು ಹೊತ್ತು ತರಬೇಕು. ಇಂಥ ಸ್ಥಿತಿಯಲ್ಲಿಯೂ ಆಸೆಯ ಕಿರಣದಂತೆ ಮೂಡಿದ್ದಾರೆ ಪಾಪಮ್ಮನಂಥ ವಯೋವೃದ್ಧರು. ಆಕೆ ಗ್ರಾಮೀಣ ಮಹಿಳಾ ಒಕ್ಕೂಟದ ಕಾರ್ಯದರ್ಶಿ. ನೂರಾ ಹದಿನಾರು ವಿವಿಧ ಮಹಿಳಾ ಶಾಖೆಗಳಿವೆ ಈ ಒಕ್ಕೂಟಕ್ಕೆ. ಒಟ್ಟಾರೆ ಸದಸ್ಯರ ಸಂಖ್ಯೆ ಮೂರುವರೆ ಸಾವಿರ. ಆಕೆ ದನಿ ಎತ್ತಿ ಕೇಳುತ್ತಾರೆ,

'ಎಲ್ಲಾ ನಾವೇ ಮಾಡೋದಾದರೆ ಸರ್ಕಾರ ಇರೋದು ಯಾಕೆ?' ಆಕೆಯ ಮಾತಿನಲ್ಲೂ ಅರ್ಥವಿದೆ.

ಮುಳಬಾಗಿಲಂಥ ತೀವ್ರ ಬರದ ಪ್ರದೇಶದಲ್ಲೂ ಅವರೆಲ್ಲ ಒಂದು ಕಾಯಕ ಕೈಗೊಂಡಿದ್ದಾರೆ. ಕೆರೆಗಳ ಹೂಳೆತ್ತಿ ಜೀರ್ಣೋದ್ಧಾರ ಮಾಡುವುದೇ ಈ ಕಾಯಕ. ಮುಳಬಾಗಿಲು ತಾಲ್ಲೂಕು ಒಂದರಲ್ಲೇ 440 ಕೆರೆಗಳಿವೆ. ಎಲ್ಲ ಹಾಳುಬಿದ್ದಿವೆ. ಅವುಗಳ ಪುನಶ್ಚೇತನಕ್ಕೆ ಸೊಂಟ ಕಟ್ಟಿ ನಿಂತ ಗ್ರಾಮ ವಿಕಾಸ ಸಂಘಟನೆ ಮಹಿಳೆಯರನ್ನು ನೆಚ್ಚಿ ಕಾರ್ಯ ಆರಂಭಿಸಿತು.

ಮುಳಬಾಗಿಲು ತಾಲೂಕು ಹೊನ್ನಶೆಟ್ಟಿ ಹಳ್ಳಿಗೆ ಮೊದಲ ಜೀವ ಬಂತು. ಕೆಲಸ ಆರಂಭಿಸಿದ್ದು 1993ರಲ್ಲಿ. ಹಣ ಸಂಗ್ರಹಿಸಿ, ಕೆಲಸ ಪೂರೈಸಲು ನಾಲ್ಕು ವರ್ಷ ಬೇಕಾಯಿತು.

ಇದರಿಂದ ಸ್ಫೂರ್ತಿಗೊಂಡ ಮಹಿಳಾ ಸಂಘಟನೆಗಳು ಬ್ಯಾಂಕಿಂದ ಎರಡೂವರೆ ಲಕ್ಷ ಸಾಲ ಪಡೆದು ಬೈಯನಾಥದ ಕೆರೆಯ ಹೂಳು ತೆಗೆದವು. ಹೀಗೆ ಕೆರೆಗಳ ಉದ್ಧಾರದ ಕಾಯಕ ಸಾಗಿದೆ.

ಇನ್ನೊಂದೆಡೆ ಈ ಕಾರ್ಯಕ್ರಮ ಜನಪ್ರಿಯಗೊಳಿಸುವ ಕೆಲಸವೂ ಸಾಗಿತು. ಮನೆ ಅಥವಾ ಹೊಲದ ಕೆಲಸದಲ್ಲಿ ತೊಡಗಲಾಗದ, ವೃದ್ಧ ಮಹಿಳೆಯನ್ನು ಸಂಘಟಿಸಿ ಕೆರೆಗಳ ಜೀರ್ಣೋದ್ಧಾರದ ಪ್ರಯೋಜನ ತಿಳಿಸಲಾಯಿತು. ಅವರು ಹಾಡಿದ ಹಾಡು, ಮಾಡಿದ ಘೋಷಣೆ ಎಲ್ಲ ಆಡಿಯೋ ಕೆಸೆಟ್ ಆಗಿ ಪ್ರಚಾರಕ್ಕೆ ಬಂತು. ಇಂಥ ಹಿರಿಯ ಮಹಿಳೆಯರ ತಂಡ ಜಿಲ್ಲೆಯ 256 ಹಳ್ಳಿಗಳಲ್ಲಿ ಸುತ್ತಿ ಎಚ್ಚರ ಮೂಡಿಸಿತು.

ಅದರ ಪರಿಣಾಮವಾಗಿಯೇ ಹೊನ್ನಶೆಟ್ಟಿ ಹಳ್ಳಿಯಿಂದ 40 ಕಿಲೋ ಮೀಟರ್ ದೂರದ ಗದ್ದೂರಲ್ಲಿ ಕೆರೆಯ ಹೂಳೆತ್ತುವ ಕೆಲಸ ಆರಂಭವಾಯಿತು. ಕೆರೆ ಮರು ಜೀವ ಪಡೆದೂ, ಅದರಿಂದ ನೀರಾವರಿ ಪ್ರಯೋಗ ಪಡೆಯದ ಹಳ್ಳಿಯ ಜನ ಕೂಡ ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. 'ಕೆರೆ ಉದ್ಧಾರವಾದರೆ ಜನಕ್ಕೆ ದನಕ್ಕೆ ಕುಡಿಯುವ ನೀರಾದರೂ ಸಿಗುತ್ತದೆ' ಎಂಬುದು ಅವರ ಚಿಂತನೆ.

ಹೂಳೆತ್ತುವುದರಿಂದ ಜನಕ್ಕೆ ಕೆಲಸ ಸಿಗುತ್ತದೆ. ಹಾಗೆ ಎತ್ತಿದ ಹೂಳನ್ನು ಮಾರಲಾಗುತ್ತದೆ. ಒಂದು ಗಾಡಿ ಮಣ್ಣಿಗೆ ಮೂವತ್ತು ರೂಪಾಯಿ. ಎತ್ತಿನ ಗಾಡಿ ಇಲ್ಲದವರ ಜಮೀನಿಗೆ ಸಂಘಟನೆಯ ಗಾಡಿಗಳೇ ಮಣ್ಣು ಹೊತ್ತೊಯ್ದು ಹಾಕುತ್ತವೆ. ಅದಕ್ಕೆ 25 ರೂಪಾಯಿ ತೆರಬೇಕು. ಇಂಥ ಸಾಗಾಣಿಕೆ ಗಾಡಿಗಳನ್ನು ಹಳ್ಳಿಯವರು ಸ್ವಯಂ ಸೇವಾ ಸಂಘಟನೆ ನೀಡಿದ ಬಡ್ಡಿರಹಿತ ಸಾಲದಿಂದಲೇ ಖರೀದಿಸಿದ್ದಾರೆ. ಪಡೆದ ಸಾಲ ಎರಡು ವರ್ಷದಲ್ಲಿ ಮರುಪಾವತಿ ಮಾಡಬೇಕು.

ಇದರಿಂದ ಆದ ಪ್ರಯೋಜನ ಎಂದರೆ, ಜನರಲ್ಲಿ ಈಗ ತಿಳುವಳಿಕೆ ಮೂಡಿದೆ. ತಮ್ಮೂರ ಕೆರೆಗಳನ್ನು ಸ್ವಚ್ಛ ಮಾಡಿಕೊಳ್ಳಲು ಜನ ಸಿದ್ಧವಾಗಿದ್ದಾರೆ. ಸಾಮಾನ್ಯವಾದ ಒಂದು ಕೆರೆ ಮತ್ತೆ ಜೀವ ಪಡೆಯಲು ನಾಲ್ಕರಿಂದ ಐದು ಲಕ್ಷ ರೂಪಾಯಿ ಬೇಕು. ಇಂಥ ಸಾಲ ನಬಾರ್ಡ್ (ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್)ನಿಂದ ದೊರೆಯುತ್ತದೆ. ಅವಕ್ಕೆ ವಾರ್ಷಿಕ ಶೇಕಡಾ 12ರಂತೆ ಬಡ್ಡಿ ತೆರಬೇಕು. ಇಡೀ ಹಳ್ಳಿಯ ಜನ ಸಾಲಕ್ಕೆ ಹೊಣೆಗಾರರಾಗಬೇಕು. ಕೆರೆಯಿಂದ ನೇರವಾಗಿ ಪ್ರಯೋಜನ ಪಡೆಯದೇ ಇರುವವರೂ, ಸರಾಸರಿ ನಾಲ್ಕೈದು ವರ್ಷಗಳಲ್ಲಿ ಹತ್ತು ಸಾವಿರ ರೂಪಾಯಿ ತೆರಬೇಕು. ಈ ಕಾರಣಕ್ಕೇ ಮಹಿಳಾ ಸಂಘಟನೆಯ ಪಾಪಮ್ಮ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಅವರ ದನಿ ಸರ್ಕಾರದವರೆಗೂ ಮುಟ್ಟಿ, ನಗರಕ್ಕೂ ಸರಿಯಾದ ಸ್ಪಂದನ ದೊರೆತರೆ ಬೆಂಗಾಡು ಎನಿಸಿಕೊಂಡ ಕೋಲಾರ ಜಿಲ್ಲೆಯಿಡಿ ಹಸಿರು ತುಂಬಿ ನಗುತ್ತದೆ. ಅದಕ್ಕೆ ಮಹಿಳೆಯರೇ ರೂವಾರಿಗಳಾಗಿರುತ್ತಾರೆ. ■

ಹುಟ್ಟಿಕೊಳ್ಳುತ್ತವೆ. ಆದರ ತಡೆಗಾಗಿ ಜಾರಿಯಾದದ್ದು 'ನಾಸ್‌ಬಂದಿ' ಈಗ ಅದು ಯಶಸ್ವೀ ಕೂಡ.

ಬೆಳೆ ಪದ್ಧತಿ : ನೀರು ಜೀವನಾಧಾರ. ಅದರ ಬಳಕೆ ಸರಿಯಾದ ರೀತಿಯಲ್ಲಿ ಆಗದೇ ಇದ್ದಲ್ಲಿ ವೈಪರೀತ್ಯ ತಲೆದೋರುತ್ತದೆ. ರಾಲೇಗಾಂವ್ ಸಿದ್ಧಿ ಜನಕ್ಕೆ ಇದನ್ನು ಮನವರಿಕೆ ಮಾಡಿಕೊಟ್ಟವರು ಅಣ್ಣಾ ಹಜಾರೆ. ನೀರಿದೆ ಎಂದು ಬರೀ ಗದ್ದೆ ಮಾಡಿದರೆ, ಕಬ್ಬು ಬೆಳೆದರೆ ಹಣವೇನೋ ದಂಡಿಯಾಗಿ ಸಿಗಬಹುದು. ಆದರೆ ಬೇಗ ಜಮೀನು ಹಾಳಾಗುತ್ತೆ. ಇಂಥ ವಾಣಿಜ್ಯವಾಗಿ ಲಾಭದಾಯಕ ಬೆಳೆಗಳಲ್ಲಿ ಯಜಮಾನನ ದುಡಿಮೆ ಕಡಿಮೆ. ಕೂಲಿ ಆಳುಗಳಿಗೇ ಅಲ್ಲಿ ಆದ್ಯತೆ. ಬಿಡುವಾಗಿ ಇರುವ ದುಡ್ಡು ಉಳ್ಳ ವ್ಯಕ್ತಿ ಸಮಾಜದಲ್ಲಿ ಅಪಾಯಕಾರಿ ಆಗಿ ಬೆಳೆಯುತ್ತಾನೆ. ಅತ್ತಕಡೆ ಜಮೀನು ಹಾಳು. ಇತ್ತಕಡೆ ಊರೂ ಹಾಳು.

ಆ ಕಾರಣಕ್ಕೇ ಯಾವ ರೀತಿಯ ಬೆಳೆಗಳನ್ನು ಬೆಳೆಯಬೇಕೆಂಬ ಬಗ್ಗೆ ರಾಲೇಗಾಂವ್ ಜನರೇ ಸೇರಿ ನಿರ್ಧರಿಸಿದ್ದಾರೆ. ತೋಟಗಾರಿಕೆಯ ಬೆಲೆ, ತರಕಾರಿ, ಆಹಾರ ಧಾನ್ಯಕ್ಕೇ ಅಲ್ಲಿ ಪ್ರಾಶಸ್ತ್ಯ. ಇದರಿಂದಾಗಿ ವರ್ಷವಿಡೀ ಜಮೀನಿನ ಕೆಲಸದಲ್ಲಿ ಜನ ತೊಡಗಿಕೊಂಡಿರುತ್ತಾರೆ. ವೈವಿಧ್ಯಮಯವಾದ, ದೈನಂದಿನ ಜೀವನಕ್ಕೆ ಅಗತ್ಯವಾದ ಬೆಳೆ ಮಾತ್ರ ಬೆಳೆಯುವುದರಿಂದ ಒಂದು ರೀತಿಯಲ್ಲಿ ಗ್ರಾಮ ಇವತ್ತು ಸ್ವಾವಲಂಬಿ.

ಸಹಕಾರ : ಹಳ್ಳಿಯೊಂದು ಉದ್ಧಾರ ಆಗಬೇಕಾದರೆ ಗಾಢವಾದ ಒಳನೋಟ ಬೇಕಾಗುತ್ತದೆ. ಆಪ್ತವೆನಿಸುವ ಗ್ರಾಮೀಣ ಬದುಕಿನಲ್ಲಿ ಪರಸ್ಪರರ ಸಹಕಾರ, ಪರಸ್ಪರ ಅವಲಂಬನ ಗಟ್ಟಿಗೊಳಿಸುವುದು ಮುಖ್ಯ. ಇವತ್ತು ರಾಜಕಾರಣಿಗಳು ನಾನಾ ಹೆಸರಲ್ಲಿ ಪರಸ್ಪರ ಅಪನಂಬಿಕೆ, ವೈಷಮ್ಯ, ಒಡಕು ಬಿತ್ತುತ್ತಾ ತಮ್ಮ ಬೇಳೆ ಬೇಯಿಸಿಕೊಳ್ಳುವ ಕೆಲಸ ನಡೆಸುತ್ತಾ, ಗ್ರಾಮಗಳೆಂದರೆ ಅತ್ಯಂತ ಹೇಸಿಗೆ, ಅಸಹ್ಯ ಹುಟ್ಟಿಸುವ ರಾಜಕೀಯ ಕೇಂದ್ರಗಳಾಗಿವೆ.

ರಾಲೇಗಾಂವ್ ನಂಬಿದ್ದು ಸಹಕಾರವನ್ನು. ಒಂದು ಬಾವಿ ತೆಗೆಯಲು ಅದರ ನೀರು ಹಂಚಿಕೊಳ್ಳಲು ಈ ಸಹಕಾರ ನೆರವಾಗುತ್ತದೆ. ಅಲ್ಲೊಂದು ಸಹಕಾರಿ ಸಂಘ ತೊಳೆಯುತ್ತದೆ. ಅಗತ್ಯವಾದಲ್ಲಿ ಸಾಲ ಪಡೆಯಲಾಗುತ್ತದೆ. ಬಾವಿ ತೆಗೆಯುವ ಖರ್ಚು ಪಂಪು ಖರೀದಿ, ಪೈಪುಗಳನ್ನು ಹಾಕುವುದು ಎಲ್ಲ ಸೇರಿ ಸಹಕಾರ ಸಂಘವೇ ಭರಿಸುತ್ತದೆ. ಅವರೇ ಒಂದು ಕಮಿಟಿ ಮಾಡಿಕೊಳ್ಳುತ್ತಾರೆ. ಯಾರ್‍ಯಾರಿಗೆ, ಯಾವಾಗ ಎಷ್ಟು ನೀರು ಕೊಡಬೇಕೆಂಬುದರಿಂದ ಹಿಡಿದು, ಸಾಲ ಮರುಪಾವತಿ ಮುಂತಾದ ಎಲ್ಲ ವಿಷಯಗಳನ್ನೂ ಈ ಕಮೀಟಿಯೇ ನಿರ್ಧರಿಸುತ್ತದೆ.

ಇಂಥ ಸಹಕಾರೀ ಸಂಘಗಳಿಗೆ ಸ್ಥಳೀಯವೇ ಹೆಸರು. ಸಂತ ಯಾದವ ಬಾಬಾ, ಗೌತಮ, ಸಂತ ಜ್ಞಾನೇಶ್ವರ, ಸಂತ ತುಕಾರಾಮ, ಕೃಷ್ಣಾ ನೀರು ಸಹಕಾರೀ ಸಂಘಗಳು ಹಳ್ಳಿಯ ಆರು ನೂರು ಎಕರೆ ಜಮೀನಿಗೆ ನೀರುಣಿಸುತ್ತವೆ. ಈ ಜಮೀನುಗಳ 157 ರೈತರೇ ಇದರ ಸದಸ್ಯರು.

ಇಂಥ ಒಂದೊಂದು ನೀರಿನ ಯೋಜನೆಗೂ ಒಂದರಿಂದ ಮೂರು ಲಕ್ಷ ಖರ್ಚಾಗಿದೆ. ಸದಸ್ಯರು ಎಕರೆಯೊಂದಕ್ಕೆ ವರ್ಷಕ್ಕೆ ಎಂಟುನೂರರಿಂದ ಒಂಬೈನೂರು ರೂಪಾಯಿ ಪಾವತಿ ಮಾಡಬೇಕಾಗುತ್ತದೆ.

ಜಮೀನಲ್ಲಿ ಬೀಜ ಊರಲು ಮುಗಿಲತ್ತ ನೋಡುತ್ತಿದ್ದ ಜನ ಆಗೆಲ್ಲ ಮಳೆ ನೆಚ್ಚಿಕೊಂಡು ಬೇಸಾಯ ಮಾಡಬೇಕಿತ್ತು. ಒಂದು ಬೆಳೆ ಬೆಳೆದರೆ ಹೆಚ್ಚು. ಈಗ ಅಲ್ಲಿ ಮೂರು ಮೂರು ಬೆಳೆ ತೆಗೆಯಲಾಗುತ್ತಿದೆ. ಆಗ ಒಂದು ಬಗೆಯ ಮಳೆಯ 'ರೇಷನಿಂಗ್' ನೋಡಿದ್ದ ಜನ ಈಗ ಬೇರೊಂದು ಬಗೆಯ ನೀರಿನ ರೇಷನಿಂಗ್ ನೋಡುತ್ತಿದ್ದಾರೆ. ಪ್ರತಿ ರೈತನ ಬಳಿಯೂ ಒಂದೊಂದು ನೀರಿನ ರೇಷನ್ ಕಾರ್ಡ್. ಅದಕ್ಕೆ ಅಲ್ಲೆಲ್ಲ 'ಪಾನೀ ಕಾರ್ಡ್' ಎನ್ನುತ್ತಾರೆ. ರೈತನ ಹೆಸರು, ಆತನ ಜಮೀನಿನ ವ್ಯಾಪ್ತಿ, ಬೆಳೆಯ ವಿವರ, ಆತನ ಜಮೀನಿಗೆ ಒದಗಿಸುವ ನೀರಿನ ಪ್ರಮಾಣ, ಅದನ್ನು ಒದಗಿಸಲು ದಿನಾಂಕ ಎಲ್ಲಾ ಅದರಲ್ಲಿ ನಮೂದಾಗಿರುತ್ತದೆ.

ಬೆಟ್ಟದ ಬುಡದಲ್ಲಿ ನಿರ್ಮಿಸಲಾದ ಬಡ್ಡಿಗೊಂಡು ಕಾಲುವೆ ಬಂದಿದೆ. ಮೂರು ಕಿಲೋ ಮೀಟರ್ ಉದ್ದದ ಈ ಕಾಲುವೆ ತುಂಬಾ ಅಗಲ, ಅಷ್ಟೇ ಆಳ. ಹಳ್ಳಿಯ ನಡುವಿಂದಲೇ ಸಾಗುವ ಈ ಕಾಲುವೆ, ರಾಲೇಗಾಂವ್ ಸಿದ್ಧಿಯ ಹೊಸ ಬಗೆಯ ಸಮೃದ್ಧಿಯ ಸಂಕೇತ.

ಮನೆ ಬಾಗಿಲಿಗೆ ನೀರು

ಬೇಸಿಗೆ ಬಂತೆಂದರೆ ರಾಲೇಗಾಂವ್‌ನ ಹೆಣ್ಣು ಮಕ್ಕಳಿಗೆ ನರಕ ಸೃಷ್ಟಿ ಆಗುತ್ತಿತ್ತು.

ಕೊಡಗಳನ್ನು ಹೊತ್ತು ಮೈಲುಗಟ್ಟಲೇ ನಡೆದು ನೀರು ತರಬೇಕಾಗುತ್ತಿತ್ತು. ಅದೊಂದು ದುಃಸ್ವಪ್ನದ ಹಾಗೆ ಅನ್ನಿಸುತ್ತದೆ ಈಗ. ಹಳ್ಳಿಯ ಪ್ರತಿ ಮನೆ ಬಾಗಿಲಿಗೂ ಈಗ ನಲ್ಲಿ ಬಂದಿದೆ. ನಿತ್ಯ ಒಂದು ತಾಸು ನೀರು ಪೂರೈಕೆ ಆಗುತ್ತದೆ. ಇದನ್ನು ನಿರ್ವಹಿಸುವುದೂ ಒಂದು ಸಹಕಾರೀ ಸಂಘವೇ. ಅದರ ಹೆಸರು ಪದ್ಮಾವತಿ ನೀರು ಸಹಕಾರೀ ಸಂಘ. ಜನ ತಮ್ಮ ಮನೆಯವರೆಗೆ ಪೈಪು ಹಾಕಲು, ನಳ ಜೋಡಿಸಲು ತಗಲುವ ಖರ್ಚು ಕೊಡಬೇಕು. ಅದರ ಮೇಲೆ ತಿಂಗಳಿಗೆ 15 ರೂಪಾಯಿ ನೀಡಿದರೆ ಆಯಿತು.

ಅಸಾಧ್ಯದ ಸಾಧ್ಯತೆ : ನಮ್ಮ ಹಳ್ಳಿಗಾಡುಗಳ ಬಗ್ಗೆ ಭಾಷಣ ಮಾಡುವ, ಸುಳ್ಳೇ ಕಣ್ಣೀರು ಸುರಿಸುವ ಜನ ಮಹಾರಾಷ್ಟ್ರದ ಸಹಕಾರೀ ಆಂದೋಲನದ ಬೆಳವಣಿಗೆ ಕಂಡು ಬರಬೇಕು. ರಾಲೇಗಾಂವ್‌ನಂಥ ಸಣ್ಣ ಹಳ್ಳಿ, ಬಿದ್ದ ಮಳೆ ನೀರನ್ನು ಹೇಗೆ ಜತನ ಮಾಡಿಕೊಂಡು ಸಮೃದ್ಧಿ ಪಡೆದಿದೆ ಎಂಬುದು ಅರಿಯಬೇಕು. ಅಂಥ ಕೆಲಸಗಳನ್ನು ಎಲ್ಲೆಲ್ಲಿಯೂ ಮಾಡುವುದು ಸಾಧ್ಯ. ಅದಕ್ಕೊಂದು ಮನಸ್ಸು ಬೇಕು. ನಡೆಯುವ ದಾರಿಯಂತೂ ಇದೆ. ನಡೆಯುವ ಜನ ಬೇಕು ಅಷ್ಟೇ.

ಅಣ್ಣಾ ಹಜಾರೆಯಂಥವರು ಎಲ್ಲ ಹಳ್ಳಿಯಲ್ಲೂ ಇರಲು ಸಾಧ್ಯವಿಲ್ಲ. ಆದರೆ, ಇನ್ಯಾರೋ ಅವರು ಹೊತ್ತಿಸಿದ ದೀಪದ ಬೆಳಕಿನಲ್ಲಿ ದಾರಿ ಸಾಗಿಸುವ ಕಾಯಕ ಕೈಗೆತ್ತಿಕೊಂಡರೆ ಇದೆಲ್ಲ ಸಾಧ್ಯ. ■

ದೊಡ್ಡವರು, ಚಿಕ್ಕವರು

ಸಿಪಿಐನ ಇಂದ್ರಜಿತ್ ಗುಪ್ತಾ ಲೋಕಸಭೆಯ ಅತ್ಯಂತ ಹಿರಿಯ ಸದಸ್ಯರು. ಅವರಿಗೀಗ 81 ವರ್ಷ. ಅತಿ ದೀರ್ಘ ಕಾಲ ಸಂಸತ್ ಸದಸ್ಯರಾಗಿರುವ ಹಿರಿಮೆಯೂ ಅವರದು. ಅನಾರೋಗ್ಯದ ಕಾರಣ ಬಜೆಟ್ ಅಧಿವೇಶನದ ಆರಂಭದಲ್ಲಿ ಗೈರು ಹಾಜರಾಗಿದ್ದರು. ಬಜೆಟ್ ದಿನ ಮಾತ್ರ ಕಾಣಿಸಿಕೊಂಡರು. 'ಇದೇ ತನ್ನ ಕೊನೆಯ ಅಧಿವೇಶನ' ಎಂದೂ ಅವರೀಗ ಅನ್ನುತ್ತಿದ್ದಾರೆ.

ಅದೇ ದಿನ ಪಾರ್ಲಿಮೆಂಟ್‌ಗೆ ಪ್ರವೇಶಿಸಿದ ಅತ್ಯಂತ ಕಿರಿಯ ಎಂದರೆ ಅಖಿಲೇಶ್ ಯಾದವ್. ಆತನಿಗೀಗ 25 ವರ್ಷ. ಆಸ್ಟ್ರೇಲಿಯಾದಲ್ಲಿ ಎಂಜಿನಿಯರಿಂಗ್ ಡಿಗ್ರಿ ಪಡೆದಿದ್ದಾರೆ. ಇದಿಷ್ಟೇ ಅಲ್ಲ ಪ್ರವರ. ಆತ ಸಮಾಜವಾದಿ ಪಾರ್ಟಿಯ ಅಧ್ಯಕ್ಷ ಮುಲಾಯಂ ಸಿಂಗ್ ಅವರ ಪುತ್ರ.

ಇಂದ್ರಜಿತ್ ಗುಪ್ತಾ ಅವರು ನಿರ್ಗಮನದ ಮಾತಾಡಿದರೆ, ಪಾರ್ಲಿಮೆಂಟಿನ ಕಾರಿಡಾರ್‌ನಲ್ಲಿ ಅಖಿಲೇಶ್‌ನಂಥ ಬಿಸಿರಕ್ತದವರ ಪ್ರವೇಶವೂ ಸುದ್ದಿಯಾಗಿತ್ತು. ಮೊದಲ ದಿನ ಸಂಸತ್ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದ ಕೂಡಲೇ ಅವರು ಮಾಡಿದ ಮೊದಲ ಕೆಲಸ ಎಂದರೆ ಹಿರಿಯ ರಾಜಕಾರಣಿಗಳ ಕಾಲು ಮುಟ್ಟಿ ನಮಸ್ಕರಿಸಿದ್ದು. ರಾಜಕೀಯ ಕಡು ವಿರೋಧಿ ಅಜಿತ್‌ಸಿಂಗ್, ಬಿಜೆಪಿಯ ಎಲ್.ಕೆ. ಅದ್ವಾನಿ, ಕೊನೆಗೆ ಸೋನಿಯಾ ಅವರಿಗೂ ಅಖಿಲೇಶ್ ಕಾಲುಮುಟ್ಟಿ ನಮಸ್ಕರಿಸಿದರು. ಸೋನಿಯಾಗೆ ಇದೊಂದು ಮುಜುಗರದ ವಿಷಯವಾಯಿತು. ಸಂಪ್ರದಾಯ ಪಾಲನೆ ಹೀಗೆ ಮಾಡಿದ ಅವರು ತಂದೆ ಮುಲಾಯಂ ಸಿಂಗ್ ಅವರಿಗೆ ನಮಸ್ಕರಿಸಲು ಮರೆತಿದ್ದರು.

■

BISILA BADUKU KANNADA Monthly APRIL 2000 RNI No. 67406 / 97 Regd. CPMG /KA /BGW-59 / 2000

ವ್ಯಕ್ತಿತ್ವ ವಿಕಾಸ

ಸದೃಢ ಹಾಗೂ ಸಕಾರಾತ್ಮಕ ವ್ಯಕ್ತಿತ್ವ ರೂಪಿಸಿಕೊಂಡವರಿಗೆ ಯಶಸ್ಸು ಒಲಿಯುತ್ತದೆ ಎಂಬುದು ನಿಮಗೆ ಗೊತ್ತು. ಹಾಗಾದರೆ ಅಂಥ ವ್ಯಕ್ತಿತ್ವದ ಲಕ್ಷಣಗಳೇನು? ಅದನ್ನು ರೂಢಿಸಿಕೊಳ್ಳಲು ಏನು ಮಾಡಬೇಕು? ಚಿಂತಿಸಬೇಡಿ! ಇಂಥ ಹತ್ತಾರು ಪ್ರಶ್ನೆಗಳಿಗೆ ಉತ್ತರ ನೀಡುತ್ತದೆ 'ವ್ಯಕ್ತಿತ್ವ ವಿಕಾಸ' ಪುಸ್ತಕ.

ಲೇಖಕರು
ಡಾ. ಟಿ.ಕೆ.ತಾಪಸ್

ಈ ಪುಸ್ತಕವನ್ನು 'ಬದುಕು' ಓದುಗರಿಗೆ ಅರ್ಧ ಬೆಲೆಗೆ ನೀಡುತ್ತಿದ್ದೇವೆ. ರೂ.80 ಮುಖ ಬೆಲೆಯ ಈ ಗ್ರಂಥ ನಿಮಗೆ ಕೇವಲ ರೂ.40ಕ್ಕೆ ಲಭ್ಯ ! ಅಂಚೆ ಉಚಿತ.

ರೂ.40 ಎಂ.ಓ. ಕಳಿಸಬೇಕಾದ ವಿಳಾಸ :
ಅಂಕುರ ಪ್ರಕಾಶನ
ಅಂಚೆ ಪೆಟ್ಟಿಗೆ 7951,
ಬಸವೇಶ್ವರ ನಗರ,
ಬೆಂಗಳೂರು-79.
ಮೊಬೈಲ್ : 98440 87433

ದಿನಾಂಕ 20.4.2000 ವರೆಗೆ ಮಾತ್ರ ಈ ರಿಯಾಯಿತಿ !

